ಜಿನಗೌಡಾ ನಂದಗಾಂವ ೯
ಬಸ್ಸಪ್ಪ ಈರಪ್ಪ ರಾಚಂಣವರ
ಶಂಕರ ಅಂಣಪ್ಪ ದೊಡಲಿಂಗ
ವಿರುಪಾಕ್ಷಿ ಅಣ್ಣೂಜಿ ೮॥
ಶಿವಲಿಂಗ ಬಡಿಗೇರ ೬
ಫಟಿಗೆಪ್ಪ ಬಸಪ್ಪ ಪರೀಟ ೬
ನಿಂಗಪ್ಪ ಈ ಮರೆಣ್ಣವರ
ನಿಂಗಪ್ಪ ನಾಗಪ್ಪ ಕರಬಸಣ್ಣವರ ೯
ನೀಲಕಂಠ ಗಿ. ಹಿರೇಮಠ ೧೦
ಭರಮಾ ಪಾಪಾ ಮಗದುಮ ೭
ಭರಮಾ ಬಾಳಪ್ಪ ಮಗದುಮ ೭
ದತ್ತು ಅಂಣಪ್ಪ ಬಡಿಗೇರ ೯
ಪಾರೀಸ ರಾಯಪ್ಪ ವಾಳಕಿ ೬
ಕಾಡಪ್ಪ ರಾಯಪ್ಪ ವಾಳಕಿ ೯
ಜಿನ್ನಪ್ಪ ಸಂಕಣ್ಣವರ ೯
ಶಿವಪುತ್ರ ಈ. ರಾಚಂಣವರ ೯
ಬಸವಂತ ಲಗಮಂಣ ಕೇರಿ ೩+೧

ರಾಮಾ ಮಲ್ಲಪ್ಪ ಬೋನಿ ೯
ವಿಷ್ಣು ರಾಮಚಂದ್ರ ಬಡಿಗೇರ ೧೧
ಪುನ್ನಪ್ಪ ದೊಡಲಿಂಗ ೭
ಮಲಗೌಡಾ ಮಗೆಂಣವರ ೯
ಶಂಕರ ಶಿವಪ್ಪ ಕೋಟಗಿ ೧೦
ದುಂಡಪ್ಪ ಚೌಗುಲಾ ೬
ಕೇಶವ ಸ. ನಾಡಗೌಡಾ ೭
ಮುದೆಪ್ಪ ಶಿ. ಅಮ್ಮಣಗಿ ೬
ಲಕ್ಕಪ್ಪ ಕೆಂಚಪ್ಪ ಧನಗರ ೬
ಅಪ್ಪಣ್ಣ. ಸ. ಮಲಗೌಡನವರ ೧೦
ಭೀಮಪ್ಪ ಶಿವಪ್ಪ ಸಂಕಣ್ಣವರ ೨+೧
ಮಲ್ಲಪ್ಪ ಮ. ಕಬ್ಬೂರ ೧೦
ಶಿದ್ದಪ್ಪ ನಾನಾ ಜಾಧವ ೬
ರಾಮು ನೀಲಪ್ಪ ಮಡಿವಾಳ ೬
ಸತಿಗೌಡಾ ಭಾವುಗೌಡಾ ೬
ಅಣ್ಣಪ್ಪ ಕುಂಬಾರ ೧೦
ಅಣ್ಣಪ್ಪ ಸಂಕಣ್ಣವರ ೧೦
ನಿಂಗಪ್ಪ ಹಿಟ್ಟಣಿ ೧೦
ಬಾಬು ರಾಮಾ ಹವಾಲದಾರ ೧೦
ಮಲ್ಲಪ್ಪ ಅಮ್ಮಣಗಿ ೬
ಮಲಗೌಡಾ ನಾಗನೂರಿ
ಕಲಗೌಡಾ ಸಾ. ಪಾಟೀಲ ೭
ನಿಂಗಪ್ಪ ಸಂಕಣ್ಣವರ ೭
ದತ್ತು ಬಡಿಗೇರ ೨+೧

ಹುಕ್ಕೇರಿ

ಶಂಕರ ಹ. ವಾಳವೆಕರ ೧೨
ವೆಂಕಣ್ಣಾ ಗಲಗಲಿ ೪
ಶಿದ್ದಪ್ಪ ಲಗಮಪ್ಪ ಪಾಟೀಲ ೯
ದುಂಡಯ್ಯಾ ಮಲ್ಲಯ್ಯಾ ಸಂಬಾಳ ೬
ಚಂದ್ರಪ್ಪ ಬ. ಶೆಟ್ಟಿ ೬
ರಾಮು ಹ. ಬೆಳವಡಿ ೧೦+೩
ಮಧ್ವರಾವ ಜೋಶಿ ವಕೀಲ ೧೨

ಎಂ. ಪಿ. ಪಾಟೀಲ ವಕೀಲ	೧೨
ಮಧ್ವಾಚಾರ್ಯ ಹುಕ್ಕೇರಿ	೬
ವೆಂಕಣ್ಣಾ ವಾಮನ ದೇಶಪಾಂಡೆ	೬
ನಾನಾಸಾಹೇಬ ದೇಶಪಾಂಡೆ	೧೦
ನಾರಾಯಣ ವಾಳವೆಕರ	೧೨
ರಾಮಚಂದ್ರ ನಾಗೇಶ ಶಿರಗೆ	೬

ನೇರಲಿ

ಫಟಗೆಪ್ಪ
ಮುದಕಪ್ಪ
ದುಂಡಪ್ಪ ಚೌಗುಲಾ
ಶಿವಪ್ಪ ನಾನಾಗೋಳ
ಪಾರಿಸಾ ಬಾಳಕೆ

ಲಕ್ಷ್ಮಣ ಬೋರಟ್ಟಿ	
ಮುದಕಪ್ಪ ಅಮ್ಮಣಗಿ	
ಮಲ್ಹಾರ ಸದಾಶಿವ ಕುಲಕರ್ಣಿ	೧೨
ಲಕ್ಷ್ಮಣ ದೊಡಲಿಂಗ	

ಬಾಗೇವಾಡಿ

ಗುಂಡಪ್ಪ ರಾಮಪ್ಪ ಖೆನುಲಾಪುರೆ	೭
ಬಾಬುರಾಜ ರಾಮಪ್ಪ ಖೆನುಲಾಪುರೆ	೩
ಶಿವರುದ್ರ ಪಟ್ಟಣಶೆಟ್ಟಿ ಶಿರಗಾವಿ	೬
ಬಾಳು ಧನಗರ ಕಣಗಲಿ	
ರಾಮಕೃಷ್ಣ ಕೃಷ್ಣಾಜಿ ಗಂಧಡೆ	
ಶಿವಪ್ಪ ತೋಡಕರ	
ಭಾಗೋಜಿ ಕೋಶಿತಕರ ಮೋದಗಿ	೩

ಇದುವರೆಗೆ ೧೯೦೬ ರಿಂದ ೧೯೪೭ರ ವರೆಗೆ ನಡೆದ ಹೋರಾಟಗಳಲ್ಲಿ ಸೆರೆಮನೆ ಕಂಡ ಸ್ವಾತಂತ್ರ್ಯಯೋಧರ ಹೆಸರುಗಳನ್ನೂ ಅವರು ಭೋಗಿಸಿದ ಕಾರಾವಾಸದ ಅವಧಿಯನ್ನೂ ತಾಲೂಕವಾರ ವಿಂಗಡಿಸಿ ಕೊಡಲಾಗಿಜ. ಕಾರಾವಾಸದ ಅವಧಿಯ ಅಂಕಿಗಳು ಸರಿಯಾಗಿ ಸಿಕ್ಕಿವೆ ಎಂದು ಹೇಳಲಿಕ್ಕಾಗದು. ಕೆಲವರ ಬಗ್ಗೆ ಆ ಅಂಕಿಗಳು ಸಿಕ್ಕಿಲ್ಲ. ನಿಜವಾಗಿ ಹೆಚ್ಚುಕಾಲ ಕಾರಾವಾಸದಲ್ಲಿದ್ದವರ ಅವಧಿ ಕಡಿಮೆ ತೋರಿಸಿರುವ ಸಂಭವವೂ ಇದೆ. ಯುಕ್ತಿಪ್ರಯುಕ್ತಿಯಿಂದ ಸರಕಾರದ ಪೆನ್‌ಶನ್ ಪಡೆಯಲು ಕೆಲವು ಹೋರಾಟಗಾರರು ತಮ್ಮ ಕಾರಾವಾಸದ ಅವಧಿಯನ್ನು ಬೆಳೆಸಿ ಹೇಳಿರಲೂ ಸಾಕು. ಯಾವದೇ ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಭಾಗ ವಹಿಸದ ಕೆಲವರು ಹೇಗೋ ಪೆನ್‌ಶನ್ ದೊರಕಿಸಿದ್ದುಂಟು. ನನಗೆ ಪರಿಚಿತವಿದ್ದ ಕಾರ್ಯಕರ್ತರೇ ಇಂಥವರ ಹೆಸರನ್ನೂ ತಮ್ಮ ಗ್ರಾಮದ ಹೋರಾಟಗಾರರ ಪಟ್ಟಿಯಲ್ಲಿ ಸೇರಿಸಿ ನನಗೆ ಪೂರೈಸಿದ್ದಿರುವದೂ ಸಾಧ್ಯವಿದೆ. ಆದುದರಿಂದ ಇಲ್ಲಿ ಕೊಟ್ಟ ಪ್ರತಿಯೊಬ್ಬರ ಕಾರಾವಾಸದ ಅವಧಿಯ ಅಂಕಿಗಳು ಸರಿ ಇವೆ ಅಥವಾ ಸ್ವಾತಂತ್ರ್ಯ ಯೋಧರಲ್ಲದವರ ಹೆಸರು ಇದರಲ್ಲಿ ಬಂದಿಲ್ಲ ಎಂದು ಧಾರಾಳವಾಗಿ ಹೇಳುವ ಧೈರ್ಯ ನನಗಿಲ್ಲ.

ಇಲ್ಲಿಗೆ ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯಸಮರದ ಇತಿಹಾಸ ಮುಗಿಯಿತು. ಇದನ್ನು ಬರೆಯುವದರಿಂದ ಹಿಡಿದು ಅಚ್ಚಾಗಿ ಪ್ರಕಟವಾಗುವವರೆಗಿನ ಪ್ರತಿಯೊಂದು ಹಂತದಲ್ಲಿ ನನ್ನ ಮಿತ್ರ ಬಂಧುಗಳೂ ಸ್ವಾತಂತ್ರ್ಯಸಮರದಲ್ಲಿಯ ನನ್ನ ಸಹಕಾರಿಗಳೂಆದ ಶ್ರೀ. ಜಯದೇವರಾವ ಕುಲಕರ್ಣಿಯವರು ನನಗೆ ತುಂಬಾ ಸಹಾಯ ಮಾಡಿದ್ದಾರೆ. ಅವರ ನೆರವು ಇಲ್ಲದಿದ್ದರೆ ಈ ಪುಸ್ತಕವು ಈ ಸ್ವರೂಪದಲ್ಲಿ ಇಷ್ಟು ಬೇಗ ಬೆಳಕು ಕಾಣುತ್ತಿದ್ದಿಲ್ಲವೇನೊ.

ಬ್ರಿಟಿಶನಿಷ್ಠ ಭಾರತೀಯರು !

ಆಗಸ್ಟ ಕ್ರಾಂತಿಯನ್ನು ಸದೆ ಬಡೆಯಲು ಸರಕಾರ ಕಂಕಣ ಬದ್ಧವಾಗಿರುವಾಗ ಅವರ ಕೈಯೊಳಗೆ ನಾಯಿಗಳಂತೆ ಇದ್ದ ಪೋಲೀಸರು ತಮ್ಮ ಅಪ್ಪನ ಗಂಟು ಹೋಗುತ್ತಿದೆ ಎಂದು ತಿಳಿದು ಮನಸ್ವೀ ನಂಗಾ ನಾಚ ಮಾಡಿದರು. ಬ್ರಿಟಿಶ ರಾಜ್ಯದ ಮೇಲೆ ಸೂರ್ಯಾಸ್ತವೇ ಇಲ್ಲ. ದೇವರ ದಯ ಮತ್ತು ವರ ಇರುವದರಿಂದಲೇ ಅವರು ಎಲ್ಲ ಖಂಡಗಳಲ್ಲಿ ರಾಜ್ಯವಾಳುತ್ತಿದ್ದಾರೆ. ಯುರೋಪ ಖಂಡದಲ್ಲಿ ಒಂದು ಮೂಲೆಗೆ ಇದ್ದ ಚಿಕ್ಕದಾದ ಇಂಗ್ಲಂಡವು ಏಶಿಯಾ ಖಂಡದಲ್ಲಿ ದೊಡ್ಡ ಸಾಮ್ರಾಜ್ಯ ಸ್ಥಾಪಿಸಿದೆ. ಹಿಂದುಸ್ತಾನ, ಬ್ರಹ್ಮದೇಶ, ಸಿಂಹಲ ದ್ವೀಪಗಳನ್ನು ಪ್ರತ್ಯಕ್ಷವಾಗಿಯೂ ಚೀನ ಅಫಗಾಣಿಸ್ತಾನ ಇರಾಣ ಅರಬಸ್ತಾನಗಳನ್ನು ಅಪ್ರತ್ಯಕ್ಷವಾಗಿಯೂ ಆಳುತ್ತಿದೆ. ಆಫ್ರಿಕೆಯ ಬಹು ಭಾಗದಲ್ಲಿ ತನ್ನ ವರ್ಚಸ್ಸು ಸ್ಥಾಪಿಸಿದೆ. ಅಮೇರಿಕಾ ಖಂಡದಲ್ಲಿ ರಾಜ್ಯವಾಳುವವರು ತಮ್ಮ ರಕ್ತದವರೇ. ಆಸ್ಟ್ರೇಲಿಯಾ ಖಂಡವಂತೂ ತಮ್ಮ ದೈವದತ್ತ ವಸಹಾತು ಆಗಿದೆ. ಇಷ್ಟು ಸಾಲದ್ದಕ್ಕೆ ಅನ್ನಿರಿ ಅಥವಾ ಇವನ್ನೆಲ್ಲ ಕಾಯಲಿಕ್ಕೆ ಅನ್ನಿರಿ, ಭೂಮಂಡಲದ ಎಲ್ಲ ಸಮುದ್ರಗಳಲ್ಲಿ ಒಳ್ಳೇ ಆಯಕಟ್ಟಿನ ಸ್ಥಳಗಳಲ್ಲಿರುವ ಏಡನ್, ಜಿಬ್ರಾಲ್ಟರ ಮಾಲ್ಟಾ, ಸಿಂಗಾಪೂರ, ಹಾಂಗಕಾಂಗ ಮೊದಲಾದ ನಡುಗಡ್ಡೆಗಳೂ ದೇವರಿಂದ ಸನದು ಪಡೆದಂತೆ ತಮ್ಮ ಕಡೆಗೆ ಇವೆ. ಇಂಥ ಪ್ರಚಂಡ ಸಾಮ್ರಾಜ್ಯವನ್ನು ಹಿಂದೆ ಯಾರೂ ಸ್ಥಾಪಿಸಿರಲಿಲ್ಲ ಮುಂದೆಯೂ ಸ್ಥಾಪಿಸಲಾರರು, ಎಂಬ ಉನ್ಮತ್ತತೆ ಬ್ರಿಟಿಶರನ್ನು ಆವರಿಸಿತ್ತು.

ಭಾರತದಲ್ಲಿಯಂತೂ ಜೀವಂತ ಜನರೇ ಇಲ್ಲ, ಎಲ್ಲರೂ ಹೆಣಗಳಂತೆಯೂ, ನಿರ್ಜೀವ ನಿರುಪಯೋಗಿ ನಿರ್ಮಾಲ್ಯ ನಿರ್ಲಜ್ಜರಾಗಿಯೂ, ನಾಯಿಗಳಂತೆ ತಮ್ಮ ಕಾಲು ನೆಕ್ಕುವವರೂ ಆಗಿರುವರಲ್ಲದೆ ಅವರಲ್ಲಿ ಜಾತಿಭೇದ, ಭಾಷಾಭೇದ, ಧರ್ಮಭೇದ, ಸಂಸ್ಕೃತಿ ಭೇದಗಳಿವೆ. ಸ್ವಾಭಿಮಾನ ಕಳೆದುಕೊಂಡಿದ್ದಾರೆ. ತುಣುಕು ರೊಟ್ಟಿ ಒಗೆದರೆ ಬಾಲಬಡಿದು ಬೆನ್ನು ಹತ್ತುತ್ತಾರೆ, ರಾಮನವಮಿ ಕೃಷ್ಣಾಷ್ಟಮಿಗಳನ್ನೂ ಮರೆತ ಹಿಂದುಗಳೂ, ತಾವು ಉಚ್ಚವರ್ಣದವರೆಂದು ಹೇಳಿಕೊಳ್ಳುವ ಬ್ರಾಹ್ಮಣರೂ, ಪಂಚಮ ಜಾರ್ಜ ಮಹಾರಾಜರ ಮತ್ತು ಎಡ್ವರ್ಡ ಬಾದಶಹರ ಜನ್ಮೋತ್ಸವ ಮಾಡುತ್ತಿರುವರು ಎಂಬುದು ಅವರಿಗೆ ಗೊತ್ತಿತ್ತು, ತಮ್ಮ ತಾಯಿ ತಂದೆಗಳ ಶ್ರಾದ್ಧ ಮಾಡದಂಥ ಕೆಲವು ಧರ್ಮಲಂಡರು ಪ್ರತಿವರುಷ ಅರಸನ ಹುಟ್ಟು ಹಬ್ಬ ವಿಜೃಂಭಣೆಯಿಂದ ಮಾಡುತ್ತಿರುವದನ್ನೂ ಅವರು ನೋಡಿದ್ದರು.

ಒಕ ಎಂಬ ಕೊಂಕಣಸ್ಥ ಬ್ರಾಹ್ಮಣರೊಬ್ಬರು ಬೆಳಗಾವಿಯಲ್ಲಿ ೧೯೨೦ ನೇ ಇಸವಿಯ ಎಡಬಲದಲ್ಲಿ ಡಿಸ್ಟ್ರಿಕ್ಟ ಜಜ್ಜರೋ ಮುನ್ಸೀಫರೋ ಆಗಿದ್ದರು ಜಾರ್ಜ ಬಾದಶಹರ ಹುಟ್ಟಿದ ದಿನವನ್ನು ಅವರು ತಪ್ಪದೆ ತಮ್ಮ ಮನೆಯಲ್ಲಿ ನಿಷ್ಠೆಯಿಂದ ಪಾಲಿಸುತ್ತಿದ್ದರು. ಅವರು ಬೆಳಗಾವಿಯ ಕ್ಯಾಂಪಿನಲ್ಲಿ ಶ್ರೀ. ಶಿರಸಂಗಿ ದೇಸಾಯಿಯವರ ಬಂಗಲೆಯ ಹತ್ತರ ಒಂದು ಬಂಗಲೆಯಲ್ಲಿ ಬಾಡಿಗೆಯಿಂದ ಇರುತ್ತಿದ್ದರು. ಜಾರ್ಜ ಬಾದಶಹರ ಜನ್ಮ ದಿನ ಉಷಃ ಕಾಲದಲ್ಲಿ ೪ ಗಂಟೆಗೆ ತಾವು ಸ್ವತಃ ಎದ್ದು ಮುಖಮಾರ್ಜನ ಸ್ನಾನ ತೀರಿಸಿ ಮನೆಯೊಳಗಿನ ಮಕ್ಕಳನ್ನು ಮತ್ತು ಹೆಂಡತಿಯನ್ನು ಎಬ್ಬಿಸಿ ಬಾದಶಹರ ಫೋಟೋಕ್ಕೆ ಆರತಿ ಮಾಡಿಸುತ್ತಿದ್ದರು. " ಏಳಿರಿ ಏಳಿರಿ, ಇದು ಮಲಗುವ ಕಾಲವಲ್ಲ. ಇಂದು ಪರಮಪೂಜ್ಯ ಕರ್ತುಂ ಅಕರ್ತುಂ ಶಕ್ತಿಶಾಲಿಗಳೂ ನಮ್ಮನ್ನು ತಂದೆಯಂತೆ ಪಾಲನೆ ಮಾಡುವವರೂ ಆಗಿದ್ದ ದೇವರ ಅವತಾರವಾಗಿದ್ದ ಶ್ರೀಮನ್ ಮಹಾರಾಜಾಧಿರಾಜ ಬಾದಶಹಾ ಪಂಚಮ ಜಾರ್ಜ ಮಹಾರಾಜರವರ ಜನ್ಮದಿನ ಅದೆ. ಎಲ್ಲರೂ ಬೇಗ ಏಳಿರಿ, ತೈಲಾಭ್ಯಂಗ ಸ್ನಾನ ಮಾಡಿರಿ. ಹೊಸ ಅರಿವೆ ಹಾಕಿಕೊಳ್ಳಿರಿ ಮತ್ತು ಬಾದಶಹರ ಫೋಟೋಕ್ಕೆ ಆರತಿ ಮಾಡಿರಿ, " ಎಂದು ಒಂದೇ ಸವನೆ ದುಂಬಾಲು ಬಿದ್ದು ಮನೆಯ ಜನರನ್ನೆಲ್ಲ ಎಬ್ಬಿಸುತ್ತಿದ್ದರು. ಅಂದು ಮಧ್ಯಾಹ್ನ ಏನಾದರೂ ಪಕ್ವಾನ್ನದ ಊಟ ಮಾಡಿಸುತ್ತಿದ್ದರು. ಈ ಸಂಗತಿಯನ್ನು ಅವರ ಎದುರಿಗಿನ ಬಂಗಲೆಯಲ್ಲಿರುವ ಡಾ. ಹಣಮಂತರಾಯರು ಸವಣೂರ ಅವರು ಪ್ರತಿ ವರುಷ ನೋಡಿ ಹೇಳುತ್ತಿದ್ದರು. ಇದಾಯಿತು ಒಬ್ಬ ಸುಶಿಕ್ಷಿತ ಸರಕಾರಿ ನವಕರನ ಚಿತ್ರ.

ಇನ್ನೊಂದು ಚಿತ್ರವನ್ನೂ ಕೊಡಬೇಕೆಂದೆನಿಸುತ್ತದೆ. ಮೇಲಿನ ಚಿತ್ರ ಸ್ವಾತಂತ್ರ್ಯ ಪ್ರಾಪ್ತಿಯ ಪೂರ್ವದಲ್ಲಿಯ ೨೫ ವರುಷಗಳದ್ದು. ಬ್ರಿಟಿಶರ ಘನತೆಯ ಕಾಲದಲ್ಲಿಯದು, ಆದರೆ ಈಗ ಹೇಳುವ ಘಟನೆ, ಬರೆಯುವ ಚಿತ್ರ, ಸ್ವಾತಂತ್ರ್ಯ ಪ್ರಾಪ್ತಿಯ ನಂತರದ ೧೦ ವರುಷಗಳದ್ದು. ಬೆಳಗಾವಿಯ ಉಪನಗರವಾದ ಖಾಸಬಾ

ಗದಲ್ಲಿ ಶ್ರೀ. ರುದ್ರಗೌಡಾ ಪಾಟೀಲ ಎಂಬ ವತನದಾರ ಗೌಡರಿದ್ದರು. ಅವರು ನನ್ನ ಮಿತ್ರರು, ವಯಸ್ಸಿನಿಂದ ಹಿರಿಯರು. ಒಳ್ಳೇ ಸುಸ್ವಭಾವಿಗಳು ಪರೋಪಕಾರಿಗಳು, ಈಗ ಅವರು ಇಲ್ಲ. ಅವರು ೧೯೫೦ ನೇ ಇಸವಿಯ ಸುಮಾರಿಗೆ ಬೆಳಗಾವಿಯ ಕಲೆಕ್ಟರ – ಇವರೇ ಕೊನೆಯ ಯುರೋಪಿಯನ್ ಕಲೆಕ್ಟರರಾಗಿದ್ದ ಶ್ರೀ. ಹೋಲ್ಟ್ – ಅವರ ಕಡಗೆ ಒಂದು ದಿನ ಬಂದು ಮುಂದಿನಂತೆ ಬಿನ್ನಹ ಮಾಡಿಕೊಂಡದ್ದು ನನಗೆ ಗೊತ್ತಿದೆ– " ಸಾಹೇಬ ಬಹಾದ್ದೂರರೇ ನನ್ನದೊಂದು ಚಿಕ್ಕ ಬಿನ್ನಹ ಮನ್ನಿಸಬೇಕು. ನಾನು ಪ್ರತಿ ವರುಷವೂ ಪಂಚಮಜಾರ್ಜರ ಜನ್ಮೋತ್ಸವ ಬಹು ದಿನದಿಂದ ಆಚರಿಸುತ್ತ ಬಂದಿದ್ದೇನೆ ನಾಳೆಯೇ ಆ ದಿನವಿದೆ. ಅಂದು ಕನಿಷ್ಟ ಐದು ಜನ ಯುರೋಪಿಯನ್ ಸಾಹೇಬರಿಗೆ ಊಟ ಹಾಕದೆ ನಾನು ಅನ್ನಗ್ರಹಣ ಮಾಡುವದಿಲ್ಲ. ಈಗ ಬ್ರಿಟಿಶರೆಲ್ಲ ನಮಗೆ ಸ್ವರಾಜ್ಯ ಕೊಟ್ಟು ತಮ್ಮ ದೇಶಕ್ಕೆ ಹೋಗಿದ್ದಾರೆ. ಸ್ವರಾಜ್ಯಕ್ಕೆ ನಾವು ಖಂಡಿತ ವಾಗಿಯೂ ಅಪಾತ್ರರಿರುವಾಗ ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟು ಬ್ರಿಟಿಶರು ಹೋಗಿ ಬಿಟ್ಟದ್ದು ನಮ್ಮ ದುರ್ದೈವ ! ನಾಳಿನ ದಿನ ತಾವು ನಮ್ಮ ಮನೆಗೆ ಊಟಕ್ಕೆ ಬಂದು ಈ ಬಡವನನ್ನು ಕೃತಾರ್ಥನನ್ನಾಗಿ ಮಾಡಬೇಕು. ಐದು ಜನ ಯುರೋಪಿಯನ್ನರು ಸಿಗದಾಗಿದ್ದಾರೆ. ತಾವಂತೂ ಬರಲೇಬೇಕು. ತಮ್ಮ ಜೊತೆಗೆ ಪಂಗ್ತಿಗೆ ಕೂಡಲು ಇನ್ನೊಬ್ಬ ಯುರೋಪಿಯನ್ನ ಸಾಹೇಬರನ್ನು ಶೋಧಿಸುತ್ತಿದ್ದೇನೆ ಐವರ ಸ್ಥಳದಲ್ಲಿ ಇಬ್ಬರಿಗಾದರೂ ಯುರೋಪಿಯನ್ನರಿಗೆ ಊಟ ಹಾಕಿದ ಪುಣ್ಯ ಬುದೀತು. ದಯವಿಟ್ಟು ವಚನ ಕೊಡಿರಿ. " ಎಂದು ಅಂಗಲಾಚಿ ಬೇಡಿಕೊಂಡರು. ಹೋಲ್ಟ ಸಾಹೇಬರಿಗೆ ಇವೆಲ್ಲ ವಿಚಿತ್ರ ಕಂಡರೂ ಆಗ್ರಹವನ್ನು ಮನ್ನಿಸಿ ಮರುದಿನ ಊಟಕ್ಕೆ ಗೌಡರ ಮನೆಗೆ ಹೋದರು. ಎಲ್ಲಿಂದಲೋ ಭಾರಿ ಪ್ರಯತ್ನ ಮಾಡಿ ಇನ್ನೊಬ್ಬ ಯುರೋಪಿಯನ್ನ ನನ್ನೂ ಗೌಡರು ಸಂಪಾದಿಸಿ ತಂದಿದ್ದರು. ಐವರು ಯುರೋಪಿಯನ್ನರು ಊಟಕ್ಕೆ ಸಿಗದ್ದರಿಂದ ಅವರಿಗಾದ ಅಸಮಾಧಾನ ಹೇಳುವಂತಿದ್ದಿಲ್ಲ.

ಹೋಲ್ಟ ಸಾಹೇಬರು ಮನೆಗೆ ಊಟಕ್ಕೆ ಬಂದಾಗ ಅಲ್ಲಿ ಅವರು ನೋಡಿದ್ದೇನು ? ಆ ಇಬ್ಬರೂ ಯುರೋಪಿಯನ್ನ ಸಾಹೇಬರ ಎಡಕ್ಕೊಂದು ಬಲಕ್ಕೊಂದು ಹೀಗೆ ಎರಡು ದೊಡ್ಡ ಆಕಾರದ ಯುನಿಯನ್ ಜಾಕ್ ನಿಶಾನಿಗಳು ! (ಬ್ರಿಟನ್ನ ದೇಶದ ರಾಷ್ಟ್ರಧ್ವಜ. ಇದೇ ಧ್ವಜ ಸ್ವಾತಂತ್ರ್ಯ ಪೂರ್ವದಲ್ಲಿ ೧೯೪೭ ರ ಆಗಸ್ಟ ೧೫ ರ ವರೆಗೆ ಭಾರತದ ಕಚೇರಿಗಳ ಮೇಲೆ ಹಾರಾಡುತ್ತಿತ್ತು. ೧೫ ನೇ ಆಗಸ್ಟ ರಾತ್ರಿ ೧೨ ಗಂಟೆಗೆ ಬ್ರಿಟಿಶರ ಕೊನೆಯ ವಾಯಿಸರಾಯ ಲಾರ್ಡ ಮೌಂಟ ಬ್ಯಾಟನ್‌ರು ಅದನ್ನು ತಮ್ಮ ಕೈಯಿಂದ ಕಾರ್ಯಂವಾಗಿ ಇಳಿಸಿಬಿಟ್ಟರು ! ಪಂ. ಜವಾಹರಲಾಲರು ಭಾರತದ, ಸ್ವತಂತ್ರ ಭಾರತದ ತ್ರಿವರ್ಣ ಧ್ವಜವನ್ನು ಆ ಸ್ಥಾನದಲ್ಲಿ ಏರಿಸಿದರು, ಹಾರಿಸಿದರು !) ಹೋಲ್ಟ ಕಲೆಕ್ಟರರು ತಮ್ಮ ಎಡಬಲಕ್ಕೆ ಇರುವ ಯುನಿಯನ್ ಜಾಕ ಧ್ವಜ ನೋಡಿ ಗಾಬರಿ ಯಾದರು. " ಗೌಡರೇ ನಿಮ್ಮ ಬ್ರಿಟಿಶನಿಷ್ಠೆಯ ಬಗ್ಗೆ ನಾನು ತುಂಬ ಋಣಿಯಾಗಿ ದ್ದೇನೆ. ಆದರೆ ದಯ ಮಾಡಿ ಈ ಯುನಿಯನ್ ಜಾಕ ಧ್ವಜ ತೆಗೆದು ಇಡಿರಿ. ನಾನು

ಈಗ ಸ್ವತಂತ್ರ ಭಾರದ ನವಕರನೆಂದು ಕಲೆಕ್ಟರನಾಗಿದ್ದೇನೆ. ಇನ್ನೂ ಕೆಲ ದಿನ ನನಗೆ ನವಕರಿ ಮಾಡಬೇಕಾಗಿದೆ." ಎಂದು ಹೇಳಿ ಆ ಯುನಿಯನ್ ಜಾಕ ತೆಗೆಸಿದರು ! ಗೌಡರಿಗೆ ಬಹು ದು:ಖವಾಯಿತೆಂಬದನ್ನು ಹೇಳುವ ಕಾರಣವಿಲ್ಲ.

ಈ ಗೌಡರು ತಮ್ಮ ದೊಂದು ಫೋಟೋ ತೆಗಿಸಿದ್ದು ಅದರಲ್ಲಿ ತಮ್ಮ ಎದೆಯಲ್ಲಿ ಜಾರ್ಜ ಬಾದಶಹಾ–ರಾಣಿಮೇರಿ ದಂಪತಿಗಳು ಕಾಣಿಸುತ್ತಿರುವಂತೆ ತೋರಿಸಿದ್ದರೆಂಬು ದನ್ನು ಹಿಂದೆ ಹೇಳಲಾಗಿದೆ. ' ಗಾಡ್ ಸೇವ ದಿ ಕಿಂಗ ' (ದೇವರು ಬ್ರಿಟಿಶ ಅರಸನನ್ನು ರಕ್ಷಿಸಲಿ) ಎಂಬ ಬ್ರಿಟಿಶ ರಾಷ್ಟ್ರ ಗೀತೆಯಲ್ಲಿಯ ಬ್ರಿಟಿಶ ರಾಜನಿಷ್ಠೆಯ ಘೋಷ ವಾಕ್ಯವನ್ನು ಗೌಡರು ಬೆಳಗಾವ-ಧಾರವಾಡ ರಸ್ತೆಗೆ ಹೊಂದಿದ್ದ ತಮ್ಮ ತೋಟದ ಮನೆಯ ಮುಂಭಾಗದ ಮೇಲೆ ಆಯಿಲ್ ಪೇಂಟಿನ ದೊಡ್ಡಕ್ಷರಗಳಲ್ಲಿ ಬರೆಯಿಸಿ ಜನ ರೆಲ್ಲ ಅದನ್ನು ಓದಿ ಉಚ್ಚರಿಸುವಂತೆ ಮಾಡಿದ್ದರು.

ಪೋಲೀಸರ ನಿಂದ್ಯವರ್ತನೆ !

ಈ ರೀತಿ ಒಂದು ಕಡಗೆ ಸಾಮ್ರಾಜ್ಯಶಾಹಿಯ ಮದ ನೆತ್ತಿಗೇರಿದ ಆಳರಸರು, ಇನ್ನೊಂದು ಕಡೆಗೆ ನರಕಕ್ಕೇ ಸ್ವರ್ಗವೆಂದು ತಿಳಿದು ಕುಣಿದಾಡುತ್ತಿದ್ದ ಪಾಪಿಷ್ಠ ರಾಜ ನಿಷ್ಠರು, ಇವರಿಬ್ಬರ ನಡುವೆ ಗೆದ್ದೆತ್ತಿನ ಬಾಲ ಹಿಡಿಯುವ ಅಜ್ಞಾನ ದರಿದ್ರ ಜನತೆ. ಇಂಥ ವಿಷಮ ಸ್ಥಿತಿಯಲ್ಲಿ ಕೆಲವೇ ಸಾವಿರ ದೇಶಭಕ್ತರು ಸಂಪೂರ್ಣ ಸ್ವರಾಜ್ಯದ ಘೋಷಣೆ ಮಾಡಿ ಚಲೇಜಾವ ಕ್ರಾಂತಿಯ ದಳ್ಳುರಿಯಲ್ಲಿ ಧುಮುಕಿದ್ದರು. ಜಗತ್ತಿಗೇ ಪ್ರಾಚೀನವಾದ ಭಾರತವು, ಧರ್ಮನೀತಿ ಸಂಸ್ಕೃತಿಗಳಿಗೆ ಹೆಸರಾದ ಭಾರತವು, ಉಪನಿಷತ್ ಮಂತ್ರಗಳನ್ನು ಜಗತ್ತಿನ ಕಲ್ಯಾಣಕ್ಕಾಗಿ ಉಸುರಿದ ಋಷಿ ಮುನಿಗಳ ಭಾರತವು, ಅಶೋಕ ವಿಕ್ರಮ ಪುಲಿಕೇಶಿ ರಾಣಾಪ್ರತಾಪ ಶಿವಾಜಿಯಂಥ ವೀರರಿಗೆ ಜನ್ಮವಿತ್ತ ಭಾರತವು, ಅರವಿಂದ, ರವೀಂದ್ರ, ತಿಲಕ, ಗಾಂಧಿ, ನೆಹರು, ಸುಭಾಸರನ್ನು ಹೆತ್ತ ಭಾರತವು, ಬ್ರಿಟಿಶರ ಪರದಾಸ್ಯದಲ್ಲಿ ಬದುಕುವದಕ್ಕಿಂತ ಅಳಿದು ಹೋಗುವದು ಶ್ರೇಯಸ್ಕರವೆಂದು ಬಗೆದು ಕೆಲವೇ ಸಾವಿರ ಕ್ರಾಂತಿವೀರರು ' ಕರೇಂಗೆ ಯಾ ಮರೇಂಗೆ ' ಎಂದು ಘೋಷಣೆ ಮಾಡಿ, ಮನೆಮಾರು ಬಿಟ್ಟು ಹೆಂಡರುಮಕ್ಕಳ ಮೋಹತೊರೆದು ಅಕ್ಷರಶಃ ವನವಾಸಿಗಳಾಗಿ ದೇಶಭಕ್ತಿಯ ನಿಶೆಯಿಂದ ಕ್ರಾಂತಿಕಾರ್ಯ ಮಾಡುತ್ತಿದ್ದರು. ಅವರು ತಮ್ಮವರೇ ತಮ್ಮ ದೇಶದವರೇ ತಮ್ಮ ರಕ್ತದವರೇ ಆದ ಪೋಲೀಸರಿಂದ ಅನನ್ವಿತ ಉಪಟಳಗಳನ್ನು ಹೊಂದಬೇಕಾಯಿತು! ಪಗಾರ ತಿಂದು ಸರಕಾರಿ ನವಕರಿ

ಮಾಡುವ ಈ ಜನರು ಸರಕಾರದೊಂದಿಗೆ ಏಕನಿಷ್ಠರಾಗಿ ಕೆಲಸ ಮಾಡಿದ್ದರೆ ಆದೊಂದು ವಿಷಯ ಬೇರೆ ಆಗುತ್ತಿತ್ತು. ನಮ್ಮ ಕ್ರಾಂತಿ ಸೈನಿಕರಿಗೆ, ಕ್ರಾಂತಿಗೆ ಸಹಾಯ ಮಾಡುವ ಧೈರ್ಯವಿಲ್ಲದಿದ್ದರೆ ಆಬಗ್ಗೆ ಅವರಿಗೆ ವಿಶೇಷ ದೋಷಕೊಡುವ ಕಾರಣವೂ ಇದ್ದಿಲ್ಲ. ಅದೊಂದು ಕರ್ತವ್ಯ ನಿಷ್ಠೆಯ ಪ್ರಶ್ನೆಯಾಗುತ್ತಿತ್ತು.

ಆದರೆ ಮೇಲಿನ ಸಾಹೇಬರಿಂದ ಭಲೆ ಭಲೆ ಎನ್ನಿಸಿಕೊಂಡು ಬಡತಿ ಪಡೆಯುವದಕ್ಕಾಗಿ ಪೋಲೀಸರು ಈ ಕ್ರಾಂತಿವೀರರಿಗೆ, ಭಾರತಮಾತೆಯನ್ನು ಪರದಾಸ್ಯ ಶೃಂಖಲೆಗಳಿಂದ ಮುಕ್ತ ಮಾಡುವ ಪ್ರತಿಜ್ಞೆಗೈದ ಶೂರರಿಗೆ, ಯಾವರೀತಿಯಿಂದ ಚಿತ್ರಹಿಂಸೆ ಕೊಟ್ಟರೆಂಬುದನ್ನು ವಿವರವಾಗಿ ಬರೆಯಬೇಕಾದರೆ ಕಾಗದಸಾಲಲಿಕ್ಕಿಲ್ಲ, ಅತ್ಯಂತ ಅಪಾಚ್ಯ ಶಬ್ದಗಳಿಂದ ನಮ್ಮನ್ನೂ ನಮ್ಮ ಮನೆಯ ಹೆಣ್ಣು ಮಕ್ಕಳನ್ನೂ ಹಿರಿಯರನ್ನೂ ಬೈಯ್ಯುವದು, ರಾತ್ರಿ ಅಪರಾತ್ರಿ ಭೂಗತ ಕಾರ್ಯಕರ್ತರ ಮನೆಗಳಿಗೆ ಹೋಗಿ ಬೂಟುಗಾಲಿನಿಂದ ಬಾಗಿಲಗಳನ್ನು ಒದೆಯುವದು, ಅವರಿಗೆ ಆಶ್ರಯ ನೀಡುವವರ, ಅನ್ನ-ನೀರು ವಸತಿಯ ಅನುಕೂಲತೆ ಮಾಡಿಕೊಡುವವರ ಹೊಲ ಮನೆ ಜಪ್ತಮಾಡುವದು, ಹೊಡೆಯುವದು, ಬಡೆಯುವದು, ವಿರಕ್ತ ಮಠದ ಸ್ವಾಮಿಗಳನ್ನು ಬತ್ತಲೆ ಮಾಡಿ ಅಪಮಾನಮಾಡುವದು, ರಕ್ತ ಚಿಮ್ಮುವಂತೆ ಬಾಲಕರನ್ನು ಹೊಡೆಯುವದು. ತೊಗಲಿನ ತುಂಡಾದ ಭರಮಪ್ಪನ ಪ್ರಯೋಗಮಾಡುವದು, ಹಲ್ಲು ಮುರಿಯುವದು, ಬೆನ್ನೆಲಬು ಲಿಕಲಿಕಿಯಾಗುವಂತೆ ಥಳಿಸುವದು. ಬಂಧನವಾದಮೇಲೆ ಹಿಂದೆ ಕೈ ಕಟ್ಟಿ ಅನೇಕದಿನ ಕೂಡ್ರಿಸುವದು, ನಾಲ್ಕಾರುಜನರಿಗೆ ಸಾಲಾಗಿ ಬೇಡಿಹಾಕಿ ಒಂದೇಕಾಲಕ್ಕೆ ಒಂದೇಸ್ಥಳದಲ್ಲಿ ಅದೂ ಲೈಸದಾರಿಗೆಹತ್ತಿ ಮಲವಿಸರ್ಜನೆಗೆ ಕೂಡಿಸುವದು. ಬೊಟ್ಟಿನ ಉಗುರ ಕಣ್ಣುಗಳಲ್ಲಿ ಸೂಜಿ ಚುಚ್ಚುವದು, ಉಪವಾಸ ಕೆಡುವುವದು, ಇವೆಮುಂತಾದ ಚಿತ್ರಹಿಂಸೆಗಳನ್ನು ಎಲ್ಲ ಪೋಲೀಸರೂ ಪೋಲೀಸ ಅಧಿಕಾರಿಗಳೂ, (ಒಂದೆರಡು ಅಪವಾದ ಬಿಟ್ಟು) ನಮ್ಮ ಕಾರ್ಯಕರ್ತರಿಗೆ ಸತತವಾಗಿ ಕೊಟ್ಟರು.

ನರರಾಕ್ಷಸ ನಿಜಾಮುದ್ದೀನ.

ನಮ್ಮ ಜಿಲ್ಹೆಯಲ್ಲಿ ನಮ್ಮ ಜನರಿಗೆ ಈ ರೀತಿ ಕಷ್ಟಕೊಟ್ಟವರಲ್ಲಿ ಆಗ ಪೋಲೀಸ ಇನಸ್ಪೆಕ್ಟರನಾಗಿದ್ದ ನಿಜಾಮುದ್ದೀನನ ಹೆಸರು ಎಲ್ಲರಿಗಿಂತ ಮೊದಲನೆಯದಾಗಿದೆ. ದಿವಂಗತ (ಬ್ಯಾರಿಸ್ಟರ) ನಾಥ ಪೈ ಅವರು ಬೆಳಗಾವಿಯಲ್ಲಿ ಆಗ ವಿದ್ಯಾರ್ಥಿಗಳಾಗಿ ಕ್ರಾಂತಿಕಾರ್ಯ ಮಾಡುತ್ತಿದ್ದರು. ಅವರನ್ನು ಈ ನಿಜಾಮುದ್ದೀನನು ಹಿಡಿದು ಅವರ ತಲೆಯನ್ನು ಕಲ್ಲಿನ ಗೋಡೆಗೆ ಅನೇಕ ಸಲ ಅಪ್ಪಳಿಸಿ "ಭಾರತೆಮಾತಾಕೀ ಜೈ ಅನ್ನುತ್ತಿಯಾ ಹರಾಮಖೋರ! ಈಗ ಜೈ ಅನ್ನು ನೋಡುತ್ತೇನೆ! ಆ ಭಾರತಮಾತಾ ಆ ರಂಡಿ ಎಲ್ಲಿದ್ದಾಳೆ ಕರೆ, ಅವಳ ತಲೆ ಬೋಳಿಸುವೆನು!" ಎಂದು ಹಲ್ಲುತಿನ್ನುತ್ತ ಉದ್ಗಾರ ತೆಗೆದನು. ಮುಂದೆ ಸ್ವತ: ನಾಥ ಪೈ ಅವರೇ ಇದನ್ನು ಹೇಳಿದರು. ಸ್ವರಾಜ್ಯ ಸಿಕ್ಕಮೇಲಾದರೂ ಇಂಥ ನೀಚ ಅಧಿಕಾರಿಗಳಿಗೆ ನಾವು ಶಿಕ್ಷೆ ಕೊಡಬಲ್ಲೆವೋ

ಎಂದೂ ನನಗೆ ಅವರು ಕೇಳಿದರು. ಮುಗುಟಖಾನ ಹುಬ್ಬಳ್ಳಿಯ ಶ್ರೀ ಚಿನ್ಮಯ ಸ್ವಾಮಿ ಓಂಕಾರಮಠ ಅವರನ್ನು ಬಂಧಿಸಿದಾಗ ದಿನಾಲು ಬೇಕೆಂತಲೇ ಎರಡೂ ವೇಳೆ ಸಿಹಿ ಊಟ ಕೊಟ್ಟು ತೂಕಡಿಕೆ ಬರುತ್ತಲೇ ಮೋರೆಗೆ ತಣ್ಣೀರು ಉಗ್ಗುವದು, ಕೆನ್ನೆಗೆ ಏಟು ಕೊಡುವದು, ಒಂದು ವಾರ ನಡೆಸಿದ್ದರು.

ನಿಜಾಮುದ್ದೀನ ರಾಕ್ಷಸನಿಗೆ ಸಹಾಯಮಾಡುವಲ್ಲಿ ಇನಾಮದಾರ, ಭಟ್ಟ, ಕಲ್ಲೂರ, ದೊಡ್ಡಮನಿ, ವಾಂಡಕರ, ಉಮರಖಾನ, ಕಾಶೀಮ, ಹಿರೇಮಠ, ಮೊದಲಾದ ಉಪರಾಕ್ಷಸರು ಖಿರಧೂಷಣರಂತೆ ಒಳ್ಳೇ ಹುರುಪಿನಿಂದ ಮಗ್ನರಾಗಿದ್ದರು. ಹೊಸೂರಿನ ರಾಮು ಮಾಸ್ತರರನ್ನು ಪೋಲೀಸರು ಕಟ್ಟಿಯಮೇಲಿಂದ ನುಗಿಸಿದರು. ಅವರ ಹಲ್ಲು ಮುರಿದುಬಿದ್ದವು. ಪಾಚ್ಚಾಪೂರದಲ್ಲಿ ಆದೇ ತಾನೇ ಪೋಲೀಸ ಭರತಿಯಾಗಿದ್ದ ಒಬ್ಬ ಸುಶಿಕ್ಷಿತ ದೇಶದ್ರೋಹಿಯು ಮ. ಗಾಂಧಿಯವರ ಫೋಟೋ ರಸ್ತೆಯಲ್ಲಿ ಬಿಸುಟಿ ಅದರಮೇಲೆ ಬೂಟಗಾಲಿನಿಂದ ಮೂರು ಸಲ ಒದ್ದು ಫೋಟೋ ಹರಿದುಬಿಟ್ಟ. ಒಡೆದುಬಿಟ್ಟ ! ನಮ್ಮ ತಂಡದ ಕಾರ್ಯಕರ್ತರಾದ ಶ್ರೀ ಯಮನಪ್ಪಾ ಅರಭಾವಿ ಬೆಣಚಿನಮರಡಿ ಅವರನ್ನು ಪೋಲೀಸರು ಕಾಡಿದ್ದನ್ನು ನೆನಸಿದರೆ ಹೊಟ್ಟೆಯಲ್ಲಿ ಲಿವಿಲಿವಿ ಆಗದಿರದು. ಅವರಂತೂ ಭೂಗತರಾಗಿ ನಮ್ಮೊಂದಿಗೆ ತಿರುಗುತ್ತಿದ್ದರು. ಅವರ ಹೆಂಡತಿ ಲಕ್ಷ್ಮವ್ವನನ್ನು ಪೋಲೀಸರು ಬಂಧಿಸಿ ಜೇಲಿಗೆ ಕಳಿಸಿದರು. ಮನೆಯಲ್ಲಿಯ ಹಗೇದಲ್ಲಿದ್ದ ಎಲ್ಲ ಜೋಳ ಲೂಟಿಮಾಡಿದರು. ಒಂದೇ ಒಂದು ವಯೋವೃದ್ಧ ಮುದುಕಿ ಯಮನಪ್ಪನ ತಾಯಿ ಮನೆಯಲ್ಲಿ ಉಳಿದಾಗ ಅವಳನ್ನೂ ರಟ್ಟೆಹಿಡಿದು ಹೊರಗೆ ಹಾಕಿ ಮನೆಗೆ ಕೀಲಿ ಜಡೆದು ಸರಕಾರಿ ಮುದ್ರೆ ಹಾಕಿದರು. ರಾಜಾ ಎಂಬ ಫೌಜದಾರರು ಗುಜನಾಳದಲ್ಲಿ ಅಕ್ಕತಂಗೇರಹಾಳದ ಸಣ್ಣ ಹುಡುಗರನ್ನು ಬಹಳ ಬಡಿದರು.

ಸವದತ್ತಿಯಲ್ಲಿ ಕೆಲಸಮಾಡುತ್ತಿದ್ದ ಶ್ರೀ ಪ್ರಭಪ್ಪ ಸವಣೂರ ಅವರನ್ನು ಪೋಲೀಸರು ೪–೫ ದಿನ ರಾತ್ರಿ ಬತ್ತಲೆಮಾಡಿ ತಿಗದಮೇಲೆ ನೀರು ಗೊಜ್ಜಿ ಭರಮಪ್ಪನಿಂದ ಬಡೆಯುತ್ತಿದ್ದರು. ಮತ್ತೊಮ್ಮೆ ಸವದತ್ತಿ ಧರ್ಮಶಾಲೆಯಲ್ಲಿ ಇವರನ್ನು ಬಡೆಯುವಾಗ ೪–೫ ಕಟ್ಟಿಗೆ ಒಡಿಗೆಗಳು ಮುರಿದವು. ಇವರೊಂದಿಗೆ ಕೆಲಸ ಮಾಡುತ್ತಿದ್ದ ಮಹಾದೇವ ಮರಕಟ್ಟಿ ಎಂಬವನು ಮದ್ದು ತಯಾರಿಸುವಾಗ ಸ್ಫೋಟವಾಗಿ ಶರೀರದ ಒಂದು ಭಾಗವನ್ನೇ ಸುಟ್ಟುಕೊಂಡ.

ಸೂಳೇಭಾವಿ ಸ್ಟೇಶನ್ ಸುಟ್ಟ ಆರೋಪದಿಂದ ಸುಲಧಾಳದ ಐವರು ಕಾರ್ಯಕರ್ತರನ್ನು ಹಿಡಿದಾಗ ಅವರಲ್ಲಿ ಬಸಲಿಂಗಪ್ಪ ನಿಂಗಪ್ಪ ಗುಡದವರ ಎಂಬವನನ್ನು ಚಿತ್ರಹಿಂಸೆ ಕೊಟ್ಟು ಭಾರಿ ಬಡೆದು ಕೊಂದು ಹಾಕಿದರು ! ಅವನ ಹೆಣವನ್ನು ಪೋಲೀಸರು ಗುಡ್ಡದಲ್ಲಿಯ ಒಂದು ಗಿಡಕ್ಕೆ ಹಗ್ಗದಿಂದ ತೂಗು ಹಾಕಿ ತಾನೇ ಉರಲು ಹಾಕಿಕೊಂಡನೆಂದು ಸುದ್ದಿ ಮಾಡಿದರು.

ಸೂರ್ಯನ ಬಿಸಿಲಿನ ತಾಪಕ್ಕಿಂತ ಬಿಸಿಲಿನಿಂದ ಕಾಯ್ದ ಉಸುಕಿನ ತಾಪ ಅಸಹ್ಯವಿರುವಂತೆ ಪ್ರತ್ಯಕ್ಷ ಬ್ರಿಟಿಶಸರಕಾರಕ್ಕಿಂತ ಅವರ ಕಾಲು ನೆಕ್ಕುವ ಪೋಲೀಸ ನಾಯಿಗಳು ನಮ್ಮನ್ನು ಬಹಳಷ್ಟು ಕಾಡಿದವು. ಅದೇ ಪೋಲೀಸ ಅಧಿಕಾರಿಗಳು ಸ್ವರಾಜ್ಯ ಸಿಕ್ಕಮೇಲೆ ಸರ ಸರನೆ ಮೇಲಿನ ಬಡತಿ ಹೊಂದಿ ನಿರ್ಲಜ್ಜರಂತೆ ಮೆರೆಯುತ್ತಿರುವ ದೃಶ್ಯವನ್ನು ನಮಗೆ ಕಣ್ಣಾರೆ ಕಾಣುವ ಪ್ರಸಂಗ ಬಂದಿತಲ್ಲಾ ಎಂದು ಮನಸ್ಸು ಅಲ್ಲೋಲ ಕಲ್ಲೋಲವಾಗುವದು ! ಈ ದುಷ್ಟ ಪೋಲೀಸ ಅಧಿಕಾರಿಗಳಿಗೆ ಯೋಗ್ಯ ಶಾಸನ ಮಾಡುವದು ನಮ್ಮ ಸ್ವತಂತ್ರ ಸರಕಾರದ ಕರ್ತವ್ಯವಾಗಿದ್ದಿಲ್ಲವೆ?

ಪೋಲೀಸರ ಅತ್ಯಾಚಾರ

ಅಳಣಾವರದಲ್ಲಿಯ ಸಿಟಿಝನ್ ಬ್ಯಾಂಕಿನ ಮೇಲೆ ನಮ್ಮ ಕಾರ್ಯಕರ್ತರು ದಾಳಿ ಮಾಡಿ ಸುಮಾರು ೨೦ ಸಾವಿರ ರೂಪಾಯಿ ನಗದು ಹಣ ಮತ್ತು ಅಷ್ಟೇ ಬೆಲೆ ಬಾಳುವ ಬಂಗಾರದ ದಾಗಿನೆಗಳನ್ನು ತಕ್ಕೊಂಡರು. ಈ ಬ್ಯಾಂಕು ಸರಕಾರಿ ಬ್ಯಾಂಕ ಆಗಿದ್ದಿಲ್ಲ. ಖಾಸಗಿಯದಾಗಿತ್ತು. ಯಾರ ಖಾಸಗಿ ಆಸ್ತಿಗೂ ಕೈ ಹಚ್ಚಬಾರದೆಂದು ಜಿಲ್ಲೆಯ ಎಲ್ಲ ಕಾರ್ಯಕರ್ತರಿಗೆ ತಿಳಿಸಲಾಗಿತ್ತು. ಆದರೂ ಕೆಲ ಕಾರ್ಯಕರ್ತರು ಪೂರ್ಣ ವಿಚಾರ ಮಾಡದೆ ಅದೂ ಸರಕಾರಿ ಬ್ಯಾಂಕು ಎಂದು ತಿಳಿದು ಅವಸರದಿಂದ ದಾಳಿ ಮಾಡಿದರು. ಕೊನೆಗೆ ಅದು ಖಾಸಗಿ ಬ್ಯಾಂಕು ಅಂತ ತಿಳಿದದ್ದರಿಂದ ಆ ಎಲ್ಲ ಹಣ, ಬಂಗಾರ ಬ್ಯಾಂಕಿಗೆ ತಿರುಗಿ ಕೊಡಲಾಯಿತು. ಧಾರವಾಡದ ಶ್ರೀ. ದ. ಪ. ಕರಮರಕರ ಅವರು ನಮ್ಮ ಕಾರ್ಯಕರ್ತರ ಪರವಾಗಿ ವಕೀಲಿ ನಡೆಸಿದರು.

ಈ ಪ್ರಕರಣದಲ್ಲಿ ಪೋಲೀಸರು ಗಂದಿಗವಾಡ ಗ್ರಾಮಕ್ಕೆ (ತಾಲೂಕ ಖಾನಾಪುರ) ಬಹಳ ತಾಪಕೊಟ್ಟರು. ಗಂದಿಗವಾಡದ ರುದ್ರಗೌಡಾ ಪಾಟೀಲ ಎಂಬವರನ್ನು ಪೋಲೀಸರು ಬುಧಿಸಿ ಅಳಣಾವರಕ್ಕೆ ಒಯ್ದು ಮೂರು ದಿನಗಳ ವರೆಗೆ ಬತ್ತಲೆ ಮಾಡಿ ಬಡೆದರು. ಮೂರು ಹಗಲು ಮೂರು ರಾತ್ರಿ ಅವರನ್ನು ನಿಲ್ಲಿಸಿ ಮಲಗಗೊಡದೆ ಭರಮಪ್ಪನ ಪ್ರಸಾದ ಕೊಟ್ಟರು.

ಇದೇ ಗ್ರಾಮದ ಶ್ರೀ. ಭಾಸ್ಕರ ರಾಮಚಂದ್ರ ಪತ್ತಾರ ಎಂಬವರನ್ನು ಅನನ್ವಿತವಾಗಿ ಪೋಲೀಸರು ಬಡೆದದ್ದರಿಂದ ಅನೇಕ ತಿಂಗಳ ವರೆಗೆ ಅವರ ಗಾಯಗಳು ಮಾಯಲಿಲ್ಲ.

ಇದೇ ಗ್ರಾಮದ ಶ್ರೀ. ಗಂಗಾಧರ ದೊಡಮನಿ ಎಂಬವರಷ್ಟು ಹೊಡೆತ ತಿಂದ ವರು ತೀರ ವಿರಳ. ನಾಲ್ಕು ದಿನ ಅವರನ್ನು ಪೋಲೀಸರು ಒಂದೇ ಸವನೆ ಥಳಿಸುತ್ತಿದ್ದರು ! ಗಾಯಗಳಿಂದ ರಕ್ತ ಸೋರುತ್ತಿದ್ದರೂ ಥಳಿಸುವದು ನಿಂತಿದ್ದಿಲ್ಲ. ಜೇಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ಇವರಿಗೆ ಆಗಾಗ ಹೊಡೆತದ ನೋವು ಏಳುತ್ತಿತ್ತು.

ಮರೆಪ್ಪ ಬಡಿಗೇರ, ಗದಿಗೆಪ್ಪ ಯಮಕನಮರ್ಡಿ ಎಂಬವರನ್ನು ಪೋಲೀಸರು ವಿಪರೀತ ಹಿಂಸೆಗೆ ಗುರಿಪಡಿಸಿದರು ಗಂದಿಗವಾಡದ ಜನರನ್ನು ಅಂಜಿಸಿ ಪೋಲೀಸರು ೨೫೦೦ ರೂಪಾಯಿ ತಿಂದರು.

ಖಾನಾಪುರ ತಾಲೂಕಿನ ಹೆದ್ದೂರ ಗ್ರಾಮದಲ್ಲಿಯ ಸನದಿ ಯಲ್ಲಪ್ಪ ಎಂಬವನನ್ನು ಪೋಲೀಸರು ಬಂಧಿಸಿ ಖಾನಾಪುರ ಲಾಕಪ್ಪಿನಲ್ಲಿ ವಿಪರೀತ ಬಡೆದರು. ಅವನನ್ನು ಹಿಂಡಲಗಿಗೆ ಕಳಿಸಿ ಅಲ್ಲಿಂದ ಸಿವ್ಹಿಲ್ ಹಾಸ್ಪಿಟಲಕ್ಕೆ ಕಳಿಸಿದರು. ಅಲ್ಲಿಯೇ ಅವನು ತೀರಿಕೊಂಡನು,

ತಿಗಡೊಳ್ಳಿಯ ಕಲ್ಲಪ್ಪ ಹುಬ್ಬಳ್ಳಿ, ಶಿವಪ್ಪ ಹಂಚಿನಮನಿ, ಬಸಪ್ಪ ಹಂಚಿನಮನಿ, ಕರಮಲ್ಲಪ್ಪ ಮಲಶೆಟ್ಟಿ, ಕಲ್ಲಪ್ಪಾ ಗೌಡನವರ, ದೇವಪ್ಪಾ ಮಠದ ಈ ಆರು ಜನರನ್ನು ಪೋಲೀಸರು ಬಂಧಿಸಿ ಮೂರು ತಿಂಗಳವರೆಗೆ ಸರತಿಯ ಮೇಲೆ ಹೊಡೆಯುತ್ತಿದ್ದರು!

ತಿಗಡೊಳ್ಳಿಯ ಭೂಗತ ಕಾರ್ಯಕರ್ತರಾಗಿದ್ದ ಬಸಪ್ಪ ಹಂಚಿನಮನಿ ಮತ್ತು ವೀರಪ್ಪ ಹೊಸೂರ ಇವರ ಪತ್ನಿಯರನ್ನು ಪೋಲೀಸರು ಬಂಧಿಸಿ ಊರ ಹೊರಗಿನ ಕಲವೇಶ್ವರ ಗುಡಿಗೆ ಒಯ್ದು ನಿಮ್ಮ ಗಂಡಂದಿರು ಎಲ್ಲಿರುವರೆಂದು ಹೆದರಿಸಿ ಕೇಳಿದರು. ಅವರಿಂದ ಮಾಹಿತಿ ಸಿಗಲಿಲ್ಲ. ಆದರಿಂದ ಕ್ರೋಧಾವಿಷ್ಟನಾದ ಫೌಜದಾರನು ಅವರನ್ನು ಗರ್ಭಗುಡಿಯಲ್ಲಿ ಒಯ್ದು ಸೀರೆ ಕಳೆದು ಹೆರಳು ಜಗ್ಗಿ ಮೊಲೆಗಳನ್ನು ಹಿಚುಕಿ ಗೋಳಾಡಿಸಿದನು. ಲಜ್ಜೆ ರಕ್ಷಣೆಗಾಗಿ ಈ ಮಹಿಳೆಯರು ಎಷ್ಟೇ ಹೆಣಗಿದರೂ ಆ ಕಟುಕರ ಮುಂದೆ ಯಾವ ಉಪಯೋಗವೂ ಆಗಲಿಲ್ಲ. ಶ್ರೀಮತಿ ಬಸವ್ವ ತುಂಬ ಗರ್ಭಿಣಿಯಿದ್ದಳು. ಅತ್ಯಾಚಾರಿ ಪೋಲೀಸರು ಅವಳ ಸ್ತನಗಳನ್ನು ಹಿಚುಕಿ ಹಾಲು ಚಿಮ್ಮಿಸಿದರು! ಇಷ್ಟಾದರೂ ಆ ವೀರ ಮಹಿಳೆಯರು ತಮ್ಮ ಗಂಡಂದಿರ ಬಗ್ಗೆ ಯಾವ ಸುಳಿವನ್ನೂ ಕೊಡಲಿಲ್ಲ. ತಿಗಡೊಳ್ಳಿಯಲ್ಲಿ ೨ ತಿಂಗಳ ಪರೆಗೆ ಯಾವ ಸ್ತ್ರೀಯೂ ಮನೆಬಿಟ್ಟು ಹೊರಗೆ ಬರದಂತೆ ಅಂಜಿ ಹೋಗಿದ್ದರು. ಸುಮಾರು ಒಂದು ಸಾವಿರ ರೂಪಾಯಿ ಲಂಚವನ್ನು ಪೋಲೀಸರು ಊರವರಿಂದ ಹೊಡೆದರು.

ಅಂಬಡಗಟ್ಟಿಯಲ್ಲಿ ಶ್ರೀ. ಹಣಮಂತ ಸ್ವಾಮಿರಾವ ಕುಲಕರ್ಣಿ ಎಂಬ ೬೫ ವರುಷದ ವೃದ್ಧರನ್ನು ಬಂಧಿಸಿ ಅವರನ್ನು ಡಬ್ಬು ಮಲಗಿಸಿ ತಿಗದ ಮೇಲೆ ಬಿತ್ತದಿಂದ ಮೂವತ್ತು ಫಟಕಿ ಹೊಡೆದರು. ಈ ತಾಲೂಕಿನಲ್ಲಿ ಇವರಷ್ಟು ಬಡಿತ ಯಾರೂ ತಿನ್ನ

ಲಿಲ್ಲ. ಸ್ವಾತಂತ್ರ್ಯ ಯೋಧರಿಗೆ ಆಶ್ರಯ ಕೊಟ್ಟದ್ದೇ ಅವರ ಅಪರಾಧ, ಎರಡು ತಿಂಗಳ ವರೆಗೆ ನಿಲ್ಲಲು ಬಾರದ್ದರಿಂದ ಅವರು ಕೈಯ್ಯೂರಿ ಸಂಣ ಮಕ್ಕಳಂತೆ ಅಂಬೆಗಾಲಿಕ್ಕುತ್ತ ಸರಿಯುತ್ತಿದ್ದರು. ಇದೇ ಊರ ಅಪ್ಪಯ್ಯಾ ಹೆಳದಿ, ಸುಬ್ಬಣ್ಣ ಹಣಮಂತರಾವ ಕುಲ ಕರ್ಣಿ, ತಮ್ಮಣ್ಣ ಹರಕಿ, ಗಂಗಪ್ಪ ಹಳಬರ ಇವರನ್ನೂ ವಿಪರೀತ ಬಡೆದರು. ಗಂಗಪ್ಪ ನನ್ನು ೮ ದಿನದ ವರೆಗೆ ಅನ್ನ ನೀರಿಲ್ಲದೆ ಉಪವಾಸ ಕೆಡವಿದರು.

ಸಂಪಗಾವಿಯಲ್ಲಿ ಶ್ರೀ. ಬಸಪ್ಪ ಶಿದ್ನಾಳ ಎಂಬವರನ್ನು ಯುಗಾದಿಯ ದಿವಸ ಬಂಧಿಸಿ ಮನೆಯಿಂದ ಪೋಲೀಸ ತಾಣೆಯ ವರೆಗೆ ಬಡೆಯುತ್ತ ಒಯ್ದರು. ಬಸಪ್ಪ ಉಳ್ಳಾಗಡ್ಡಿ ಮತ್ತು ಅಕ್ಕಿ ಬಂಧುಗಳನ್ನೂ ಅತಿಯಾಗಿ ಥಳಿಸಿದರು.

ಚಿಕ್ಕೋಡಿ ತಾಲೂಕು ಸಧನ ತಾಲೂಕವಾದದ್ದರಿಂದ ಬೇಕುಬೇಕಾದವರನ್ನು ಹಿಡಿಯುವದು ಹೊಡೆಯುವದು ಅವರಿಂದ ದುಡ್ಡು ಸೆಳೆಯುವದರಲ್ಲಿ ಪೋಲೀಸರು ವಿಕ್ರಮವನ್ನೇ ಸ್ಥಾಪಿಸಿದರು.

ಬೆಡಕಿಹಾಳ ಒಂದೇ ಊರಲ್ಲಿ ಪೋಲೀಸರು ೧೨ ಸಾವಿರ ರೂಪಾಯಿ ಸುಲಿದರು. ಶ್ರೀ. ಶಿವಗೌಡಾ ಭೋಜೆ ಇವರನ್ನು ಹಿರೇಮಠ ಫೌಜದಾರರು ಬಂಧಿಸುವಾಗ ಅವರ ತಾಯಿಯ ಎದೆಯ ಮೇಲೆ ಒದ್ದು ಆ ವೃದ್ಧೆಯನ್ನು ಕೆಡವಿದರು. ಬಾಬು ಖೋತ, ಆಂಬಾಜಿ ಬಾಬರ, ರಾಮಚಂದ್ರ ಪಾಟೀಲ: ರಾಮು ಚವಾಣ ಇವರನ್ನು ಮನಬಂದಂತೆ ಬಡಿದರು.

ಮಾಂಗೂರ (ಚಿಕ್ಕೋಡಿ) ಊರವರಿಗೆ ಪೋಲೀಸರು ಕೊಟ್ಟ ಹಿಂಸೆ ಅತಿಯಾಗಿತ್ತು. ಈ ಊರ ಶ್ರೀ. ಧನಪಾಲ ಪಂಡಿತ ಎಂಬವರನ್ನು ಪೋಲೀಸರು ಬಂಧಿಸಿ ಅವರನ್ನು ವಿವಸ್ತ್ರಮಾಡಿ ಚರ್ಮ ಸುಲಿದು ರಕ್ತ ಚಿಮ್ಮುವವರೆಗೆ ತಿಗದಮೇಲೆ ಹೊಡೆದರು. ಅನೇಕ ತಿಂಗಳ ವರೆಗೆ ಅವರ ಗಾಯ ಮಾಯಲಿಲ್ಲ,

ಇದೇ ಊರ ಅಪ್ಪಾಲಾಲ ಎಂಬ ಮುಸಲ್ಮಾನ ಗೃಹಸ್ಥನನ್ನು ಸದಲಗಾ ಠಾಣೆಯಲ್ಲಿ ಒಯ್ದು ಎರಡು ನೂರು ಪೆಟ್ಟು ಬೆತ್ತದ ಪೆಟ್ಟು ಕೊಟ್ಟರು.

ಈ ಊರಿಂದ ಪೋಲೀಸರು ಸಾವಿರ ರೂಪಾಯಿ ಸುಲಿದರು.

ನಿಪ್ಪಾಣಿ ಪಟ್ಟಣದಲ್ಲಿ ವ್ಯಾಪಾರಸ್ಥರಿಗೆ ಹೆದರಿಕೆ ಹಾಕಿ ಪೋಲೀಸರು ಒಂದು ಲಕ್ಷ ರೂಪಾಯಿ ಪುಂಡಗುಂಡಾಯವನ್ನೂ ಅಷ್ಟೇ ಲಂಚವನ್ನೂ ಸೆಳೆದರು.

ಕಾಶೀಬಾಯಿ ಹಣಬರ ಪ್ರಕರಣ

ನಿಪ್ಪಾಣಿಯ ಹತ್ತಿರದ ಪಾಂಗಿರೆ ಎಂಬ ಹಳ್ಳಿಯು ಆಗ ಕೊಲ್ಲಾಪುರ ಸಂಸ್ಥಾನದ ಗಡಹಿಂಗ್ಲಜ ತಾಲೂಕಿನಲ್ಲಿತ್ತು. ಅಲ್ಲಿಯ ಕಾಶೀಬಾಯಿ ಹಣಬರ ಎಂಬವಳ ಮಗ ಮಲ್ಲಪ್ಪ ಎಂಬವನು ಭೂಗತನಾಗಿದ್ದನು. ಅವನನ್ನು ಹಿಡಿಯಲು ಗಡಹಿಂಗ್ಲಜದ ಫೌಜದಾರ ಇಂಗವಲೆ ಎಂಬವನು ಇನಸ್ಪೆಕ್ಟರ ಭೋಸಲೆ ಎಂಬವನೂ ಕೂಡಿ ವಿಶ್ವ ಪ್ರಯತ್ನ ಮಾಡಿದರೂ ಮಲ್ಲಪ್ಪ ಸಿಗಲಿಲ್ಲ. ಆಗ ಈ ರಾಕ್ಷಸರೀರ್ವರು ಇಬ್ಬರು ಪೋಲೀಸರ ಸಹಾಯದಿಂದ ಕಾಶೀಬಾಯಿಯ ಮೇಲೆ ಮಾಡಿದ ಅತ್ಯಾಚಾರ ಕೇಳಿ ಜಿಲ್ಲೆಗೆ ಜಿಲ್ಲೆಯೇ ದಂಗು ಬಡೆಯಿತು. ಕಾಶೀಬಾಯಿಯನ್ನೂ ಅವಳ ಗಂಡನನ್ನೂ ಈ ರಾಕ್ಷಸರು ಬಂಧಿಸಿ ಚಿಖಲವಾಳ ಪೋಲೀಸ ಸ್ಟೇಶನ್ನಿಗೆ ಒಯ್ದರು. ಅಲ್ಲಿ ಕಾಶೀಬಾಯಿಯನ್ನು ನಗ್ನ ಮಾಡಿ ತಿಗದ ಮೇಲೆ ಬೆತ್ತದಿಂದ ಮೂರು ಸಲ ಬಡೆದರು. ಅವಳ ಗಂಡನನ್ನೂ ಮನವಾರೆ ಹೊಡದರು. ಮೂರು ದಿನ ಈ ಪತಿ-ಪತ್ನಿಯರನ್ನು ಹೊಡೆದರೂ ಅವರು ತಮ್ಮ ಮಗನಾದ ಮಲ್ಲಪ್ಪನ ಸುಳಿವು ಕೊಡಲಿಲ್ಲ. ಆಗ ಈ ರಾಕ್ಷಸರಿಬ್ಬರೂ ಕಾಶೀಬಾಯಿಯನ್ನು ಬತ್ತಲೆ ಮಾಡಿ ಅವಳ ಯೋನಿಯಲ್ಲಿ (ಜನನೇಂದ್ರಿಯದಲ್ಲಿ) ಖಾರಪುಡಿ ಹಾಕಿದರು. ಮತ್ತು "ಇಂದು ಖಾರಪುಡಿ ಹಾಕಿದ್ದೇವೆ ನಾಳೆ ಕಟ್ಟಿಗೆಯ ಗೂಟ ಬಡೆಯುವೆವು. ಸುಮ್ಮನೆ ಮಲ್ಲಪ್ಪನನ್ನು ಹಿಡಿದುಕೊಡು" ಎಂದು ಅರ್ಭಟಿಸಿದರು. ಈ ಅತ್ಯಾಚಾರದ ಬಗ್ಗೆ ಪತ್ರಿಕೆಗಳಲ್ಲಿ ವಿಶೇಷವಾಗಿ ಬೆಳಗಾವಿಯ ಮರಾಠಿ ಸಾಪ್ತಾಹಿಕವಾದ ತರುಣ ಭಾರತದಲ್ಲಿ ಪ್ರಚಂಡ ಆಂದೋಲನ ನಡೆಯಿತು.

ನಿಪ್ಪಾಣಿ, ಹೆಬ್ಬಾಳ, ಪಾಜ್ಜಾಪುರ, ಅಕ್ಕತಂಗೇರಹಾಳ, ಹುಬ್ಲಿ, ಹೊಸೂರ ಹಿರೇಬಾಗೇವಾಡಿ ಇತ್ಯಾದಿ ಗ್ರಾಮಗಳ ಮೇಲೆ ಪುಂಡಗಂದಾಯ ಹೇರಲಾಯಿತು.

ಉಗರಗೊಳ್ಳದ ಮಾನಪ್ಪ ಮಳಿಗೆಪ್ಪ ಬಡಿಗೇರ ಎಂಬವರು ದಿ. ೨-೧೦-೪೩ ಗಾಂಧಿಜಯಂತಿ ದಿನದಂದು ಜೇಲಿನಲ್ಲಿ ಧ್ವಜವಂದನೆ ಮಾಡಿದ್ದರಿಂದ ಆಡಾಬೇಡಿ ದಂಡಾಬೇಡಿ ಗಂಜಿಸಜಾ ಮುಂತಾದ ಶಿಕ್ಷೆ ಭೋಗಿಸಬೇಕಾಯಿತು.

ತಿಗಡೊಳ್ಳಿಯ ದೇವೆಂದ್ರ ಕಲ್ಲಪ್ಪ ಬಸ್ತವಾಡ ಅವರನ್ನು ಬೆನ್ನು ಹುರಿಯ ಮೇಲೆ ಭಾರಿ ಬಡೆದದ್ದರಿಂದ ಬೆನ್ನುಹುರಿಯ ಒಂದು ಎಲಬು ಒಂದು ಇಂಚಿನಷ್ಟು ಒಳಗೆ ಸರಿದು ಕಾಯಂತರೀಕ ಮೂತ್ರಕೋಶದ ರೋಗವಾಗಿದೆ. ದೊಡ್ಡ ಕೊಡಲಿಯ ಕಾವು ಮುರಿಯುವತನಕ ಬೆನ್ನ ಮೇಲೆ ಬಡೆದರು. ಬಡಿಗೆ ಬೆತ್ತ ಭರಮಪ್ಪ ಎಲ್ಲದರ ಭಾರಿ ಪ್ರಸಾದ ಸಿಕ್ಕದ್ದರಿಂದ ಮೂಗು ಕಿವಿ ಮೂತ್ರ ದ್ವಾರದಿಂದ ರಕ್ತ ಬರುವದು ೧॥ ತಿಂಗಳ ನಡೆದಿತ್ತು. ಇವರ ಮೂಗು ಕಿವಿ ಬೇನೆ ಇಂದಿಗೂ ಅದೆ.

ಶ್ರೀ. ಅಪ್ಪಣ್ಣಗೌಡಾ ಪಾಟೀಲ ಸಂಕೇಶ್ವರ ಇವರ ಸಲುವಾಗಿ ಅವರ ಸಂಬಂಧಿಕ ರಾದ ಶೆಟಗೌಡಾ ಬಾಬಾಗೌಡಾ ಪಾಟೀಲ ಕಮತ್ಯಾನ ಹಟ್ಟಿ (ಚಿಕ್ಕೋಡಿ) ಇವರನ್ನು ಪೋಲೀಸರು ಬಹಳ ಬಡೆದರು. ಬಡೆತದ ಕಚ್ಚುಗಳು ಈಗಲೂ ಅವರ ಮೈಮೇಲೆ ಉಳಿದಿವೆ. ಅಪ್ಪಣ್ಣಗೌಡರ ಮನೆಯಲ್ಲಿಯ ದನಕರುಗಳನ್ನು ಆಸ್ತಿ ಪಾಸ್ತಿಯನ್ನು ಜಪ ಮಾಡಿ ಅವರ ಮಗನನ್ನು ಜೇಲಿಗೆ ಹಾಕಿದರು.

ಶ್ರೀ. ವೀರಪ್ಪ ಸುತಗಟ್ಟಿಯವರು ಪೋಲೀಸರ ಕೈಯೊಳಗಿಂದ ಪಾರಾಗಿ ಹೋಗುವಾಗ ಅವರಿಗೆ ಗುಂಡು ಹಾಕಿದರು. ಗುಂಡು ಬಲಗೈ ತೋಳಿಗೆ ತರಿದು ಹೋಗಿ ಮರಣಾಂತಿಕ ಗಾಯವಾಯಿತು. ಸುದೈವದಿಂದ ಆದರೊಳಗಿಂದ ಅವರು ಚೇತರಿಸಿ ಕೊಂಡರು.

ಜೀವಂತ ನರಕವಾಸ !

ಪೋಲೀಸರಿಂದ ದೈಹಿಕವಾಗಿ ಹೊಡೆತ ಬಡೆತ ತಿಂದು ಬಂದರೆ ಯಮಯಾತನೆ ತೀರುತ್ತಿದ್ದಿಲ್ಲ. ಲಾಕಪ್ಪುಗಳಲ್ಲಿ ಕುರಿಗಳಂತೆ ನಮ್ಮ ಕಾರ್ಯಕರ್ತರನ್ನು ತುಂಬಿ ಅವರಿಗೆ ಬೆಳಕು ಗಾಳಿ ನೀರು ಸಹ ಸರಿಯಾಗಿ ಸಿಗದಂತೆ ಮಾಡಿದರು. ದಿನದಲ್ಲಿ ಎರಡು ಸಾರೆ ಮುಂಜಾನೆ ಒಮ್ಮೆ ಸಂಜೆಗೆ ಒಮ್ಮೆ ಹೀಗೆ ಅದೂ ೧೫ ನಿಮಿಷ ಮಾತ್ರ ಹೊರೆಗೆ ಬಹಿರ್ದಿಶೆಗೆ ಮಲಮೂತ್ರ ವಿಸರ್ಜನೆಗೆ ಬಿಡುತ್ತಿದ್ದರು. ಇಬ್ಬರ ಕೈಗೆ ಬೇಡಿ ಹಾಕಿ ಸಾಲು ಸಾಲಾಗಿ ಶೌಚಕ್ಕೆ ಕೂಡಿಸುತ್ತಿದ್ದರು. ಸ್ನಾನಕ್ಕೆ ನೀರಿಲ್ಲ, ಆರಿವೆ ಒಗೆದು ಕೊಳ್ಳುವ ದಂತೂ ಸಾಧ್ಯವೇ ಇಲ್ಲ. ಮೈಮೇಲೆ ಕೂರಿಗಳು ಹರಿದಾಡುತ್ತಿದ್ದವು, ತಗಣಿ ಗುಂಗಾಡು ಗಳೂ ಚಿಕ್ಕಾಡುಗಳೂ ಒಂದೇ ಸವನೆ ಕಾಡುತ್ತ ನಿದ್ರೆಯನ್ನೇ ಇಲ್ಲದಂತೆ ಮಾಡಿದ್ದವು. ಹಗಲು ಮತ್ತು ರಾತ್ರಿ ೭ಳ ಗಂಟೆ ವನ್ನ ಪಶುಗಳನ್ನಿಟ್ಟಂತೆ ಲಾಕಪ್ಪದಲ್ಲಿ ತುಂಬಿ ಬಿಡು ತ್ತಿದ್ದರು. ನಡುವೆ ಮಲಮೂತ್ರ ವಿಸರ್ಜನೆ ಮಾಡುವದಾದರೆ ಅಲ್ಲಿಯೇ ಲಾಕಪ್ಪ ದಲ್ಲಿದ್ದ ಬಹಿರಂಗ ಬಚ್ಚಲ ಮೂಲೆಯಲ್ಲಿ ಎಲ್ಲರ ಎದುರು ಮಾಡಬೇಕಾಗುತ್ತಿತ್ತು. ಊಟದ ಬಗ್ಗೆಯಂತೂ ಹೇಳುವ ಕಾರಣವೇ ಇದ್ದಿಲ್ಲ. ಹಾಸಲಿಕ್ಕಿಲ್ಲ ಹೊದಿಯಲಿಕ್ಕಿಲ್ಲ ಇಂಥ ಸ್ಥಿತಿಯಲ್ಲಿ ತಿಂಗಳು ಗಟ್ಟಲೆ ಕಾರ್ಯಕರ್ತರು ಕೊಳೆಯಬೇಕಾಯಿತು.

ಮೊದಲು ಪೋಲೀಸರಿಂದ ಬಡೆತದ ಪ್ರಸಾದ ತಿಂದು ಲಾಕಪ್ಪಿನ ಯಮಸದ ನಕ್ಕೆ ಬರಬೇಕು. ಮುಂದೆ ಅಲ್ಲಿ ತಿಂಗಳುಗಟ್ಟಲೆ ನಿಂತು ನರಕಸದೃಶ ಕಚ್ಚಾ ಜೇಲು ಗಳಿಗೆ ಹೋಗಬೇಕು. ಬೆಳಗಾವಿಯಲ್ಲಿ ಹೆಡ್‌ಕ್ವಾರ್ಟರ ಜೇಲ (ಈಗಿನ ಗೋಡಾನ) ಕಿಲ್ಲೆಯ ಕ್ಯಾಂಪ ಜೇಲುಗಳನ್ನು ಪ್ರವೇಶಿಸಿದವರು ನಿಜವಾಗಿಯೇ ನರಕಯಾತನೆ

ಭೋಗಿಸಿದರೆಂದು ಹೇಳಬೇಕು. ದನ, ಕುರಿ, ಕುದುರೆ ಕಟ್ಟುವ ಸ್ಥಳವೂ ಅದಕ್ಕಿಂತ ಸ್ವಚ್ಛ ಇರಬಹುದು. ಹೊಲಸು ಸ್ಥಳ, ದುರ್ಗಂಧ, ನೀರಿನ ಅಭಾವ, ತಗಣಿ ಗುಂಗಾಡು ಚಿಕ್ಕಾಡು ಕೂರಿಗಳ ಕಡಿತ, ಕಟ್ಟಾ ಹಸಿಬಿಸಿ ರೊಟ್ಟಿಯ ಊಟ, ಇವೆಲ್ಲವುಗಳನ್ನು ನೆನಸಿದರೆ ಹಿಂಡಲಗಿಯ ಜೇಲು ಸ್ವರ್ಗವೆಂದೇ ಹೇಳಬೇಕು. ಈ ಕ್ಯಾಂಪ ಜೇಲುಗಳಲ್ಲಿ ಲಾಕಪ್ಪುಗಳಲ್ಲಿ ಬಹಳ ದಿನ ಕೊಳೆತವರು ನಿಜವಾದ ಕಷ್ಟಪಟ್ಟವರೆಂದು ನಿಸ್ಸಂದಿಗ್ಧವಾಗಿ ಹೇಳಬಹುದು.

ಕೆಲವು ಅಪವಾದಗಳು.

ಶ್ರೀ ಆರೂರ ಎಂಬವರು ಖಾನಾಪೂರ ತಾಲೂಕಿಗೆ ಫೌಜದಾರರಾಗಿದ್ದಾಗ ಶ್ರೀರಂಗ ಕಾಮತರು ಖಾನಾಪುರದಲ್ಲಿ ಒರ್ವ ಮಿತ್ರರ ಮನೆಯಲ್ಲಿ ತಂಗಿದ್ದರು. ಶ್ರೀ ಆರೂರ ಅವರಿಗೆ ಅದು ಗೊತ್ತಿತ್ತು. ಅವರು ಒಂದು ರಾತ್ರಿ ಅಲ್ಲಿಗೆ ಬಂದು, " ನಾಳೆ ಇಲ್ಲಿ ಮಿಲಟರಿ ಸಹಾಯದಿಂದ ಪೋಲೀಸರ ಮುತ್ತಿಗೆ ಬರುವದಿದೆ. ಕಾರಣ ನೀವು ಮುಂಜಾನೆ ಈ ಊರುಬಿಟ್ಟು ಬೇರೆ ಕಡೆಗೆ ಹೋಗುವದು ಒಳಿತು " ಎಂದು ಸೂಚನೆ ಕೊಟ್ಟರು.

ಗೋಕಾಕದಲ್ಲಿ ಶ್ರೀ ಮುಲ್ಲಾ ಎಂಬ ಹೆಸರಿನ ಫೌಜದಾರರಿದ್ದರು. ಅವರು ಯಾವರೀತಿಯಿಂದಲೂ ನಮ್ಮ ಕಾರ್ಯಕರ್ತರಿಗೆ ಸಹಾಯಮಾಡದೆ ಸರಕಾರಕ್ಕೆ ಅತ್ಯಂತ ನಿಷ್ಠರಾಗಿ ಕೆಲಸಮಾಡಿದರು. ಆದರೆ ಬಂಧನ ಪೂರ್ವದಲ್ಲಿಯಾಗಲಿ ನಂತರವಾಗಲಿ ಎಂದೂ ಯಾವದೇ ಕಾರ್ಯಕರ್ತನಿಗೆ ಅಥವಾ ಅವರ ಮನೆಯವರಿಗೆ ಒಂದು ಅವಾಚ್ಯರದಿಂದಲೂ ಬೈಯಲಿಲ್ಲ. ಪ್ರಸಂಗೋಪಾತ್ ನಮ್ಮ ತ್ಯಾಗದ ಕೆಲ್ತಸದ ಪ್ರಶಂಸೆ ಮಾಡುತ್ತಿದ್ದರು. ಹುದ್ದಿ ಭಾಗದಲ್ಲಿ ಮಾತ್ರ ಇವರು ಕಾರ್ಯಕರ್ತರಿಗೆ ಚಿತ್ರಹಿಂಸೆಕೊಟ್ಟರು.

ಕಿತ್ತೂರ ಠಾಣ್ಯದ ಫೌಜದಾರರಾದ ಶ್ರೀ ಮುತ್ಸದ್ದಿ ಅವರು ಚಳುವಳಿಗೆ ಸಹಾನುಭೂತಿವುಳ್ಳವರಾಗಿದ್ದರು. ಅವರು ಯಾವ ಬಂಧಿತನನ್ನೂ ಹೊಡದು ಬಡೆದು ಮಾಡಲಿಲ್ಲ. ಬಾಯಿಂದ ಅವಾಚ್ಯ ಶಬ್ದವನ್ನೂ ಯಾವ ಸಂದರ್ಭದಲ್ಲಿಯೂ ಉಚ್ಚರಿಸಲಿಲ್ಲ. ಎಲ್ಲ ಪೋಲೀಸ ಅಧಿಕಾರಿಗಳಂತೆ ಜಪ್ತಿ ರುಜುತಿ ನಡೆಸುತ್ತಿದ್ದರು. ಆದರೆ ಯಾರಿಗೂ ಅಪಶಬ್ದ ಮಾತಾಡುತ್ತಿದ್ದಿಲ್ಲ. ಇಡೀ ಊರಿಗೆ ಮುತ್ತಿಗೆ ಹಾಕಿ ಇಂಗ್ಲೀಷ ಮೇಲಧಿಕಾರಿಗಳಗೂಡ ಹೋರಾಟಗಾರರ ಶೋಧ ಮಾಡುವಾಗ ಕೈಯಲ್ಲಿಯ ಯಾದಿಯಂತೆ ಸಾಹೇಬನು ಭೂಗತರ ಹೆಸರು ಕೇಳುತ್ತ ನಡೆದಾಗ ಒಮ್ಮೊಮ್ಮೆ ಪರಿಚತ ಭೂಗತನನ್ನು ಕಂಡರೂ ಅವನನ್ನು ಗುರುತಿಸಲಿಲ್ಲೆಂಬಂತೆ ಶ್ರೀ ಮುತ್ಸದ್ದಿಯವರು ನಟಿಸಿ ಬಿಟ್ಟು ಬಿಟ್ಟದ್ದೂ ಉಂಟು. ಚಳುವಳಿಗಾರರತ್ತ ಅವರ ಒಲವು ಇದ್ದದ್ದನ್ನು ಕಂಡು ಅವರಿಗೆ ಹಿಂಬಡತಿಕೊಟ್ಟು ಜಮಾದಾರರನ್ನಾಗಿ ಮಾಡಿ ಕ್ಯಾಸಲರಾಕಕ್ಕೆ ಹಾಕಿದ್ದರು. ಮುಂದೆ ೧೯೪೬ ರಲ್ಲಿ ಕಾಂಗ್ರೇಸ ಮಂತ್ರಿಮಂಡಳ ಬಂದಾಗ ಕಿತ್ತೂರ ಭಾಗದ ಕಾರ್ಯಕರ್ತರು ಅವರಬಗ್ಗೆ ಮಂತ್ರಿಗಳಿಗೆ ಹೇಳಿದಾಗ ಅವರಿಗೆ ಬಡತಿಕೊಟ್ಟು ಸಿ. ಆಯ್. ಡಿ. ಇನ್‌ಸ್ಪೆಕ್ಟರ ಮಾಡಲಾಯಿತು.

ಶ್ರೀ ವಾಮನರಾವ ಬಿದರಿ ಮತ್ತು ಶ್ರೀರಂಗ ಕಾಮತರು ರೇಲಿನಿಂದ ಪ್ರವಾಸ ಮಾಡುತ್ತಿದ್ದಾಗ ಗದುಗಿನ ರೇಲ್ವೆ ಸ್ಟೇಶನ್ನಿನಲ್ಲಿ ಪೋಲಿಸ ಇನಸ್ಪೆಕ್ಟರ ಶ್ರೀ ಜೈನಾಪುರರು ಅವರನ್ನು ನೋಡಿದರು. ಇನ್ನೇನು ಕೆಲಸ ಬಗೆಹರಿಯಿತು, ಬಂಧನವಾಗುವದು ನಿಶ್ಚಿತವೆಂದು ಇವರು ತಿಳಿದರು. ಆದರೆ ಶ್ರೀ ಜೈನಾಪುರ ಅವರು ಇವರನ್ನು ನೋಡಿಯೂ ನೋಡದಂತೆ ನಟಿಸಿ ಆಚೆಗೆ ಹೋದರು. ಬೆಳಗಾವಿಯ ಡಾ. ಟಿ. ಜಿ. ಜೋಶಿಯವರ ದವಾಖಾನೆಯಲ್ಲಿ ಕಣ್ಣಿನ ಉಪಚಾರಕ್ಕಾಗಿ ಶ್ರೀ ಜೈನಾಪುರರು ಹೋದಾಗ ಅಕಸ್ಮಾತ್ತಾಗಿ ಶ್ರೀ ವಡವಿ ಮಾಸ್ತರರು ಅಲ್ಲಿ ಬಂದರು. ಆಗ ಕಣ್ಣಲ್ಲಿ ಔಷಧ ಹಾಕಿಸಿಕೊಂಡು ಏನೂಕಾಣದವರಂತೆ ಜೈನಾಪುರರು ನಟಿಸಿದರು. ಕಲವು ಪೋಲೀಸ ಕಾನಸ್ಟೇಬಲ್ಲರು ಸಹ ಆಗಾಗ ನಮ್ಮೊಂದಿಗೆ ಸಹಾನುಭೂತಿಯಿಂದ ನಡೆದು ತುಸು ತುಸು ಮಾಹಿತಿ ಕೊಡುತ್ತಿದ್ದರು. ಶ್ರೀರಂಗ ಕಾಮತ ಮತ್ತು ಜಯದೇವ ಕಂಲಕರ್ಣಿಯವರ ಬಂಧನವಾಗುವ ಪೂರ್ವದಲ್ಲಿ ಶ್ರೀ ಮುತಾಲೀಕ ಬಾಪು ಎಂಬ ಪೋಲೀಸರು ಶ್ರೀ ನಾನಾ ಜೋಶಿಯವರ ಮುಖಾಂತರ ಅರ್ಧಘಂಟೆ ಮೊದಲು ಸುದ್ದಿ ಹೇಳಿ ಕಳಿಸಿದ್ದರು.

ಶ್ರೀ ಅಮೀರ ದೇಸಾಯಿ (ಆಕ್ಕತಂಗೇರಹಾಳ) ಎಂಬ ಹವಾಲದಾರರು ಗುಜನಾಳ ಪೋಲೀಸ ಡಿ. ವಾಯ್. ಎಸ್. ಪಿ. ದಲದಲ್ಲಿದ್ದರು. ಅವರು ಆಗಾಗ ಕೆಲ ಸಂಗತಿಗಳ ಸುಳಿವು ನಮ್ಮ ಕಾರ್ಯಕರ್ತರಿಗೆ ಕೊಡುತ್ತಿದ್ದರು.

ಶ್ರೀ ಪಿ, ಎಂ. ಲಾಡ ಎಂಬವರು ಆಗ ಜಿಲ್ಹೆಯ ಸೆಶನ್ಸ ಹಾಗೂ ಡಿಸ್ಟ್ರಿಕ್ಟ ಜಜ್ಜರಾಗಿದ್ದರು. ಶ್ರೀ ಪೋನಾನಿ ಎಂಬವರು ಅ. ಜಜ್ಜರಾಗಿದ್ದರು ಇವರಿಬ್ಬರೂ ರಾಜಕೀಯ ಖಟ್ಲೆಗಳಲ್ಲಿ ಆರೋಪಿಗಳೊಂದಿಗೆ ಬಹಳ ಸಹಾನುಭೂತಿಯಿಂದ ನಡೆದು ಕೊಂಡರು. ತಮ್ಮ ಮುಂದೆ ಬಂದ ಖಟ್ಲೆಗಳಲ್ಲಿ ನೂರಕ್ಕೆ ೯೫ ರಷ್ಟು ಖಟ್ಲೆಗಳನ್ನು ಅವರು ಬಿಟ್ಟು ಬಿಟ್ಟರು.

ಧಾರವಾಡದ ಜೇಲರ ಶ್ರೀ ದಾಡೆ

ಧಾರವಾಡದ ಜೇಲಿನಲ್ಲಿ ಧಾರವಾಡ ಮತ್ತು ಬೆಳಗಾವಿ ಜೆಲ್ಹೆಯ ಆಂಡರ ಟ್ರಾಯಲ ಕೈದಿಗಳನ್ನು ಇಟ್ಟಿದ್ದರು. ೧೯೪೩ ರ ಕೊನೆಗೆ ಆ ಜೇಲಿನಲ್ಲಿ ಸುಮಾರು ೮–೯ ನೂರು ಜನ ಚಳುವಳಿಗಾರರು ಇದ್ದರು. ಎಲ್ಲರೂ ಆಂಡರ ಟ್ರಾಯಲ ದವರೇ. ಶಿಕ್ಷೆಯಾದನಂತರ ಹಿಂಡಲಗಿಗೆ ಕಳಿಸುತ್ತಿದ್ದರು. ಖಟ್ಲೆಗಳು ಬೇಗ ಮುಗಿಯುತ್ತಿದ್ದಿಲ್ಲ. ಒಬ್ಬೊಬ್ಬರಮೇಲೆ ಹತ್ತರಿಂದ ಇಪ್ಪತ್ತೈದು ಖಟ್ಲೆಗಳಿದ್ದವು. ಆದ್ದರಿಂದ ೭–೮ ತಿಂಗಳವರೆಗೆ ಆಂಡರ ಟ್ರಾಯಲ್ ಎಂದು ಉಳಿಯಬೇಕಾಗುತ್ತಿತ್ತು.

ಅಂಡರ ಟ್ರಾಯಲ್ ಕೈದಿಗಳಿಗೆ ತಮ್ಮ ಮನೆಯಿಂದ ಊಟ, ಹಣ್ಣುಹಂಪಲ, ಬೀಡಿ–ಸಿಗಾರೇಟು, ಸಾಬೂನ ಮುಂತಾದವುಗಳನ್ನು ತರಿಸಿಕೊಳ್ಳಲು ಕಾಯಿದೆಯಿಂದ ಅನುಮತಿಯಿತ್ತು. ಎಲ್ಲ ರಾಜಕೀಯ ಕೈದಿಗಳು ಮನಬಂದಂತೆ ಮನೆಯಿಂದ ದುಡ್ಡು ತರಿಸಿ ದುಂದುಗಾರಿಕೆ ನಡೆಸುತ್ತಿದ್ದರು. ಬುಟ್ಟಿ ಗಟ್ಟಲೆ ಬೀಡಿ ಸುಟಕಗಳು, ಚಹಾಮಾಡುವ ಸ್ಟೋವಿನ ಭರಭರ್ ಎಂಬ ಸಪ್ಪಳ, ಪಗಡಿ ಇಸ್ಪೇಟಿನ ಆಟ, ಕೂಗಾಟ ಒದರಾಟ, ನೋಡಿ ಅಲ್ಲಿಯ ಜೇಲರರಾಗಿದ್ದ ಶ್ರೀ ದಾಡೆ ಎಂಬ ಪರು ಬೇಸತ್ತು ಹೋಗಿದ್ದರು. ಇದೇ ಸುಮಾರಿಗೆ ಶ್ರೀ ಶ್ರೀರಂಗ ಕಾಮತರು ಆ ಜೇಲಿಗೆ ಅಮರಗೋಳ ಸ್ಟೇಶನ ಸುಟ್ಟ ಪ್ರಕರಣದಲ್ಲಿ ಅಂಡರ ಟ್ರಾಯಲ ಕೈದಿಯಾಗಿ ಬಂದರು. ಜೇಲರರು ನಮ್ಮ ಜನರ ಗದ್ದಲ ದುಂದುಗಾರಿಕೆಗೆ ಬೇಸತ್ತು ಹೋಗಿದ್ದರು. ಮನೆಯವರೂ ಹೊರಾಳ, ಸಾಮಾನು, ದುಡ್ಡುಕಳಿಸಿ ಕಳಿಸಿ ಬೇಸತ್ತಿದ್ದರು. ಒಂದುದಿನ ಜೇಲರರು ಶ್ರೀರಂಗ ಕಾಮತರನ್ನು ಕರೆದು – "ನಿಮಗೆ ಬೇಕಾದ ಅನುಕೂಲತೆ ಮಾಡಿಕೊಡುತ್ತೇನೆ. ನಿಮ್ಮ ಜನರ ವೇಳೆ ದುಡ್ಡು ವ್ಯರ್ಥ ಹಾಳು ಆಗದಂತೆ ನೋಡಿರಿ " ಎಂದು ಸೂಚಿಸಿರು. ಶ್ರೀರಂಗ ಕಾಮತರು ಕೂಡಲೆ ಒಂದು ಯೋಜನೆ ಹಾಕಿದರು. ಅವರು ಮೊದಲು ಪ್ರಾರ್ಥನೆ ಆರಂಭಿಸಿದರು. ಪ್ರಾರ್ಥನೆಗೆ ಬಂದವರಿಗೆ ಎಲ್ಲರೂ ರಾಟಿ ಹುಪಿ ತರಿಸಬೇಕೆಂದು ಸೂಚಿಸಿದರು. ಎಲ್ಲರೂ ಒಪ್ಪಿದರು. ರಾಟಿಗಳು ತಿರುಗಹತಿದವು ನೂಲುವವರ ಸಂಖ್ಯೆ ಏರುತ್ತ ೫೦೦ ರಾಟಿಗಳು ಸುರು ಆದವು, ನಿತ್ಯ ಪ್ರತಿಯೊಬ್ಬರು ಎರಡೆರಡು ಲಡಿ ತೆಗೆಯಹತ್ತಿದರು, ಮನೆಗೆ ಸಾಕಷ್ಟು ಲಡಿ ಕಳಿಸಹತ್ತಿದರು. ಮನೆಯವರಿಗೆ ಹಣ ಕಳಿಸುವ ಕಾಟ ತಪ್ಪಿತು. ಜೇಲಿನಲ್ಲಿಯ ಗೊಂದಲ ನಿಂತಿತು. ಎಲ್ಲರೂ ಉದ್ಯೋಗಿಗಳಾದರು. ಸಿಸ್ತು ಬಂತು. ವಾಚನ ನಡೆಯಿತು. ಉತ್ತಮ ಜೀವನ ಸಾಗಿಸಲು ಅನುಕೂಲವಾಯಿತು. ಶ್ರೀ ದಾಡೆ ಜೇಲರರು ತಾವಾಗಿ ಈ ಸೂಚನೆ ಕೊಟ್ಟಿದ್ದನ್ನೂ ಎಲ್ಲ ಅನುಕೂಲತೆ ಮಾಡಿಕೊಟ್ಟಿದ್ದನ್ನು ನೋಡಿದರೆ ಸರಕಾರಿ ಅಧಿಕಾರಿಗಳಲ್ಲಿಯೂ ಕೆಲವರು ಹೇಗೆ ವಿಧಾಯಕ ದೃಷ್ಟಿಕೋನದವರಿದ್ದರು ಎಂಬುದರ ಕಲ್ಪನೆ ಬಂದೀತು. ಶ್ರೀರಂಗ ಕಾಮತರಂಥ ಸತ್ಪ್ರವೃತ್ತಿಯ ಸಂಘಟಕರಿದ್ದದ್ದೂ ಅಷ್ಟೇ ಮಹತ್ವದ ಅಂಶ ಆಗಿತ್ತೆಂಬದನ್ನು ಬೇರೆ ಹೇಳಬೇಕಾಗಿಲ್ಲ.

ವಿಜಾಪೂರ ಜೇಲಿನಲ್ಲಿ ಶ್ರೀ ನಿಕೋಲಸ್ ಎಂಬ ಜೇಲರರಿದ್ದರು. ಅವರು ನಮ್ಮ ಜನರೊಂದಿಗೆ ಅತ್ಯಂತ ಸಹಕಾರ ಸೌಹಾರ್ದತೆಯಿಂದ ನಡೆದರು. ಜೇಲಿನೊಳಗಿನ ಎಲ್ಲ ಆಡಳಿತವನ್ನೇ ಅವರು ನಮ್ಮ ಜನರ ಕಡೆಗೇ ಒಪ್ಪಿಸಿದ್ದರು. ಅಲ್ಲಿಯೂ ರಾಟಿಗಳು ನಡೆಯುತ್ತಿದ್ದವು. ಅಭ್ಯಾಸ ಮಂಡಳಗಳೂ ನಡೆದಿದ್ದವು. ಸಮಯದ ಸದುಪಯೋಗವಾಗುವಂತೆ ಜೇಲಿನಲ್ಲಿ ಚಟುವಟಿಕೆಗಳು ನಡೆಯುತ್ತಿದ್ದವು. ಮನೋರಂಜನೆಗಾಗಿ ಸಂಗೊಳ್ಳಿ ರಾಯಣ್ಣನ ನಾಟಕವನ್ನೂ ಮಾಡುತ್ತಿದ್ದರು. ಈ ಜೇಲಿನಲ್ಲಿ ಕರ್ನಾಟಕ, ಮಹಾರಾಷ್ಟ್ರ ಮುಂಬಯಿ ಮತ್ತು ಗುಜರಾತದ ರಾಜಬಂದಿಗಳಿದ್ದರು. ಅವರೆಲ್ಲ ಬಂಧು–ಭಾವದಿಂದ ಜೇಲು ಜೀವನ ಸಾಗಿಸಿದ್ದರು.

ಬೆಳಗಾವಿ ಜಿಲ್ಲೆಯ ಹೋರಾಟದ ವೈಶಿಷ್ಟ್ಯ

ಮುಂಬೈ ಪ್ರಾಂತದಲ್ಲಿ ಎಲ್ಲಕಡೆಗೂ ಚಳವಳಿ ತಣ್ಣಗಾಯಿತು. ಸಾತಾರಾ ಮತ್ತು ಬೆಳಗಾವಿ ಈ ಎರಡೂ ಜಿಲ್ಲೆಗಳು ಚಟುವಟಿಕೆ ಸಾಗಿಸಿದ್ದರಿಂದ ಪೋಲೀಸರಿಗೆ ತಮ್ಮ ಶಕ್ತಿಯನ್ನು ಈ ಎರಡೇ ಜಿಲ್ಲೆಗಳಮೇಲೆ ಕೇಂದ್ರೀಕರಿಸಲು ಅನುಕೂಲವಾಯಿತು. ಸಾತಾರಾ ಜಿಲ್ಲೆಯ ಚಳುವಳಿಯು ಬೇರೆ ದಾರಿಯನ್ನೇ ಹಿಡಿಯಿತು. " ಖಾಸಗಿಜನರ, ದೇವಸ್ಥಾನಗಳ ಆಸ್ತಿಗೆ ಕೈ ಹಚ್ಚಬಾರದು ಮತ್ತು ಯಾರಿಗೂ ದೈಹಿಕ ಹಿಂಸೆ ಕೊಡಬಾರದು " ಎಂದು ಕ್ರಾಂತಿಯ ಆರಂಭದಲ್ಲಿ ಪಾಲಿಸುತ್ತ ಬಂದ ಪಥ್ಯವನ್ನು ಪಾಲಿಸುವದು ಅವರಿಂದಾಗಲಿಲ್ಲ. ಶ್ರೀ ನಾನಾಪಾಟೀಲರ ಮುಖಂಡತ್ವದಲ್ಲಿ ಪತ್ರಿ ಸರಕಾರ ಸ್ಥಾಪನೆಯಾಗಿ ಹಿಂಸಾ ಚಾರಗಳೂ ಸುರು ಆದವು. ಶ್ರೀಯಶವಂತರಾವ ಚವಾಣರಂಥ ಕಾರ್ಯಕರ್ತರೂ ಜೇಜೂರಿಯ ಶ್ರೀ ಖಂಡೋಬಾ ದೇವಸ್ಥಾನದ ಲೂಟಿಗೆ ಪ್ರೋತ್ಸಾಹ ಕೊಟ್ಟರು. ದೇವಸ್ಥಾನದಲ್ಲಿದ್ದ ಬೆಳ್ಳಿ, ಬಂಗಾರ, ದುಡ್ಡು ಮತ್ತು ಬಂಗಾರದ ದೇವರ ಮೂರ್ತಿ ಎಲ್ಲವೂ ಲೂಟಿಯಾದವು ! ಇದರಿಂದಾಗಿ ಜನ ಸಾಮಾನ್ಯರ ಬೆಂಬಲ ಕಡಿಮೆ ಯಾಯಿತು. ಕೇವಲ " ದಹಶತವಾದ " ಹೆದರಿಕೆ ಬೆದರಿಕೆಯ ರಾಜಕಾರಣ ಸುರುವಾಯಿತು.

ನಮ್ಮ ಬೆಳಗಾವಿ ಜಿಲ್ಲೆಮಾತ್ರ ಕಡೆತನಕ ಅತ್ಯಂತ ಸಿಸ್ತಿನಿಂದ ಸಂಯಮದಿಂದ ಹರಿಜನ ಪತ್ರಿಕೆಯು ಹಾಕಿಕೊಟ್ಟ ಪಥ್ಯವನ್ನು ಪಾಲಿಸಿತು. ಬೆಳಗಾವಿ ಜಿಲ್ಲೆಯ ಮಾರ್ಗದರ್ಶನ ಗಾಂಧಿವಾದಿಯಾಗಿದ್ದ ಶ್ರೀ ವಾಮನರಾವ ದೇಸಾಯಿ ಬಿದರಿ ಯವರ ಕಡೆಗೆ ಇದ್ದದ್ದೇ ಇದಕ್ಕೆ ಕಾರಣವಾಯಿತು. ೧೯೩೦ ನೇ ಇಸವಿಯಿಂದ ಜಿಲ್ಲಾ ಕಾಂಗ್ರೇಸ ಸಂಘಟನೆಗಾಗಿ ಅವಿರತ ಅವಿಶ್ರಾಂತ ದುಡಿದ ಕೀರ್ತಿ ಇವರಿಗೇ ಸಲ್ಲುವದು. ಯಾವದೇ ಕಾರ್ಯಕ್ರಮ ನಿಶ್ಚಿತ ಮಾಡುವಾಗ ಇದು ತತ್ವದಲ್ಲಿ ಕೂಡುತ್ತಿದೆಯೋ ಇಲ್ಲವೋ ಎಂಬ ಬಗ್ಗೆ ಸುದೀರ್ಘ ಚರ್ಚೆ ಮಾಡುತ್ತಿದ್ದರು. ಮೇಲೆ ಹೇಳಿದ ಎರಡು ಪಥ್ಯಗಳಂತೂ (ಖಾಸಗಿ ಆಸ್ತಿಗೆ ಕೈ ಹಚ್ಚದಿರುವದು ಮತ್ತು ಯಾವದೇ ಹಿಂಸೆಮಾಡದಿರುವದು) ಅತ್ಯಂತ ಕಟಾಕ್ಷತೆಯಿಂದ ಅವರೂ ಕಾರ್ಯಕರ್ತರೂ ಪಾಲಿಸಿದರು. ಸಾಮಾನ್ಯವಾಗಿ ಇಡೀ ಬೆಳಗಾವಿ ಜಿಲ್ಲೆಯ ಎಲ್ಲ ಕಾರ್ಯಕರ್ತರ ತಂಡಗಳೂ ಶ್ರೀ ವಾಮನರಾಯರ ಸೂತ್ರಗಳನ್ನು ಪಾಲಿಸುತ್ತಿದ್ದರು. ಒಂದೆರಡುಕಡೆಗೆ ಕಾರ್ಯಕರ್ತರು ತಮಗೆ ತಿಳಿಯದೆ ಅಥವಾ ಭಾವಾವೇಶರಾಗಿ ಈ ಪಥ್ಯ ಪಾಲಿಸುವದರಿಂದ ತುಸು ಸರಿದಿರಬಹುದು. ಪ್ರತ್ಯಕ್ಷ ಸಂಬಧ ಸಂಪರ್ಕಗಳು ಇಲ್ಲದಿರುವದೇ ಇದಕ್ಕೆ ಕಾರಣವಾಗಿತ್ತು.

ಒಂದು ಘಟನೆಯನ್ನು, ತೀರ ಚಿಕ್ಕ ಘಟನೆಯನ್ನು, ಬರೆಯದೆ ಬಿಡುವಂತಿಲ್ಲ. ಮಂಟಿಮೂರಿಯ ಶ್ರೀ ವಾಮನರಾವ ಕುಲಕರ್ಣಿಯವರು ಮೊದಲಿನಿಂದಲೂ ಕ್ರಾಂತಿಕಾರಕ ಸಂಘಟನೆಯೊಂದಿಗೆ ಸಂಬಂಧವಿಟ್ಟುಕೊಂಡವರಾಗಿದ್ದರು. ಗಾಂಧೀಜಿಯವರ ಅಹಿಂಸಾವಾದ ಕಡೆತನಕ ಪೂರೈಸುವುದಿಲ್ಲವೆಂದು. ಶ್ರೀ. ಸಾವರಕರ, ಬಾಪಟ, ಸಿಂಗ ಮೊದಲಾದ ಕ್ರಾಂತಿವೀರರ ಮಾರ್ಗದ ಕಡೆಗೆ ಅವರ ಒಲವು ಇತ್ತು.

ಸ್ವತ: ನನ್ನದಾದರೂ (ಅಣ್ಣುಗುರೂಜಿ) ಮನಸ್ಥಿತಿ ಹೀಗೆಯೇ ಇತ್ತು, ಕ್ರಾಂತಿಕಾರಕರ ಬಗ್ಗೆ ನನಗೆ ಒಳ್ಳೇ ಆದರ ಅಭಿಮಾನಗಳಿದ್ದರೂ, ಗಾಂಧೀಜಿಯವರ ಶುದ್ಧ ಅಹಿಂಸೆಯಲ್ಲಿ ನನಗೆ ಅಷ್ಟು ನಂಬಿಗೆ ಇರದಿದ್ದರೂ, ಅಹಿಂಸೆಯನ್ನು ಸಿಸ್ತಿನ ಸ್ಟೆನಿಕನಂತೆ ಪಾಲಿಸುವವರಲ್ಲಿ ಯಾವ ಗಾಂಧಿವಾದಿಗಿಂತಲೂ ನಾನು ಹಿಂದೆ ಇದ್ದಿಲ್ಲವೆಂದು ಆತ್ಮವಿಶ್ವಾಸದಿಂದ ಹೇಳಬಲ್ಲೆ.

ಶ್ರೀ. ವಾಮನರಾವ ಕುಲಕರ್ಣಿಯವರೂ ನಮ್ಮ ತಂಡದೊಂದಿಗೇ ಸಂಪರ್ಕ ಹೊಂದಿದ್ದರು. ಒಂದು ದಿನ ಅವರು ಒಂದು ಗಾವತಿ ಪಿಸ್ತೂಲ ತಕ್ಕೊಂಡು ನಮ್ಮ ಕಡೆಗೆ ಬಂದಿದ್ದರು. ಒಳ್ಳೇ ಕುತೂಹಲದಿಂದ ಆಕ್ಕತಂಗೇರಹಾಳದ ಹೊಲದಲ್ಲಿ ನಮ್ಮ ಕಾರ್ಯಕರ್ತರು ಅದರ ಉಪಯೋಗ ಗಿಡದ ಮೇಲೆ ಮಾಡುತ್ತಿದ್ದಾಗ ಶ್ರೀ. ವಾಮನರಾವ ಬಿದರೀಸುವರು ಎಲ್ಲಿಯೋ ಹೋದವರು ಅಲ್ಲಿ ಬಂದರು. "ಇದೇನು ನಡೆದಿದೆ? ಎಲ್ಲಿಯ ಪಿಸ್ತೂಲು ಯಾರು ತಂದರು?" ಎಂದು ಕೇಳಿದಾಗ ಎಲ್ಲ ವಿವರ ಅವರಿಗೆ ತಿಳಿಯಿತು. ಅದು ನಮ್ಮ ಹತ್ತರವಿರಲಿ ಅದರ ಉಪಯೋಗ ಮಾಡದಿದ್ದರಾಯಿತು ಎಂದೇ ಎಲ್ಲರ ಅಭಿಪ್ರಾಯವಿತ್ತು. ಅದರೆ ಶ್ರೀ, ವಾಮನರಾವ ಬಿದರಿಯವರು ಅದನ್ನು ವಿರೋಧಿಸಿದರು, ಈ ಮೋಹ ಬೇಡ ಸಿಟ್ಟಿನ ಭರದಲ್ಲಿ ಅನಾಹುತವಾದೀತು ಎಂದು ಹೇಳಿ ಆ ಪಿಸ್ತೂಲ ತಮ್ಮ ಕಡೆಗೆ ತಕ್ಕೊಂಡು ಅದು ಯಾರಿಗೂ ಸಿಗದಂತೆ ಮಾಡಿಬಿಟ್ಟರು! ಇಷ್ಟು ಅವರ ತತ್ವನಿಷ್ಠೆ ಉಗ್ರವಾಗಿತ್ತು. ಹೇಯವಾದ ಒಂದೂ ಘಟನೆ ನಮ್ಮ ಕಾರ್ಯಕರ್ತರಿಂದ ನಡೆಯಲಿಲ್ಲ. ಅಂಥದನ್ನು ಪ್ರೋತ್ಸಾಹಿಸಲಿಲ್ಲ. ಎಲ್ಲಿಯೂ ಯಾರ ಖಾಸಗಿ ಆಸ್ತಿಗೆ ಕೈಹಚ್ಚಲಿಲ್ಲ, ಯಾರನ್ನೂ ದೈಹಿಕವಾಗಿ ಹಿಂಸಿಸಲಿಲ್ಲ. ಇಷ್ಟಾಗಿಯೂ ನಾವು ಮಾಡಿದ್ದೆಲ್ಲ ಗಾಂಧಿ ತತ್ವಕ್ಕೆ ಅನುಸರಿಸಿ ಇಲ್ಲವೆಂಬದು ನಮಗೆಲ್ಲರಿಗೂ ಗೊತ್ತಿತ್ತು, ಗಾಂಧೀಜಿಯವರು ಕ್ರಾಂತಿಯ ಕಹಳೆ ಊದಿ ಕಾರ್ಯಕ್ರಮ ಕೊಡುವಷ್ಟರಲ್ಲಿ ಅವರನ್ನೂ ಅವರ ಪ್ರಮುಖ ಸಹಕಾರಿಗಳನ್ನೂ ಸರಕಾರವು ಹಿಡಿದು ಜೇಲಿಗೆ ಹಾಕಿತ್ತು. ಇದು ಕಡೆಯ ಹೋರಾಟ, ಇದು ತುರಂಗ ಭರತಿಯ ಚಳವಳಿಯಲ್ಲ, "ಕರೇಂಗೆ ಯಾ ಮರೇಂಗೆ" ಎಂಬ ವೀರಗರ್ಜನೆ ಮಾಡುತ್ತ ಸಂಗ್ರಾಮದಲ್ಲಿ ಧುಮುಕಿರಿ, ಎಂದು ಮಾತ್ರ ಮುಖಂಡರು ಹೇಳಿ ಹೋದರು. ಕಾರ್ಯಕರ್ತರು ತಮಗೆ ಯೋಗ್ಯವೆನಿಸಿದ್ದನ್ನು ಮಾಡಿದರು, ಕ್ಷಾತ್ರ ತೇಜ ತೋರಿಸಿದರು, ಭಾರತ ಮಾತೆಯ ಋಣವನ್ನು ಅಂಶತಃ ಯಾಕಾಗಲೊಲ್ಲದು ತೀರಿಸಿದರು.

ಹೊರಗೆ ನಡೆದ ಕಾರ್ಯಕ್ರಮಗಳು ಗಾಂಧೀಜಿಯವರಿಗೆ ಸಮ್ಮತವಾಗಿರದಿದ್ದರೂ ಅವರು ಜೇಲಿನಲ್ಲಿರುವವರೆಗೆ ಎಂದೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿಲ್ಲವೆಂಬುದನು ನೆನೆದರೆ ಹೊರಗೆ ಕಾರ್ಯಕರ್ತರು ನಡೆಸುತ್ತಿರುವ ಚಟುವಟಿಕೆಗಳು ನಮ್ಮ ದೃಷ್ಟಿಯಿಂದ ಸಮರ್ಥನೀಯವೇ ಆಗಿದ್ದವು.

ನಮ್ಮ ಬಂಧನಗಳು–ಫಿತೂರಿಗಳ ಆಟ.

ಸಾತಾರಾ ಜಿಲ್ಲೆಯ ಶ್ರೀ. ಬರ್ಡೆ ಅವರ ಬಂಧನ.

ಎರಡು ವರ್ಷ ಹೋರಾಟ ನಡೆಯಿಸಿ ಕಾರ್ಯಕರ್ತರೂ ಜನತೆಯೂ ಬೇಸತ್ತಿದ್ದರು. ಪೋಲೀಸರಿಗೆ ಸಿಗದಂತೆ ಭೂಗತರಾಗಿ ಇರುವದೊಂದೇ ಕೆಲಸವಿದ್ದಂತಾಗಿತ್ತು. ಹಣದ ಅಮಿಷವೂ ದ್ರೋಹ ಬಗೆಯಲು ಸ್ವಾರ್ಥಿಗಳಿಗೆ, ಫಿತೂರಿಗಳಿಗೆ, ಕೈಮಾಡಿ ಕರೆಯುತ್ತಿತ್ತು. ಐದು ಸಾವಿರ ರೂಪಾಯಿಯ ಬಹುಮಾನದ ಆಕರ್ಷಣೆಯೇನೂ ಸಣ್ಣದಾಗಿದ್ದಿಲ್ಲ. ನಮ್ಮೊಡನೇ ಇದ್ದವರು, ನಮಗೆ ಸಹಾಯ ಮಾಡಿದವರು, ನಮ್ಮ ವಿಶ್ವಾಸ ಸಂಪಾದಿಸಿದವರು, ಹಣದಾಶೆಯಿಂದ ದ್ರೋಹ ಬಗೆದು ನಮ್ಮನ್ನು ಪೋಲೀಸರಿಗೆ ಹಿಡಿದು ಕೊಡುವ ಹೊಂಚು ಹಾಕಹತ್ತಿದರು. ೧೯೩೦–೩೨ ರ ಚಳುವಳಿಯಲ್ಲಿ ಸಾಕಷ್ಟು ಕೆಲಸ ಮಾಡಿ ಜೇಲಿಗೆ ಹೋಗಿದ್ದ ಹಾಗು ೧೯೪೨ ರಲ್ಲಿಯೂ ಕೆಲ ಕಾಲ ಸ್ಥಾನಬದ್ಧತೆಯಲ್ಲಿದ್ದ ಬೆಳಗಾವಿಯ ಶ್ರೀ. ಭಾರ್ಗವರಾಮ ಜುವೇಕರರು ವಿಶ್ವಾಸದಿಂದ ತಮ್ಮಲ್ಲಿಯೇ ತಂಗಿದ ಸಾತಾರಾ ಜಿಲ್ಲೆಯ ಭೂಗತ ಕಾರ್ಯಕರ್ತರಾದ ಶ್ರೀ. ಬರ್ಡೆ ಅವರನ್ನು ಮೋಸದಿಂದ ಒಂದು ಚಿತ್ರಮಂದಿರಕ್ಕೆ ಕರೆದೊಯ್ದು ಪೋಲೀಸರಿಗೆ ಹಿಡಿದು ಕೊಟ್ಟರು. ನಮಗೆ ಆಗಾಗ ಪೋಲೀಸರ ಚಲನವಲನದ ಬಗ್ಗೆ ಮಾಹಿತಿ ಕೊಡುತ್ತಿದ್ದ ಓರ್ವ ಪೋಲೀಸನನ್ನೂ ಹಣವಾಶೆ ತೋರಿಸಿ ಈ ದ್ರೋಹದ ಕೆಲಸದಲ್ಲಿ ಜುವೇಕರರು ಉಪಯೋಗಿಸಿಕೊಂಡಿದ್ದರು. ಆದರೆ ಸಾತಾರಾ ಜಿಲ್ಲೆಯ ಕಾರ್ಯಕರ್ತರಿಗೆ ಈ ಸಮಾಚಾರ ತಿಳಿಯುತ್ತಲೆ ಅವರೆ ಒಂದು ರಾತ್ರಿ ಶ್ರೀ. ಜುವೇಕರರನ್ನು ಅವರ ಮನೆಯಲ್ಲಿಯೇ ಸಂಧಿಸಿ ಅಂಗಾಲಿಗೆ ತಗಡು ಬಡೆಯುವ ಹಾಗು ಪತ್ರಿ ಸರಕಾರದ ಅನ್ಯ ದಂಡೋಪಾಯದ ಭಯ ತಾಕಿ ತಿಂದ ಹಣವನ್ನು ಅವರಿಂದ ಹಾಗು ಆ ಪೋಲೀಸನಿಂದ ವಸೂಲ ಮಾಡಿದರಲ್ಲದೆ ಅವರ ಗಾದೀ ಕಾರಖಾನೆಯನೂ ತಮ್ಮ ವಶಕ್ಕೆ ತೆಗೆದುಕೊಂಡರು. ಪ್ರಾಣಭಯದಿಂದ ಜುವೇಕರರು ಈ ವಿಷಯದಲ್ಲಿ ಯಾರ ಮುಂದೆಯೂ ಬಾಯಿ ಬಿಚ್ಚಲಿಲ್ಲ. ಈ ಆಘಾತದಿಂದ ಜುವೇಕರರು ಸಾಯುವವರೆಗೂ ಸುಧಾರಿಸಿಕೊಳ್ಳಲಿಲ್ಲ.

ಶ್ರೀರಂಗ ಕಾಮತರ ಬಂಧನ.

ಶ್ರೀ. ಶ್ರೀರಂಗ ಕಾಮತರು ದಿ. ೨೧—೨—೧೯೪೩ ರಂದು ಬೆಳಗಾವಿಯ ಕೇಳಕರ ಬಾಗದಲ್ಲಿಯ ಶ್ರೀ. ಶ್ರೀನಿವಾಸ ರಂಗೋ ಕುಲಕರ್ಣಿ ಇವರ ಮನೆಯಲ್ಲಿ ಶ್ರೀ. ಜಯದೇವ ಕುಲಕರ್ಣಿ ಇವರೊಂದಿಗೆ ಮುಂದಿನ ಕಾರ್ಯದ ಯೋಜನೆಯ ಬಗ್ಗೆ ಚರ್ಚಿಸುತ್ತಿದ್ದಾಗ ಮುಂಜಾನೆ ಬಡಸದ ಶ್ರೀ. ಶಿವನಗೌಡಾ ಪಾಟೀಲರು ಬಂದು ಅವರಿಗೆ ಭೆಟ್ಟಿ ಆಗಿ ಚಳುವಳಿ ಬಗ್ಗೆ ಹಾಗು ಹಣ ಸಂಗ್ರಹದ ಬಗ್ಗೆ ಒಳ್ಳೇ ಆತ್ಮೀಯತೆಯಿಂದ ಮಾತಾಡಿ ಹೋದರು. ಅವರು ವಿಶ್ವಾಸಿಕರೇ ಆದುದರಿಂದ ಸಂಶಯ ಬರಲಿಲ್ಲ. ಆದರೆ ಈ ವಿಶ್ವಾಸ ಘಾತಕಿಯು ಪೋಲೀಸ ಜಮಾದಾರ ಶ್ರೀ. ಚವ್ಹಾಣ ಎಂಬವರಿಗೆ ಶ್ರೀ. ಕಾಮತರು, ಕುಲಕರ್ಣಿಯವರು ಇರುವ ಗುಪ್ತ ಸ್ಥಳವನ್ನು ತಿಳಿಸಿದನು. ಸಂಜೆ ೫—೪೫ ಕ್ಕೆ ಸ್ವತಃ ಡಿ. ಎಸ್, ಪಿ. ಯವರು ನೂರಾರು ಬಂದೂಕಧಾರಿ ಪೋಲೀಸ ಪಡೆಯೊಂದಿಗೆ ಇಡೀ ಕೇಳಕರಬಾಗಕ್ಕೆ ಮುತ್ತಿಗೆ ಹಾಕಿ ಅವರಿಬ್ಬರನ್ನೂ ಬಂಧಿಸಿದರು. ಪೋಲೀಸ ಜಮಾದಾರ ಶ್ರೀ. ಗಂಗಾರಾಮ ಚವ್ಹಾಣರು ಡಿ. ಎಸ್. ಪಿ. ಕಾರ್ನಿಂಗ್ ಹ್ಯಾಮ್, ಡಿವಾಯ್. ಎಸ್. ಪಿ. ಕ್ರೌನ ಮತ್ತು ಶಹರ ಫೌಜದಾರ ಇನಾಮದಾರ ಇವರನ್ನು ಆ ದೊಡ್ಡ ವಾಡೆಯಲ್ಲಿಯ ಅನೇಕ ಬಿರಾಡಗಳಲ್ಲಿ ಇವರಿದ್ದ ಕೋಣೆಗೇ ನೇರವಾಗಿ ಕರತಂದರು. ಅಷ್ಟರಲ್ಲಿ ಅಲ್ಲಿಯೇ ಇದ್ದ ನಾನಾ ಗ್ರಾಮೋಪಾಧ್ಯೆ ಹೊರಬಿದ್ದು ನೆರೆಯವರಲ್ಲಿ ಅಡಗಿದ್ದರು. ಆದರೆ ಈ ಬ್ಲಾಕು ಬಿಟ್ಟು ಆ ವಾಡೆಯಲ್ಲಿ ಬೇರೆಡೆ ಪೋಲೀಸರು ಶೋಧಿಸಲೇ ಇಲ್ಲ. ಇವರಿಬ್ಬರ ಜೊತೆಗಿದ್ದ ಶ್ರೀ. ನರಸಿಂಹ ಮುನೋಳ್ಳಿ ಅವರನ್ನೂ ಬಂಧಿಸಲಾಯಿತು.

ಅಂಣುಗುರೂಜಿಯವರ ಬಂಧನ.

ಬೆಳೆಗಳೆಲ್ಲ ಕೊಯ್ದು ಹೋದದ್ದರಿಂದ ಎಲ್ಲಿಯಾದರೂ ಊರುಗಳಲ್ಲಿ ಆಶ್ರಯ ಪಡೆಯದೆ ಕಾರ್ಯಕರ್ತರಿಗೆ ನಿರ್ವಾಹವಿದ್ದಿಲ್ಲ. ಒಂದೇಕಡೆಗೆ ಎಲ್ಲ ಕಾರ್ಯಕರ್ತರು ಇರುವದು ಕಠಿಣವೂ ಆಗಿತ್ತು. ಕೂಟನೀತಿಗೆ ಅದು ವಿರುದ್ಧವೂ ಆಗಿತ್ತು. ಆದ್ದರಿಂದ ಆದಷ್ಟು ಕಡಿಮೆ ಸಂಖ್ಯೆಯಲ್ಲಿ ಇಬ್ಬಿಬ್ಬರು, ಮೂವರು ಮಾತ್ರ ಒಂದು ಕಡೆಗೆ ಇರಬೇಕೆಂದೂ ಬಂಧನವಾದರೆ ಅಷ್ಟೇಜನರು ಸಿಕ್ಕಿರಬೇಕಲ್ಲದೆ ಎಲ್ಲರೂ ಒಮ್ಮೆಲೆ ಸಿಗಬಾರದೆಂದೂ ಈ ವಿಚಾರಮಾಡಿದ್ದೆವು, ಶ್ರೀವಾಮನರಾವ ಬಿದರಿ ಮತ್ತು ಆಪ್ಪೋಜಿ ಹೊಳೆಯಾಚಿ ಇವರು ಜಮಖಂಡಿಯಲ್ಲಿ ತಳಊರಿದರು. ಅಲ್ಲಿ ಶ್ರೀ ಅಡಿವೆಯ್ಯಾ ಸ್ವಾಮಿ ಮುಧೋಳ, ದಾಮುಅಣಾ ಹುಲ್ಯಾಳಕರ ನಾರಾಯರಾವ ವೈದ್ಯ ಮುಚ್ಚಂಡಿ ಸೋನೋಪಂತ ಹುಲ್ಯಾಳಕರ, ಶಾಮರಾವ ಪಟವರ್ಧನ, ಅನಂತ, ಸಾಬಡೆ. ರಾಮಭಾವು ಟೇಂಬುರ್ಜಿ, ತುಂಗಳದ ಸಾವುಕಾರ ಮೊದಲಾದವರು ಪ್ರತ್ಯಕ್ಷವಾಗಿ ಇವರಿಗೆ ಆಶ್ರಯಕೊಟ್ಟು ಎಲ್ಲ ಅನುಕೂಲತೆ ಮಾಡಿಕೊಟ್ಟರು.

ಶ್ರೀ ರಾಜಾರಾಮ ದೇಶಪಾಡೆ ಮತ್ತು ಶಾಮಜಿ ಜೋಶಿ ಇವರು ಪಂಢರಪುರದ ಶ್ರೀಗಾಡಗೆ ಮಹಾರಾಜರ ಧರ್ಮಶಾಲೆಯಲ್ಲಿ ಕೆಲವುದಿನ ಆಶ್ರಯಪಡೆದರು. ಶ್ರೀ. ವಾಮನ್ ಜೋಶಿ ಮತ್ತು ಅಂಣುಗೂರುಜಿಯವರು ಹೋಗಿ ಚಾಂದ ಬಾವಡಿಹತ್ತರ ಒಂದು ಕೋಣೆ ಬಾಡಿಗೆಯಿಂದ ಹಿಡಿದು ೩ ತಿಂಗಳು ಇದ್ದರು, ಶ್ರೀ ವೆಂಕಣ್ಣ ಮಠದ ಮತ್ತು ಒಬ್ಬಿಬ್ಬರು ಬೆಳಗಾವಿಯ ಮಾರುತಿ ಬೀದಿಯಲ್ಲಿಯ ಈಗಿನ ಸತ್ಕಾರ ಹೊಟೇಲವಿದ್ದ ಮೊದಲಿನ ಡಾಕ್ಟರ ಸವಣೂರ ಅವರ ದವಾಖಾನೆಯ ಹಿತ್ತಲ ಭಾಗದಲ್ಲಿ ಅವರ ಸಂಬಂಧಿಕರಾದ ಶ್ರೀ. ಚಿದಂಬರ ಬೆಟಗೇರಿಯವರ ಮನೆಯಲ್ಲಿ ಇರುತ್ತಿದ್ದರು. ಶ್ರೀ. ಬೆಟಗೇರಿಯವರ ಹೆಂಡತಿ ಮತ್ತು ಶ್ರೀ. ವೆಂಕಟೇಶ ಮಠದ ಅವರ ಹೆಂಡತಿ ಅಕ್ಕ ತಂಗಿಯರು. ಮೇಲಾಗಿ ಈ ಬೆಟಗೇರಿಯು ೧೯೩೨ ರ ಚಳವಳಿಯಲ್ಲಿ ಒಮ್ಮೆ ಜೇಲಿಗೂ ಬಂದಿದ್ದನು. ಅವನು ಕ್ಯಾಂಪದಲ್ಲಿ ಬಾಯಸ ಕಂಪನಿಯ ಅಂಗಡಿಯಲ್ಲಿ ನವಕರಿಗೆ ಇದ್ದನು, ಒಬ್ಬಿಬ್ಬ ಭೂಗತ ಕಾರ್ಯಕರ್ತರನ್ನು ತನ್ನ ಮನೆಯಲ್ಲಿ ಇಟ್ಟುಕೊಂಡವನ ಮೇಲೆ ಸಂಶಯ ತೆಗೆದು ಕೊಳ್ಳಲು ಕಾರಣವಿದ್ದಿಲ್ಲ. ಅದರೆ ಇದೇ ಚಿದಂಬರ ಬೆಟಗೇರಿಯು ಫಿತೂರಿಯಾಗಿ ನನ್ನನ್ನು (ಅಂಣು ಗುರೂಜಿಯವರನ್ನು) ಹಿಡಿದು ಕೊಟ್ಟನೆಂದರೆ ಕಾಲಾಯ ತಸ್ಮೈ ನಮಃ ಅನ್ನದೆ ಗತ್ಯಂತರವಿಲ್ಲ.

ವಿಜಾಪುರದಲ್ಲಿಯ ನಮ್ಮ ಕೋಣೆ ಶ್ರೀ. ದರಬಾರ ಎಂಬ ಗುಜರಾಥಿ ವ್ಯಾಪಾರಿಗಳ ಒಡೆತನದ ಒಂದು ದೊಡ್ಡ ವಠಾರದ ವಾಯುವ್ಯ ಮೂಲೆಯಲ್ಲಿತ್ತು, ದಿನಾಲು ಮುಂಜಾನೆ ಚಾಂದಬಾವಡಿಯಲ್ಲಿ ಈಸಾಡಿ ಸ್ನಾನ ಮಾಡಿ ಅಡಿಗೆ ಮಾಡಿಕೊಂಡು ಉಂಣುವದು, ವೃತ್ತ ಪತ್ರ ಓದುವದು, ಸಾಯಂಕಾಲ ಊರ ಹೊರಗೆ ತಿರುಗಾಡಲು ಹೋಗುವದು, ಇವು ನಮ್ಮ ನಿತ್ಯಕರ್ಮಗಳಾಗಿದ್ದವು. ಕೆಲವೇ ಕಾರ್ಯಕರ್ತರನ್ನುಳಿದು ಇತರ ಯಾರಿಗೂ ನಮ್ಮ ಮನೆಯವರಿಗೂ ನಮ್ಮ ವಾಸಸ್ಥಳದ ಸುಳಿವು ಕೂಡ ಇದ್ದಿಲ್ಲ. ಇಂಥ ಗುಪ್ತ ರೀತಿಯಲ್ಲಿ ನಾವು ಇರುತ್ತಿದ್ದಾಗ ಒಂದು ದಿನ ಮಧ್ಯಾಹ್ನ ೧ ಗಂಟೆಗೆ ಚಿದಂಬರ ಬೆಟಗೇರಿಯು ನಮ್ಮ ಕೋಣೆಗೆ ಬಂದನು. ಈ ಕೋಣೆಗ ಬರಲು ಎರಡು ದಾರಿ ಇದ್ದವು. ಪಶ್ಚಿಮ ದಿಕ್ಕಿಗೆ ರಸ್ತೆಗೆ ಹೊಂದಿ ನೇರವಾಗಿ ಒಂದು ಬಾಗಿಲು ಇತ್ತು. ಮತ್ತು ದಕ್ಷಿಣದ ಕಡೆಗೆ ರಸ್ತೆಗೆ ಹೊಂದಿ ಇದ್ದ ಇನ್ನೊಂದು ಬಾಗಿಲದಿಂದ ಒಳಗೆ ಬಂದು ಬಾಡಿಗೆಯಿಂದ ಇದ್ದ ಬೇರೆ ಒಳವಕ್ಕಲುಗಳ ಮನೆ ದಾಟಿ ನಮ್ಮ ಕೋಣೆಗೆ ಒಳಗಿಂದಲೇ ಬರಲು ದಾರಿಯಿತ್ತು. ಕ್ವಚಿತ್ತಾಗಿ ನಾವು ಈ ಒಳದಾರಿಯಿಂದ ಬರಹೋಗುವದು ಮಾಡುತ್ತಿದ್ದೆವು, ಯಾವಾಗಲೂ ಉಪಯೋಗಿಸುವ ನಮ್ಮ ದಾರಿ ಪಶ್ಚಿಮದ್ದೇ. ಅದರೆ ನಮ್ಮ ತಂಡದವರಿಗೆ ಈ ನೇರದಾರಿ ತಿಳಿಸದೆ ದಕ್ಷಿಣದ ಒಳದಾರಿಯನ್ನೇ ತಿಳಿಸಿದ್ದೆವು,

ನಾವೆಲ್ಲರೂ ಬೇರೆ ಬೇರೆ ಹೆಸರುಗಳನ್ನು ಇಟ್ಟು ಕೊಂಡಿದ್ದೆವು ಮತ್ತು ಆ ಹೆಸರಿನಿಂದಲೇ ವ್ಯವಹರಿಸುತ್ತಿದ್ದೆವು. ನಾವು ಇಟ್ಟುಕೊಂಡ ಹೆಸರುಗಳು.

ಶ್ರೀ. ವಾಮನರಾವ ಬದರಿ— ಸವಾಯಿ
ಶ್ರೀ. ಅಣ್ಣಾ ಗುರೂಜಿ— ವಿರುಪಾಕ್ಷಿ
ಶ್ರೀ. ಶ್ರೀರಂಗ ಕಾಮತ— ಶಾಹೂ
ಶ್ರೀ. ಜಯದೇವ ಕುಲಕರ್ಣಿ— ವಿಶ್ವಾಸ
ಶ್ರೀಮತಿ ಸುಶೀಲಾಬಾಯಿ ಕುಲಕರ್ಣಿ— ಆಶಾ
ಶ್ರೀ. ಆಪ್ಟೇಜಿ ಹೊಳಿಯಾಚೆ— ಸಾವಳ್ಯಾ
ಶ್ರೀ. ಶಂಕರ ಕುರ್ತಕೋಟಿ— ಶ್ರೀಧರ ..... ಇತ್ಯಾದಿ.

ಶ್ರೀ. ವೆಂಕಣ್ಣ ಮಠದನಿಗೆ ಬೆಳಗಾವಿಯಲ್ಲಿ ಒಮ್ಮೆಲೆ ಎದೆನೋವು ಸುರು ಆಯಿತು. ಆಗ ಯಾರಾದರೂ ಡಾಕ್ಟರರಿಗೆ ತೋರಿಸಬೇಕಾಗಿತ್ತು. ಮುಂಬೈಯಲ್ಲಿ ಈ ರೋಗದ ಚಿಕಿತ್ಸಾ ತಜ್ಞರಾದ ಶ್ರೀ. ಎಸ್. ಜಿ. ಜೋಶಿ ಎಂಬ ಕರ್ನಾಟಕದ ಡಾಕ್ಟರರೇ (ಹುಬ್ಬಳ್ಳಿಯವರು) ಪ್ರಸಿದ್ಧರಾಗಿದ್ದರು. ಶ್ರೀ. ದಿವಾಕರ ಕರಮರಕರ ಅವರಿಗೆ ಇವರು ಆಶ್ರಯ ಕೊಟ್ಟಿದ್ದರು. ಭೂಗತ ಕಾರ್ಯಕರ್ತರಿಗೆ ಜಡ್ಡುಜಾಪತ್ರಯಗಳಾದರೆ ಅಲ್ಲಲ್ಲಿ ಸ್ಥಾನಿಕ ವೈದ್ಯರೂ ಡಾಕ್ಟರರೂ ಅತ್ಯಂತ ಪ್ರೀತಿಯಿಂದ ಔಷಧಕೊಡುತ್ತಿದ್ದರು. ಮುಂಬೈಗೆ ಹೋಗುವ ಅವಶ್ಯಕತೆ ಬಿದ್ದರೆ ಶ್ರೀ. ಎಸ್. ಜಿ. ಜೋಶಿಯವರ ಕಡೆಗೇ ಕಳಿಸುತ್ತಿದ್ದೆವು. ಶ್ರೀ. ವೆಂಕಣ್ಣ ಮಠದನಿಗೆ ಎದೆ ನೋವು ಹೆಚ್ಚಾದದ್ದರಿಂದ ಏನು ಮಾಡಬೇಕೆಂದು ಸಲಹೆ ಕೇಳಲು ಅವನು ಶ್ರೀ ಚಿದಂಬರ ಬೆಟಗೇರಿಯನ್ನು ವಿಜಾಪೂರಕ್ಕೆ ನನ್ನ ಕಡೆಗೆ ಕಳಿಸಿದನು. ವೆಂಕಣ್ಣನಿಗೆ ಮಾತ್ರ ನಮ್ಮ ಸ್ಥಳದ ನಕಾಶೆ ಗೊತ್ತಿತ್ತು, ಅನಿವಾರ್ಯವಾದದ್ದರಿಂದಲೇ ಅವನು ಬೆಟಗೇರಿಗೆ ಮನೆಯ ವಿಳಾಸ ಮತ್ತು ದಕ್ಷಿಣದ ಒಳದಾರಿ ಹೇಳಿ ನನ್ನ ಕಡೆಗೆ ಕಳಿಸಿದ್ದನು. ಬೆಟಗೇರಿಯು ಆದೇದಾರಿಯಿಂದ ಒಳವಕ್ಕುಲುಗಳನ್ನು ಕೇಳುತ್ತ ನನ್ನ ಕೋಣೆಗೆ ಬಂದನು. ಅಂದು ವಾಮನ ಜೋಶಿಯು ಬೇರೆ ಊರಿಗೆ ಹೋಗಿದ್ದ. ನಾನು ಒಬ್ಬನೇ ಇದ್ದೆ. ಊಟ ಮಾಡಿ ಮಲಗಿದ್ದೆ. ಚಿದಂಬರ ಬೆಟಗೇರಿ ಬಂದ. ಅವನು ಬಂದ ಕೂಡಲೆ ನನಗೆ ಯಾಕೋ ಧಸ್ ಎಂದಿತು. ಇವನೇಕೆ ಬಂದ. ನಮ್ಮ ತಂಡದವನಲ್ಲ, ಫಿತೂರಿ ಇರಲಿಕ್ಕಿಲ್ಲವಷ್ಟೇ ಎಂಬ ವಿಚಾರ ಸರ್ರನೆ ಮನದಲ್ಲಿ ಬಂದು ಹೋಯಿತು. ಆದರೆ ಎಲ್ಲರ ಮೇಲೂ ಸಂಶಯ ತಕ್ಕೊಳ್ಳುತ್ತ ಕೂಡ್ರುವಂತೆಯೂ ಇದ್ದಿಲ್ಲ. ಮೇಲಾಗಿ ತನ್ನ ಮನೆಯಲ್ಲಿಯೇ ಇಟ್ಟುರು ಭೂಗತರನ್ನು ಇಟ್ಟುಕೊಂಡಿರುವಾಗ ಯಾಕೆ ಸಂಶಯ ತಕ್ಕೊಳ್ಳಬೇಕು ಎಂದು ನನ್ನ ಪ್ಟಕ್ಕೆ ನಾನೇ ಸಮಾಧಾನ ತಂದುಕೊಂಡೆ. ಉಳಿದಿದ್ದ ಅನ್ನ ಪೊಸರು ಅವನಿಗೆ ಊಟಕ್ಕೆ ಹಾಕಿದೆ. ವೆಂಕಣ್ಣನ ಆರೋಗ್ಯದ ಬಗ್ಗೆ ಸಲಹೆ ಕೊಟ್ಟೆ, ಬಸ್ ಖರ್ಚಿಗಾಗಿ ೫ ರೂಪಾಯಿ ಕೊಟ್ಟೆ. ಅವನು ಹೋಗುವಾಗ "ಕೆಲವರು ನನಗೆ ಫಿತೂರಿ ಅನ್ನುತ್ತಾರೆ. ಫಿತೂರಿ ನಾನಾಗಿದ್ದರೆ ಇಬ್ಬರು ಭೂಗತರನ್ನು ನನ್ನ ಮನೆಯಲ್ಲಿ ಹೇಗೆ ಇಟ್ಟುಕೊಳ್ಳುತ್ತಿದ್ದೆ" ಎಂದು ಮಾತ್ರ ಅಂದನು. ಯಾಕೆ ಅವನು ಹೀಗೆಂದನೆಂಬದು ನನಗೆ ಕಡೆತನಕ ತಿಳಿಯಲಿಲ್ಲ, ಆದರೂ ಖಂಡಿತವಾಗಿ ಅವನು ನೂರಕ್ಕೆ ನೂರರಷ್ಟು ಫಿತೂರಿ ಎಂಬದು ಅಂದೇ ರಾತ್ರಿ ತಿಳಿಯಿತು, ನನ್ನ ನಿರೋಪ ತಕ್ಕೊಂಡವನೇ ಅವನು ನೆಟ್ಟಗೆ ಬೆಳಗಾವಿಯ

ಡಿ. ಎಸ್. ಪಿ. ಕಚೇರಿಗೇ ಹೋದ, ರಾತ್ರಿ ಊಟ ಮಾಡಿ ಬೇಸಿಗೆಯ ಬಿಸಿಲಿನ ತಾಪಕ್ಕೆ ಬೆಂದು ಪಶ್ಚಿಮದ ಕಿಡಕಿಯನ್ನು ತೆಗೆದಿಟ್ಟು ನಾನು ಮಲಗಿಕೊಂಡಿದ್ದೆ. ರಾತ್ರಿ ೧ ಗಂಟೆ ಆಗಿರಬಹುದು. ಪೋಲೀಸರ ಭೂಟಿನ ಸಪ್ಪಳ, ಅವರ ಅಧಿಕಾರಿಯು ಕೊಡುತ್ತಿದ್ದ ಆರ್ಡರು ಕೇಳಿಸಿತು. ಇಡೀ ಮನೆಯನ್ನೂ ಓಣಿಯನ್ನೂ ಪೋಲೀಸರು ಮುತ್ತಿಗೆ ಹಾಕಿ ಬೆಟಗೇರಿಯು ತೋರಿಸಿದ ಅವನು ಸ್ವತಃ ಮಧ್ಯಾಹ್ನದಲ್ಲಿ ಬಂದ ದಕ್ಷಿಣದ ಬಾಗಿಲವನ್ನೇ ಬಡೆಯಹತ್ತಿದರು. ಪೋಲೀಸರ ಒದರಾಟ ಸುರು ಆಗಿತ್ತು. ಇದು ನನ್ನ ಬಂಧನವೆಂದು ತಿಳಿಯಲು ಬೇಳ್ಳಿ ಹತ್ತಲಿಲ್ಲ. ಇಬ್ಬರು ಪೋಲೀಸರು ಕಿಡಕಿಯ ಹತ್ತರ ಕಾವಲು ಮಾಡುತ್ತಿದ್ದರು. ಇನ್ನು ಮಲಗಿ ಉಪಯೋಗವಿದ್ದಿಲ್ಲ. ಕೂಡಲೇ ಎದ್ದು ಒಂದೆರಡು ಕಾಗದ ಸುಟ್ಟು ಹಾಕಿ ಬಂಧನಕ್ಕೆ ಸಿದ್ಧನಾದೆ. ಪೋಲೀಸರನ್ನು ನಾನೇ ಆ ಕಿಟಕಿಯೊಳಗಿಂದ ನೋಡಿದೆ. " ನೀವು ಯಾರು ರಾತ್ರಿ ಯಾಕೆ ಬಂದಿರುವಿರಿ " ಎಂದೆ ಅವರು ಮೌನದಿಂದಲೇ ಇದ್ದರು. ದಕ್ಷಿಣದ ಬಾಗಿಲು ತೆಗೆ ಸುವ ಗದ್ದಲದಲ್ಲಿ ಎಲ್ಲರೂ ಇದ್ದಾಗ ಪ್ರದಕ್ಷಿಣೆಯ ಕಾವಲಿಗಾಗಿ ತಿರುಗುತ್ತಿದ್ದ ನನ್ನನ್ನು ಗುರುತಿಸಬಲ್ಲವರಾದ ಶ್ರೀ. ಕಲ್ಲೂರ ಫೌಜದಾರರು ಕಿಡಕಿಯ ಹತ್ತರ ಬಂದು ಬ್ಯಾಟ್ರಿ ಬಿಟ್ಟರು. ಕೂಡಲೆ ಪೋಲೀಸರು ಸೀಟಿ ಹಾಕಿದರು. " ಆಂಣೂ ಗುರೂಜಿ ಸಿಕ್ಕನು " ಎಂದು ಕೂಗಿದರು. ಎಲ್ಲರೂ ದಕ್ಷಿಣ ಬಾಗಿಲ ಕಡೆಗೆ ಇದ್ದವರು ಪಶ್ಚಿಮ ಬಾಗಿಲಿಗೆ ಬಂದು ಮುಕರಿದರು. ಡಿ. ವಾಯ್. ಎಸ್. ಪಿ. ಕ್ರೌನ, ಇನಸ್ಪೆಕ್ಟರ ನಿಜಾಮುದ್ದೀನ, ಸಬ್ ಇನಸ್ಪೆಕ್ಟರ ಕಲ್ಲೂರ, ಇವರೆಲ್ಲರೂ ಒಂದೇ ಕಡೆಗೆ ಬಂದು ಕಿಡಕಿಯ ಹತ್ತರ ಮುಗಿ ಬಿದ್ದರು. ತತ್‌ಕ್ಷಣ ಪೋಲೀಸರ ಗನ್ನು ನನ್ನ ಕಡೆಗೆ ತಿರುಗಿದವು. ಕ್ರೌನ ಸಾಹೇಬನು ತನ್ನ ರಿವಾಲ್ವರ ನನ್ನ ಮೇಲೆ ಗುರಿ ಇಟ್ಟು "ಡೋಂಟಮೂವ್ ಎನ್ ಇಂಚ ಆದರವಾಯಿಜ ಯು ವಿಲ್ ಬಿ ಶಾಟ್ ಡೌನ" (ಒಂದು ಇಂಚ ಸಹ ಕದಲಬೇಡ, ಕದಲ್ದಿದರೆ ಗುಂಡಿಗೆ ಬಲಿಯಾಗುವಿ) ಎಂದು ಗರ್ಜಿಸಿದನು. ನಾನು ಸುಮ್ಮನೆ ನಿಂತಲ್ಲಿ ನಿಂತೆ. ನನ್ನ ಕೋಣೆಗೆ ಒಳಗಿನಿಂದ ನಾನು ಚಿಲಕ ಹಾಕಿದ್ದೆ. ಕೆಲ ಪೋಲೀಸರನ್ನು ನನ್ನ ಕೋಣೆಯ ಬಾಗಿಲ ಹೊರ ಬಧಿಗೆ ನಿಲ್ಲಿಸಿ ನಂತರ ನನಗೆ ಆ ಚಿಲಕ ತೆಗೆಯ ಹೇಳಿದರು ನಾನು ಚಿಲಕ ತೆಗೆಯುವದೇ ತಡ ಒಮ್ಮೆಲೆ ಪೋಲೀಸರು ಒಳಗೆ ನುಗ್ಗಿದರು. ಕ್ರೌನ ಸಾಹೇಬನು ಸ್ವತಃ ನನ್ನ ಎರಡೂ ಕೈ ಹಿಡಿದು ಮೊದಲು ಬೇಡಿಹಾಕಿದನು. ಆಮೇಲೆ ನಿಮ್ಮ ಪಿಸ್ತೂಲ ಎಲ್ಲಿದೆ ಕೊಡಿರಿ ಎಂದು ಕೇಳಿದ. ನನ್ನ ಹತ್ತರ ಪಿಸ್ತೂಲ ಇಲ್ಲವೆಂದು ಹೇಳಿದೆ. ಆಗ ಮನೆಯನ್ನೆಲ್ಲ ಪಿಸ್ತೂಲ ಬಗ್ಗೆ ಝಡತಿ ಮಾಡಿದರು. ಅದು ನನ್ನ ಕಡೆಗೆ ಎಂದೂ ಇದ್ದಿಲ್ಲವಾದುದರಿಂದ ಅವರಿಗೆ ಸಿಗುವದು ಶಕ್ಯವಿದ್ದಿಲ್ಲ. ಕೂಡಲೆ ಹೆಮ್ಮೆಯಿಂದ ಕ್ರೌನ ಸಾಹೇಬನು " ಅಂತೂ ನಿಮ್ಮನ್ನು ಹಿಡಿದೆವಲ್ಲವೆ ? " ಎಂದು ಮೂದಲಿಸಿ ಕೇಳಿದ. ಆಗ ನಾನು ಇಂಗ್ಲೀಶದಲ್ಲಿ "ಇಟೀ ಜ ನಾಟ್ ಬ್ರೇವರಿ" ಇಟೀಜ ಬ್ರಾಯ್ಯಬರಿ" (ಇದೇನೂ ನಿಮ್ಮ ಶೂರತನವಲ್ಲ. ಇದು ಲಂಚದ ಮಹಿಮೆ) ಎಂದು ನಾನು ಉತ್ತರ ಕೊಟ್ಟಾಗ ಸಾಹೇಬನು "ಅಂತೂ ನಿಮ್ಮ ಜನರೇ ಲಂಚಕ್ಕಾಗಿ ನಿಮ್ಮನ್ನು ಹಿಡಿದು ಕೊಟ್ಟಿದ್ದಾದರೂ ನಿಜವಲ್ಲವೇ" ಎಂದು ಮರು ಪ್ರಶ್ನೆ ಹಾಕಿದರು. ಆಗ ನಾನು "ಸಾಹೇಬರೇ ಈ ದರಿದ್ರ ಹಿಂದುಸ್ತಾನದಲ್ಲಿ ಬಡತನದಿಂದ ಬಳಲುವ ಭುಭುಕ್ಷಿತರು ೫ ಸಾವಿರ ರೂಪಾ-

ಯಿಯ ಆಶೆಗಾಗಿ ನನ್ನನ್ನು ಹಿಡಿದು ಕೊಟ್ಟದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ, ಯಾಕಂದರೆ ಕುಬೇರನ ಸಂಪತ್ತಿಯಲ್ಲಿ ಹೊರಳಾಡುವ ನಿಮ್ಮ ಇಂಗ್ಲಂಡದಲ್ಲಿ ಸ್ವತಃ ಭಾರತ ಮಂತ್ರಿಯಾಗಿರುವ ಲಾರ್ಡ ಅಮರಿಯವರ ಮಗ ದುಡ್ಡಿನ ಆಶೆಗಾಗಿ ಈ ಯುದ್ಧದಲ್ಲಿ ಹಿಟ್ಲರನಿಗೆ . ಫಿತೂರಿಯಾಗಿಲ್ಲವೇ ಇದಕ್ಕೇನು ಹೇಳುವಿರಿ?" ಎಂದು ಕೇಳಿದಾಗ ಸಾಹೇಬ ನಿರುತ್ತರನಾದ !

ಜೂನ ೧೯೪೩ ರಲ್ಲಿ ನನ್ನ ಬಂಧನವಾಯಿತು. ಚಿದಂಬರ ಬೆಟಗೇರಿ ಸ್ವತಃ ಪೋಲೀಸರೊಂದಿಗೆ ಬಂದು ನನ್ನ ಸ್ಥಳ ತೋರಿಸಿದನೆಂಬದರಲ್ಲಿ ಯಾವ ಸಂಶಯವೂ ಉಳಿಯಲಿಲ್ಲ. ಈ ಸುದ್ದಿಯನ್ನು ನಾನು ಹೊರಗೆ ಹೇಳಿ ಕಳಿಸಿದೆ. ಚಿದಂಬರ ಬೆಟಗೇರಿಯನ್ನು ಫಿತೂರಿಯ ನಿಂದ್ಯ ಪಾಪಕರ್ಮಕ್ಕಾಗಿ ಶಿಕ್ಷಿಸುವದು ನಮ್ಮ ಜನರಿಗೆ ತೀರ ಸುಲಭ ಕೆಲಸವಾಗಿದ್ದರೂ ಅಹಿಂಸೆಯ ಪಥ್ಯ ಪಾಲನೆಯ ಕಾರಣದಿಂದ ಅವನ ಮೈಗೆ ಯಾರೂ ಕೈಹಚ್ಚಲಿಲ್ಲ. ಬೆಟಗೇರಿಗೆ ೫ ಸಾವಿರ ರೂಪಾಯಿ ರೋಖ ಸಿಕ್ಕದ್ದೂ ತಿಳಿಯಿತು. ಅಂದು ರಾತ್ರಿ ನನ್ನ ಎರಡೂ ಕೈ ಬೇಡಿಯಿಂದ ಹಿಂಬದಿಗೆ ಕಟ್ಟಿ ವಿಜಾಪೂರ ಲಾಕಪ್ಪದಲ್ಲಿ ಪೂರ್ಣವಾಗಿ ಒಂದು ದಿನ ಕೆಡವಿ ಮರುದಿನ ಬೆಳಗಾವಿಗೆ ತಂದು ಕೆಂಟೊನ್‌ಮೆಂಟ ಲಾಕಪ್ಪದಲ್ಲಿ ಇಟ್ಟರು. ದಿನಾಲು ಜೈನಾಪುರ ಸಿ. ಆಯ್, ಡಿ,ಸಬ್ ಇನಸ್ಪೆಕ್ಟರರು ನನ್ನ ಕಡೆಗೆ ಬಂದು ನಾವು ಸುಟ್ಟ ಸುಲಧಾಳ ಸ್ಟೇಶನ್, ನಂದಿ ಬಂಗ್ಲೆ ಕುಲಕರ್ಣಿ ದಪ್ತರ ಮುಂತಾದ ಬಗ್ಗೆ ಮಾಹಿತಿ ಕೊಡಬೇಕೆಂದು ವಿನಂತಿಸಿದರು. ಹೆದರಿಸಿದರು, ಬೆದರಿಸಿದರು. ನಾನು ಒಂದೇ ಒಂದು ವಾಕ್ಯ ಹೇಳುತ್ತಿದ್ದೆ " ಬ್ರಿಟಿಶ ಸರಕಾರದ ವಿರುದ್ಧ ಏನನ್ನು ಮಾಡಲು ಶಕ್ಯವಿತ್ತೋ ಅದನ್ನೆಲ್ಲ ಮಾಡಿದ್ದೇನೆ. ಬೇಕಾದಷ್ಟು ಖಿಟ್ಲೆ ಹಾಕಿರಿ " ಎಂಬುದೇ ನನ್ನ ಹೇಳಿಕೆ ಯಾಗಿತ್ತು., ಬಾಯಿಯಿಂದ ಬೇಕಾದಷ್ಟು ಹೆದರಿಕೆ ಬೆದರಿಕೆ ಹಾಕಿದರೂ ಯಾರೂ ನನ್ನ ಮೈಗೆ ಎಂದೂ ಕೈಹಚ್ಚಲಿಲ್ಲ! ೨೦ ದಿನಗಳ ನಂತರ ನನ್ನನ್ನು ಹಿಂಡಲಗಿಗೆ ಕಳಿಸಿದರು ಯಾವುದೋ ಒಂದು ಖಿಟ್ಲೆ ಹಾಕಿ ೭ ತಿಂಗಳ ಶಿಕ್ಷೆ ಕೊಟ್ಟರು. ಶಿಕ್ಷೆಯ ಅವಧಿ ತೀರುತ್ತಲೇ ಜೇಲಿನಿಂದ ಬಿಡುಗಡೆಯಾಯಿತು. ಆದರೆ ಜೇಲ ಬಾಗಿಲ ಹೊರಗೆ ಕಾಯುತ್ತ ಕುಳಿತ ಪೋಲೀಸರು ಕೂಡಲೆ ನನ್ನನ್ನು ಎತ್ತಿ ಜೇಲಿನಲ್ಲಿ ಒಗೆದರು. ಡೆಟನ್ಯೂ ಅಂತ ಮುಂದೆ ಸುಮಾರು ೧॥ ವರುಷ ನಾನು ಜೇಲಿನಲ್ಲಿ ಉಳಿದೆ.

ಚನ್ನಪ್ಪಾ ವಾಲಿ ಅವರ ಬಂಧನ.

ನನ್ನ ಬಂಧನವಾದ ನಂತರ ಜೂನ ೧೨ ಕ್ಕೆ ಬೆಂಗಳೂರಿನಲ್ಲಿ ವಾಲಿ ಚನ್ನಪ್ಪ ನವರನ್ನೂ ಫಿತೂರಿಯಿಂದ ಬಂಧಿಸಲಾಯಿತು.

ಅನೇಕ ಸಲ ಪೋಲೀಸರು ಮನೆಗೆ ಮುತ್ತಿಗೆ ಹಾಕಿ ಅವರನ್ನು ಬಂಧಿಸುವ ಪ್ರಯತ್ನ ಮಾಡಿದರೂ ಬೇಟೆ ಕೈಗೆ ಹತ್ತಲಿಲ್ಲವೆಂದು ನಿರಾಶರಾಗಿ ಆಸ್ಟ್ರೇಲಿಯನ್

ಮಿಲಿಟರಿ ತಂದು ಸಂಪಗಾಂವಿ, ನೇಗಿನಹಾಳ, ಊರುಗಳನ್ನೇ ರಾತ್ರಿ ಮುತ್ತಿ ಪ್ರತಿಯೊಂದು ಮನೆಯನ್ನು ಶೋದಿಸಿದರು, ಆದರಲ್ಲಿಯೂ ಅವರಿಗೆ ಯಶ ಬರಲಿಲ್ಲ. ದೇವಲಾಪುರ ಭೂಮಿಯಲ್ಲಿ ವಾಲಿಯವರು ಇದ್ದಾಗ ನಮ್ಮವರಂತೆ ನಟಿಸುತ್ತ ಶ್ರೀ ಬಸಪ್ಪ ಬುದಕ್ಕನವರ ಎಂಬವನು ಫಿತೂರಿಯಾಗಿ ಹಿಡಿದುಕೊಡುವ ಪ್ರಯತ್ನ ಮಾಡಿದ. ಶ್ರೀ, ಸಂಕನಗೌಡಾ ಪಾಟೀಲರೊಂದಿಗೆ ಚರ್ಚೆ ಮಾಡುತ್ತ ಕುಳಿತಾಗ ಈ ಬಸಪ್ಪ ಬುದಕ್ಕನವರ ಅಲ್ಲಿಗೆ ಬಂದ. ಊಟದ ವೇಳೆಯಾಗುತ್ತ ಬಂದಿತ್ತು. ಇಂದು ಕರಿಗಡಬು ತರುತ್ತೇನೆ, ಇಲ್ಲಿಯೇ ಇರ್ರಿ, ಎಂದು ಹೇಳಿ ಬುದಕ್ಕನವರನು ಊರಿಗೆ ಹೋದ. ಕರಿಗಡಬು ತುಪ್ಪದ ಗೂಡ ಪೋಲೀಸರನ್ನೂ ತಂದ. ಪೋಲೀಸರು ತಮ್ಮ ಕಡಗೇ ಬರುತ್ತಿದ್ದಾರೆಂದು ತಿಳಿದ ಕೂಡಲೆ ವಾಲಿಯವರು ಅಡ್ಡ ದಾರಿಯಿಂದ ಕರೀ ಕಟ್ಟಿಗೆ ಹೋದರು. ಬುದಕ್ಕನವರ ಬಸಪ್ಪ ಕರಿಗಡಬು ತುಪ್ಪ ಶ್ರೀ. ವಾಲಿಯವರು ಇದ್ದ ಸ್ಥಳಕ್ಕೆ ತಂದು ಇಟ್ಟು ವಾಲಿಯವರನ್ನು ಹೊಲತುಂಬ ತಿರುಗಾಡಿ ಶೋಧಿಸಿದರೂ ಅವರು ಸಿಗಲಿಲ್ಲ. ಆಗ ಡಿ. ವಾಯ್. ಎಸ್. ಪಿ. ಯವರು ಅವನನ್ನು ಬೂಟ ಗಾಲಿನಿಂದ ಒದ್ದು "ಬದಮಾಷ ಸುಳ್ಳು ಹೇಳಿ ಇಷ್ಟು ಪೋಲೀಸರನ್ನು ಯಾಕೆ ಕರೆದುಕೊಂಡು ಬಂದಿ" ಅನ್ನುತ್ತ ಹೊಡೆಯಹತ್ತಿದರು. "ಸಾಹೇಬರೇ ಹೊಡೆಯ ಬೇಡಿರಿ. ಒಂದು ತಾಸಿನ ವೊದಲು ಎಲ್ಲರೂ ಇಲ್ಲಿಯೇ ಇದ್ದರು. ಈಗ ಎಲ್ಲಿಯೋ ಹೋಗಿದ್ದಾರೆ. "ದೇವರ ಆಣೆ ಮಾಡಿ ಹೇಳುತ್ತೇನೆ ನಾನು ಸುಳ್ಳು ಮಾತಾಡಿಲ್ಲ" ಎಂದು ಕೈಕಾಲು ಬಿದ್ದು ಹೇಳಹತ್ತಿದ. ಪೋಲೀಸರಿಗೆ ಬಸಪ್ಪನು ಕರಿಗಡಬು ತಿನಸಿದರೆ ವಾಲಿಯವರು ಚಳ್ಳ ಹಣ್ಣು ತಿನಿಸಿದರು.

ಹೊಲದೊಳಗಿನ ಬೆಳೆಗಳೆಲ್ಲ ಕೊಯ್ದು ಹೋಗಿದ್ದವು. ಚಳವಳಿಯ ಕಾವೂ ಆರಿತ್ತು. ಪೋಲೀಸರಿಂದ ತಪ್ಪಿಸಿಕೊಂಡು ಇರುವದೊಂದೇ ಮುಖ್ಯ ಕೆಲಸವಾಗಿತ್ತು. ಆದ್ದರಿಂದ ಅತ್ತಿತ್ತ ತಿರುಗಾಡಿ ಕಾಲಕಳೆಯುವ ಪ್ರಸಂಗ ಕಾರ್ಯಕರ್ತರಿಗೆ ಬಂತು. ಶ್ರೀ. ವಾಲಿಯವರು ಮುಂದೆ ಹಂಪಿ, ಬಳ್ಳಾರಿ, ಹೊಸಪೇಟೆ, ಬೆಂಗಳೂರ, ಮದ್ರಾಸ ಗಳಲ್ಲಿ ಕೆಲದಿನ ಕಾಲ ಕಳೆದು ಬೆಂಗಳೂರಿಗೆ ಬುದರು. ಇವರ ಆಪ್ತರಾದ ಶ್ರೀ, ಚೆನ್ನ ವೀರಪ್ಪ ಎಂಬವರು ಬೆಂಗಳೂರಲ್ಲಿ ಆಯ್. ಜಿ. ಆಫೀಸಿನಲ್ಲಿ ಟಾಯಿಪಿಸ್ಟರಾಗಿದ್ದರು. (ಇವರೇ ಮುಂದೆ ಶ್ರೀ. ನಿಜಲಿಂಗಪ್ಪನವರು ಹಾಗೂ ಜತ್ತಿಯವರು ಮುಖ್ಯ ಮಂತ್ರಿ ಗಳಿದ್ದಾಗ ಅವರ ಪಿ. ಎ. ಆಗಿದ್ದರು). ಅವರ ಮನೆಯಲ್ಲಿ ಕೆಲದಿನ ಉಳಿದುಕೊಂಡು ಮುಂದೆ ಶ್ರೀ, ಚಂಡೂರ ಎಂಬ ಡಾಕ್ಟರರ ಮನೆಯಲ್ಲಿ ಇರಲು ಹೋದರು. ಡಾಕ್ಟರರ ಅಣ್ಣಂದಿರು ಕಮ್ಯುನಿಷ್ಟರಾಗಿದ್ದರು. ಆಗ ಸರಕಾರಕ್ಕೆ ಸಹಾಯ ಮಾಡುತ್ತಿದ್ದ ಕಮ್ಯು ನಿಷ್ಟರು ನಮ್ಮ ಶತ್ರುಗಳೆಂದು ತಿಳಿದು ಶ್ರೀ, ವಾಲಿಯವರು ಕೆಲದಿನ ಚಾಮರಾಜ ಪೇಟೆಯಲ್ಲಿಯ ಅನಾಥಾಶ್ರಮಕ್ಕೆ ಹೋಗಿ ಅಲ್ಲಿ ಕಲ ದಿನ ಉಳಿದರು. ಮುಂದೆ ಒಂದು ದಿನ ಒಂದು ಮುಸಲ್ಮಾನರ ಲಾಯಬ್ರರಿಗೆ ಶ್ರೀ. ವಾಲಿಯವರು ಹೋದಾಗ ಅಲ್ಲಿ ಏನೋ ಮೋಸವಾಯಿತು. ಆ ಲಾಯಬ್ರರಿಯು ಸಿ. ಆಯ್. ಡಿ. ಗಳ ಸ್ಥಳವಾಗಿತ್ತು, ಶ್ರೀ. ವಾಲಿಯವರು ಕ್ಯಾಂಟೋನ್‌ಮೆಂಟ ಕಡೆಗೆ ತಿರುಗಾಡಲು ಹೋದಾಗ

ಡಾ. ಚಂಡೂರ ಅವರು ಸಾಯಂಕಾಲ ಮೇಲಿಂದ ಬಂದು "ಪೋಲೀಸರು ಹಿಂದೆ ಹಿಂದೆ ಬರಹತ್ತಿದ್ದಾಳೆ" ಎಂದು ಹೇಳಿದರು. ಅಷ್ಟರಲ್ಲಿ ಪೋಲೀಸರು ಬಂದೇ ಬಿಟ್ಟರು. ಶ್ರೀ. ವಾಲಿಯವರ ಬಂಧನವಾಗಿ ಅವರನ್ನು ಬೆಳಗಾವಿಯ ಕ್ಯಾಂಪ ಲಾಕಪ್ಪದಲ್ಲಿ ತಂದಿಟ್ಟರು. ಶ್ರೀ. ಚಂಡೂರ ಡಾಕ್ಟರರನ್ನೂ ಪೋಲೀಸರು ಹಿಡಿದು ತಿಂಗಳಲ್ಲಿಯೇ ಬಿಟ್ಟರು. ಇದೆಲ್ಲ ಡಾಕ್ಟರ ಚಂಡೂರ ಅವರ ಫಿತೂರಿ ಎಂದು ಎಲ್ಲರೂ ಆಡಿ ತೋರಿಸ ಹತ್ತಿದರು, ಅವರನ್ನೂ ಪೋಲೀಸರು ಹಿಡಿದ ಕಾರಣ ಅವರು ಫಿತೂರಿಗಳಿರಲಿಕ್ಕಿಲ್ಲವೆಂದು ಶ್ರೀ. ಚನ್ನಪ್ಪ ವಾಲಿಯವರು ಭಾವಿಸಿದರು. ಆದರೆ ಅದೆಲ್ಲ ಪೋಲೀಸರ ಕುತಂತ್ರಗಳಿರ ಬಹುದೆಂದು ಇಂದಿಗೂ ಅನಿಸುತ್ತದೆ. ಬಹುಮಾನದ ೫೦೦೦ ರೂಪಾಯಿಗಳನ್ನು ಯಾವನೋ ಒಬ್ಬ ಫರೀದಸಾಹೇಬ ಎಂಬವನಿಗೆ ಕೊಡಲಾಯಿತೆಂದು ಮುಂದೆ ತಿಳಿದು ಬಂತು. ಯಾರವಾದರೂ ಹೆಸರು ಮುಂದೆ ಮಾಡಿ ನಿಜ ಹೆಸರು ತಿಳಿಯದಂತೆ ಪೋಲೀಸರು ದಕ್ಷತೆಯನ್ನೂ ಪ್ರಕಟಿಸುತ್ತಿದ್ದರು. ಇದೂ ಅವರ ಒಂದು ತಂತ್ರವಾಗಿತ್ತು.

ಶ್ರೀ. ವಡವಿಯವರ ಬಂಧನ

ಶ್ರೀ. ವಡವಿಯವರೂ ಅತ್ಯುತ್ಸಾಹದಿಂದ ಅಲೆದಾಡಿ ಬೇಸತ್ತಿದ್ದರು. ಎಲ್ಲ ಸಹಕಾರಿಗಳನ್ನು ಒಬ್ಬೊಬ್ಬರಂತೆ ಪೋಲೀಸರು ಹಿಡಿದು ಜೇಲಿಗೆ ಕಳಿಸಿದ್ದರು. ಕೆಲಸವೂ ಮುಗಿಯುತ್ತ ಬಂದಿತ್ತು. ಬುಲೆಟಿನ್‌ಗಳನ್ನಾದರೂ ತೆಗೆಯೋಣವೆಂದು ಶ್ರೀ. ವಡವಿಯವರು ಬೆಳಗಾವಿಗೆ ಬಂದು ಘುಲಬಾಗಗಲ್ಲಿಯ ಒಂದು ಕೋಣೆಯಲ್ಲಿ ಇರಹತ್ತಿದರು. ಅವರ ಜೊತೆಗೆ ಶ್ರೀ. ಶಂಕರ ಗಣಗಲಿ (ದಡ್ಡಿಯ ಹತ್ತರದ ನೇಸರಿಗಿ ಊರವರು) ಎಂಬ ಕಾರ್ಯಕರ್ತನೂ ಇರುತ್ತಿದ್ದ. ಕಳೆದ ೮-೧೧ ವರುಷ ಇವನು ಆಗಾಗ ಚಳವಳಿಯ ಕೆಲಸ ಮಾಡುತ್ತಿದ್ದರಿಂದ ಅವನ ಮೇಲೆ ಸಂಶಯ ತೆಗೆದುಕೊಳ್ಳುವಂತಿದ್ದಿಲ್ಲ, ಆದರೆ ಅವನೇ ಫಿತೂರಿಯಾಗಿ ಬಿಟ್ಟ. ಒಂದು ದಿನ ಪೋಲೀಸರು ಬಂದು ಇಡೀ ಓಣಿಯನ್ನು ಮುತ್ತಿ ಶ್ರೀ. ವಡವಿಯವರು ಇದ್ದ ಮನೆಯನ್ನೂ ಮುತ್ತಿದರು. ಆಗ ಶ್ರೀ. ವಡವಿಯವರು ಸಂಡಾಸಕ್ಕೆ ಹೋಗಿದ್ದರು. ಪೋಲೀಸರು ಬಂದು ಸಂಡಾಸದ ಬಾಗಿಲ ಬಡೆದು ಒಳಗೆ ಇರುವರೆಂದು ನಿಶ್ಚಿತ ಮಾಡಿಕೊಂಡರು. ಹೊರಗೆ ಬರುತ್ತಲೇ ಬಂಧಿಸಿ ಹಿಂಡಲಗಿಗೆ ಕಳಿಸಿದರು. ನಮ್ಮ ಕಾರ್ಯಕರ್ತನಂತೆ ನಟಿಸಿಯೇ ಶ್ರೀ. ಕಣಗಲಿಯು ಶ್ರೀ. ವಡವಿಯವರನ್ನು ಹಿಡಿದುಕೊಟ್ಟನು.

ಅಂತೂ ೫ ಸಾವಿರ ರೂಪಾಯಿ ಬಹುಮಾನ ಧಾರಿಗಳಾಗಿದ್ದ ಐವರಲ್ಲಿ ನಾಲ್ವರನ್ನು ಫಿತೂರಿಯಿಂದ ಹಿಡಿಯಲಾಯಿತು. ಐದನೇಯವರೂ ನಮ್ಮ ಜಿಲ್ಲೆಯ ಸೇನಾಪತಿಗಳೂ ಆಗಿದ್ದ ಶ್ರೀ. ವಾಮನರಾವ ಬಿದರಿಯವರು ಕಡೆತನಕ ಪೋಲೀಸರಿಗೆ ಚಳ್ಳಹಣ್ಣು ತಿನ್ನಿಸಿದರು. ಮಂಕಬೂದಿ ಬದದರು. ಅವರು ಕಡೆತನಕ ಸಿಗಲೇ ಇಲ್ಲ. ೧೯೪೪ರ ಆಗಸ್ಟ ೯ನೇ ದಿನಾಂಕದಂದು ಗಾಂಧೀಜಿಯವರ ಆಜ್ಞೆಯಂತೆ ಅವರು ಜಿಲ್ಲಾ ಕಾಂಗ್ರೆಸ ಕಚೇರಿಯಲ್ಲಿ ಪೋಲೀಸರಿಗೆ ತಿಳಿಸಿ ಪ್ರಕಟವಾಗಿ ಬಂಧಿತರಾದರು.

ಶ್ರೀ ಲಿಮಯೆ ವಕೀಲರ ಸಂಸ್ಮರಣೀಯ ಸೇವೆ.

ಬೆಳಗಾವಿಯಲ್ಲಿ ಶ್ರೀಯುತರಾವ ಲಿಮಯೆ ಎಂಬವರು ಬಿ.ಎ,ಎಲ್,ಎಲ್.ಬಿ. ಪದವೀಧರ ವಕೀಲರಿದ್ದರು, ಅವರು ಜಮಖಂಡಿ ಭಾಗದವರು. ಅವರು ಅತ್ಯಂತ ಸುಸ್ವಭಾವಿಗಳು. ಮಾತೃಭಾಷೆಯಾಗಿದ್ದ ಮರಾಠಿಯಷ್ಟೇ ಅಸ್ಖಲಿತವಾಗಿ ಕನ್ನಡ ಮಾತನಾಡುವಂಥವರು. ಪರೋಪಕಾರವು ಇವರ ಜನ್ಮ ಗುಣವಾಗಿತ್ತು, ಯಾರಿಗಾದರೂ ಸಂಕಟ ಬಂದದ್ದು ತಿಳಿದರೆ ಸಾಕು ಇವರು ಅಲ್ಲಿಯವರೆಗೆ ಹೋಗಿ ತಮ್ಮಿಂದಾದಷ್ಟು ಸಹಾಯ ಸಲ್ಲಿಸದೆ ಬಿಡುತ್ತಿರಲಿಲ್ಲ. ಮನುಷ್ಯ ಪ್ರಾಣಿಗೆ ದೊಡ್ಡ ಸಂಕಟವೆಂದರೆ ಮರಣ, ಎಲ್ಲ ಬಂಧು ಬಾಂಧವರು ಇಷ್ಟಮಿತ್ರರು. ಮನುಷ್ಯನು ಜೀವಂತವಿದ್ದಾಗ ಅದರಲ್ಲಿಯೂ ಅವನ ಏರಿಕೆಯ ಕಾಲವಿದ್ದಾಗ ಬೇಕಾದಷ್ಟು ಸಲ ಆತನ ಕಡಗೆ ಬರ ಹೋಗುವರು. ಸ್ತುತಿಸುವರು. ಆದರೆ ಆದೇ ಆ ವ್ಯಕ್ತಿಯು ಸತ್ತಾಗ ಅವನ ಮನೆಯ ಕಡೆಗೆ ಇಣಕಿ ಸಹ ನೋಡುವದಿಲ್ಲ, ಮುಸಲ್ಮಾನ ಸಮಾಜದಲ್ಲಿ ಮನುಷ್ಯನು ತೀರಿ ಕೊಂಡಾಗ ಅವನ ಅಂತ್ಯ ಸಂಸ್ಕಾರಕ್ಕೆ ಯಾರೂ ಕರೆಯದೆ ಎಲ್ಲರೂ ಹೋಗಿ ಬರುತ್ತಾರೆ. ಉಳಿದ ಸಮಾಜಗಳಲ್ಲಿಯೂ ಸಾಧಾರಣವಾಗಿ ಇದೇ ಪದ್ಧತಿಯಿದೆ, ಆದರೆ ಬ್ರಾಹ್ಮಣ ಸಮಾಜದ ಮಟ್ಟಿಗೆ ಹೇಳುವದಾದರೆ ಮನುಷನು ತೀರಿಕೊಂಡಾಗ ಅವನ ಸ್ಮಶಾನ ಯಾತ್ರೆಗೆ ಹೋಗದಿರುವದು, ಹೋಗಗೊಡದಿರುವದು, ತಪ್ಪಿಸುವದು ಅತ್ಯಂತ ನಿಷೇಧಾರ್ಹವಾದ ಕೆಟ್ಟರೂಢಿ ಬಿದ್ದಿದೆ. ತಾಯಿತಂದೆಗಳಿದ್ದವರು ಹೆಣ ಹೊರಬುರದೆಂದು ಹಲವರು ಶಾಸ್ತ್ರಹೇಳಿದರೆ, ಹೆಣ ಹೊತ್ತವರು ರಾತ್ರಿ ನಕ್ಷತ್ರ ದರ್ಶನವಾಗುವವರೆಗೆ ಹಾಗೆಯೇ ಉಪವಾಸ ಕುಳಿತು ನಂತರ ಸ್ನಾನಮಾಡಿ ಊಟ ಮಾಡಬೇಕಾಗುವದರಿಂದ ಹೆಣ ಹೊರುವದಕ್ಕೆ ಮುಂದಾಗಬಾರದೆಂದು ಮತ್ತೆ ಕೆಲವರು ಹೇಳುತ್ತಾರೆ. ಹೀಗಾಗಿ ಈ ಸಮಾಜದಲ್ಲಿ ಅದರಲ್ಲಿಯೂ ಬಡವರಲ್ಲಿ ಈ ಅಂತ್ಯ ಸಂಸ್ಕಾರವು ಒಂದು ಕಠಿಣ ಸಮಸ್ಯೆಯೇ ಆಗಿದೆ.

ಒಂದು ಊರಲ್ಲಿ ಒಂದು ಘಟನೆ ನಡೆಯಿತಂತೆ. ಆ ಊರಲ್ಲಿ ಒಬ್ಬ ಶ್ರೀಮಂತ ನಿದ್ದನು. ಅವನ ಮನೆಯಲ್ಲಿ ಒಂದು ಕುದುರೆಯೂ ಇತ್ತು. ಊರಲ್ಲಿ ಯಾರಾದರೂ ಸತ್ತಿರುವರೆಂಬ ಸುದ್ದಿ ಕೇಳುತ್ತಲೆ ಈ ಶ್ರೀಮಂತನು ಕುದುರೆ ಏರಿ ಅವರ ಮನೆಯ ಮುಂದೆ ಓಡಾಡಿಸುತ್ತ " ಹೂಂ ಏಳಿರಿ ತೀವ್ರ ಮುಗಿಸಿರಿ; ಸತ್ತ ಹೆಣ ಬಹಳ ಹೊತ್ತು ಇಡಬಾರದು, ಏಳಿರಿ ತೀವ್ರ ಶಿದಿಗೆ ಕಟ್ಟಿರಿ " ಎಂದು ಚಿಟಿಕಿ ಹೊಡೆಯುತ್ತ ಇತ್ತಿಂದತ್ತ ಅತ್ತಿಂದಿತ್ತ ಕುದುರೆಯ ಮೇಲೆಯೇ ಕುಳಿತು ಜನರಿಗೆ ಬೋಧ ಮಾಡುತ್ತಿದ್ದನು. ಆದರೆ ಎಂದೂ ಕೆಳಗಿಳಿದು ಪ್ರೇತ ಹೊರಲು ಮುಂದಾಗುತ್ತಿದ್ದಿಲ್ಲ. ಎಲ್ಲಿಯೇ ಯಾರೇ ಸಾಯಲಿ ಅವರ ಮನೆಗೆ ಕುದುರೆ ಏರಿ ಹೋಗಿ ಉಪದೇಶ ಮಾಡದೆ ಬಿಡುತ್ತಿದ್ದಿಲ್ಲ. ಇದು ಅವನ ಸ್ವಭಾವವೇ ಆಗಿತ್ತು. ಒಂದು ದಿನ ಆ ಶ್ರೀಮಂತನ ಮನೆಯಲ್ಲಿಯೇ

ಯಾರೋ ಸತ್ತರಂತೆ. ಆಗ ಊರೊಳಗಿನವರು ಹತ್ತಿಪ್ಪತ್ತು ಜನರು ಕುದುರೆಯ ಮೇಲೆ ಕುಳಿತು ಅವನ ಮನೆಗೆ ಹೋಗಿ ಕೆಳಗೆ ಇಳಿಯದೆ " ಹೂಂ ಏಳಿರಿ ತಡಮಾಡ ಬೇಡಿರಿ ತೀವ್ರ ಮುಗಿಸಿರಿ. ಸತ್ತ ಹೆಣ ಬಹಳ ಹೊತ್ತು ಇಡಬಾರದು ಬೇಗ ಶಿದಿಗೆ ಕಟ್ಟಿರಿ" ಎಂದು ಆನ್ನುತ್ತ ಅತ್ತಿಂದಿತ್ತ ಇತ್ತಿಂದತ್ತ ಕುದುರೆಯಮೇಲೆ ಕುಳಿತೇ ಕಾರಭಾರ ಮಾಡಹತ್ತಿದರಂತೆ. ಯಾರೂ ಕೆಳಗೆ ಇಳಿಯಲಿಲ್ಲ. ಶಿದಗಿ ಕಟ್ಟಲಿಕ್ಕೂ ಯಾರೂ ಇಲ್ಲ! ಹೆಣ ಹೊರಲಿಕ್ಕೂ ಯಾರೂ ಇಲ್ಲ. ಪರಿಸ್ಥಿತಿ ಹೀಗಾದಮೇಲೆ ಆ ಶ್ರೀಮಂತನಿಗೆ ಬುದ್ಧಿಬುದು ಎಲ್ಲರಿಗೂ ಕೈ ಜೋಡಿಸುತ್ತ " ನನ್ನಕಡೆಯಿಂದ ಆಯುಷ್ಯದಲ್ಲಿ ಬಹಳ ತಪ್ಪಾಯಿತು. ಇನ್ನು ನಾನು ಸಾಯುವವರೆಗೆ ಆ ತಪ್ಪು ಮಾಡುವದಿಲ್ಲ. ದಯವಿಟ್ಟು ಕುದುರೆ ಇಳಿದು ಪ್ರೇತ ಸಂಸ್ಕಾರಮಾಡಿರಿ " ಎಂದು ಅಂಗಲಾಚಿ ಕೇಳಿಕೊಂಡಾಗ ಮುಂದಿನದೆಲ್ಲ ಸುಸೂತ್ರ ಮುಗಿಯಿತಂತೆ. ಹೇಳುವ ಉದ್ದೇಶವಿಷ್ಟೇ ಮನುಷ್ಯನಿಗೆ ತನ್ನಮೇಲೆ ಪ್ರಸಂಗ ಬಂದಾಗಲೇ ಬುದ್ಧಿ ಬರುತ್ತದೆ, ಪರದಃಖ ಶೀತಲ ವಿರುತ್ತದೆ.

ಬ್ರಾಹ್ಮಣ ಸಮಾಜದಲ್ಲಿ ನೆಲೆಯೂರಿನಿಂತ ಈ ಕೆಟ್ಟ ರೂಢಿಯನ್ನು ಕಿತ್ತು ಹಾಕಲು ಶ್ರೀ ಲಿಮಯೆ ವಕೀಲರು ತಃವು ಸ್ವತಃ ತೀರಿಕೊಳ್ಳುವವರೆಗೆ (ಅವರು ತೀರಿಕೊಂಡು ೧೦ ವರುಷ ಆಗಿರಬಹುದು) ಅವಿಶ್ರಾಂತ ಹೆಣಗಿದರು. ಕೋರ್ಟಿನಲ್ಲಿ ವಕೀಲಿ ಮಾಡುತ್ತಿರಲಿ, ಆರ್ಗ್ಯುಮೆಂಟ ನಡೆಯುತ್ತಿರಲಿ, ಊರಲ್ಲಿ ಯಾವಾದರೂ ಸತ್ತ ಸುದ್ದಿ ತಿಳಿಯುತ್ತಲೇ ಖಟ್ಲೆ ಅಷ್ಟಕ್ಕೇ ಬಿಟ್ಟು ಜಜ್ಜರಿಗೆಹೇಳಿ ಆ ಸ್ಮಶಾನ ಯಾತ್ರೆಗೆ ಹಾಜರಾಗುತ್ತಿದ್ದರು. ಮನೆಯಲ್ಲಿ ಲಗ್ನ ಮುಂಜಿಗಳಿದ್ದರೂ ಅವನ್ನೆಲ್ಲ ಬಿಟ್ಟು ಸ್ಮಶಾನ ಯಾತ್ರೆಗೆ ಹೋಗತಕ್ಕವರೇ. ಕೇವಲ ಸ್ಮಶಾನಯಾತ್ರೆಗೆ ಪ್ರೇಕ್ಷಕರಾಗಿ ಎಂದೂ ಹೋಗದೆ ಮುಂದಾಗಿ ಕೆಲಸ ಮಾಡುತ್ತಿದ್ದರು. ಸ್ವತಃ ಶಿದಗಿ ಕಟ್ಟಿ ಹೆಣ ಹೊರುವ ಪ್ರಥಮ ಹಕ್ಕು ತಮಗಾಗಿ ಕಾದಿಡಬೇಕೆಂದು ಅವರು ಆಗ್ರಹದಿಂದ ಕೇಳಿಕೊಳ್ಳುತ್ತಿದ್ದರು. ಬೆಳಗಾವಿಯಂಥ ಊರಲ್ಲಿ ಸ್ಮಶಾನ ಭೂಮಿ ಎರಡುಮೈಲು ದೂರವಿರುವದರಿಂದ ಇಲ್ಲಿ ಬ್ರಾಹ್ಮಣ ಸಮಾಜದಲ್ಲಿ ಹೆಣ ಹೊರುವದೊಂದು ಸಮಸ್ಯೆಯೇ ಆಗಿದೆ. ಶ್ರೀ ಲಿಮಯೆ ವಕೀಲರು ತಮ್ಮೊಂದಿಗೆ ಮತ್ತೆ ಕೆಲವರಿಂದಲೂ ಈ ಪ್ರತಿಜ್ಞೆ, ವ್ರತ ಮಾಡಿಸಿದ್ದರು, ಶ್ರೀ ಸದಾಶಿವರಾವ ಪರಾಂಜಪೆ, ಮಾಮಾ ಪೇಂಡಸೆ, ರಾಘುಅಣ್ಣಾ ಮಂಡಗಿ ಮೊದಲಾದ ಮಿತ್ರರೊಂದಿಗೆ ಅಖಂಡವಾಗಿ ಈ ಕಾರ್ಯ ಸಾಗಿಸಿದರು. ಪ್ರೇತಸಂಸ್ಕಾರಕ್ಕೆ ಬೇಕಾಗುವ ಸಾಮುಗ್ರಿ ಒಂದೇಕಡೆಗೆ ೨೪ ತಾಸೂ ಸಿಗುವಂತೆ ಒಂದು ವ್ಯವಸ್ಥೆಯನ್ನೂ ಇವರು ಮಾಡಿದ್ದರು.

" ಉತ್ಸವೇ ವ್ಯಸನೇಚ್ಚೈವ ದುರ್ಭಿಕ್ಷೇ ಶತ್ರುವಿಗ್ರಹ ।
ರಾಜದ್ವಾರೆ ಸ್ಮಶಾನೇಚ ಯಸ್ತಿಷ್ಠತಿ ಸ ಬಾಂಧವಃ ॥

ಎಂಬ ಸುಭಾಷಿತದಂತೆ ಅವರು ನಿಜವಾಗಿಯೂ ಎಲ್ಲರಿಗೆ ಎಲ್ಲ ಸಮಯದಲ್ಲಿಯೂ ಬಾಂಧವರಾಗಿದ್ದರು.

ವಿಷಯಾಂತರದ ದೋಷ ಸ್ವೀಕರಿಸಿಯೂ ಶ್ರೀ ಲಿಮಯೆಯವರ ಅಸಾಧಾರಣವಾದ ಮಾನವೀಯತೆಯನ್ನು ಬರೆಯಬೇಕಾಯಿತು. ಅವರು ಬಡವರಿದ್ದರೂ ಯಾವಾಗಲೂ ಹಸನ್ಮುಖಿಗಳಾಗಿದ್ದರು. ದಿನಾಲು ರಾತ್ರಿ ತಮ್ಮ ಮನೆಯಲ್ಲಿ ಕೆಲ ಮಿತ್ರರನ್ನು ಕೂಡಿಸಿ ಭಜನೆಯ ಕಾರ್ಯಕ್ರಮ ನಡೆಸುತ್ತಿದ್ದರು. ಇಂಥ ಮಹಾನುಭಾವರಂ. ಸಮಾಜಕ್ಕೆ ಭೂಷಣರು.

ಶ್ರೀ ಲಿಮಯೆ ವಕೀಲರು ರಾಜಕಾರಣದಲ್ಲಿ ಎಂದೂ ಜೀಳಲಿಲ್ಲ ಅವರ ವಿಚಾರ ಪ್ರಣಾಲಿಯು ಹಿಂದೂ ಮಹಾಸಭೆಯದಾಗಿತ್ತು. ೧೯೪೨ ರ ಸುಮಾರಿಗೆ "ಸ್ವತಂತ್ರ" ಎಂಬ ಹೆಸರಿನ ಒಂದು ಮರಾಠಿ ಸಾಪ್ತಾಹಿಕವನ್ನೂ ಅವರು ಹೊರಡಿಸುತ್ತಿದ್ದರು. ಕಾಂಗ್ರೆಸ್ಸಿನ ರೀತಿ ನೀತಿಗಳು ಅವರನ್ನು ಆಕರ್ಷಿಸಿದ್ದಿಲ್ಲ. ಆದರೆ "ಧರೆಯೊಳಾರ್ತರಂ ನೋಡಿ ನೆರೆ ಮರುಗದಿಹ ಮಾನವಂ ಪಾಪಿಯಲ್ತೆ" ಎಂಬ ಉಕ್ತಿಯಂತೆ ಆರ್ತರ ದುಃಖನಾಶಕ್ಕೆ ಸಹಾಯಮಾಡುವ ಅತ್ಯಂತ ದೊಡ್ಡ ಗುಣ ಅವರಲ್ಲಿದ್ದುದರಿಂದಲೇ ಚಲೇಜಾವ ಕ್ರಾಂತಿಯಲ್ಲಿ ಅವರು ವಕೀಲರೆಂದು ಮಾಡಿದ ಸೇವೆ ಅವಿಸ್ಮರಣೀಯವಾಗಿದೆ.

ಚಲೇಜಾವ ಕ್ರಾಂತಿಯ ಚಳವಳಿಯಲ್ಲಿ ಸುಮಾರು ಒಂದು ಸಾವಿರ ಕಾರ್ಯಕರ್ತರು ಬೆಳಗಾವಿ ಜಿಲ್ಲೆಯಲ್ಲಿ ಪ್ರತ್ಯಕ್ಷ ಭಾಗವಹಿಸಿರಬಹುದು. ಇವರಲ್ಲಿ ಪ್ರಭಾತ ಫೇರಿ, ಮೆರವಣಿಗೆ, ಕಚೇರಿಯಲ್ಲಿ ಹೊಕ್ಕು ಸರಕಾರಿ ಕಾಗದಪತ್ರ ನಾಶಪಡಿಸುವದು, ಭಾಷಣ ಮಾಡುವದು, ಬುಲೆಟಿನ್ ಕರಪತ್ರ ಹಂಚುವದು, ಮುಂತಾದ ಬಹಿರಂಗ ಕಾರ್ಯಕ್ರಮಗಳಲ್ಲಿ ಕೆಲವರು ತೊಡಗಿದರು. ಹಲವರು ಭೂಗತರಾಗಿ ಉಳಿದು ವಾರಂಟ ತಪ್ಪಿಸಿ, ಪೋಲೀಸರಿಗೆ ಸಿಗೆದೆ ಸ್ಟೇಶನ್ ಸುಡುವದು, ತಂತೀ ಕತ್ತರಿಸುವದು, ಪೋಸ್ಟ ಟಪಾಲ ಲೂಟಿ ಮಾಡುವದು, ಬಂದೂಕ ಕಸಿಯುವದೇ ಮುಂತಾದ ಭಾರಿ ಪ್ರಮಾಣದ ಕಾರ್ಯಕ್ರಮಗಳಲ್ಲಿ ತೊಡಗಿದ್ದರು. ಮೊದಲನೇ ಪ್ರಕಾರದ ಕಾರ್ಯಕ್ರಮಗಳಲ್ಲಿ ತೊಡಗಿದವರಿಗೆ ಕೋರ್ಟಿನಲ್ಲಿ ನಿರ್ದಿಷ್ಟ ರೀತಿಯ ನಿರ್ದಿಷ್ಟ ಅವಧಿಯ ಶಿಕ್ಷೆ ಯಾಗುತ್ತಿತ್ತು, ಆದರೆ ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿದವರಿಗೆ ಒಂದೊಂದೇ ಖಟ್ಲೆಯಲ್ಲಿ ಹತ್ತೆಂಟು ವರುಷದ ಶಿಕ್ಷೆಯಾಗುವಂತಿತ್ತು, ಕಾರ್ಯಕರ್ತರು ಜೇಲಿಗ ಹೋಗುವವರೆಗೂ ವಿಧ್ವಂಸಕ ಕಾರ್ಯಕ್ರಮ ಮಾಡುತ್ತಲೇ ಇದ್ದದರಿಂದ ಒಬ್ಬೊಬ್ಬ ಕಾರ್ಯಕರ್ತರ ಮೇಲೆ ಭಯಂಕರ ಸ್ವರೂಪದ ೮–೧೦ ಖಟ್ಲೆಗಳು ಹಾಕಲ್ಪಟ್ಟವು, ಸತ್ಯಾಗ್ರಹಿಯು ತಾನು ಮಾಡಿದ್ದನ್ನು ಕೋರ್ಟಿನಲ್ಲಿ ಒಪ್ಪಬೇಕಷ್ಟೇ ಅಲ್ಲ ತಾನು ನಿರಪರಾಧಿಯೆಂದು ಸಮರ್ಥಿಸಿಕೊಳ್ಳಬಾರದು, ವಕೀಲರನ್ನು ಕೊಡಬಾರದು, ಎಂದು ಗಾಂಧೀಜಿಯ ತತ್ವವಿತ್ತು. ಸತ್ಯಾಗ್ರಹ ಮಾಡಿದವರಿಗೆ, ಮಾಡುವವರಿಗೆ, ಈ ನಿಯಮ ಗೊತ್ತೇ ಇತ್ತು. ಆದರೆ ಚಲೇಜಾವ ಚಳವಳಿಯು ಸತ್ಯಾಗ್ರಹವಲ್ಲ. ಅದು ಕ್ರಾಂತಿ, ಬಂಡಾಯವೆಂದೂ, ಇದೇ ಕೊನೆಯ ಹೋರಾಟವೆಂದೂ, ಪ್ರತಿಯೊಬ್ಬ ನಾಗರಿಕನು 'ಮಾಡುವಾ ಇಲ್ಲವೆ ಮಡಿಯುವಾ' ಎಂಬ

ಪ್ರತಿಜ್ಞೆಯಿಂದ ಹೋರಾಟ ನಡೆಸಬೇಕೆಂದೂ ಮುಖಂಡರು ಹೇಳಿ ಬಿಟ್ಟಿದ್ದರು. ಕೇವಲ ಸತ್ಯಾಗ್ರಹ ತತ್ವದ ಮೇಲೆ ವಿಶ್ವಾಸವಿಟ್ಟು ಈ ಹೋರಾಟದಲ್ಲಿ ಧುಮುಕಿದವರು ನೂರಕ್ಕೆ ೫—೮ ಜನ ಮಾತ್ರ. ಉಳಿದವರೆಲ್ಲರೂ ಸಾಧ್ಯವಿದ್ದಷ್ಟು ಕಾಯದೆಯಲ್ಲಿ ಸಿಗದೆ ಖಟ್ಲೆ ನಡೆಯಿಸಿ ಕಡಿಮೆ ಶಿಕ್ಷೆ ಹೊಂದಿ ಸಾಧ್ಯವಿದ್ದಷ್ಟು ಸರಕಾರದ ಹೆಚ್ಚಿನ ಹಾನಿ ಮಾಡಬೇಕೆಂಬ ಉದ್ದೇಶದಿಂದಲೇ ಈ ಹೋರಾಟದಲ್ಲಿ ಭಾಗ ವಹಿಸಿದ್ದರೆಂಬುದನ್ನು ಮರೆಯುವಂತಿಲ್ಲ. ಇವರಿಗೆ ಸತ್ಯಾಗ್ರಹ, ತತ್ವ ಮುಂತಾದವುಗಳ ಗಂಧವೂ ಇದ್ದಿಲ್ಲ. ಸ್ವಯಂ ಸ್ಫೂರ್ತಿಯಿಂದ ಕ್ರಾಂತಿಯ ವಾತಾವರಣದಲ್ಲಿ ಅವರು ಆಕರ್ಷಿತರಾದವರು, ಇಂಥವರ ಬಾಧನವಾದ ಮೇಲೆ ಪೋಲೀಸರು ಅವರ ಮೇಲೆ ಅನೇಕ ಖಟ್ಲೆಗಳನ್ನು ಹಾಕಿದರು. ಕ್ರಾಂತಿಯ ಕಾಲಕ್ಕೆ ಗುಪ್ತ ರೀತಿಯಿಂದ ನಡೆದ ವಿಧ್ವಂಸಕ ಚಟುವಟಿಕೆಗಳ ಖಟ್ಲೆಗಳಲ್ಲಿ ಸಾಕ್ಷಿ ಪುರಾವೆ ಸಿಗುವದು ಸರಕಾರಕ್ಕೆ ಸುಲಭವಾಗಿದ್ದಿಲ್ಲ. ಅಂತೆಯೇ ಡಿಫೆನ್ಸಕ್ಕಾಗಿ ವಕೀಲರನ್ನು ಕೊಟ್ಟರೆ ಯಾವ ಖಟ್ಲೆಯೂ ಕೋರ್ಟಿನಲ್ಲಿ ತಾಳುವಂತಿದ್ದಿಲ್ಲ. ಸತ್ಯಾಗ್ರಹದ ತತ್ವದಂತೆ ಖಟ್ಲೆ ನಡೆಸದೆ ಮಾಡಿದ್ದನ್ನು ಒಪ್ಪಿಕೊಂಡಿದ್ದರೆ ಒಬ್ಬೊಬ್ಬರಿಗೆ ೫೦—೬೦ ವರುಷಗಳ ಶಿಕ್ಷೆ ಯಾಗುವದು ಖಂಡಿತವಾಗಿತ್ತು. ಇಷ್ಟು ದೀರ್ಘಾವಧಿಯ ಶಿಕ್ಷೆ ಭೋಗಿಸುವ ಧೈರ್ಯವಾಗಲಿ ಮನಸ್ಥಿತಿಯಾಗಲಿ ಈ ಹೋರಾಟದಲ್ಲಿ ಭಾಗವಹಿಸಿದವರಲ್ಲಿ ಇದ್ದಿಲ್ಲ. ಅವರು ಗಾಂಧೀವಾದಿಗಳಾಗಿದ್ದಿಲ್ಲ, ಟಿಳಕವಾದಿಗಳೂ ಆಗಿದ್ದಿಲ್ಲ ಸಾವರಕರ ಭಗತಸಿಂಗರ ಶಿಷ್ಯರೂ ಆಗಿದ್ದಿಲ್ಲ. ಅವರು ಜನ ಸಾಮಾನ್ಯರಾಗಿದ್ದರು. ಅಂತೆಯೇ ಇಂತಹ ಖಟ್ಲೆ ನಡೆದಾಗ ಡಿಫೆನ್ಸಕ್ಕಾಗಿ ವಕೀಲರನ್ನು ಕೊಡಬೇಕಾಯಿತು. ಆದರೆ ಫೀ ತಕ್ಕೊಂಡು ಸಹ ಈ ಖಟ್ಲೆಗಳನ್ನು ನಡೆಸಲು ಯಾವ ವಕೀಲರೂ ಸಿದ್ಧರಾಗಲಿಲ್ಲ.

ಎಲ್ಲ ವಕೀಲರು ಹೋಲೀಸರಿಗೆ ಹೆದರಿದರು !

ಚಳವಳಿಯ ಖಟ್ಲೆ ನಡೆಸಿದರೆ ಪರಿಣಾಮ ಕೆಟ್ಟೀತೆಂದು ವಕೀಲರು ಹೆದರಿದರು. ಭಾರತ ಸಂರಕ್ಷಣೆ ಕಾಯಿದೆಯ ಮೇರೆಗೆ ಪೋಲೀಸರಿಗೆ ಅಮರ್ಯಾದ ಅಧಿಕಾರ ದೊರಕಿದ್ದವು. ಬೇಕಾದವರನ್ನು ಹಿಡಿದು ಜೇಲಿನಲ್ಲಿ ಸ್ಥಾನ ಬದ್ಧ (ಡೆಟನ್ಯು) ಅಂತ ಬೇಕಾದಷ್ಟು ದಿನ ಕೊಳೆಯಿಸುವ ಅಧಿಕಾರ ಪೋಲೀಸರಿಗೆ ಸಿಕ್ಕಿದ್ದವು. ಲಂಚಕ್ಕಾಗಿ, ದುಡ್ಡು ಸುಲಿಯುವದಕ್ಕಾಗಿ ಸಾವಿರಾರು ಜನರನ್ನು, ಚಳುವಳಿಗೆ ಅವರ ಯಾವದೇ ಸಂಬಂಧವಿರದಿದ್ದರೂ, ಹಿಡಿದು ಪೋಲೀಸರು ಜೇಲಿಗೆ ಕಳಿಸಿದ್ದರು. ಅಂತೆಯೇ ನಮ್ಮ ಜಿಲ್ಲೆಯಲ್ಲಿ ಚಳವಳಿಯಲ್ಲಿ ಭಾಗವಹಿಸಿದವರು ಒಂದು ಸಾವಿರ ಜನರು ಮಾತ್ರ ಇದ್ದರೂ ಯಾವದೇ ಸಂಬಂಧವಿಲ್ಲದ ಸುಮಾರು ಎರಡು ಸಾವಿರ ಜನರನ್ನು ಪೋಲೀಸರು ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟರು ಅವರಲ್ಲಿ ಅನೇಕರು ಕ್ಷಮೆ ಬೇಡಿದರು ಅನೇಕರು "ಅಯ್ಯೋ" ಎಂದು ಎದೆ ಒಡದುಕೊಂಡು ದಿನಾಲು ಜೇಲಿನಲ್ಲಿ ದೊಡ್ಡ ಧ್ವನಿ ತೆಗೆದು ಅಳುತ್ತಿದ್ದರು. ಇಂಥವರಿಗೂ ಈಗ ಸ್ವಾತಂತ್ರ್ಯಯೋಧರ ಪೆನಶನ್ ದೊರೆಯುತ್ತಿರುವದನ್ನು ಕಂಡು ಜೀವಂತವಿರುವ ನಿಜವಾದ ಸ್ವಾತಂತ್ರ್ಯ ಯೋಧನಿಗೆ ಏನು ಅನಿಸುತ್ತಿರಬಹುದೆಂಬುದನ್ನು ಅವರಿಗೇ ಕೇಳಬೇಕು.

ಚಳವಳಿಯ ಖಟ್ಲೆಗಳಲ್ಲಿ ವಕೀಲ ಪತ್ರ ಹಾಜರ ಮಾಡಿದರೆ ಪೋಲೀಸರು ತಮ್ಮನ್ನು ಜೇಲಿಗೆ ಕಳಿಸುವರೆಂಬ ಭಯದಿಂದ ಯಾವ ವಕೀಲರೂ ಈ ಖಟ್ಲೆ ನಡೆಸಲು ಬೆಳಗಾವಿಯಲ್ಲಿ ಸಿಗದಂತಾದರು.

ಶ್ರೀ. ಲಿಮಯೆ ವಕೀಲರು ಮುಂದೆ ಬಂದರು.

ಇಂಥ ಪರಿಸ್ಥಿತಿಯಲ್ಲಿ ಪೋಲೀಸರು ಬಂಧಿಸುವರೆಂಬದನ್ನು ತಿಳಿದುಕೊಂಡೇ ಶ್ರೀ. ಲಿಮಯೆ ವಕೀಲರು ಮುಂದೆ ಬಂದರು. ತರುಣರು ಪ್ರಾಣದ ಪರಿವೆಯಿಲ್ಲದೆ ತಾಯ್ನಾಡಿನ ಉದ್ಧಾರಕ್ಕಾಗಿ ಕ್ರಾಂತಿಯ ಜ್ವಾಲೆಯಲ್ಲಿ ಧುಮುಕಿರುವಾಗ, ಚಿಕ್ಕ ಬಾಲಕರೂ ಮಹಿಳೆಯರೂ ತ್ಯಾಗಕ್ಕೆ ಸಿದ್ಧರಾಗಿರುವಾಗ, ತಾನು ಹೇಡಿಯಂತೆ ಹಿಂಜರಿಯಬೇಕೇ ಎಂದು ಅವರು ತಮ್ಮಷ್ಟಕ್ಕೆ ತಾವೇ ಪ್ರಶ್ನೆ ಹಾಕಿಕೊಂಡರು. ಕಾಂಗ್ರೆಸ ಚಳವಳಿಯಂತೂ ತಮಗೆ ಮಾನ್ಯವಿಲ್ಲ. ಪ್ರತ್ಯಕ್ಷವಾಗಿ ಕ್ರಾಂತಿಯಲ್ಲಿ ಭಾಗವಹಿಸುವ ಇಚ್ಛೆಯಿಲ್ಲ. ಆದರೆ ವಕೀಲನೆಂದು ನನ್ನ ಕರ್ತವ್ಯ ಮಾಡಿ ಕೈಯಿಂದಾದಷ್ಟು ಭಾರತ ಮಾತೆಯ ಸೇವೆ ಯಾಕೆ ಮಾಡಬಾರದು ? ಎಂಬ ವಿಚಾರ ತಲೆಯಲ್ಲಿ ಬರುವದೇ ತಡ, ಕೋರ್ಟಿನಲ್ಲಿ ಹೋಗಿ ಚಳವಳಿಯ ಖಟ್ಲೆಗಳಲ್ಲಿ ಯಾರ ಕಡೆಯಿಂದಲೂ ಒಂದು ಕಾಸು ಸಹ ಫೀ ತಕ್ಕೊಳ್ಳದೆ ವಕೀಲ ಪತ್ರಕ್ಕೆ ಬೇಕಾಗುವ ಸ್ಟ್ಯಾಂಪನ್ನು ಸಹ ತಾವೇ ತಮ್ಮ ಹಣದಿಂದ ಕೊಂಡು ತಂದು ಸತತವಾಗಿ ಈ ಕಾರ್ಯ ನಡೆಸಿದರು. ದುಡ್ಡು ಕೊಟ್ಟರೂ ವಕೀಲಪತ್ರ ಹಾಜರ ಮಾಡಲು ಯಾರೂ ಸಿದ್ಧರಿಲ್ಲದಾಗ ಪುಕ್ಕಟೆಯಾಗಿ ವಕೀಲಪತ್ರ ಹಾಜರ ಮಾಡಿ ಕೈಯಿಂದ ಸ್ಟ್ಯಾಂಪ ಹಚ್ಚಿ ಖಟ್ಲೆ ನಡೆಸುವ ಪ್ರತಿಜ್ಞೆ ಮಾಡಿ ಕಡೆತನಕ ಅಂದರೆ ಎಲ್ಲ ಖಟ್ಲೆಗಳೂ ಮುಗಿಯುವವರೆಗೆ ಎರಡನೇ ಯಾವ ಕೆಲಸವನ್ನೂ ಮಾಡದೆ ಪ್ರಥಮ ತರಗತಿಯ ದೇಶಸೇವೆಯನ್ನು ಮಾಡಿ ಜನ ಮನದಲ್ಲಿ ನಿರಂತರವಾಗಿ ಆದರಣೀಯ ಸ್ಥಾನಗಳಿಸಿಕೊಂಡರು. ಆಗ ಚಳವಳಿಯ ಎಲ್ಲ ಖಟ್ಲೆಗಳೂ ಡಿಸ್ಟ್ರಿಕ್ಟ ಮತ್ತು ಸೆಶನ್‌ಜಜ್ಜರ ಮುಂದೆಯೇ ನಡೆಯುತ್ತಿದ್ದವು. ಶ್ರೀ. ಪಿ. ಎಮ್. ಲಾಡ ಎಂಬವರು ಆಗ ಬೆಳಗಾವಿಯಲ್ಲಿ ಡಿಸ್ಟ್ರಿಕ್ಟ ಜಜ್ಜ ಇದ್ದರು. ಅತ್ಯಂತ ನ್ಯಾಯನಿಷ್ಠುರರೂ ಪಂಡಿತರೂ ಮಾನವತಾವಾದಿಯೂ ದೇಶಭಕ್ತರೆಂದೂ ಅವರು ಪ್ರಸಿದ್ಧರಾಗಿದ್ದರು. ಯಾವ ಖಟ್ಲೆಯಲ್ಲಿಯೂ ಅದು ಎಷ್ಟೇ ದೊಡ್ಡ ಖಟ್ಲೆಯಿದ್ದರೂ ಪೋಲೀಸರಿಗೆ ಯೋಗ್ಯವಾದ ಸಾಕ್ಷಿ ಪುರಾವೆ ಮಾಡಿಸುವದಾಗಲಿಲ್ಲ. ಶ್ರೀ. ಲಿಮಯೆ ವಕೀಲರು ಅದರ ಲಾಭ ಪಡೆದು ಬಹುತರ ಎಲ್ಲ ಖಟ್ಲೆಗಳನ್ನೂ ಗೆದ್ದರು. ಪ್ರತಿಯೊಂದು ಖಟ್ಲೆಯಲ್ಲಿಯೂ ಪೋಲೀಸರಿಗೆ ಅಪಯಶ ಬಂತು. ಈ ರೀತಿ ನೂರಾರು ಖಟ್ಲೆಗಳನ್ನು ಪುಕ್ಕಟೆಯಾಗಿ ನಡೆಸಿ ಎಲ್ಲ ಆರೋಪಿಗಳ ಬಿಡುಗಡೆ ಮಾಡಿಸಿದ ಶ್ರೇಯಸ್ಸು ಶ್ರೀ. ಲಿಮಯೆ ವಕೀಲರಿಗೇ ಸಲ್ಲುವದು. ಅವರು ಜೇಲಿಗೆ ಹೋಗದಿದ್ದರೂ ಖಾದಿ ಧರಿಸದಿದ್ದರೂ ಪ್ರಸಿದ್ಧ ಕಾರ್ಯಕರ್ತನಿಗಿಂತ ಎಲ್ಲಿಯೂ ಹಿಂದೆ ಬೀಳದೆ ಈ ರೀತಿಯ ದೆ ಸೇವೆ ಮಾಡಿದರು.

ಸಿಟಿ ಮ್ಯಾಜಿಸ್ಟ್ರೇಟ ವೇಲಂಗಿಯವರು ಶ್ರೀ. ಲಾಡರ ಜ್ಞಾತಿ ಬಾಂಧವರೇ ಇದ್ದರೂ ಅವರು ಚಳುವಳಿಯವರ ಮೇಲೆ ಹಲ್ಲು ಕಡಿಯುತ್ತಿದ್ದರು. ತಮ್ಮ ಅಧಿಕಾರದಲ್ಲಿದ್ದ ಹೆಚ್ಚಿಗೆ ಹೆಚ್ಚು ಶಿಕ್ಷೆ ಕೊಟ್ಟು ತಮ್ಮ ಬ್ರಿಟಿಶ ನಿಷ್ಠೆಯನ್ನು ತೋರಿಸುತ್ತಿದ್ದರಲ್ಲದೆ

ಹೋರಾಟಗಾರರಿಗೆ ಸಿಕ್ಕಾಪಟ್ಟೆ ಬೈಯ್ದು ಆಸುರಿ ಆನಂದ ಪಡುತ್ತಿದ್ದರು. ೧೯೩೮ ರಲ್ಲಿಯೂ ಇವರು ಇದನ್ನೇ ಮಾಡಿದರು.

ನಮ್ಮ ಕೃತಘ್ನತೆ !

ಶ್ರೀ. ಲಿಮಯೆ ವಕೀಲರ ಪ್ರಯತ್ನದಿಂದಲೇ ಎಲ್ಲ ಖಟ್ಲೆಗಳು ಬಿಟ್ಟು ಹೋಗಿ ಆರೋಪಿಗಳು ಬಂಧ ಮುಕ್ತರಾದರೂ ಅವರು ತಮ್ಮ ಊರಿಗೆ ಹೋಗುವಾಗ ಶ್ರೀ. ಲಿಮಯೆ ವಕೀಲರನ್ನು ಕಂಡು ಕೃತಜ್ಞತೆಯನ್ನು ವ್ಯಕ್ತ ಪಡಿಸುವ ಎರಡು ಶಬ್ದ ಗಳನ್ನು ಆಡುವ ಸಾದಾ ಸಿಷ್ಟಾಚಾರವನ್ನೂ ನಮ್ಮ ಜನರು ತೋರಿಸಲಿಲ್ಲವೇಬುದನ್ನು ನಾವು ಜೇಲಿನಿಂದ ಹೊರಗೆ ಬಂದಾಗ ತಿಳಿದು ಭಾರಿ ವಿಷಾದಗೊಂಡೆವು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಕೆಲವು ದಿನಗಳ ವರೆಗಾದರೂ ಶ್ರೀ. ಲಿಮಯೆ ವಕೀಲರನ್ನು ಸರಕಾರಿ ವಕೀಲರನ್ನಾಗಿ ನೇಮಿಸಬೇಕೆಂದು ನಾನೂ ನನ್ನ ಮಿತ್ರರೂ ನಮ್ಮವರೇ ಆದ ಮಂತ್ರಿಗಳಿಗೆ ಅನೇಕ ಸಲ ಹೇಳಿಕೊಂಡರೂ ಕಡೆತನಕ ಅದರಲ್ಲಿ ನಮಗೆ ಯಶ ಬರಲಿಲ್ಲ ವೆಂಬದನ್ನು ಇಲ್ಲಿ ಉಲ್ಲೇಖಿಸದೆ ಇರಲಾರೆ. ತಮ್ಮ ತಮ್ಮ ಜಾತಿ, ಪಕ್ಷ, ಇಷ್ಟಮಿತ್ರರ ಕೆಲಸ ಮಾಡುವದರಲ್ಲಿಯೇ ತಮ್ಮ ವೇಳೆ ಕಳೆಯುತ್ತಿದ್ದ ನಮ್ಮ ಮಂತ್ರಿಗಳಿಗೆ ಶ್ರೀ. ಲಿಮಯೆ ವಕೀಲರಂಥವರ ಸೇವೆ ತ್ಯಾಗಗಳ ಪರಿವೆ ಇದ್ದಿದ್ದರೆ, ನಮ್ಮ ದೇಶದ ಪರಿಸ್ಥಿತಿ ಇಷ್ಟು ಅಧೋಗತಿಗೆ ಹೋಗುತ್ತಿದ್ದಿಲ್ಲ. ಶ್ರೀ. ಲಿಮಯೆ ಅವರು ಎಂದೂ ಫಲಾಪೇಕ್ಷೆ ಇಡದೆ ತಮ್ಮ ಕರ್ತವ್ಯ ಮಾಡಿದರು. ಕಡೆತನಕ ಬಡತನದಲ್ಲಿಯೇ ಬಳಲಿದರೂ ಆನಂದಿತರಾಗಿದ್ದರು. ಇಂಥ ಸಮಾಜಸೇವಾರತ್ನಗಳನ್ನು ಮಂತ್ರಿಗಳು ಮರೆತರೂ ದೇವರು ಖಂಡಿತ ಮರೆಯಲಾರನು.

ಶ್ರೀ. ಅನಂತರಾವ ಮಂಡಗಿ, ಜಕಾತಿ ಮತ್ತು ಮಾಂದ್ರೇಕರ ವಕೀಲರೂ ಸೆಶನ್ ಕೋರ್ಟುಗಳಲ್ಲಿ ನಮ್ಮ ಜನರ ಕೆಲವು ಖಟ್ಲೆಗಳಲ್ಲಿ ವಕೀಲಪತ್ರ ಹಾಜರ ಮಾಡಿ ಸಹಾಯ ಮಾಡಿದರು.

ಈ ಕ್ರಾಂತಿಯ ಕಾಲಕ್ಕೆ ಪೋಲೀಸ ಅಧಿಕಾರಿಗಳು ಮಾಡಿದ ಅನನ್ವಿತ ಅತ್ಯಾಚಾರಗಳ ಬಗ್ಗೆ ಸ್ವರಾಜ್ಯ ಸಿಕ್ಕ ನಂತರ ಕೂಡಲೆ ವಿಚಾರಣೆ ಮಾಡಬೇಕಾಗಿತ್ತು. ಕೆಲವು ಮುಖಂಡರು ಆ ರೀತಿ ಮಾಡುವದಾಗಿಯೂ ಹೇಳಿಕೆ ಕೊಟ್ಟಿದ್ದರು. ಅದರೆ ಎಲ್ಲಿಯೂ ಯಾವದೇ ಪೋಲೀಸ ಅಧಿಕಾರಿಯ ವಿಚಾರಣೆಯಾಗಲಿಲ್ಲ, ಆ ತರದ ವಿಚಾರವನ್ನೂ ಯಾವ ಮುಖಂಡರೂ ತಲೆಯಲ್ಲಿ ತರಲಿಲ್ಲವೆಂಬದು ವಿಷಾದದ ಸಂಗತಿಯಾಗಿದೆ.

ಪೋಲೀಸರು ಅಥವಾ ಅಧಿಕಾರಿಗಳು ಕ್ರಾಂತಿಯ ಕಾಲಕ್ಕೆ, ಸ್ವಾತಂತ್ರ್ಯ ಸಮರದ ಕಾಲಕ್ಕೆ, ಚಳವಳಿಗಾರರಿಗೆ ಸಹಾಯ ಮಾಡಬೇಕಾಗಿತ್ತೆಂದು ಯಾವನೇ ಸಮಂಜಸ ವ್ಯಕ್ತಿಯು ಅನ್ನಲಾರ. ಪರಕೀಯ ಸರಕಾರದಿಂದ ಸಂಬಳ ತಿಂದು ಅವರ ನವಕರಿ ಮಾಡುತ್ತಿದ್ದವರು ಸರಕಾರಕ್ಕೆ ನಿಷ್ಠರಾಗಿ ಉಳಿದು ಕರ್ತವ್ಯ ಪಾಲಿಸಿದ್ದರೆ ಆ ಬಗ್ಗೆ ಅವರಿಗೆ ದೋಷ ಕೊಡುವದು ಸರಿಯಲ್ಲವೆಂಬದೂ ಸ್ಪಷ್ಟವಿದೆ. ಆದರೆ ಅಡ್ಡ ಹಾದಿಗೆ ಹೋಗಿ ಸರಕಾರದಿಂದ ಭಲೇ ಎನಿಸಿಕೊಳ್ಳುವದಕ್ಕಾಗಿ ಬಡತಿಯ ದುರಾಶೆಯಿಂದ ಕಾಯಿದೆಗೆ ವಿರುದ್ಧ ಹೋಗಿ ಚಿತ್ರಹಿಂಸೆ ಕೊಟ್ಟದ್ದು ಎಲ್ಲ ರೀತಿಯಿಂದಲೂ ನಿಷೇಧಾರ್ಹ ವಾಗಿದೆ. ಅಂತೆಯೇ ಇಂಥವರ ವಿಚಾರಣೆಯಾಗಿ ಯೋಗ್ಯ ಶಿಕ್ಷೆ ಅವರಿಗೆ ವಿಧಿಸ ಬೇಕಾಗಿತ್ತು. ಆದನ್ನು ಸ್ವಾತಂತ್ರ್ಯ ಸಿಕ್ಕ ನಂತರವೂ ಯಾರೂ ಮಾಡಲಿಲ್ಲ. ಇದು ಸರಿಯಾಗಲಿಲ್ಲೆಂದು ಹೇಳದಿರಲಾರೆವು.

ಸೆರೆಮನೆಯ ಸುಖದುಃಖಗಳು.

೧೯೪೨ ರ ಆಗಸ್ಟ ೮ ನೇ ತಾರೀಖಿಗೆ ಮುಂಬೈಯಲ್ಲಿ ನಡೆದ ಮುಖಂಡರ ಸಾರ್ವತ್ರಿಕ ಬಂಧನದ ದಿವಸವೇ ದೇಶದಾದ್ಯಂತ ಬಂಧನಗಳು ನಡೆದವು. ಬಂಧನದ ಸತ್ರ ಸುರುವೇ ಇತ್ತು. ಬೆಳಗಾವಿ ಜಿಲ್ಲೆಯಲ್ಲಿಯೂ ಈ ಸತ್ರ ಆರಂಭವಾಗಿತ್ತು. ಜಿಲ್ಲಾ ಕಾಂಗ್ರೆಸ ಕಮೀಟಿಯ ೫ ನೇ ಆಗಸ್ಟದ ಸಭೆಯಲ್ಲಿ ಸೂಚನೆ ಕೊಟ್ಟಂತೆ ಈ ಕ್ರಾಂತಿಯ ಹೋರಾಟದಲ್ಲಿ ಏನಾದರೂ ನಮ್ಮ ಪಾಲಿನ ಕರ್ತವ್ಯ ಮಾಡಿ ತೋರಿಸ ಬೇಕೆಂಬ ಹುಮ್ಮಸ ಇದ್ದವರು ತಮ್ಮ ಮನೆಗಳನ್ನು ಅದೇ ದಿನ ಬಿಟ್ಟು ಭೂಗತರಾ ದರು. ಇವರಲ್ಲಿ ಕ್ರಾಂತಿಯ ರಕ್ತ ಕುದಿಯುತ್ತಿತ್ತು. ಮುಖಂಡರೆಂದೆನಿಸಿಕೊಳ್ಳುತ್ತಿದ್ದವ ರಲ್ಲಿ ಶ್ರೀಗಂಗಾಧರರಾವ ದೇಶಪಾಂಡೆ, ನಾರಾಯಣರಾವ ಜೋಶಿ, ಕೇಶವರಾವ ಗೋಖಲೆ ಮೊದಲಾದ ಕೆಲವೇ ಜನರನ್ನು ಅವರು ಮುಂಬೈಯಿಂದ ತಿರುಗಿ ಬರುವಾಗ ಪೋಲೀಸರು ಹಿಡಿದರು. ರಾವಬಹಾದ್ದೂರ ಅಂಗಡಿ, ದಿವಾಣ ಬಹಾದ್ದೂರ ಲಠ್ಠೆಯ ವರಂಥ ಬಹಾದ್ದೂರರನ್ನು ಅವರ ಮನಸ್ಸಿರದಿದ್ದರೂ ಪೋಲೀಸರು ಒತ್ತಾಯದಿಂದ ಹಿಡಿದು ಜೇಲಿಗೆ ಕಳಿಸಿದರು. ಶ್ರೀ. ಎಂ, ಪಿ. ಪಾಟೀಲ, ಕೆ. ಎಸ್. ಪಾಟೀಲ, ಬಾಬು ರಾವ ಠಾಕೂರ, ಜೀವಣರಾವ ಯಾಳಗಿ, ಪುಂಡಲೀಕಜಿ ಮೊದಲಾದವರು ಈ ಕ್ರಾಂತಿಯ ಸಮಯದಲ್ಲಿ ಹೊರಗೆ ಉಳಿದರೆ ಬರುವ ಕಷ್ಟಪರಂಪರೆಯನ್ನು ಸಹಿ ಸುವದು ತಮ್ಮಿಂದಾಗದೆಂದು ತಿಳಿದು ಪೋಲೀಸರಿಗೆ ಅನಾಯಾಸ ಸಿಕ್ಕು ಬಂಧನ ಮಾಡಿಸಿಕೊಂಡರು. ಶಾಂತಿನಾಥ ಇಂಗಳೆಯವರಂಥ ಕೆಲ ಕಾರ್ಯಕರ್ತರು ೮ ನೇ ಆಗಸ್ಟ ದಿನ ಕಾಂಗ್ರೆಸ ಕಮೀಟಿಯಲ್ಲಿಯೇ ಮಲಗಿಕೊಂಡು ಬಂಧನಕ್ಕೊಳಗಾದರು, ಪ್ರಭಾತಫೇರಿ

ಮೆರವಣಿಗೆ ಮುಂತಾದ ಕಾರ್ಯಕ್ರಮಗಳನ್ನು ಮಾಡಿ ಹಲವರು ಬಂಧನಕ್ಕೊಳಗಾದರು. ಕ್ರಾಂತಿಯ ಕಾರ್ಯಕ್ರಮಗಳನ್ನು ಮಾಡುವಾಗ ಅಲ್ಲಲ್ಲಿ ಆಗಾಗ ಅನೇಕ ಕಾರ್ಯಕರ್ತರು ಪೋಲೀಸರ ಕೈಗೆ ಸಿಕ್ಕು ಬಿದ್ದರು.

ಹೀಗಾಗಿ ಹಿಂಡಲಗಿ ಜೇಲು ತುಂಬಹತ್ತಿತು. ಬೆಳಗಾವಿ, ಧಾರವಾಡ, ವಿಜಾಪೂರ, ಕಾರವಾರ ಮತ್ತು ರತ್ನಾಗಿರಿ ಈ ಐದು ಜಿಲ್ಲೆಗಳ ಕೈದಿಗಳನ್ನು ಇಡುವದಕ್ಕಾಗಿ ಹಿಂಡಲಗಿ ಮಧ್ಯವರ್ತಿ ಸೆರೆಮನೆ ಕಟ್ಟಲಾಗಿದ್ದು ಅಲ್ಲಿ ಒಂದು ಸಾವಿರ ಕೈದಿಗಳನ್ನು ಮಾತ್ರ ವ್ಯವಸ್ಥಿತವಾಗಿ ಇಡುವ ವಿಪರ್ಯಾಸ ಇದೆ. ಕ್ರಿಮಿನಲ್ ಕೈದಿಗಳೇ ಈ ಜೇಲಿನ ಹಕ್ಕುದಾರ ನಿವಾಸಿಗಳು, ಅವರಂತೂ ಮಳೆ ಬೀಳಲಿ ಬಿಡಲಿ, ಧಾರಣೆ ತುಟ್ಟಿಯಾಗಲಿ ಅಗ್ಗವಾಗಲಿ, ಸಮೃದ್ಧಿಯಾಗಿರಲಿ ಬರಗಾಲ ಬಿದ್ದಿರಲಿ, ಬೇಸಿಗೆಯಿರಲಿ ಮಳೆಯಿರಲಿ ಚಳಿಯಿರಲಿ, ಅಖಂಡವಾಗಿ ತಮ್ಮ ಯಾತ್ರೆ ಸಾಗಿಸುತ್ತ ಹಿಂಡಲಗಿ ಜೇಲಿನ ಒಂದು ಸಾವಿರದ ಸಂಖ್ಯೆಯನ್ನು ಕಾಯಂವಾಗಿ ಇಡುತ್ತ ಕರ್ಮಯೋಗಿಗಳಂತೆ ತಮ್ಮ ನಿತ್ಯ ಜೀವನ ನಡೆಸುತ್ತಲೇ ಬಂದಿದ್ದಾರೆ. ಅದು ನಿತ್ಯ ಪ್ರವಾಹ. ಚಳವಳಿ ಆರಂಭವಾದರೆ ಮಹಾಪೂರ (ನೆರೆ)ಬಂದಂತೆ ಜೇಲುತುಂಬಿ ಹೊರಸೂಸುತ್ತಿತ್ತು. ಎಲ್ಲ ಬರಾಕುಗಳು ತುಂಬಿ ಹೊರಗಿನ ವರಾಂಡಾದಲ್ಲಿಯೂ ಕೈದಿಗಳನ್ನು ಮಲಗಿಸುವ ಪ್ರಸಂಗ ಬರುತ್ತಿತ್ತು. ಒಬ್ಬರನ್ನೇ ಇಡುವದಕ್ಕಾಗಿ ಕಟ್ಟಿದ ಸೆಪರೇಟ ಕೋಣೆಗಳಲ್ಲಿ ಮೂವರಂತೆ ಕೈದಿಗಳನ್ನು ತುರುಕ ಬೇಕಾಗುತ್ತಿತ್ತು. ಕೈದಿಗಳ ಸಂಖ್ಯೆ ಏರಿದಂತೆ ಜೇಲಿನಲ್ಲಿಯ ಶಿಸ್ತು ಕಠೋರ ನಿಯಮ ಮುಂತಾದವು ತನ್ನಷ್ಟಕ್ಕೆ ತಾನೇ ಶಿಥಿಲವಾಗಿ ಒಂದು ಜಾತ್ರೆಯ ಸ್ವರೂಪವೇ ಬರುತ್ತಿದೆ.

ಹಿಂಡಲಗಿ ಜೇಲಿನ ರಚನೆ

ಹಿಂಡಲಗಿ ಜೇಲನ್ನು ೧೯೨೪ನೇ ಇಸ್ವಿಯಲ್ಲಿ ಕಟ್ಟಿ ಮುಗಿಸಿದ್ದು ಈ ಜೇಲು ಅತ್ಯಂತ ಸ್ವಚ್ಛವಿದೆ. ಯರವಡಾ ಜೇಲು ಅತ್ಯಂತ ಹೊಲಸು ಆದೆ. ವಿಜಾಪೂರದ ಆಗಿನ ಜೇಲು ಅತ್ಯಂತ ಅನಾರೋಗ್ಯಕರವಾಗಿದ್ದಿತು, ನಾಶಿಕ ಜೇಲವೂ ಹಿಂಡಲಿಗಿಯಂತೆಯೇ ಚೊಕ್ಕಟವಾಗಿದೆ. ಥಾಣೆ, ರತ್ನಾಗಿರಿ, ಕಾರವಾರ, ವಿಜಾಪೂರ ಮುಂತಾದ ಜಿಲ್ಲಾ ಕಾರಾಗ್ರಹಗಳು ಮಧ್ಯಮ ಪ್ರಕಾರದ್ದು ಅವೆ. ಹಿಂಡಲಗಿ ಜೇಲಿನ ಮುಖ್ಯ ಭಾಗ ಎರಡು ಅಂತಸ್ತಿನದಾಗಿದೆ. ಕೈದಿಗಳಿಗೆ ಯಾವಾಗಲೂ ಕಣ್ಣು ಮುಂದೆ ಎತ್ತರದ ಗೋಡೆಗಳೇ ಕಾಣುವದರಿಂದ ಮನಸ್ಸು ಬೇಸರಗೊಂಡು ಬೆಂದುಹೋಗುತ್ತಿದೆ. ಹೊರಗಿನ ದೂರಿನ ದೃಶ್ಯಗಳು ಕಂಡರೆ ಅದೊಂದು ಚಂದ, ಮನಕ್ಕೆ ಆನಂದ ಇಂಥ ಆನಂದವು ಹಿಂಡಲಗಿಯಲ್ಲಿಯ ಎರಡನೇ ಅಂತಸ್ತಿನಲ್ಲಿ ನಿಂತಾಗ ಕೈದಿಗೆ ಸ್ವಾಭಾವಿಕವಾಗಿ ಸಿಗುವದು. ಹಿಂಡಲಗಿ ಜೇಲಿನಲ್ಲಿ ಕೆಳಗಿನಂತೆ ವಿಭಾಗಗಳಿವೆ—

(೧) ೧ ನೇ ನಂಬರ ಸರ್ಕಲ್—೭ ಬರಾಕುಗಳು. ದೀರ್ಘಾವಧಿ ಶಿಕ್ಷೆಯ ಕೈದಿಗಳಿಗಾಗಿ.

(೨) ೨ ನೇ ನಂಬರ ಸರ್ಕಲ್–೩ ಬರಾಕುಗಳು, ೮೦ ಕೋಣೆಯ ಸೆಪರೇಟು. ಇದಕ್ಕೆ ಕಾಳಾಟೋಪಿ ಸರಕಲ್ ಅನ್ನುವರು. ತಿರುತಿರುಗಿ ಜೇಲಿಗೆ ಬರುವಂಥ "ಹ್ಯಾಬಿಚ್ಯುಅಲ್" ಕೈದಿಗಳನ್ನು ಇಲ್ಲಿ ಇಡುತ್ತಾರೆ.

(೩) ಅಂಡರ್ ಟ್ರಯಿಲ್ ವಾರ್ಡ್—ಖಟ್ಲೆ ನಡಯುತ್ತಿರುವ ಆರೋಪಿಗಳನ್ನು ಇಡುವದಕ್ಕಾಗಿ.

(೪) ಕ್ವಾರಂಟಾಯಿನ್ ವಾರ್ಡ್—ಶಿಕ್ಷೆಯಾದಕೂಡಲೆ ಒಳಗೆ ಒಮ್ಮೆಲೆ ಪ್ರವೇಶ ಕೊಡುವದರಿಂದ ಸಾಂಸರ್ಗಿಕ ರೋಗ ತಗಲಬಾರದೆಂದು ತಿಂಗಳೊಪ್ಪತ್ತು ಆಗಲಿಸಿ ಇಡುವ ಹೊಸ ಕೈದಿಗಳಿಗಾಗಿ

(೫) ಫಾಶೀಗೇಟ—ಗಲ್ಲಿನ ಶೆಕ್ಷೆಯಾದವರನ್ನು ಇಡುವಡಕ್ಕಾಗಿ.

(೬) ಸಿಂಪಲ್ ಯಾರ್ಡ—ಸಾದಾ ಶಿಕ್ಷೆಯಾದವರನ್ನು ಇಡುವದಕ್ಕಾಗಿ.

(೭) ಜ್ಯುವೆನೈಲ್ ಯಾರ್ಡ – ಚಿಕ್ಕ ವಯಸ್ಸಿನ ಕೈದಿಗಳಿಗಾಗಿ.

(೮) ಹಾಸ್ಪಿಟಲ್ ಯಾರ್ಡ— ದವಾಖಾನೆ. ರೋಗಿಗಳನ್ನೂ ಮುದುಕರನ್ನೂ ಇಡುವದಕ್ಕಾಗಿ.

(೯) ಟಿ. ಬಿ. ಯಾರ್ಡ – ಕ್ಷಯರೋಗಿ ಕೈದಿಗಳಿಗಾಗಿ.

(೧೦) ಅಂಧೇರಿ ಯಾರ್ಡ—ಏಕಾಂತ ಶಿಕ್ಷೆಯಾದ ಕೈದಿಗಳಿಗಾಗಿ.

(೧೧) ಸ್ಟೋಅರ ಯಾರ್ಡ—ಧಾನ್ಯದವಸು ಇಡುವದಕ್ಕಾಗಿ.

(೧೨) ಲೇಪರ ಶೆಡ್—ಮಹಾರೋಗಿ ಕೈದಿಗಳಿಗಾಗಿ.

(೧೩) ಔರತ ಬರಾಕ—ಸ್ತ್ರೀ ಕೈದಿಗಳಿಗಾಗಿ.

(೧೪) ಭಿಸಿ (ಕಿಚನ್)—ಅಡಿಗೆ ಮಾಡುವದಕ್ಕಾಗಿ.

(೧೫) ಆಫೀಸ—ಜೇಲಿನ ಅಧಿಕಾರಿಗಳ ಕಾರ್ಯಾಲಯ.

(೧೬) ಸ್ಟಿಥಿ—ಬಡಿಗತನ ಕಮ್ಮಾರತನದ ಕೆಲಸಮಾಡಲು.

(೧೭) ಧೋಬಿ ಖಾನಾ—ಬಟ್ಟೆ ಒಗೆಯುವದು ಮತ್ತು ಕೈದಿಗಳ ಬಟ್ಟೆ ಇಡುವದು ಇದಕ್ಕಾಗಿ.

ಹೀಗೆ ಹದಿನೇಳು ವಿಭಾಗಗಳಿದ್ದು ಸುತ್ತಲೂ ಸುಮಾರು ೧೫ ಅಡಿ ಎತ್ತರದ ಆವಾರದ ಗೋಡೆಯಿದೆ. ಈ ಗೋಡೆಯ ಹೊರಬದಿಗೆ ಪೋಲೀಸರ ಮನೆಗಳು ಅಧಿಕಾರಿಗಳ ಬಂಗ್ಲೆಗಳು ಅವೆ.

ಜೇಲಿನ ನಿತ್ಯ ಜೀವನ.

ಮುಂಜಾನೆ ಸರಿಯಾಗಿ ೬ ಗಂಬೆಗೆ ಸೀಲಮಾಡಿ ಇಟ್ಟ ಕಪಾಟಿನ ಸೀಲ ಒಡೆದು ಕೀಲಿ ಕೈಗಳನ್ನು ತಕ್ಕೊಂಡು ಬೇರೆ ಬೇರೆ ವಾರ್ಡಿನ ಬೇರೆ ಬೇರೆ ಪೋಲೀಸರು ಹೋಗಿ ಆಯಾ ವಾರ್ಡುಗಳ ಬರಾಕುಗಳಿಗೆ ಮುನ್ನಾದಿನ ಸಂಜೆ ೬ ಗಂಟೆಗೆ ಹಾಕಿದ ಹೊರಗೀಲಿ ತೆಗೆಯುತ್ತಾರೆ. ಒಳಗಿನ ಕೈದಿಗಳ ಸಂಖ್ಯೆ ಸರಿಯಾಗಿದ್ದಬ್ಗೆ ವ್ಯಾಪಾರಸ್ಥರು ಶಿಲಕು ಕೀರ್ದಿಗೆ ಮೇಳ ನೋಡುವಂತೆ ಮನವರಿಕೆ ಮಾಡಿಕೊಳ್ಳಲು ಇಬ್ಬಿಬ್ಬರಂತೆ ಜೋಡಿ ಜೋಡಿ ಕೂಡ್ರಿಸಿ ಎಣಿಸುತ್ತಾರೆ, ಈ ಎಣಿಕೆ ಸುರು ಆಗುವ ದರೊಳಗಾಗಿಯೇ ಎಲ್ಲ ಕೈದಿಗಳು ತಮ್ಮ ಕಾತಿ ತಟ್ಟಿನ ಹಾಸಿಗೆ ಸುತ್ತಿ ಧಾಲಿಪಾಟ (ನೀರು ಕುಡಿಯುವ ಮತ್ತು ಊಟ ಉಂಣುವ ಕಬ್ಬಿಣ ತಗಡಿನ ಎರಡು ಪಾತ್ರೆಗಳು) ತಕ್ಕೊಂಡು ಸಿದ್ಧರಾಗುತ್ತಾರೆ. ಇಡೀ ಜೇಲಿನ ಎಣಿಕೆ ಸರಿಯಾಗಿ ಹೊಂದುವ ವರೆಗೆ ಯಾರನ್ನೂ ಬರಾಕದ ಹೊರಗೆ ಬಿಡುವದಿಲ್ಲ, ಬರಾಕಿನ ಬಾಗಿಲ ತೆಗೆದ ಕೂಡಲೆ ಕೆಳಗೆ ಅಂಗಳದಲ್ಲಿರುವ ಸಂಡಾಸಗಳಲ್ಲಿ ಶೌಚಕ್ಕೆ ಹೋಗಿ ವಿಶಾಲವಾಗಿಯೂ ಸ್ವಚ್ಛವಾಗಿಯೂ ಕಟ್ಟಿದ ಮತ್ತು ಯಾವಾಗಲೂ ನಲ್ಲಿಯ ನೀರಿನಿಂದ ತುಂಬಿರುವ ಹೌದಿಗೆ ಹೋಗಿ ಮುಖಮಾರ್ಜನ ಅಥವಾ ಸ್ನಾನ ಮಾಡುವದು. ಅಷ್ಟರಲ್ಲಿ ಜೋಳದ ಹಿಟ್ಟಿನ ತೆಳ್ಳಗಿನ ಉಪ್ಪುಕೂಡಿಸಿದ ಬಿಸಿ ಬಿಸಿ ಗಂಜಿ ಬರುತ್ತದೆ. ಅದನ್ನು ಕುಡಿದು ಕೆಲಸಕ್ಕೆ ಸಿದ್ಧರಾಗುವದು, ನೇಯುವದು ನೂಲುವದು, ಬಡಿಗತನ ಕಮ್ಮಾರತನ, ಚರ್ಮದ ಕೆಲಸ, ಬಣದ ಕೆಲಸ, ಬಟ್ಟೆ ಸ್ವಚ್ಛ ಮಾಡುವದು, ಅಡಿಗೆ ಮಾಡುವದು, ಕಾಯಿಪಲ್ಲೆ ಕಾಳು ಕಡಿ ಆರಿಸುವದು. ಕಸ ಕೂಡಿಸುವದು, ತೋಟದ ಕೆಲಸಕ್ಕೆ ಹೊರಗೆ (ಜೇಲಿನ ಒಡತನದ ತೋಟಗಳು ಹೊರಗೆ ಸಮೀಪದಲ್ಲಿಯೇ ಅವೆ.) ಹೋಗುವದು, ಬಟ್ಟೆ ಹೊಲೆಯುವದು, ಕ್ಷೌರಮಾಡುವದು, ಮುಂತಾದ ಗ್ರಾಮಗಳಲ್ಲಿ ನಡೆಯುವ ಎಲ್ಲ ಕೆಲಸ ಅಲ್ಲಿ ನಡೆಯುವವು. ಡಾಕ್ಟರರು ಪ್ರತಿಯೊಂದು ವಾರ್ಡಿಗೆ ಬಂದು ಯಾರಿಗಾದರೂ ಔಷಧ ಬೇಕೇ ಎಂದು ಕೇಳಿ ಚಿಲ್ಲರ ಔಷಧಿ ಅಲ್ಲಿಯೇ ಕೊಡುವರು. ತುಸು ಹೆಚ್ಚಿನ ಸ್ವರೂಪದ ಬೇನೆ ಇದ್ದವರನ್ನು ಹಾಸ್ಪಿಟಲಕ್ಕೆ ಕರೆದೊಯ್ಯುವರು. ಸರಿಯಾಗಿ ೧೦॥ ಗಂಟೆಗೆ ಎರಡು ರೊಟ್ಟಿ ಮತ್ತು ಎರಡು ಕಪ್ಪುಗಳಷ್ಟು ಕುದಿಸಿದ ಬೇಳೆ ಪ್ರತಿಯೊಬ್ಬರಿಗೆ ಕೊಡುವರು. ಅದೇ ಅವನ ಊಟ ! ಊಟಮಾಡಿ ಮತ್ತೆ ಕೆಲಸಕ್ಕೆ ಹೋಗ ಬೇಕು. ಮಧ್ಯಾಹ್ನ ೪ ಗಂಟೆಯ ವರೆಗೆ ಕೆಲಸ. ಮುಂದೆ ಒಂದು ತಾಸು ಅಂಗಳದಲ್ಲಿಯೇ ತಿರುಗಾಟ ವಿಶ್ರಾಂತಿ ಮುಂತಾದದ್ದು ನಡೆಯುವದು. ೫॥ ಗಂಟೆಗೆ ಸಂಜೆಯ ಊಟ, ಈ ಊಟದಲ್ಲಿ ಎರಡು ರೊಟ್ಟಿ ಮತ್ತು ಎರಡು ಕಪ್ಪಿನಷ್ಟು ತೊಪ್ಪಲ ಪಲ್ಲೆ ಇರುವದು ಊಟ ಮುಗಿಸಿ ಕುರಿಗಳನ್ನು ದಡ್ಡಿಯಲ್ಲಿ ಹಾಕುವಂತೆ ಕೈದಿಗಳನ್ನು ಬರಾಕದಲ್ಲಿ ತುರಕಿ ಪುನಃ ಎಣಿಕೆ ಮಾಡಿ ಬರಾಕಿಗೆ ಕೀಲಿ ಜಡಿಯುವರು. ಅದು ಮರುದಿನ ಮುಂಜಾನೆ ೬ ಗಂಟೆಗೇ ತೆರೆಯಲ್ಪಡುವದು.

ಸಂಜೆಯ ೬ ಗಂಟೆಯಿಂದ ಮುಂಜಾನೆಯ ೬ ಗಂಟೆಯ ವರೆಗೆ ಎಲ್ಲ ಕೈದಿಗಳನ್ನು ಕೀಲಿ ಹಾಕಿ ಬಂದಮಾಡಿ ಇಟ್ಟರೆ ತೀರುವದಿಲ್ಲ. ಅವರನ್ನು ಕಾಯುಲಿಕ್ಕೆ ಪ್ರತಿ ಮೂರು ತಾಸಿಗೆ ಒಬ್ಬನಂತೆ ನಾಲ್ವರು ವಾರ್ಡರರನ್ನು ಕೈದಿಯೊಳಗಿನವರಿಗೇ ಬಡತಿ ಕೊಟ್ಟು ನೇಮಿಸಿರುತ್ತಾರೆ. ಅವರೂ ಬರಾಕಗಳಲ್ಲಿಯೇ ಕೈದಿಗಳ ಜೊತೆಗೇ ಇರುತ್ತಾರೆ. ಈ ಕಾವಲುಗಾರರು ತಮ್ಮ ಸರತಿ ಬಂದ ವೇಳೆಯಲ್ಲಿ ಮಲಗುಂವಂತಿಲ್ಲ. ಇಡೀ ಮೂರು ತಾಸು ಸರ್ಪಗಾವಲು ಮಾಡಬೇಕಾಗುತ್ತದೆ. ರಾತ್ರಿಯಲ್ಲಿ ಬರಾಕದೊಳಗೆ ಮಲಗಿದ ಕೈದಿಗಳಲ್ಲಿ ಯಾರಾದರೂ ಮೂತ್ರಕ್ಕೆ ಆಥವಾ ಮಲವಿಸರ್ಜನೆಗೆ ಹೋಗಬೇಕಾದರೆ ತನ್ನ ಹಾಸಿಗೆಯ ಮೆಲೆ ಎದ್ದು ಕೂತು "ಪಿಶಾಬ ಝಾಡಾ" ಎಂದು ಕೂಗಿ ಹೇಳಿ ಸಂಡಾಸಕ್ಕೆ ಹೋಗಲು ಆ ಕಾವಲುಗಾರ ವಾರ್ಡರನ ಅಪ್ಪಣೆ ಪಡಯಬೇಕಾಗುವದು. ರಾತ್ರಿ ಯಾರಾದರೂ ಒಳಸಂಚುಮಾಡಿ ಜೇಲಿನಿಂದ ಓಡಿ ಹೋಗಬಾರದೆಂದು ಈ ಕಾವಲುಗಾರರನ್ನಿಡುವ ಉದ್ದೇಶ. ಯಾರಾದರೂ ಓಡಿಹೋಗುವ ಸಂಶಯ ಬಂದರೆ ಆಥವಾ ತಮ್ಮ ತಮ್ಮೊಳಗೆ ಬಡೆದಾಟ ಹೊಡೆದಾಟ ಮಾಡಿದರೆ ಈ ಕಾವಲುಗಾರ ವಾರ್ಡರನು ಸೀಟಿ ಊದುತ್ತಾನೆ. ಕೂಡಲೆ ಪೋಲೀಸರು ಬರುತ್ತಾರೆ. ವಿಶೇಷ ಪ್ರಸಂಗ ಬಂದರೆ ರಾತ್ರಿಯಲ್ಲಿ ಸ್ವತ: ಜೇಲ ಅಧಿಕಾರಿಯು ಬುದು ಬರಾಕಿನ ಕೀಲಿ ತೆಗೆಯಬಹುದು. ಪ್ರತಿಯೊಂದು ಬರಾಕಿನ ಮೂಲೆಯಲ್ಲಿ ಫ್ಲಶ್ ಪದ್ಧತಿಯ ಸಂಡಾಸ ಇರುತ್ತದೆ. ಬರಾಕುಗಳಲ್ಲಿ ೬೦ ರಿಂದ ೧೦೦ ರ ವರೆಗೆ ಕೈದಿಗಳನ್ನು ಇಡಬಹುದು. ಸೆಪರೇಟ ಕೋಣೆಗಳಲ್ಲಿ ಅಥವಾ ಅಂಧೇರಿ ಕೋಣೆಗಳಲ್ಲಿ ಸಂಡಾಸ ಇರುವದಿಲ್ಲ. ಅಲ್ಲಿ ರಾತ್ರಿ ಮಲಮೂತ್ರ ವಿಸರ್ಜನೆಗಾಗಿ ಫಿನಾಯಿಲ ಹಾಕಿದ ಒಂದು ಮಣ್ಣಿನ ಬಾನಿಯನ್ನಿಟ್ಟಿರುತ್ತಾರೆ. ವಾರದಲ್ಲಿ ರವಿವಾರ ಕೆಲಸಕ್ಕೆ ಸೂಟಿ ಇರುತ್ತದೆ. ಅಂದು ಶಾಕಾಹಾರಿ ಕೈದಿಗಳಿಗೆ ೪ ಔಂಸಿನಂತೆ ಬೆಲ್ಲ ೧ ಔಂಸಿನಷ್ಟು ವಾಶಿಂಗ ಸೋಡಾ ಕೊಡುವರು. ಮಾಂಸಾಹಾರಿಗಳಿಗೆ ಮಟನ್ ಕೊಡುವರು. ತಮ್ಮ ಬಟ್ಟೆಗಳನ್ನು ಅಂದರೆ ಚಡ್ಡಿ, ಬಂಡಿ, ಟಾವೆಲಗಳನ್ನು ಕೈದಿಗಳು ಈ ಸೋಡಾಹಾಕಿ ಒಗೆಯುವರು. ಬೆಲ್ಲವನ್ನು ಅಂದಿನ ದಿನ ಕೊಡುವ ಸೆಜ್ಜಿಯ ರೊಟ್ಟಿ ಮುರಿದು ಪುಡಿಮಾಡಿ ಮಾಲೀದಿ ಮಾಡಲು ಉಪಯೋಗಿಸುವರು. ವಾರಕ್ಕೊಮ್ಮೆ ಕ್ಷೌರ ಮಾಡಿಸಲೇಬೇಕು. ಕ್ಯಾಪ್ ಕಾಯ ತಕ್ಕದ್ದಲ್ಲ ಎಂಬ ನಿಯಮವಿದೆ.

೧೯೩೦ ನೇ ಇಸವಿಯ ವರೆಗೆ ಜೇಲಿನಲ್ಲಿ ಎಲ್ಲ ಕೈದಿಗಳಿಗೆ ಒಂದೇ ಕ್ಲಾಸು ಇತ್ತು. ಶ್ರೀಮಂತನಿರಲಿ ಭಿಕಾರಿಯಿರಲಿ ದೇಶಭಕ್ತನಿರಲಿ ದೇಶದ್ರೋಹಿಯಿರಲಿ ಕ್ರಿಮಿನಲ್ ನಿರಲಿ ಎಲ್ಲರಿಗೂ ಒಂದೇ ರೀತಿಯ ಜೀವನವಿತ್ತು. ಅದರೆ ೧೯೨೮ ನೇ ಇಸವಿಯಲ್ಲಿ ಬಂಗಾಲದ ಕ್ರಾಂತಿಕಾರಕ ಧುರೀಣ ಜತೀಂದ್ರನಾಥ ದಾಸರೆಂಬವರಿಗೆ ಶಿಕ್ಷೆಯಾದಾಗ ಅವರು ರಾಜಕೀಯ ಕೈದಿಗಳ ಬೇರೆ ವರ್ಗ ಮಾಡಿ ಅವರಿಗೆ ಒಳ್ಳೇ ಊಟ ಅರಿವೆ ಮುಂತಾದ ಸವಲತ್ತು ಕೊಡಬೇಕೆಂದು ಆಮರಣ ಉಪವಾಸ ಮಾಡಿ ೬೩ ದಿನ ಬಾಯಿಯಲ್ಲಿ ಏನೂ ಆಹಾರ ಹಾಕದೆ ಪ್ರಾಣಾರ್ಪಣೆ ಮಾಡಿದರು. ಆ ಮೇಲೆ

ಸರಕಾರದವರು ಎ. ಬಿ. ಸಿ. ಎಂಬ ಮೂರು ವರ್ಗಗಳನ್ನು ಕೈದಿಗಳಲ್ಲಿ ಮಾಡಿದರು. ಆದರೆ ಈ ವರ್ಗವಾರಿಯು ರಾಜಕೀಯ ಮತ್ತು ಕ್ರಿಮಿನಲ್ ಈ ತಳಹದಿಯ ಮೇಲೆ ಆಗದೆ ಕೈದಿಯ ಹೊರಗಿನ ಆರ್ಥಿಕ ಸ್ಥಿತಿಗತಿ ವಿಚಾರಿಸಿ ವರ್ಗಕೊಡಬೇಕೆಂದು ಗೊತ್ತು ಪಡಿಸಿದ್ದರಿಂದ ೧೯೩೦ ನೇ ಇಸವಿಯಿಂದ ಎಲ್ಲ ತರದ ಕೈದಿಗಳಲ್ಲಿ 'ಎ' ಕ್ಲಾಸ 'ಬಿ' ಕ್ಲಾಸ 'ಸಿ' ಕ್ಲಾಸ ಎಂಬ ಮೂರು ಕ್ಲಾಸುಗಳು ಕಾರ್ಯಾಚರಣೆಯಲ್ಲಿ ಬಂದವು.

ಸೀ ಕ್ಲಾಸ ಕೈದಿಗೆ ಊಟಕ್ಕೆ ಮಧ್ಯಾನ್ಹ ೨ ರೊಟ್ಟಿ ಬೇಳೆ, ಸಂಜೆಗೆ ೨ ರೊಟ್ಟಿ ತೆಳ್ಳನ ಪಲ್ಲೆ, ಹಾಕಿ ಕೊಳ್ಳಲು ಎರಡು ಬುಡಿ ಎರಡು ಚಡ್ಡಿ ಒಂದು ಟಾವೇಲ್ ಒಂದು ಲಂಗೋಟಿ, ಮೂರು ತಿಂಗಳಿಗೆ ಒಂದು ಪತ್ರ ಒಂದು ಭಟ್ಟಿ, ಇಷ್ಟು ಸಿಗುತ್ತಿದ್ದವು.

ಬಿ ಕ್ಲಾಸಿನ ಕೈದಿಗೆ ದಿನಾಲು ಚಹಾ ಬ್ರೆಡ್, ಊಟಕ್ಕೆ ತುಸು ಅನ್ನ ಚಪಾತಿ, ಉಡಲಿಕ್ಕೆ ಧೋತರ ಅಥವಾ ಉದ್ದ ಚಡ್ಡಿ, ತಿಂಗಳಿಗೊಮ್ಮೆ ಭೆಟ್ಟಿ ತಿಂಗಳಿಗೊಮ್ಮೆ ಪತ್ರದ ಹಕ್ಕು ಕೊಡಲಾಗಿತ್ತು.

ಎ ಕ್ಲಾಸಿನ ಕೈದಿಗಳಿಗೆ ಬಿ ಕ್ಲಾಸಿನ ಕೈದಿಗಳಂತೆಯೇ ಊಟ, ೧೫ ದಿನಕ್ಕೊಮ್ಮೆ ಭೆಟ್ಟಿ ಮತ್ತು ಪತ್ರದ ಸವಲತ್ತು ಕೊಡಲಾಗಿತ್ತು.

ಸಾಮಾನ್ಯವಾಗಿ ವಕೀಲರಿಗೆ ಡಾಕ್ಟರರಿಗೆ ಇನ್‌ಕಂಟ್ಯಾಕ್ಸ ಕೊಡುವ ವ್ಯಾಪಾರಿಗಳಿಗೆ ಶ್ರೀಮಂತರಿಗೆ ಅಧಿಕಾರಿ ಮುಂತಾದವರಿಗೆ ಶಿಕ್ಷೆಯಾದಾಗ ಬಿ ಕ್ಲಾಸ ಎ ಕ್ಲಾಸ ಕೊಡುವ ರೂಢಿಯಿತ್ತು. ಆದರೆ ಕೆಲವು ಮಾಜಿಸ್ಟೇಟರು ದೊಡ್ಡ ದೊಡ್ಡ ಮುಖಂಡರಿಗೂ ಸೇಡಿನ ಭಾವನೆಯಿಂದ ಸೀ ಕ್ಲಾಸವನ್ನೇ ಕೊಡುತ್ತಿದ್ದರು. ಧಾರವಾಡದ ಕಲೆಕ್ಟರರು ಡಾ. ಹರ್ಡೀಕರ, ಡಾ. ಕಬ್ಬೂರ, ಹುಕ್ಕೇರಿಕರ, ಕರಮರಕರ, ಅನಂತರಾವ ಜಾಲೀಹಾಳ ವಕೀಲ, ಕುಲಕರ್ಣಿ ರಂಗರಾವ ವಕೀಲ ಮುಂತಾದವರಿಗೂ ೧೯೩೨ ರಲ್ಲಿ ಬುದ್ಧಿಪೂರ್ವಕವಾಗಿ ಸಿ ಕ್ಲಾಸು ಕೊಟ್ಟಿದ್ದರು. ಮುಂಬೈಯ ಮೇಯರ ಪದವಿ ಭೂಷಿಸಿದ ಅಖಿಲ ಭಾರತ ಮುಖಂಡರಾಗಿದ್ದ ಶ್ರೀ. ಮೆಹರ ಅಲ್ಲಿಯವರಿಗೂ, ಅಬೀದ ಅಲ್ಲಿ ಜಾಫರಭಾಯಿಯವರಿಗೂ, ಸ. ಕಾ. ಪಾಟೀಲ, ಆಚಾರ್ಯ ಭಾಗವತ, ಆಚಾರ್ಯ ಜಾವಡೇಕರ, ಸಾನೆ ಗುರುಜಿ, ಕಾಕಾ ಕಾಲೇಲಕರ, ನರಹರಿಭಾಯಿ ಪರೇಖ, ಮುಕುಂದ ಮಾಲವೀಯ ಮೊದಲಾದ ಮಹನೀಯರಿಗೂ ಸಿ ಕ್ಲಾಸು ಕೊಡಲಾಗಿತ್ತು. ಇದು ಜೇಲಿನಲ್ಲಿಯ ತಾರತಮ್ಯ.

ಜೇಲಿನ ಕೆಲ ಕಾಯದೆಗಳು

ಕೈದಿಯು ಇನ್ನೊಬ್ಬ ಕೈದಿಯೊಂದಿಗೆ ಮಾತಾಡಬಾರದು.
ಕೈದಿಯು ಇನ್ನೊಬ್ಬ ಕೈದಿಯಿಂದ ಅವನಿಗೆ ಹೆಚ್ಚಾದ ರೊಟ್ಟಿ ತಕೊಳ್ಳಬಾರದು

ಕೊಡಬಾರದು.

ಕೈದಿಯು ಉಪವಾಸ ಮಾಡಬಾರದು.

ಕೈದಿಯು ಹಾಡಬಾರದು. ಜೊಳ್ಳನೆ ನಗಬಾರದು.

ಕೈದಿಯು ಗುಂಡಗಡಿಗಿ ಜನಿವಾರ ಧರಿಸಬಾರದು.

ಕೈದಿಯು ನಡೆಯುತ್ತಿರುವಾಗ ಅಧಿಕಾರಿಗಳು ಬಂದರೆ ಅವನು ಪಟ್ಟನೆ ನೆಲಕ್ಕೆ ಕೂಡ್ರಬೇಕು.

ಕೈದಿಯು ಸ್ನಾನಕ್ಕೆ ೬ ಪಾಟಿನ (ತುಂಬಿಗೆ) ಗಿಂತ ಹೆಚ್ಚು ನೀರು ಉಪಯೋಗಿಸ ಬಾರದು ಇತ್ಯಾದಿ.

ಈ ಪ್ರಕಾರ ನಿಯಮ, ಕಾಯಿದೆಗಳಿದ್ದರೂ ಕೈದಿಗಳ ಸಂಖ್ಯೆ ಬಹಳವಾದಾಗ ಈ ನಿಯಮಗಳು ಶಿಥಿಲಗೊಳ್ಳುವದು ಸ್ವಾಭಾವಿಕವಾಗಿತ್ತು.

ಈಗಿನ ಜೇಲ ನಿಯಮಗಳಲ್ಲಿ ಬಹಳ ತಿದ್ದುಪಡಿಯಾಗಿವೆ. ಈಗಿನ ಜೇಲು ಗಳೆಂದರೆ ವಿದ್ಯಾರ್ಥಿಗಳ ಹಾಸ್ಟಿಲಗಳಂತೆ ಆಗಿವೆ, ಈ ಮಾತು ಬೇರೆ. ನಾನು ಬರೆಯು ತ್ತಿರುವದು ೧೯೨೨ ರ ಜೇಲಿನ ಬಗ್ಗೆ ಎಂಬದನ್ನು ಮರೆಯಬಾರದು.

ಕ್ಯಾಂಪ ಜೇಲುಗಳು ಲಾಕಪ್ಪುಗಳು.

ಎಷ್ಟೇ ಕಷ್ಟಕಾರ್ಪಣ್ಯಗಳಿದ್ದರೂ ಹಿಂಡಲಗಿಯ ಜೇಲು ಎಲ್ಲ ರೀತಿಯಿಂದಲೂ ಉತ್ತಮವೇ ಎಂದು ಹೇಳಬಹುದು. ಅಲ್ಲಿಯ ಹವೆ ಉತ್ತಮ, ನೀರು ಉತ್ತಮ, ಸೃಷ್ಟಿಸೌಂದರ್ಯ ಉತ್ತಮ, ಕಟ್ಟಡ ಉತ್ತಮ, ಎಲ್ಲವೂ ಉತ್ತಮವೇ. ತಗಣಿ ಗುಂಗಾ ಡುಗಳ ಹೆಸರಿಲ್ಲ, ಹಾವು ಚೇಳುಗಳ ಸುಳಿದಾಟವಿಲ್ಲ. ತಮ್ಮ ಆಪ್ತೇಷ್ಟರ ಅಭಾವವೊಂದೇ ಮನಸ್ಸಿಗೆ ಬೇಸರ ತಂದೊಡ್ಡುವಂತಿತ್ತು. ಆದರೆ ಇಡೀ ಜೇಲು ಇಮ್ಮಡಿಯಾಗಿ ಹೊರಸೂಸುವಂತೆ ತುಂಬಿದಾಗ ಜನಜಾತ್ರೆಯೇ ಕೂಡಿದಾಗ ಆ ವೇದನೆಯೂ ಮಾಯ ವಾಗಿತ್ತು. ಸುಮಾರು ಒಂದು ಸಾವಿರ ಕ್ರಿಮಿನಲ್ ಕೈದಿಗಳ ಜೊತೆಗೆ ಒಂದೂವರಿ ಸಾವಿರದಷ್ಟು ಚಳವಳಿಯ ಕೈದಿಗಳಿರುವಾಗ ಯಾವ ಚಿಂತೆಯೂ ಅಲ್ಲಿ ಇರಲಿಲ್ಲ.

ಆದರೆ ಠಾಣಾ, ಕಾರವಾರ, ರತ್ನಾಗಿರಿ, ವಿಜಾಪುರ, ವಿಸಾಪುರ ಮುಂತಾದ ಜಿಲ್ಲಾ ಕಾರಾಗೃಹಗಳ ಮಾತೇ ಬೇರೆ. ಅಧುನಿಕ ಕಟ್ಟಡಗಳಿಲ್ಲ, ಆರೋಗ್ಯಕಾರಕ ಹವೆ ಯಿಲ್ಲ, ಹೀಗಾಗಿ ಈ ಜೇಲುಗಳಲ್ಲಿ ಇದ್ದ ನಮ್ಮ ಜನರಿಗೆ ಬಹಳ ತೊಂದರೆ ಆಯಿತು. ವಿಸಾಪುರಕ್ಕೆ ಹೋದ ಕೈದಿಗಳಂತೂ ಯಾರೂ ರೋಗ ಗ್ರಸ್ತರಾಗದೆ ತಿರುಗಿ ಬರುವಂತೆ

ಇದ್ದಿಲ್ಲ. ರಾತ್ರಿಯಲ್ಲಿ ಕೈದಿಗಳು ಓಡಿ ಹೋಗಬಾರದೆಂದು ಎಲ್ಲರ ಕಾಲುಗಳಿಗೆ ಉದ್ದ ಸರಪಳಿ ಕಟ್ಟಿ ಎಲ್ಲ ಸರಪಳಿಗಳನ್ನು ಮಧ್ಯವರ್ತಿ ಕಂಬಕ್ಕೆ ಬಿಗಿಯುತ್ತಿದ್ದರು. ಈ ಪದ್ಧತಿ ಅಲ್ಲಿ ೧೯೩೨ ರ ವರೆಗೂ ಇತ್ತು. ಅಮಾಂಶವು ಇಲ್ಲಿಯ ಸ್ಥಳಸಿದ್ಧ ರೋಗ. ತಗಣಿ ಗುಂಗಾಡುಗಳ ಕಾಟದಲ್ಲಿ ನಿದ್ರೆಯೇ ಬರುತ್ತಿದ್ದಿಲ್ಲ. ಹಾವು ಚೇಳುಗಳಿಗೂ ಈ ಜೇಲು ಆಶ್ರಯ ಸ್ಥಾನವಾಗಿತ್ತು. ಬೆಳಗಾವಿ ಧಾರವಾಡ ಜಿಲ್ಲೆಯ ರಾಜಕೀಯ ಕೈದಿಗಳನ್ನು ಈ ಜಿಲ್ಲಾ ಜೇಲುಗಳಲ್ಲಿ ನೂರಾರು ಸಂಖ್ಯೆಯಲ್ಲಿ ಕಳಿಸಲಾಗಿತ್ತು.

ಬೆಳಗಾವಿಯ ಹಿಂಡಲಗಿ ಜೇಲು ತುಂಬಿ ಹೊರಸೂಸ ಹತ್ತಿದ್ದರಿಂದ ಬೆಳಗಾವಿಯ ಕಿಲ್ಲೆಯಲ್ಲಿ ಒಂದು ಹೊಸ ತಾತ್ಪೂರ್ತಿಕ ಜೇಲನ್ನು ಸುರುಮಾಡಲಾಗಿತ್ತು. ಹಿಂದಿನ ಕಾಲದಲ್ಲಿ ಕುದುರೆ ಕಟ್ಟುತ್ತಿರುವ ದೊಡ್ಡ ಲಾಯಗಳೇ ಜೇಲ ಆಗಿ ರೂಪಾಂತರಗೊಂಡಿದ್ದವು. ಇಲ್ಲಿಯ ಹೊಲಸು ದುರ್ಗಂಧ ನೀರಿನ ಅರಬು ಸೂಳ್ಳೆಗಳ ಕಾಟ ತಗಣಿಯ ಸುಳಿದಾಟ ಅನುಭವಿಸುವದೆಂದರೆ ಅದೊಂದು ದಿವ್ಯವೇ ಆಗಿತ್ತು.

ಬೆಳಗಾವಿ ಕಿಲ್ಲೆ ಜೇಲಿನ ಕಷ್ಟವನ್ನೂ ಮರೆಸುವಂಥ ಜೇಲುಗಳೆಂದರೆ ತಾಲೂಕ ಲಾಕಪ್ಪುಗಳು, ಅಲ್ಲಿಯೂ ತಿಂಗಳುಗಟ್ಟಲೆ ನಮ್ಮ ಜನರು ಇರಬೇಕಾಯಿತು. ಹಗಲು ರಾತ್ರಿ ಕೂಡಿಯೇ ಕೋಣೆಯಲ್ಲಿ ಬಂಧನ-ಒಂದು ದೊಡ್ಡ ಕೋಣೆಯಲ್ಲಿ ೮-೧೦ ಕೈದಿಗಳು, ಅವರ ಸಮ್ಮುಖದಲ್ಲಿಯೇ ಅಲ್ಲಿಯೇ ಬಚ್ಚಲದ ಮೋರೆಯಲ್ಲಿ ಮಲಮೂತ್ರ ವಿಸರ್ಜನೆ. ಮುಂಜಾನೆ ಹೊರಗಡೆ ಮಲವಿಸರ್ಜನೆಗೆ ಬಿಟ್ಟಾಗ ನಾಲ್ಕೈದು ಜನರ ಕೈಗೆ ಕೈಜೋಡಿಸಿ ಬೇಡಿಹಾಕಿ, ಸಾಲಾಗಿ ರಸ್ತೆಯ ಬದಿಗೆ ಶೌಚಕ್ಕೆ ಕೂಡ್ರುವದು. ಹವೆಯೂ ಇಲ್ಲ ಸ್ವಚ್ಛ ನೀರೂ ಇಲ್ಲ. ಇಂಥ ಲಾಕಪ್ಪುಗಳೆಂದರೆ ಪ್ರತ್ಯಕ್ಷ ನರಕಗಳೇ ಆಗಿದ್ದವು. ಈ ಲಾಕಪ್ಪುಗಳಲ್ಲಿ ಒಂದು ತಿಂಗಳ ಇರುವದೆಂದರೆ ಕಿಲ್ಲೆ ಜೇಲಿನಲ್ಲಿ ನಾಲ್ಕು ತಿಂಗಳ ಇದ್ದಂತೆ, ಮತ್ತು ಹಿಂಡಲಗಿ ಜೇಲಿನಲ್ಲಿ ಒಂದು ವರುಷ ಇದ್ದಂತೆ, ಇಷ್ಟು ಒಂದಕ್ಕಿಂತ ಒಂದು ಜೇಲು ಹೆಚ್ಚೆಚ್ಚು ಕಠಿಣತರ ಕಠಿಣತಮ ಆಗಿದ್ದವು!

ಯರವಡಾ ಕ್ಯಾಂಪ ಜೇಲಿನ ಬರಾಕಿಗೆ ಬೆಂಕಿ!

ಹಿಂಡಲಗಿಯ ಮಧ್ಯವರ್ತಿ ಕಾರಾಗೃಹವು ತುಂಬಿ ತುಳುಕಿದ್ದರಿಂದ ಬೆಳಗಾವಿಯ ಕಿಲ್ಲೆಯಲ್ಲಿ ತಾತ್ಪೂರ್ತಿಕ ಸೆರೆಮನೆ ತೆರೆಯಲಾಯಿತು. ಅದೂ ತುಂಬಿದ್ದರಿಂದ ಪೋಲೀಸ ಹೆಡ್‌ಕ್ವಾರ್ಟರದ ಹಳೇ ಜೇಲಿನಲ್ಲಿ ಕೆಲವರನ್ನು ಇಡಲಾಯಿತು. ಆದರೆ ಬಂಧನ ಸತ್ರವು ಮಿತಿಮೀರಿದ್ದರಿಂದ ಇವಾವ ಸೆರೆಮನೆಗಳೂ ಸಾಕಾಗದ್ದರಿಂದ ನಮ್ಮ ಜಿಲ್ಲೆಯ ಎಷ್ಟೋ ರಾಜ ಬಂದಿಗಳನ್ನು ಯರವಡಾ ಕ್ಯಾಂಪಜೇಲ ಹಾಗು

ವಿಸಾಪೂರ ಜೇಲಿಗೆ ಕಳಿಸಲಾಯಿತು. ಯರವಡಾ ಸೆಂಟ್ರಲ ಜೇಲು ಸಹ ತಂಬಿದ್ದರಿಂದ ಆದರ ಹೊರವಲಯದಲ್ಲಿ ಮುಳ್ಳು ತಂತಿಯ ಬೇಲಿಯಿಂದ ಸುತ್ತುವರೆದ ತಂಬುಗಳಿಂದ ಯರವಡಾ ಕ್ಯಾಂಪಜೇಲ ನಿರ್ಮಿಸಲಾಗಿತ್ತು. ಒಂದಕ್ಕೊಂದು ಹೊಂದಿದ ಮೂರು ನಾಲ್ಕು ದೊಡ್ಡ ಡೇರೆಗಳುಳ್ಳ ಒಂದು ಬರಾಕಿನಂತೆ ಏಳು ಬರಾಕುಗಳು ಈ ಜೇಲಿನಲ್ಲಿ ಇದ್ದವು. ಒಂದು ಬರಾಕಿನಲ್ಲಿ ೮೦ ರಿಂದ ೯೦ ರ ವರೆಗೆ ಕೈದಿಗಳನ್ನು ಹಾಕುತ್ತಿದ್ದರು. ಒಂದು ಬರಾಕಿನಲ್ಲಿ ಶಿಕ್ಷೆ ಆದ ರಾಜಕೀಯ ಕೈದಿಗಳಿದ್ದು ಉಳಿದವುಗಳಲ್ಲಿ ಸ್ಥಾನಬದ್ಧ ಕೈದಿಗಳಿದ್ದರು. ಇವರಲ್ಲಿ ಆಗಿನ ಮುಂಬಯಿ ರಾಜ್ಯದ ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾತ ಈ ಮೂರೂ ಭಾಗದ ಹೋರಾಟಗಾರರಿದ್ದರು. ಕರ್ನಾಟಕದವರಲ್ಲಿ ಬೆಳಗಾವ ಧಾರವಾಡ ಜಿಲ್ಲೆಯವರೇ ಹೆಚ್ಚಿಗಿದ್ದು ಕಾರವಾರ ಜಿಲ್ಲೆಯವರೂ ಕೆಲವರಿದ್ದರು. ೧೯೪೨ ರ ಆಕ್ಟೋಬರದಲ್ಲಿ ಹಿಂಡಲಗಿ ಜೇಲಿನಿಂದ ಈ ಯರವಡಾ ಕ್ಯಾಂಪ ಜೇಲಿಗೆ ಬಹಳ ಜನ ರಾಜಕೀಯ ಕೈದಿಗಳನ್ನು ಪಾರ್ಟಿ ಹಾಕಲಾಯಿತು. ಅವರಲ್ಲಿಯ ಶ್ರೀ. ದಯಾನಂದ ಅರಳೀಕಟ್ಟಿ, ಶಂಕರರಾವ ಗಾವಡೆ (ಶಹಾಪೂರ), ನಂದಗಡದ ಭಿಕಾಜಿ ಪುನಗೆ ಮತ್ತು ಬಸಯ್ಯಾ ವೈಜನಾಥಮಠ ಇವರು ಒಂದು ದಿನ ರಾತ್ರಿ ೧೧ ಗಂಟೆಗೆ ಜೇಲಿನ ತಂತೀ ಬೇಲಿಯೊಳಗಿಂದ ಪಾರಾಗಿ ಓಡಿ ಹೋದರು. ಆದರೆ ಪುಣೆಯಲ್ಲಿ ಅವರಿಗೆ ಯಾರೂ ಆಶ್ರಯ ಕೊಡದ್ದರಿಂದ ಹಾಗು ಅಲ್ಲಿಯ ಭೂಗತ ಕಾರ್ಯಕರ್ತರ ಸಂಪರ್ಕ ಸಾಧಿಸಲು ಸಾಧ್ಯವಾಗದ್ದರಿಂದ ಮೂರನೇ ದಿನ ಅವರು ಮರಳಿ ಜೇಲಿಗೇ ಬಂದರು. ಜೇಲ ಪೋಲೀಸರು ಅವರನ್ನು ಹೆಣಬೀಳ ಹೊಡೆದರು.

ಯರವಡಾ ಕ್ಯಾಂಪ ಜೇಲಿನಲ್ಲಿದ್ದ ರಾಜಬಂದಿಗಳು ತಮ್ಮ ತಮ್ಮ ಬರಾಕಿಗೆ ಒಬ್ಬ ಧುರೀಣನನ್ನು ಆಯ್ಕೆ ಮಾಡುತ್ತಿದ್ದರು. ಅದರಂತೆ ಇಡೀ ಜೇಲಿಗೂ ಒಬ್ಬ ಧುರೀಣನನ್ನು ಆಯ್ಕೆ ಮಾಡುತ್ತಿದ್ದರು. ಬರಾಕ-ಧುರೀಣರೂ ಜೇಲ-ಧುರೀಣರೂ ಕೂಡಿ ಒಂದು ಕಮೀಟಿಯಂತೆ ಕೆಲಸ ಮಾಡುತ್ತಿದ್ದರು. ನಮ್ಮ ಜಿಲ್ಲೆಯಿಂದ ಈ ಜೇಲಿಗೆ ಹೋದ ಇನ್ನೊಂದು ಪಾರ್ಟಿಯಲ್ಲಿದ್ದ ಶ್ರೀ. ಜಯದೇವ ಕುಲಕರ್ಣಿ ಮತ್ತು ಅಪ್ಪಣ್ಣಗೌಡ ಪಾಟೀಲ ಇವರೂ ಈ ಕಮೀಟೀಯಲ್ಲಿದ್ದರು. ರಾಜಬಂದಿಗಳ ಕುಂದುಕೊರತೆಗಳನ್ನೂ ಬೇಡಿಕೆಗಳನ್ನೂ ಜೇಲಧಿಕಾರಿಗಳಿಗೆ ತಿಳಿಸಿ ಅವುಗಳ ನಿವಾರಣೆ ಮಾಡಿಕೊಳ್ಳುವದು ಈ ಕಮೀಟಿಯ ಕೆಲಸವಾಗಿತ್ತು. ಡಾ. ಅನ್ಸಾರಿ ಅವರ ಸೋದರಳಿಯ ಶ್ರೀ. ಅಬ್ದಾಸಿ ಅವರು ಮೊದಲು ಈ ಕ್ಯಾಂಪ ಜೇಲಿನ ಧುರೀಣರಾಗಿದ್ದರು. ಅವರನ್ನು ಬೇರೆ ಜೇಲಿಗೆ ಸ್ಥಳಾಂತರಿಸಿದ ನಂತರ ಸೊಲ್ಲಾಪೂರ ಜಿಲ್ಲೆಯ ಬಾರ್ಶಿಯವರಾದ ಶ್ರೀ. ಶಿವಾಜಿರಾವ ಆರ್ಯ ಅವರನ್ನು ಜೇಲ ಧುರೀಣರೆಂದು ಆರಿಸಲಾಗಿತ್ತು. ಅವರನ್ನೂ ಸ್ಥಳಾಂತರಿಸಿದಾಗ ಪುಣೆಯ ಶ್ರೀ. ಅಠವಲೆ ಎಂಬವರನ್ನು ಧುರೀಣರಾಗಿಯೂ ಶ್ರೀ. ಜಯದೇವ ಕುಲಕರ್ಣಿಯವರನ್ನು ಉಪಧುರೀಣರಾಗಿಯೂ ಆಯ್ಕೆ ಮಾಡಲಾಯಿತು. ನಾಶಿಕದ ಶ್ರೀ. ಬಿಡಕರ ಅವರು ಶಿಕ್ಷೆ ಆದವರ ಬರಾಕಿನ ಧುರೀಣರಾಗಿದ್ದರು.

ಡಾ. ಅಂಜಾರಿಯಾ ಎಂಬವರು ಈ ಕ್ಯಾಂಪ ಜೇಲಿನ ಸುಪರಿಂಟೆಂಡೆಂಟರಿದ್ದರು. ಅಪರೊಳ್ಳೇ ರಾಜನಿಷ್ಠರು. ೧೯೩೨ ರಲ್ಲಿ ಅವರು ಹಿಂಡಲಗಿ ಜೇಲಿನಲ್ಲಿ ಇದ್ದಾಗ ರೋಗಿಗಳನ್ನು ಕೈಯಲ್ಲಿಯ ಬೆತ್ತದಿಂದ ಪರೀಕ್ಷಿಸುತ್ತಿದ್ದರು. ಆಗ ಈ ಜೇಲಿನಲ್ಲಿದ್ದ ಶ್ರೀ. ಜಯದೇವ ಕುಲಕರ್ಣಿಯವರು ಅದರ ಬಗ್ಗೆ ಡಾಕ್ಟರ ಮಹಾಶಯರಗೂಡ ವಾಗ್ವಾದ ಮಾಡಿದ್ದರು. ಆದುದರಿಂದ ಡಾ. ಅಂಜಾರಿಯಾ ಅವರು ಅವರನ್ನು ಮರೆ ತಿದ್ದಿಲ್ಲ. ಕರ್ನಾಟಕದ ರಾಜಬಂದಿಗಳ ವಿಷಯದಲ್ಲಿ ಆಗಾಗ ಅವರಗೂಡ ಮಾತಾಡು ತ್ತಿದ್ದರು. ಬೇನೆಯಿಂದ ಬಳಲುತ್ತಿರುವ ಹಾಗು ಅಶಕ್ತರಾಗಿದ್ದ ರಾಜಬಂದಿಗಳು ಹಾಲು ಕೊಡಲು ಕೇಳಿಕೊಂಡರೆ ಡಾ. ಅಂಜಾರಿಯಾ ಅವರು– "ಹಾಲು ಕೊಡಲು ಏನೂ ಅಭ್ಯಂತರವಿಲ್ಲ; ಆದರೆ ಹಾಲಿನಗೂಡ ಸಕ್ಕರೆ ಕೊಡಬೇಕಾಗುತ್ತದೆ; ಸಕ್ಕರೆಯ ರೇಶನ್ ಇದ್ದುದು ನಿಮಗೆ ಗೊತ್ತೇ ಇದೆ, ಅದು ಸಿಗುವದು ಕಷ್ಟ, ಆದುದರಿಂದ ಹಾಲು ಕೊಡು ವದು ಸಾಧ್ಯವಿಲ್ಲ" ಎಂದು ಹೇಳಿ ದೇಶಕ್ಕಾಗಿ ಬಂಧನದಲ್ಲಿ ಬಿದ್ದವರನ್ನು ಕಷ್ಟಕ್ಕೀಡು ಮಾಡಿ ಬ್ರಿಟಿಶ ಸರಕಾರದ ಹಣ ಉಳಿಸುತ್ತಿದ್ದರು !

ಈ ಕ್ಯಾಂಪ ಜೇಲಿನಲ್ಲಿ ಸಂಕೇಶ್ವರದ ಶ್ರೀ. ಎಮ್. ಎಸ್. ಕುಲಕರ್ಣಿ ಮಾಸ್ತರರು (ಗುಂಡೋ ನಾರಾಯಣ ದೇಶಪಾಂಡೆ ಎಂಬ ಹೆಸರಿಸಿಂದ ಕಾರಾವಾಸ ಭೋಗಿ ಸುತ್ತಿದ್ದವರು) ಗೀತಾಭ್ಯಾಸ ವರ್ಗವನ್ನೂ, ಕಾರವಾರದ ಶ್ರೀ. ಹೊದಕೆ ಮಾಸ್ತರರು ಹಿಂದೀ ವರ್ಗವನ್ನೂ ಪುಣೆಯ ಶ್ರೀ. ತುಂಗಾರ ಮಾಸ್ತರರು ಉರ್ದು ಶಿಕ್ಷಣ ವರ್ಗ ವನ್ನೂ ಶ್ರೀ. ಜಯದೇವ ಕುಲಕರ್ಣಿ ಹಾಗು ಪುಣೆಯ ಬುದ್ಧಿಸಾಗರ ಮಾಸ್ತರರು ಗಾಂಧಿವಾದ, ಸಮಾಜವಾದ, ಸಾಮ್ಯವಾದ ಇತ್ಯಾದಿಗಳ ಅಭ್ಯಾಸ ಮಂಡಳವನ್ನೂ ನಡೆಸುತ್ತಿದ್ದರು. ಅರಳಿ ಹಿಂಜಿ ಹಂಜಿ ಮಾಡುವದನ್ನು ಹಾಗು ನೂಲು ವದನ್ನು ಕಲಿಸಲಾಗುತ್ತಿತ್ತಲ್ಲದೆ ಕೆಲವರು ನಿಯಮಿತವಾಗಿ ನೂಲುತ್ತಿದ್ದರು.

೧೯೪೩ ರ ನವೆಂಬರ ತಿಂಗಳ ಮೊದಲನೇ ವಾರದಲ್ಲಿ ಒಂದು ರಾತ್ರಿ ಯರವಡಾ ಕ್ಯಾಂಪ ಜೇಲಿನ ಒಂದು ಬರಾಕಿಗೆ ಆಕಸ್ಮಿಕವಾಗಿ ಬೆಂಕಿ ಹತ್ತಿ ಅದು ಸುಟ್ಟು ಬೂದಿ ಆಯಿತು. ಆದೇ ಬರಾಕಿನಲ್ಲಿದ್ದ ಜಯದೇವ ಕುಲಕರ್ಣಿಯವರು ಅಂದು ಮಧ್ಯಾಹ್ನ ಅಶಕ್ತತೆಯ ಮೂಲಕ ಜೋಲು ಹೋಗಿ ಬಿದ್ದು ಮೂರ್ಛಿತರಾಗಿದ್ದರಿಂದ ಅವರನ್ನು ಆಸ್ಪತ್ರೆಯ ಬರಾಕಿಗೆ ಸಾಗಿಸಲಾಗಿತ್ತು ಮತ್ತು ಆ ಬರಾಕಿನಲ್ಲಿದ್ದವರೆಲ್ಲ ಅವರ ಹತ್ತ ರವೇ ಇರುವೆವೆಂದು ಆಸ್ಪತ್ರೆಯ ಬರಾಕಿಗೇ ಬಂದು ಬಿಟ್ಟಿದ್ದರು. ಕೆಲವರು ಈ ಸಂಧಿ ಸಾಧಿಸಿ ತಮ್ಮ ತಮ್ಮ ಸ್ನೇಹಿತರಗೂಡ ಇರಲು ಅನ್ಯ ಬರಾಕುಗಳಿಗೂ ಹೋಗಿದ್ದರು. ಹೀಗಾಗಿ ಈ ಅಗ್ನಿ ಪ್ರಕೋಪದಿಂದ ಯಾರಿಗೂ ಅಪಾಯ ಸಂಭವಿಸಲಿಲ್ಲ. ಈ ಘಟನೆ ಆಕಸ್ಮಿಕವಾಗಿದ್ದು ವಿದ್ಯುತ್ತಿನ ಶಾರ್ಟಸರ್ಕೀಟಿನಿಂದ ಬೆಂಕಿ ಹತ್ತಿತ್ತು. ಆದರೆ ವಿಧ್ವಂಸನ ಕಾರ್ಯದಲ್ಲಿ ಹೆಸರುಗಳಿಸಿದ ಬೆಳಗಾವಿ ಜಿಲ್ಲೆಯವರೇ ಪೂರ್ವಯೋಜನೆ ಮಾಡಿ ಬರಾಕ ಸುಟ್ಟರೆಂದು ಸುಪರಿಟೆಂಡೆಂಟ ಡಾ. ಅಂಜಾರಿಯಾ ಅವರ ಗ್ರಹಿಕೆ ಆಯಿತು ಅವರು ಹಾಗೆ ಜಯದೇವ ಕುಲಕರ್ಣಿಯವರ ಮುಂದೆ ಆಡಿ ತೋರಿಸಿದರು. ಕೈದಿ

ಗಳನ್ನು ಬೇರೆಡೆ ಸ್ಥಳಾಂತರಿಸಿ ಕ್ಯಾಂಪ ಜೇಲನ್ನು ಕೂಡಲೆ ಮುಚ್ಚಿ ಬಿಡಬೇಕೆಂದು ಅವರು ಮೇಲಧಿಕಾರಿಗಳಿಗೆ ತಿಳಿಸಿದರು. ಅದರಂತೆ ಆ ಜೇಲು ಬಂದು ಮಾಡಿ ಶಿಕ್ಷೆ ಆದವರನ್ನು ಯರವಡಾ ಮಧ್ಯವರ್ತಿ ಸೆರೆಮನೆಗೆ ಸೇರಿಸಿ ಸ್ಥಾನಬದ್ಧರನ್ನು ವಿಸಾಪೂರ ಜೇಲಿಗೆ ಕಳಿಸಿದರು.

ವಿಸಾಪೂರ ಜೇಲಿನಲ್ಲಿ ಸ್ಥಾಯತ್ತತೆ.

ವಿಸಾಪೂರ ಜೇಲಿಗೆ ಬರುತ್ತಲೆ ಜೇಲರ ಶ್ರೀ. ನಿಕೋಲಸ್ ಅವರು ಜಯದೇವ ಕುಲಕರ್ಣಿಯವರನ್ನು ಕರೆದು ಹೇಳಿದರು—" ಜೇಲಿನ ಆಂತರಿಕ ವ್ಯವಸ್ಥೆಯನ್ನೆಲ್ಲ ನಿಮ್ಮ ಜನಕ್ಕೇ ಒಪ್ಪಿಸುತ್ತೇವೆ. ನಮಗೇನೂ ತೊಂದರೆ ಮಾಡದೆ ಜೇಲಿನ ಖರ್ಚಿಗೆ ಮಂಜೂರಾದ ಹಣದಲ್ಲಿ ನೀವು ನಿಮಗೆ ಬೇಕಾದುದನ್ನು ಮಾಡಿ ತಿನ್ನಬಹುದು. ಜೇಲಿನ ನಿತ್ಯದ ವ್ಯವಹಾರವನ್ನು ನೀವೇ ಸುಸೂತ್ರವಾಗಿ ಸಾಗಿಸಿಕೊಂಡು ಹೋಗಬೇಕು. " ನಮ್ಮ ಜನರ ಕೀರ್ತಿ ಜೇಲಧಿಕಾರಿಗಳ ಕಿವಿಗೆ ಮುಟ್ಟಿದ್ದರಿಂದ ಏನೂ ಗೊಂದಲವಾಗದೆ ಜೇಲು ನಡೆದರೆ ಸಾಕು ಎಂಬ ಉದ್ದೇಶದಿಂದ ಅವರು ಹೀಗೆ ಹೇಳಿದರು. ಅಲ್ಲದೆ ಶ್ರೀ. ನಿಕೋಲಸರು ಚಳುವಳಿಗೆ ಸಹಾನುಭೂತಿವುಳ್ಳವರಾಗಿದ್ದರೆಂಬುದೂ ಆದಕ್ಕೆ ಕಾರಣವಾಗಿತ್ತು. ಕ್ಯಾಪ್ಟನ್ ಡಾ. ನೂಲಕರ ಎಂಬವರು ಈ ಜೇಲಿಗೆ ಸುಪರಿಂಟಿಂಡೆಂಟರಾಗಿದ್ದರು. ಅವರು ಮಿಲಟರಿಯವರಿದ್ದುದರಿಂದ ಜೇಲಿನ ಆಡಳಿತವನ್ನು ಒಳ್ಳೇ ಕಠೋರ ಶಿಸ್ತಿನಿಂದ ನಡೆಸಬೇಕೆಂದು ಹವಣಿಸಿ ರಾಜಬಂದಿಗಳಿಗೆ ತೊಂದರೆ ಕೊಡಲು ಯತ್ನಿಸಿದ್ದರು. ಆಗ ಒಂದು ದಿನ ಎಲ್ಲ ರಾಜಬಂದಿಗಳು ಹರತಾಳವನ್ನಾಚರಿಸಿ ಜಯಜಯಕಾರ ಮಾಡಿ ಗೊಂದಲ ಎಬ್ಬಿಸಿದ್ದರು. ಜೇಲರ ಶ್ರೀ. ನಿಕೋಲಸ್ ಅವರು ಮಧ್ಯೆ ಪ್ರವೇಶಿಸಿ ಅವರನ್ನು ಶಾಂತ ಮಾಡಿ ಸಾಮೋಪಚಾರದಿಂದ ಪ್ರಕರಣವನ್ನು ಬಗೆಹರಿಸಿದ್ದರು. ಈ ಗೊಂದಲದಲ್ಲಿ ಆಗ ಆ ಜೇಲಿನಲ್ಲಿದ್ದ ಬೆಳಗಾವಿಯ ಶ್ರೀ. ಆರ್. ಎಚ್. ಕುಲಕರ್ಣಿ, ಶಂಕರ ಢಂಗ, (ಬೇನಾಡಿಕರ), ನಾನಾ ತೆಂಡೋಲಕರ, ಸದಾನಂದ ಕೊಪ್ಪಳ, ಚಂದಾ ಪೈ ಮೊದಲಾದವರು ಪ್ರಮುಖ ಪಾತ್ರ ವಹಿಸಿದ್ದರು. ಗೊಂದಲ ಬಗೆಹರಿದನಂತರ ಅವರನ್ನೆಲ್ಲ ಅಲ್ಲಿಂದ ಬೆಳಗಾವಿ ಜೇಲಿಗೆ ಸ್ಥಳಾಂತರಿಸಿದ್ದರು. ಡಾ. ನೂಲಕರರು ಜೇಲಿನ ಆಡಳಿತವನ್ನೆಲ್ಲ ಜೇಲರ ಶ್ರೀ. ನಿಕೋಲಸ್ ಅವರಿಗೆ ಬಿಟ್ಟು ಕೊಟ್ಟಿದ್ದರು. ಪರಿಸ್ಥಿತಿ ಹೀಗಿರುವಾಗ ಶ್ರೀ. ಜಯದೇವ ಕುಲಕರ್ಣಿ, ಅಪ್ಪಣ್ಣಗೌಡಾ ಪಾಟೀಲ ಮೊದಲಾದವರನ್ನೊಳಗೊಂಡ ಈ ಪಾರ್ಟಿ ಅಲ್ಲಿಗೆ ಬಂದಿತ್ತು.

ಮರುದಿನ ಜೇಲ ಧುರೀಣರ ಆಯ್ಕೆ ನಡೆದು ಶ್ರೀ. ಜಯದೇವ ಕುಲಕರ್ಣಿಯವರು ಬಹುಮತದಿಂದ ಆರಿಸಿ ಬಿಂದರು. ಯರವಡಾ ಕ್ಯಾಂಪ ಜೇಲಿನಲ್ಲಿ ಧುರೀಣರಾಗಿದ್ದ ಶ್ರೀ. ಆಠವಲೆಯವರು ಸ್ಪರ್ಧಿಸಿ ಸೋತರು. ಶ್ರೀ, ಅಪ್ಪಣ್ಣಗೌಡಾ ಪಾಟೀಲರಿಗೆ ಜೇಲಿನ ಅಡಿಗೆ ಮನೆಯ ವ್ಯವಸ್ಥೆ ಒಪ್ಪಿಸಲಾಯಿತು. ಗುಜರಾತದ ಶ್ರೀ. ಮಣಿ ಭಾಯಿ ಪಟೀಲರನ್ನು (ಇವರಿಗೆ ಶಿಕ್ಷೆ ಆಗಿತ್ತು). ಅವರ ಸಹಾಯಕ್ಕೆ ಕೊಡಲಾಯಿತು. ಸಾಸವಡದ ಶ್ರೀ. ಲ. ಬ. ಕುಲಕರ್ಣಿ ಗುರೂಜಿಯವರಿಗೆ ಜೇಲ ಆಸ್ಪತ್ರೆಯ ಹೊಣೆ ಒಪ್ಪಿಸಿ ತಮಗೆ ಬೇಕಾದವರನ್ನು ಸಹಾಯಕ್ಕೆ ತಕ್ಕೊಂಡು ಅವರು ರುಗ್ಣ ಕೈದಿಗಳ ಸುಶ್ರೂಷೆ ಮಾಡಬೇಕೆಂದು ಗೊತ್ತುಮಾಡಲಾಯಿತು. ಜೇಲ ಡಾಕ್ಟರರು ಶ್ರೀ. ಜಯದೇವ ಕುಲಕರ್ಣಿಯವರ ಸಲಹೆ ಪಡೆದು ಔಷಧೋಪಚಾರದ ವ್ಯವಸ್ಥೆ ಮಾಡಹತ್ತಿದರು. ಪಾಚ್ಗಾಪೂರದ ಶ್ರೀ. ಪುರುಷೋತ್ತಮ ಘಾಳಿ ಹಾಗು ಮಿರ್ಜಿ ಅವರಿಗೆ ಹಾಲು ಹಂಚುವ ಕೆಲಸ ಕೊಡಲಾಯಿತು. ರಾಜಬಂದಿಗಳ ಪತ್ರಗಳ ಸೆನ್ಸಾರ ಮತ್ತು ಬಟವಡೆಯನ್ನು ಸಹ ಶ್ರೀ, ಜಯದೇವ ಕುಲಕರ್ಣಿಯವರಿಗೇ ಬಿಟ್ಟು ಕೊಟ್ಟಿದ್ದರು.

ಶ್ರೀ. ಅಪ್ಪಣ್ಣಗೌಡರು ದಿನಾಲು ಜೇಲಿನ ಮೋಟಿರ ವ್ಯಾನಿನಲ್ಲಿ ಅಹಮದನಗರಕ್ಕೆ ಹೋಗಿ ಪಲ್ಲೆಕಾಯಿ, ಕಾಳುಕಡಿ, ಉಪ್ಪು ಎಣ್ಣೆ ಇತ್ಯಾದಿ ಎಲ್ಲ ಸಾಮಾನವನ್ನು ತರುತ್ತಿದ್ದರು. ಅಂತೂ ವಿಸಾಪೂರ ಜೇಲಿನ ಎಲ್ಲ ಒಳಾಡಳಿತವು ಈ ಗೌಡ–ಕುಲಕರ್ಣಿಯವರ ಕೈಯಲ್ಲಿಯೇ ಇದ್ದಿತು. ಇದರಿಂದ ಮಲೇರಿಯಾ, ಪ್ರವಾಹಿಕಾ (ಡಿಸೆಂಟ್ರಿ) ರೋಗಗಳಿಗೆ ಪ್ರಸಿದ್ಧವಾದ ವಿಸಾಪೂರ ಜೇಲಿನ ಸ್ಥಿತಿ ಸುಧಾರಿಸಿತು. ಬೇನೆಗಳು ಕಡಿಮೆ ಆದವು. ರಾಜಬಂದಿಗಳು ನೆಮ್ಮದಿಯಿಂದ ಇರಲು ಸಾಧ್ಯವಾಯಿತು. ಶ್ರೀ. ಅಪ್ಪಣ್ಣಗೌಡರ ಬಿಡುಗಡೆ ಆದನಂತರ ಅವರು ಒಂದು ದಿನ ಅಲ್ಲಿಯೇ ಉಳಿದು ಜೇಲಧಿಕಾರಿಗಳಿಗೆ ಲೆಕ್ಕ ಒಪ್ಪಿಸಿ ಬರಬೇಕಾಯಿತು.

ವಿಸಾಪೂರ ಜೇಲಿನಲ್ಲಿ ಆಂಧ್ರದ ಶ್ರೀ ಆಯ್ಯರ, ಬಿಹಾರದ ಶ್ರೀ ಶೀಲಭದ್ರ ಯಾಜಿ, ಮುಂಬಯಿಯ ಸಮಾಜವಾದಿ ಧುರೀಣ ಶ್ರೀ ಅಲ್ವಾರಿಸ್, ಗುಜರಾತಿ ಸಾಹಿತಿ ಶ್ರೀ ಜಯಂತಿಲಾಲ ದಲಾಲ ಮೊದಲಾದವರಿದ್ದರು. ಸಿಂಧ ಪ್ರಾಂತದಲ್ಲಿ ಬಂಡಾಯ ಹೂಡಿದ ಹೂರ ಜನರನ್ನೂ ಈ ಜೇಲಿನಲ್ಲಿ ಒಂದೆಡೆ ತುದಿಟ್ಟಿದ್ದರು. ಅವರಲ್ಲಿ ಇಬ್ಬರು ಸ್ಥಾನಬದ್ಧರ ಸರ್ಕಲದಲ್ಲಿ ದಿನಾಲು ಕೆಲಸಕ್ಕೆ ಬರುತ್ತಿದ್ದರು. ಒಂದು ದಿನ ಸ್ಥಾನಬದ್ಧರಿಗೆ ಹಾಲು ಹಂಚುತ್ತಿದ್ದ ಶ್ರೀ ಘಾಳಿ ಹಾಗು ಮಿರ್ಜಿಯವರಿಗೂಡ ಆ ಹೂರರು ಕಾಲ್‌ಕೆದರಿ ಜಿಗಳ ತೆಗೆದರು. ಆಗ ಕೈಗೆ ಕೈ ಹತ್ತಿ ಕೆಲ ಸ್ಥಾನಬದ್ಧ ರಾಜಬಂದಿಗಳು ಘಾಳಿ–ಮಿರ್ಜಿಯವರ ನೆರವಿಗೆ ಬಂದು ಆ ಹೂರರನ್ನು ಅಲ್ಲಿಯೇ ಇದ್ದ ಇಟ್ಟಿಗೆಯಿಂದ ಒಳಿತಾಗಿ ಜಜ್ಜಿದರು. ಸಿಟಿ ಗಂಟಿ ಆಗಿ ಜೇಲ ಪೋಲೀಸರೂ

ಜಯದೇವ ಕುಲಕರ್ಣಿಯವರೂ ಧಾವಿಸಿಬಂದು ಜಗಳ ಬಿಡಿಸಿ ಎಲ್ಲರನ್ನು ಅವರವರ ಬರಾಕಿನಲ್ಲಿ ಹಾಕಿ ಶಾಂತತಾ ಸ್ಥಾಪಿಸಿದರು. ಅಂದಿನಿಂದ ಹೊರರು ನಮ್ಮ ರಾಜಬಂದಿ ಗಳ ಗೋಜಿಗೆ ಹೋಗಲಿಲ್ಲ,

ವಿಸಾಪೂರ ಜೇಲಿನಲ್ಲಿಯೂ ಅಭ್ಯಾಸ ಮಂಡಳ, ಹಿಂದಿವರ್ಗ, ನೂಲುವದು ಇತ್ಯಾದಿ ಚಟುವಟಿಕೆಗಳು ನಡೆಯುತ್ತಿದ್ದವು. ಆದರೆ ಬಹಳಷ್ಟು ರಾಜಬಂದಿಗಳು ಅವುಗಳಿಂದ ಅಲಿಪ್ತರಾಗಿಯೇ ಉಳಿಯುತ್ತಿದ್ದರು.

ರಾಜ ಬಂದಿಗಳಿಗೆ ಸಹಾನುಭೂತಿ ತೋರಿಸಿದ್ದಕ್ಕಾಗಿ ಬ್ರಿಟಿಶ ಆಡಳಿತದಲ್ಲಿ ಶ್ರೀ ನಿಕೋಲಸ ಜೇಲರರಿಗೆ ಯೋಗ್ಯ ಬಡತಿ ಸಿಗಲಿಲ್ಲ. ಮುಂದೆ ಕಾಂಗ್ರೆಸ ಮಂತ್ರಿ ಮಂಡಳ ಬಂದನಂತರ ಅವರಿಗೆ ತಕ್ಕ ಬಡತಿ ಕೊಡಬೇಕೆಂದು ಶ್ರೀ ಅಪ್ಪಣ್ಣಗೌಡರು ಪ್ರಯತ್ನಿಸಿದರು. " ನಿಮಗೆ ಅವರು ಜೇಲಿನಲ್ಲಿ ಸವಲತ್ತು ಕೊಟ್ಟಿದ್ದರೆಂದು ನೀವು ಅವರಬಗ್ಗೆ ಹೇಳಲು ಬಂದಿದ್ದೀರಿ, ಅದೇನೂ ಆಗದು " ಎಂದು ಅವರಿಗೆ ಕಾಂಗ್ರೆಸ ಮಂತ್ರಿಗಳಿಂದ ಉತ್ತರ ದೊರೆಯಿತು. ಸ್ವರಾಜ್ಯದ ಲಾಭ ಮಂತ್ರಿಗಳಿಗೆ ಸಿಕ್ಕಿತು. ಬ್ರಿಟಿಶ ಸರಕಾರದ ಬಾಲಬಡೆಯುವವರಿಗೆ ಸಿಕ್ಕಿತು. ದುರ್ಜನ ಪೋಲೀಸ ಅಧಿಕಾರಿ ಗಳಿಗೆ ಸಿಕ್ಕಿತು. ಕಷ್ಟ ಸೋಸಿದವರು ಕಾರ್ಪಣ್ಯಕ್ಕೀಡಾದರು ! ಅವರಿಗೆ ಸಹಾನು ಭೂತಿ ತೋರಿಸಿದ ಅಧಿಕಾರಿಗಳು ಪಶ್ಚಾತ್ತಾಪ ಪಟ್ಟರು !

ಹಿಂಡಲಗಾ ಜೇಲಿನಲ್ಲಿ ಕಾಲರಾ !

ಹಿಂಡಲಗಾ ಜೇಲಿನಲ್ಲಿ ಹೆಚ್ಚಿಗೆ ಹೆಚ್ಚಿಂದರೆ ೯೦೦ ರಿಂದ ೧೦೦೦ ಕೈದಿಗಳನ್ನು ಇಡಲು ಸ್ಥಳವು ಹಾಗು ಅನುಕೂಲತೆಗಳು ಇವೆ. ಆದರೆ ೧೯೪೨ ರ ಆಂದೋಲನ ದಲ್ಲಿ ಪೋಲೀಸರು ಸಂಶಯದಿಂದ ಸಿಕ್ಕವರನ್ನು ಸಿಕ್ಕಾಪಟ್ಟೆ ಬಂಧಿಸಿದರಲ್ಲದೆ ಅವರ ಸಂಬಂಧಿಕರನ್ನು ಎಳೆದುತಂದು ಜೇಲಿಗೆ ಸೇರಿಸಿದರು. ಜೇಲಿನಲ್ಲಿ ಕೈದಿಗಳ ಸಂಖ್ಯೆ ದಿನ ದಿನಕ್ಕೆ ಬೆಳೆದು ಡಿಸೆಂಬರ ೧ ಕ್ಕೆ ಅದು ೨೩೦೦ ಕ್ಕೆ ಏರಿತು. ಡಿಸೆಂಬರ ೧೦ ಕ್ಕೆ ಕೈದಿಗಳ ಸಂಖ್ಯೆ ೨೬೦೦ ಇದ್ದಿತು. ಜೇಲಿನ ವ್ಯವಸ್ಥೆಗಾಗಿ ಇದ್ದ ಸಿಬ್ಬಂದಿಯ ಸಂಖ್ಯೆ ಏರಿಸಲು ಸರಕಾರ ಸಿದ್ದವಿರಲಿಲ್ಲ. ಇದ್ದ ನವಕರರಿಂದ ಕೆಲಸ ಸಾಗಿಸುದು, ಸ್ವಚ್ಛತೆ ಹಾಗು ಆರೋಗ್ಯ ಕಾಪಾಡುವದು ಅಶಕ್ಯವಾಯಿತು. ಆಹಾರದಲ್ಲಿ ಏನೂ ಸತ್ವ ಇರಲಿಲ್ಲ. ರೊಟ್ಟಿಯಲ್ಲಿ ಉಸುಬು ಮತ್ತು ಧೂಳಿಕಣಗಳ ಅಂಶ ಬೆಳೆಯಿತು. ಸಂಜೆಗೆ ಕೊಡುವ ಹಸರಾಣಿ ಪಲ್ಲೆಯಲ್ಲಿ ಒಳ್ಳೆ ಪಲ್ಲೆಯ ತುಣುಕು ತೊಪ್ಪಲಕೂಡ ಇರಲಿಲ್ಲ.

ಬಹಳ ಉತ್ತಮ ಪಲ್ಲೆಯೆಂದರೆ ಗೋಳಿ ತೊಪ್ಪಲ, ಪಪ್ಪಯಿಕಾಯಿ ಹಾಗು ಅದರ ತೊಪ್ಪಲ. ಈ ಪಲ್ಲೆಯಲ್ಲಿ ಮಳೆಯ ಹುಳ ಜಟ್ಟಿ ಮುಂತಾದವು ಸಾಕಷ್ಟು ಇರುತ್ತಿದ್ದವು. ಮಧ್ಯಾನ್ಹ ಕೊಡುವ ಬೇಳೆಯಲ್ಲಿಯೂ ಹುಳಹುಪ್ಪಡಿ ಇರುತ್ತಿದ್ದವು. ಕುಡಿಯುವ ನೀರಿನ ಕೊರತೆಯೂ ಉಂಟಾಯಿತು. ಕಕ್ಕಸಗಳು ಯಾವಾಗಲೂ ತುಂಬಿಕೊಂಡೇ ಇರುತ್ತಿದ್ದುದರಿಂದ ದುರ್ಗಂಧ ಹರಡಿ ಜೀಲಜೀವನ ಅಸಹ್ಯವಾಯಿತು.

ಒಂದು ಸೆಪರೇಟ ಕೋಣೆಯಲ್ಲಿ ೧ ರಿಂದ ೩ ಜನರನ್ನು ಇಡುವಷ್ಟು ಜಾಗೆ ಇತ್ತು. ಆದರೆ ಆದರಲ್ಲಿ ೭ ರಿಂದ ೯ ರ ವರೆಗೆ ಕೈದಿಗಳನ್ನು ಹಾಕಿದ್ದರು. ರಾತ್ರಿಯಲ್ಲಿ ಮೂತ್ರ ವಿಸರ್ಜನೆ ಮಾಡಬೇಕಾದರೆ ಆ ಕೋಣೆಯ ಒಂದು ಮೂಲೆಯಲ್ಲಿಟ್ಟ ಒಂದು ಬಾನಿಯಲ್ಲಿ ಮಾಡಬೇಕು. ಮಲವಿಸರ್ಜನೆ ಮಾಡುವ ಪ್ರಸಂಗ ಬಂದರೆ ಆ ವಿಧಿಯನ್ನೂ ಅದೇ ಬಾನಿಯಲ್ಲಿ ಪೂರೈಸಿ ಕೊಳ್ಳಬೇಕಾಗುತಿತ್ತು. ಇಂಥ ದಾರುಣ ಪರಿಸ್ಥಿತಿಯಲ್ಲಿ ಊಟ ಕೂಡ ಸಮಯಾನುಸಾರ ಬಾರದಾದಾಗ ರಾಜಕೀಯ ಕೈದಿಗಳು ಜೈಜೈಕಾರ ಮಾಡತೊಡಗಿದರು. ಜೈಕಾರ ಹಾಕುವವರಿಗೆ ದಂಡಾಬೇಡಿ ಹಾಕಿ ಅವರನ್ನು ಚಾಬೂಕಿನಿಂದ ಹೊಡೆಯಲಾರಂಭಿಸಿದರು. ರಾಜ ಬಂದಿಗಳ ಮುಖಂಡರನ್ನು ಕತ್ತಲು ಕೋಣೆಯಯಲ್ಲಿ ಹಾಕಿದರು. ಜೇಲ ಅಧಿಕಾರಿಗಳನ್ನು ಕಂಡು ಮಾತಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಬೇನೆಯಿಂದ ಬಳಲುವವರಿಗೆ ವೈದ್ಯಕೀಯ ಉಪಚಾರ ಸಕಾಲಕ್ಕೆ ಆಗದಾಯಿತು. ಜೇಲಿನ ಆಸ್ಪತ್ರೆಯಲ್ಲಿ ಒಬ್ಬರೇ ಡಾಕ್ಟರರು. ರುಗ್ಣ ಕೈದಿಗಳನ್ನು ಪರೀಕ್ಷಿಸಿ ಉಪಚಾರ ಮಾಡುವದು ಅವರಿಗೆ ಅಶಕ್ಯವಾಯಿತು. ಸಾಕಷ್ಟು ಔಷಧಗಳೂ ಇರಲಿಲ್ಲ. ಕೈದಿಗಳ ಪ್ರಕೃತಿ ದಿನದಿನಕ್ಕೆ ಕೆಡಹತ್ತಿತು. ಅಂಥದರಲ್ಲಿ ಡಿಸೆಂಬರ ೧೦ ನೇ ದಿನಾಂಕದ ಸುಮಾರಿಗೆ ಜೇಲಿನಲ್ಲಿ ಕಾಲರಾದಂಥ ವಿಚಿತ್ರ ಬೇನೆ ಹಬ್ಬಿತು ! ಕೆಲವು ಕೈದಿಗಳ ಆಯುಷ್ಯ ತುಂಬಿಬಂತು ! ಆ ರೋಗಕ್ಕೆ ಕೆಲವರು ಅಮಾಂತ್ರಶೋಥ (ಗ್ಯಾಸ್ಟ್ರೊ ಎಂಟ್ರಾಯಟಿಸ್) ಅಂದರೆ ಅನ್ನ ಕೆಲವರು ಅನ್ನ ವಿಷಬಾಧೆ (ಫುಡ್ ಪಾಯಝುನಿಂಗ) ಎಂದಂದರು. ರೋಗದ ಹೆಸರು ಏನೆ ಇದ್ದರೂ ಆದರಿಂದ ಅಸಹಾಯ ಕೈದಿಗಳು ಸಾಯ ಹತ್ತಿದರು. ಬೇನೆ ಬಿದ್ದವರನ್ನು ಜೇಲಿನ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಬಿಸ್ತ್‌ದ ಹೊರತು ಬೇರೆ ಔಷಧವಿರಲಿಲ್ಲ. ಒಂದೆರಡು ದಿನಗಳಲ್ಲಿ ಆಸ್ಪತ್ರೆಗೆ ಸಾಗಿಸಿದ ಕೈದಿಗಳಲ್ಲಿ ಕೆಲವು ಕ್ರಮಿನಲ್ ಕೈದಿಗಳೂ ಇಬ್ಬರು ರಾಜಕೀಯ ಕೈದಿಗಳೂ ಆ ಭಯಾನಕ ರೋಗಕ್ಕೆ ಬಲಿಯಾದರು.

"ಜಾನ್ ಧೋಕೆಮೆ, ಜೇಲ ಖಾಲಿ ಕರೊ !"

ಪರಿಸ್ಥಿತಿಯ ಗಾಂಭೀರ್ಯವನ್ನರಿತು ಎಲ್ಲ ರಾಜಕೀಯ ಕೈದಿಗಳು ಒತ್ತಟ್ಟಿಗೆ ಸೇರಿ ಸಂಘಟಿತ ಪ್ರತಿಭಟನೆ ಮಾಡಬೇಕೆಂದು ಗೊತ್ತಾಯಿತು. ನಮ್ಮ ಜಿಲ್ಹೆಯ ಮುಖಂಡರು ಆಗ ೧ ನೇ ವರ್ಗದ ಸ್ಥಾನಬದ್ಧರಾಗಿದ್ದರು. ಅವರಲ್ಲಿ ಶ್ರೀ. ಗಂಗಾಧರ

ರಾವ ದೇಶವಾಂಡೆ, ದ. ಲ. ಧ್ಯಾಪಕ, ವೆಂಕರಡ್ಡಿ ಹೂಲಿ, ಬಸಪ್ಪ ಆರಗಾವಿ, ಶಂಕರ ರಾವ ಕಾಮತ, ಅಣ್ಣಾಪ್ಪಾ ಪದಕಿ, ಷಣ್ಮುಖಪ್ಪಾ ಅಂಗಡಿ, ಧಾರವಾಡ ಜಿಲ್ಲೆಯ ಡಾ. ಹರಡೀಕರ, ಮೊದಲಾದವರಿದ್ದರು. ೨ ನೇ ವರ್ಗದ ನ್ಹಾನ ಬದ್ಧರಲ್ಲಿ ವೆಂಕಟೇಶ ಮಾಗಡಿ, ಬೆಳಗಾವಿಯ ಆರ್. ಎಚ್. ಕುಲಕರ್ಣಿ, ರಾಘವೇಂದ್ರ ಮುನೋಳಿ ಮೊದ ಲಾದವರು ಇದ್ದರು. ಇವರೆಲ್ಲ ಜೇಲಿನಲ್ಲಿಯ ತಾವಿದ್ದ ಭಾಗದಲ್ಲಿ ಸಭೆ ಸೇರಿ ಪ್ರತಿ ಭೆಟನೆಯ ಕಾರ್ಯಕ್ರಮವನ್ನು ನಿರ್ಧರಿಸಿದರು. ಅದರಂತೆ ಒಂದು ದಿನ " ಒಳ್ಳೇ ಆಹಾರ, ಸಾಕಷ್ಟು ಸ್ವಚ್ಛತೆ, ಒಳ್ಳೆಯ ವೈದ್ಯಕೀಯ ಉಪಚಾರ ದೊರೆಯುವತನಕ ತಾವು ಕೋಣೆಯಲ್ಲಿ ಹಾಗು ಬರಾಕಿನಲ್ಲಿ ಬಂದಾಗುವದಿಲ್ಲ " ಎಂದು ಎಲ್ಲ ರಾಜ ಕೀಯ ಕೈದಿಗಳು ಒಕ್ಕೊರಲಿನಿಂದ ಘೋಷಿಸಿದರು. ಪ್ರತಿದಿನ ಸಂಜೆಗೆ ಎಲ್ಲ ಕೈದಿಗಳನ್ನು ಕೋಣೆಯಲ್ಲಾಗಲಿ, ಬರಾಕಿನಲ್ಲಾಗಲಿ ಹಾಕಿ ಕೀಲಿ ಜಡಿಯುತ್ತಿದ್ದರು. ಆ ದಿನ ತಾವು ಒಳಗೆ ಹೋಗುವದಿಲ್ಲೆಂದು ಸಾರಿ ಎಲ್ಲರೂ ಜೀವದ ಹಂಗುದೊರೆದು ಅಂಗಳದಲ್ಲಿ ನೆರೆದು ಜೈಜೈಕಾರ ಪ್ರಾರಂಭಿಸಿದರು. " ಜಾನ ಧೋಕೆಮೆ ಹೈ – ಜೇಲ ಖಾಲೀ ಕರೊ" "ಲಾಯಿಫ ಇನ್ ಡೇಂಜರ, ವೆಕೇಟ ದ ಜೇಲ (ಜೀವ ಗಂಡಾಂತರದಲ್ಲಿದೆ–ಜೇಲು ತೆರವು ಮಾಡಿರಿ) " ಇದೇ ಅಂದಿನ ಘೋಷಣೆ ಆಗಿತ್ತು. ನಡುನಡುವೆ "ಮಹಾತ್ಮಾ ಗಾಂಧೀಕಿ ಜೈ'' ಎಂದೂ ಜೈಕಾರ ಹಾಕುತ್ತಿದ್ದರು. ಈ ಗಗನಭೇದಿ ಘೋಷಣೆಗಳನ್ನು ಕೇಳಿ ಜೇಲಧಿಕಾರಿಗಳು ಗಾಬರಿಯಾದರು. ಏನು ಮಾಡಬೇಕೆಂಬುದು ಅವರಿಗೆ ತಿಳಿಯ ದಾಯಿತು. ಕೆಲವು ಸೌಕರ್ಯಗಳೆನ್ನು ಮಾಡಿಕೊಡಲು ಪ್ರಯತ್ನಿಸಿದರು. ಅದು ಸಾಧ್ಯ ವಾಗಲಿಲ್ಲ. ಆಗ ಲ್ಯಾಕ್ಸಟನ್ ಎಂಬವರು ಜೇಲ ಸುಪರಿಂಟೆಂಡಂಟರಿದ್ದು ರಾವೂತ ಎಂಬವರು ಜೇಲರ ಇದ್ದರು. ರಾಜಬಂದಿಗಳು ಒಂದೆಡೆ ಸೇರಿ ಬಂಡೆದ್ದು ದನ್ನು ನೋಡಿ ಅವರಿದ್ದಲ್ಲಿಗೆ ಬರಲು ಸಹ ಈ ಜೇಲಧಿಕಾರಿಗಳಿಗೆ ಧೈರ್ಯವಾಗಲಿಲ್ಲ. ಈ ಚಳು ವಳಿಯ ನೇತೃತ್ವವನ್ನೂ ಒಂದನೇ ವರ್ಗದ ಸ್ಥಾನಬದ್ಧರೇ ವಹಿಸಿದ್ದರು. ಎರಡನೇ ವರ್ಗದವರಲ್ಲಿ ಮುಂದಾಳುಗಳಾರೂ ಇರಲಿಲ್ಲ. ಅವರೆಲ್ಲ ಅನುಯಾಯಿಗಳೇ ಆಗಿ ದ್ದರು.

ಸಶಸ್ತ್ರ ಪೋಲೀಸ ಪಾರ್ಟಿ ಬಂದಿತು!

ರಾಜಬಂದಿಗಳ ಮೇಲಿನ ತಮ್ಮ ಹತೋಟಿ ತಪ್ಪಿದ್ದನ್ನು ಕಂಡು ಜೇಲಧಿಕಾರಿಗಳು ಹೌಹಾರಿ ಪೋಲೀಸ ಪಾರ್ಟಿ ಕರೆಸಿದರು. ಕೈದಿಗಳು ಜೇಲು ಒಡೆದು ಹೋಗಬಹು ದೆಂಬ ಭಯ ಅವರನ್ನು ಆವರಿಸಿತ್ತು. ಜೇಲ ಸುಪರಿಂಟೆಂಡೆಂಟ ಲ್ಯಾಕ್ಸಟನ್, ಪೋಲೀಸ ಸುಪರಿಂಟೆಂಡೆಂಟ ಕಾರ್ನಿಂಗ್ ಹ್ಯಾಮ, ಸಿಟಿ ಮ್ಯಾಜಿಸ್ಟ್ರೇಟ ಮೊದಲಾದ ವರು ಸಶಸ್ತ್ರ ಪೋಲೀಸ ಪಡೆಯೊಂದಿಗೆ ನುಗ್ಗಿ ಬಂದರು. ಆದರೆ ರಾಜಬಂದಿಗಳು ಎಳ್ಳಷ್ಟೂ ಹೆದರದೆ ಅವಿಚಲರಾಗಿ ನಿಂತರು. ಕೆಟ್ಟ ಆಹಾರ ತಿಂದು ಕಾಲರಾದಿಂದ ಇಲಿ ಗಳಂತೆ ಸಾಯುವದಕ್ಕಿಂತ ಗುಂಡಿಗೆ ತುತ್ತಾಗಿ ಹುತಾತ್ಮರಾಗುವದು ಲೇಸೆಂದು ಅವರು ಭಾವಿಸಿದರು. ಸಿಟಿ ಮ್ಯಾಜಿಸ್ಟ್ರೇಟರು ಅವರಿಗೆ "ಒಳಗೆ ಹೋಗಿರಿ. ನಿಮ್ಮ ಕೋಣೆ

ಬರಾಕುಗಳಲ್ಲಿ ಬಂದಾಗಿರಿ" ಎಂದು ಸಾರಿ ಹೇಳಿದರು. ಅದಕ್ಕೆ ಯಾರೂ ಕಿವಿಗೊಡ ಲಿಲ್ಲ. ಪೋಲೀಸರಿಗೆ "ಸಜ್ಜಾಗಿರಿ" ಎಂದು ಮ್ಯಾಜಿಸ್ಟೇಟರು ಹುಕುಂ ಕೊಟ್ಟರು. ಪೋಲೀಸರು ಬಂದೂಕುಗಳಲ್ಲಿ ಕಾಡತೂಸುಗಳನ್ನು ತುಂಬಿ ಗುಂಡು ಹಾರಿಸಲು ಸಜ್ಜಾಗಿ ನಿಂತರು. ಆಗ ಕರ್ನಾಟಕ ಸಿಂಹ ಗಂಗಾಧರರಾವ ದೇಶಪಾಂಡೆಯವರು ಮುಂದೆ ಬಂದು ಎದೆ ತಟ್ಟಿ ನಿಂತು— "ಗುಂಡು ಹಾಕುವದಿದ್ದರೆ ಹಾಕಿರಿ. ನಾವು ಅದಕ್ಕೆ ಸಿದ್ದರಿದ್ದೇವೆ. ಹುಳಗಳಂತೆ ಸಾಯುವದಕ್ಕಿಂತ ಹುಲಿಗಳಂತೆ ಸಾಯುವದು ಲೇಸು! " ಎಂದು ಸಿಂಹನಾದ ಮಾಡಿದರು. ಜೇಲರ ಹಾಗು ಸುಪರಿಂಟೆಂಡೆಂಟರು ಅವಾಕ್ಕಾದರು. ಲ್ಯಾಕ್ಸ್‌ಟನ್ ಸಾಹೇಬರು ಕೈಜೋಡಿಸಿ ರಾಜಬಂದಿಗಳ ಸಹಕಾರ ಯಾಚಿಸಿದರು. ರಾವುತರು ಏನಮ್ಮರಾಗಿ ಮುಂದೆ ಬಂದು— "ಸರಕಾರಕ್ಕೆ ಅರಿಕೆ ಮಾಡಿ ಇನ್ನೆಂಟು ದಿನಗಳಲ್ಲಿ ನಾವು ಎಲ್ಲ ವ್ಯವಸ್ಥೆ ಮಾಡುತ್ತೇವೆ. ಅದುವರೆಗೆ ಹೇಗಾದರೂ ಮಾಡಿ ತಾಳಿರಿ'' ಎಂದು ದೈನ್ಯದಿಂದ ಕೇಳಿಕೊಂಡರು. ಇನ್ನು ಹಗ್ಗ ಹರಿಯುವವರೆಗೆ ಜಗ್ಗುವದು ಜಾಣತನದ್ದಾಗಲಾರದೆಂದು ಬಗೆದು ಹೋರಾಟಗಾರರ ಮುಖಂಡರು ಎಲ್ಲರಿಗೆ ಒಳಗೆ ಹೋಗಲು ಹೇಳಿದರು. ಪೋಲೀಸ ಪಾರ್ಟಿ ಹಿಂದಿರುಗಿತು,

ಇದಾದ ತುಸು ಹೊತ್ತಿ ನಲ್ಲೇ ಜೇಲ ಆಸ್ಪತ್ರೆಗೆ ಸಾಗಿಸಿದ ರಾಜಬಂದಿಗಳಲ್ಲಿ ಕೆಲ ವರು ಮೃತರಾದರೆಂದು ತಿಳಿಯಿತು. ಆಗ ಈ ಬೇನೆಯಿಂದ ಬಳಲುವವರ ಸುಶ್ರೂಷೆ ಮಾಡುವದಕ್ಕಾಗಿ ಸ್ವಯಂಸೇವಕರ ಪಥಕವನ್ನು ಸಂಘಟಿಸುವದರ ಸಲುವಾಗಿ ಡಾ ಹರ್ಡೀಕರರು ಎರಡನೇ ವರ್ಗದ ಎಲ್ಲ ಸ್ಥಾನಬದ್ಧರನ್ನು ಕರೆದು— " ಇದು ಭಯಾನಕ ಸುಂಕರೋಗ ಸಾಯಲು ಸಿದ್ಧರಿದ್ದವರೇ ಈ ಸುಶ್ರೂಷಾಪಥಕದಲ್ಲಿ ಸೇರಿ ರುಗ್ಣರ ಸೇವೆ ಮಾಡಲು ಮುಂದೆ ಬರಬೇಕು '' ಎಂದು ಕೇಳಿಕೊಂಡರು. ತಮ್ಮ ಹೆಂಡರ ಮಕ್ಕಳ ನೆನಪಾಗಿದ್ದರಿಂದಲೋ ಅಥವಾ ತಮ್ಮ ಜೀವಿತಕ್ಕೆ ಗಂಡಾಂತರ ಬಂದೀತೆಂದು ಹೆದರಿಯೋ ಉದ್ದುದ್ದ ಮಾತಾಡುವ ಅನೇಕರು ಹಿಂಜರಿದರು. ಶ್ರೀ. ಆರ್. ಎಚ್. ಕುಲಕರ್ಣಿಯವರಂಥ ಸ್ವಲ್ಪೇ ಅವಿವಾಹಿತ ತರುಣರು ಮುಂದೆ ಬಂದು ಈ ಭೂತ ದಯೆಯ ಕಾರ್ಯ ಕೈಕೊಂಡರು. ೧ ನೇ ವರ್ಗದ ಸ್ಥಾನ ಬದ್ಧರಾದ ಡಾ. ಕಬ್ಬೂರ (ಧಾರವಾಡ) ಅವರು ಜೇಲಧಿಕಾರಿಗಳ ಮನವೊಲಿಸಿ ತಾವೇ ಔಷಧೋಪಚಾರದ ಹೊಣೆಹೊತ್ತು ಜೇಲ ಆಸ್ಪತ್ರೆಯಲ್ಲಿಯೇ ಬಂದು ನಿಂತರು. ಜೇಲ ಅಧಿಕಾರಿಗಳು ನಮ್ಮ ಜನರು ಹೇಳಿದ್ದಕ್ಕೆಲ್ಲ ಒಪ್ಪಿ ಆಹಾರದಲ್ಲಿ ಸುಧಾರಣೆ ಮಾಡಿದರು. ಸ್ವಚ್ಛತೆ, ಶೌಚ ಕೂಪ ಆದಿ ಆರೋಗ್ಯ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿದರು. ಡಾ. ಕಬ್ಬೂರರು ಹೇಳಿದ ಔಷಧಗಳನ್ನೂ ಒದಗಿಸಿದರು. ನಮ್ಮವರ ಕೈಯಲ್ಲಿ ಅಡಿಗೆಯ ವ್ಯವಸ್ಥೆ ಒಪ್ಪಿಸಿದರು. ಪರಿಸ್ಥಿತಿ ಕ್ರಮೇಣ ಸುಧಾರಿಸಿತು. ರೋಗವು ಹತೋಟಿಯಲ್ಲಿ ಬಂದು ನಿರ್ಮೂಲವಾಯಿತು.

ಜೇಲಿನಲ್ಲಿ ಅಸುನೀಗಿದರು!

ಇಷ್ಟಾಗುವದರೊಳಗಾಗಿ ಅನೇಕ ಕ್ರಿಮಿನಲ್ ಕೈದಿಗಳು ಸತ್ತರಲ್ಲದೆ ರಾಜಬಂದಿಗಳಲ್ಲಿ ಬೆಳಗಾವ ಜಿಲ್ಲೆಯ ಶ್ರೀಮತಿ- ಗಂಗೂಬಾಯಿ ಕಿನಕೆ ನಿಷ್ಪಾಣಿ, ಶ್ರೀಗಳಾದ

ತಾಯಪ್ಪಾ ಹಟ್ಟಿಹೊಳಿ, ವಾಮನರಾವ ಪೋತದಾರ ಅಕ್ಕೋಳ, ಮುನಿನಾಯಿಕ ಶಿವ ನಾಯಿಕ ಪಾಟೀಲ ಮುರಗೋಡ, ಸಿದ್ರಾಮಯ್ಯಾ ಸ್ವಾಮಿ ಹಾಲದೇವರಮಠ ಸಂಕೇ ಶ್ವರ, ಹುಬ್ಬಳ್ಳಿಯ ಯಲ್ಲಪ್ಪಾ ಬ್ಯಾಹಟ್ಟಿ, ನಬೀಸಾಹೇಬ ಕಿತ್ತೂರ, ಕರಾಡದ ವಿಠ್ಠಲ ಜಾಧವ, ಪುಣೆಯ ಶ್ರೀಮತಿ ಸುಶೀಲಾಬಾಯಿ ಬಾಳ ಬೊದಲಾದವರು ಈ ಬೇನೆಗೆ ತುತ್ತಾದರು. ಇದಲ್ಲದೆ ಬೆಳಗಾವಿಯ ಕು. ಅನುಸೂಯಾ ಸಾವಂತ, ಗೋದಾವರಿ ಸೋಲಾಪೂರಕರ, ಶ್ರೀಮತಿ ಲಕ್ಷ್ಮೀಬಾಯಿ ಕುಲಕರ್ಣಿ ಶಹಾಪೂರ, ಸೀತಾಬಾಯಿ ಪ್ರಭು (ಹುಂಚೇನಟ್ಟಿ), ಕು. ಪ್ರಮಿಲಾ ಹರಿಜನ ಹುಬ್ಬಳ್ಳಿ, ಸಿಂಧೂ ಸಖಿ ಮಾಲವಣ, ಪುಣೆಯ ಡಾ. ತಾರಾಬಾಯಿ ಜೋಗಳೇಕರ (ಲಿಮಯೆ) ಹಾಗು ಶಾಂತಾಬಾಯಿ ತಾಮ್ಹಣಕರ ಮೊದಲಾದವರಿಗೆ ಈ ರೋಗದ ಪಿಡುಗು ಬಡೆದು ಬಳಲಿ ಸುದ್ಯೆವದಿಂದ ಬದುಕಿಕೊಂಡರು.

ಚಳುವಳಿಯ ದುರ್ಲಾಭ ಪಡೆದು ಪುಂಡಾಟಿಕೆ ಮಾಡಬಹುದೆಂದು ಕೆಲವೆ ಸಂಶಯಿತ ಸಮಾಜಕಂಟಕರನ್ನು ಬಂಧಿಸಿ ಮೂರನೇ ವರ್ಗದ ಸ್ಥನಬದ್ಧರೆನ್ನಾಗಿ ಮಾಡಿ ಜೇಲಿನಲ್ಲಿ ಇಟ್ಟಿದ್ದರು. ಅವರಲ್ಲಿ ಅಥಣಿ ತಾಲೂಕಿನ ನಾರಾಯಣ ತಂಗಡಿ ಎಂಬವರೂ ಇದ್ದರು. ಅವರಿಗೆ ಈ ಕಾಲರಾದಂಥ ಬೇನೆ ತಗಲಿತು. ಕಿಂಗಕಾಂಗನಂಥ ದೇಹವುಳ್ಳ ಗಡ್ಡಮೀಸೆ ಬೆಳಸಿದ ನಾರಾಯಣ ತಂಗಡಿ ವಾಂತಿಭೇದಿಯಿಂದ ಒದ್ದಾಡಿ ವಿಕಲನಾಗಿ ಅವರ ಸುಶ್ರೂಷೆ ಮಾಡುತ್ತಿದ್ದ ಶ್ರೀ. ಆರ್. ಎಚ್, ಕುಲಕರ್ಣಿಯವರ ಕೈಯಲ್ಲಿ ಕರುಣಾಜನಕ ಅವಸ್ಥೆಯಲ್ಲಿ ಜೀವ ಬಿಟ್ಟನು! ಕರಾಡದ ರಾಜಕೈದಿ ವಿಠ್ಠಲ ಎಂಬವರು ಈ ಭಯಾನಕ ರೋಗದಿಂದ ನಿರ್ವಿಣ್ಣರಾಗಿ ಸಾಯುವ ಪೂರ್ವದಲ್ಲಿ ಶ್ರೀ. ಆರ್. ಎಚ್. ಕುಲಕರ್ಣಿಯವರಿಗೆ ಏನೋ ಹೇಳಬೇಕೆಂದು ತವಕಪಟ್ಟು "ಆಯಿsss" ಎಂದು ಆರ್ತ ಧ್ವನಿಯಿಂದ ಕಿರುಚಿ ಅಸುನೀಗಿದರು ! ಕರುಳು ಕರಗಿಸುವ ಇಂಥ ಕರುಣ ದೃಶ್ಯಗಳನ್ನು ಕಂಡು ಸುಶ್ರೂಷಾವಥಕದ ಸ್ವಯಂಸೇವಕರು ಮಮ್ಮರ ಮರುಗಿದರು !

ಸತ್ತವರ ಶವಗಳನ್ನು ಸ್ಮಶಾನಕ್ಕೆ ಸಾಗಿಸಿ ಶವಸಂಸ್ಕಾರ ಮಾಡುವ ಚರಮ ಸೇವೆಯು ಡಾ. ನಾ. ಸು. ಹರ್ಡೀಕರರ ನೇತೃತ್ವದಲ್ಲಿ ನಡೆಯಿತು. ದಿನಾಲು ಸ್ಮಶಾನ ಯಾತ್ರೆಯಗೂಡ ಕೆಲವು ರಾಜಬಂದಿಗಳು ಸರದಿಯಂತೆ ಹೋಗಬೇಕೆಂದು ಗೊತ್ತಾಯಿತು. ಸಶ್ಮಾನಯಾತ್ರೆಯನ್ನು ನೋಡಲು ಜೇಲ ಹೊರಗಡೆ ನೂರಾರು ಜನರು ದಿನಾಲು ನೆರೆಯುತ್ತಿದ್ದರು. ಅಂತ್ಯಸಂಸ್ಕಾರಕ್ಕಾಗಿ ಅವರು ಸ್ಮಶಾನದವರೆಗೂ ಬರುತ್ತಿದ್ದರು. ಕೆಲವರು ಜೇಲನಲ್ಲಿದ್ದ ತಮ್ಮವರನ್ನು ಭೆಟ್ಟಿ ಆಗಲು ಇದೊಂದು ಸಂಧಿ ಎಂದೂ ಬರುತ್ತಿದ್ದರು. ಯಾವ ದಿನ ಯಾರೂ ಸಾಯುತ್ತಿದ್ದಿಲ್ಲವೊ ಅಂದು ಸ್ಮಶಾನಯಾತ್ರೆ ಹೊರಡುತ್ತಿದ್ದಿಲ್ಲ. ಆಗ ತಮ್ಮವರ ಭೆಟ್ಟಿಗಾಗಿ ಬಂದ ಒಬ್ಬಿಬ್ಬ ಸ್ಟಾರ್ಥಿ ಸ್ತ್ರೀಯರು 'ಸುಡ್ಲಿ, ಇಂದು ಯಾವೂ ಸಾಯಲಿಲ್ಲವಾ' ಎಂದು ಪರ ದುಃಖಶೀತಲ ವೃತ್ತಿ ತೋರಿಸಿದ್ದು ಉಂಟು. ಮನುಷ್ಯನು ಎಷ್ಟು ಅಧೋಗತಿಗಿಳಿಯಬಹುದೆಂಬುದಕ್ಕೆ ಇದು ನಿದರ್ಶನ !

ಕಾಲರಾ ಬೇನೆ ಪ್ರಾರಂಭವಾದಾಗ ಎಲ್ಲ ಕೈದಿಗಳು ಭಯಭೀತರಾದಂತೆ ಒಂದನೇ ವರ್ಗದ ಸ್ಥಾನಬದ್ಧರನ್ನು ಕಾಲರಾ-ಭಯ ಆವರಿಸಿತ್ತು. ಅವರೆಲ್ಲ ಸಂಜೆಯ ಊಟವನ್ನೇ ಬಿಟ್ಟಿದ್ದರು. ಆಪಾನನಿಃಸರಣದ ಸಂದರ್ಭದಲ್ಲಿಯೂ ಕಾಲರಾ ಬಂತೆಂದು ಭಯಾಕುಲರಾಗುತ್ತಿದ್ದರು. ರಾತ್ರಿ ಮಲಗುವಾಗ ಬೆಳತನಕ ಬದಕುವೆವೋ ಇಲ್ಲವೋ ಎಂಬ ಆರ್ದ್ಯೆರ್ಯದಿಂದ ಅರ್ಧನಿದ್ರೆಯಲ್ಲಿಯೇ ಮಲಗುತ್ತಿದ್ದರು. ರಾವ ಬಹಾದ್ದೂರ ಅಂಗಡಿಯವರಂತೂ ರಾತ್ರಿ ತಮಗೆ ಕಾಲರಾ ಆದರೆ ಏನು ಗತಿ ಎಂದು ಒಂದು ಬದಿಗೆ ಶ್ರೀ. ಅಧ್ಯಾಪಕರನ್ನೂ ಇನ್ನೊಂದು ಬದಿಗೆ ಶ್ರೀ. ವೆಂಕರಡಿಯವರನ್ನೂ ಮಲಗಿಸಿಕೊಂಡು ಕೈಗೆ ಕೈಕಟ್ಟಿಕೊಳ್ಳುತ್ತಿದ್ದರು. ಅಪ್ಪಿತಪ್ಪಿ ಆಪಾನನಿಃಸರಣವಾದರೆ ' ಅಧ್ಯಾಪಕರೇ, ಕಾಲರಾ ಬಂತು ! ವೆಂಕರಡಿಯವರೇ ಸತ್ತೆ ಸತ್ತೆ ! ' ಎಂದು ಗಾಬರಿಯಿಂದ ಚೀರುತ್ತಿದ್ದರು.

ಕಾಲರಾ ಬೇನೆ ಕಡಿಮೆ ಆಗಿ ಜೇಲಜೀವನವು ಎಂದಿನ ಸ್ಥಿತಿಗೆ ಬಂದಾಗ ದೇವರ ದಯದಿಂದ ಬದುಕಿದೆವೆಂದು ಎಲ್ಲ ಕೈದಿಗಳು ನಿಟ್ಟುಸಿರು ಬಿಟ್ಟರು. ಅನಂತರ ಜೇಲಿನ ನಿತ್ಯಕ್ರಮಗಳು ಯಥಾಪೂರ್ವ ಸಾಗತೊಡಗಿದವು.

ಶ್ರೀ ಚಿಪಕರ ಡಾಕ್ಟರರ ಫಜೀತಿ

ಶ್ರೀ ಚಿಪಕರ ಸಿವಿಲ್ ಸರ್ಜ್‌ನರು ತಮ್ಮ ಡಾಕ್ಟರೀ ವಿದ್ಯೆಯಲ್ಲಿ ಅನುಭವಿಕರಿದ್ದರು. ಆದರೆ ಹಳೇಪದ್ಧತಿಯ ರಾಜನಿಷ್ಠರಾದ್ದರಿಂದ ಕೈದಿಗಳಕೂಡೆ, ಅದರಲ್ಲಿಯೂ ಮೊದಲು ಮೊದಲು ಚಳವಳಿಯ ರಾಜಕೀಯ ಕೈದಿಗಳಕೂಡ ತಿರಸ್ಕಾರದಿಂದಲೇ ನಡೆಯುತ್ತಿದ್ದರು. ಅಲ್ಲದೆ ರೋಗಿಗಳ ರೋಗ ತಮಗೆ ತಗಲೀತೆಂಬ ಬಯದಿಂದ ಅವರು ಆವರಿಸಿದವರಾಗಿದ್ದರು. ರೋಗಿಯ ಮುಖದ ಕಡೆಗೆ ತಮ್ಮ ಮುಖ ಮಾಡಿ ಎಂದೂ ಪರೀಕ್ಷಿಸುತ್ತಿದ್ದಿಲ್ಲ. ರೋಗಿಯ ಶ್ವಾಸೋಚ್ಛ್ವಾಸ ತಮ್ಮ ಹೊಟ್ಟೆಯಲ್ಲಿ ಸೇರಬಾರದೆಂದು ಅವರು ಇಷ್ಟು ಮುಂಜಾಗ್ರತೆ ವಹಿಸುತ್ತಿದ್ದರು. ರೋಗಿಯ ಜ್ವರ ನೋಡುವಾಗ ಥರ್ಮಾಮೀಟರ ಹಚ್ಚಿದೆ ತಮ್ಮ ಕೈಯೊಳಗಿನ ಬಿಣದ ಬಡಿಗೆಯನ್ನು ಹಚ್ಚುತ್ತಾರೆಂದು ಬಹುಜನ ಕೈದಿಗಳ ತಕರಾರು ಇತ್ತು. ಇವೇ ಮುಂತಾದ ಕಾರಣಗಳ ಹಿನ್ನೆಲೆಯಲ್ಲಿ ಕಾಲರಾ ಸುರು ಆದಾಗ ಅದು ಬೇಗೆ ನಿಯಂತ್ರಣದಲ್ಲಿ ಬರುವಲಕ್ಷಣ ಕಾಣದಾದಾಗ ಒಂದು ದಿನ ಚಿಪಕರರು ಡೆಟಿನ್ಯೂ ಬರಾಕಿಗೆ ಬಂದು ತಿರುಗಿ ಹೋಗುವಾಗ ಶ್ರೀ ದತ್ತೋಪಂತ ಅಧ್ಯಾಪಕರು ಟಣ್ಣನೆ ಜಿಗಿದು ಅವರನ್ನು ಅಡ್ಡಗಟ್ಟಿ ಕೇಳಿದರು- "ಕಾಲರಾದಿಂದ ನಮ್ಮ ಜನ ಸಾಯುಹತ್ತಿದೆ. ನಿಮಗೆ

ಅದನ್ನು ನಿಯಂತ್ರಿಸುವದಾಗದಿದ್ದರೆ ಎಲ್ಲ ಕೈದಿಗಳನ್ನು ಹೊರಗೆ ಬಿಡಿರಿ. ನಮ್ಮ ಉಪಚಾರ ನಾವು ಮಾಡಿಕೊಳ್ಳುತ್ತೇವೆ. ಕೈದಿಗಳ ಜ್ವರ ನೋಡಲು ಥರ್ಮಾ ಮೀಟರದ ಬದಲು ಬಡಿಗೆ ಉಪಯೋಗಿಸಲಿಕ್ಕೆ ನಾಚಿಕೆ ಬರುವದಿಲ್ಲವೇ ನಿಮಗೆ? " ಎಂದು ಅರ್ಭಟಿಸುತ್ತ ಅವರನ್ನು ಹೊರಗೆ ಬಿಡದೆ ಅಡ್ಡಗಟ್ಟಿದರು. ಚಿಪಕರರು ಗಾಬರಿಯಾಗಿ ಶ್ರೀ. ಗಂಗಾಧರರಾಯರ ಮೊರೆಹೊಕ್ಕಾಗ ಅಧ್ಯಾಪಕರು ಹಿಂದೆ ಸರಿದರು. ಚಿಪಕರರು ಜೀವ ಉಳಿಯಿತೆಂದು ಉಸಿರುಬಿಟ್ಟು ಲಗುಬಗೆಯಿಂದ ಹೊರಗೆ ಹೋದವರು ತಿರುಗಿ ಡೆಟಿನ್ಯು ಬರಾಕಿಗೆ ಎಂದೂ ಬರಲಿಲ್ಲ.

ಮತ್ತೊಂದು ದಿನ ಶ್ರೀರಂಗ ಕಾಮತರು ಜೇಲಿನಲ್ಲಿಯ ಹಾಸ್ಪಿಟಲಕ್ಕೆ ಹೋಗಿದ್ದರು. ಆಗ ಅವರು ಗಡ್ಡ ಬೆಳಿಸಿದ್ದರು. ದವಾಖಾನೆಯಲ್ಲಿ ಶ್ರೀ ಚಿಪಕರರು ಬರುತ್ತಲೆ ಇವರು ಅವರಿಗೆ ದಾರಿ ಬಿಡಲಿಲ್ಲ. ಆಗ ಚಿಪಕರರು ,''ಹೂ ಅರ್ ಯೂ?'' (ನೀನು ಯಾರು) ಎಂದು ಜಬರಿಸಿದರು. ಕೂಡಲೆ ಶ್ರೀರಂಗ ಕಾಮತರು ಅವೇ ಶಬ್ದಗಳಿಂದ ಅವರಿಗೆ '' ಹೂ ಆರ್ ಯೂ ? " ಎಂದು ಮರುಪ್ರಶ್ನೆ ಹಾಕಿದಾಗ ಚಿಪಕರರು "ಗೆಟೌಟ " (ಹೊರಗೆ ಹೋಗು) ಎಂದು ಬೆದರಿಸಿದರು. ಆಗ ಶ್ರೀರಂಗ ಕಾಮತರು ತಿರುಗಿ 'ಯೂ ಗೆಟೌಟ' (ನೀನೇ ಹೊರಗೆ ಹೋಗು) ಎಂದು ಪ್ರತಿಯಾಗಿ ಅವರಿಗೆ ಹೇಳಿದಾಗ ಪ್ರಕರಣ ಇನ್ನು ವಿಕೋಪಕ್ಕೆ ಹೋಗುವದೆಂದು ಗಾಬರಿಯಾಗಿ ಚಿಪಕರರು ಸುಮ್ಮನೆ ಅಫೀಸಿಗೆ ಹೊರಟು ಹೋದರು. ಮರುದಿನ ಚಿಪಕರರು ಶ್ರೀ ನಾರಾಯಣರಾವ ಜೋಶಿಯವರಿಗೆ ನಡೆದ ಸಂಗತಿ ತಿಳಿಸಿ "ನಿಮ್ಮ ಜನರು ನನ್ನ ಅಪಮಾನ ಮಾಡುತ್ತಾರೆ. ನನ್ನನ್ನು ಅವರು ಹೊಡೆಯುವಂತೆ ಕಾಣುತ್ತದೆ. ನೀವು ಸ್ವಲ್ಪ ವಿಚಾರಿಸಿರಿ" ಎಂದು ಬಿನ್ನವಿಸಿಕೊಂಡರು. " ಸಂಣ ಹುಡುಗರ ಮಾತಿಗೆ ನಿಮ್ಮಂಥ ದೊಡ್ಡವರು ಲಕ್ಷ್ಯ ಕೊಡಬಾರದು. ನಾನು ಶ್ರೀರಂಗ ಕಾಮತರಿಗೆ ಹೇಳುತ್ತೇನೆ" ಎಂದು ಶ್ರೀನಾರಾಯಣರಾಯರು ಚಿಪಕರರಿಗೆ ಸಮಾಧಾನ ಹೇಳಿದ ಮೇಲೆ ಅಲ್ಲಿಗೇ ಎಲ್ಲ ಮುಗಿಯಿತು. ಮರುದಿನ ಶ್ರೀ ಚಿಪಕರರು ದವಾಖಾನೆಗೆ ಬಂದು ಶ್ರೀರಂಗ ಕಾಮತರನ್ನು ಕರೆಯಿಸಿ ಅವರಿಗೆ ದಿನಾಲು ೪ ಪೌಂಡು ಹಾಲು ೨ ಪೌಂಡು ಬ್ರೆಡ್ ಕೊಡಬೇಕೆಂದು ಬರೆದು ಬಿಟ್ಟರು. ಬಹಳಷ್ಟು ಜನರು ಬೇರೆ ಜೇಲಿಗೆ ಮತ್ತು ಕಿಲ್ಲೆ ಜೇಲಿಗೆ ಹೋದಮೇಲೆ ನಾನು (ಅಂಣುಗುರೂಜಿ) ಹಿಂಡಲಗಿ ಜೇಲಿಗೆ ೧೯೪೩ ಇಸವಿಯ ಬೇಸಿಗೆಯಲ್ಲಿ ಬಂದೆ ಆಗ ಇದೇ ಚಿಪಕರರು ಚೀಫ ಮೆಡಿಕಲ್ ಆಫೀಸರರಾಗಿದ್ದರು. ಅವರು ನನ್ನ ಮೇಲೆ ಅದೇಕೋ ವಿಶೇಷ ಪ್ರೀತಿ ಮಾಡುತ್ತಿದ್ದರು. ನನ್ನನ್ನು ಒಂದು ದಿನ ಅವರು ಕರೆದು ದವಾಖಾನೆಯಲ್ಲಿ ಕೂಡಿಸಿಕೊಂಡು ಹೇಳಿದರು– " ಅಂಣು ಗುರೂಜಿಯವರೇ ನೀವು ನಿಜವಾದ ಗಾಂಧಿ ಅನುಯಾಯಿಗಳಾಗಿರುವಿರಿ. ಈ ವರೆಗೆ ನಿಮ್ಮ ಜನರು ನನಗೆ ಬಹಳ ತ್ರಾಸಕೊಟ್ಟರು. ನಾಯಿಯಂತೆ ನನ್ನನ್ನು ನಡೆಸಿಕೊಂಡರು,

ಅದೆಲ್ಲ ಹೋಗಲಿ. ನೀವು ಜೇಲಿನಲ್ಲಿರುವವರೆಗೆ ನೀವು ಶಿಫಾರಸು ಮಾಡುವ ನಿಮ್ಮ ರಾಜಕೀಯ ಕೈದಿಗಳಿಗೆ ನೀವು ಹೇಳಿದಷ್ಟು ಬ್ರೆಡ್ ಹಾಲು ಕೊಡುತ್ತೇನೆ'' ಎಂದು ಅಂದರಷ್ಟೇ ಅಲ್ಲ. ಆ ವಚನದಂತೆ ಕಡತನಕ ನಡೆದರು. ಆವರು ಕೊಟ್ಟ ಆಶ್ವಾಸನೆಯ ದುರುಪಯೋಗವನ್ನು ನಾನು ಎಂದೂ ಮಾಡಲಿಲ್ಲ. ಅವಶ್ಯವಿದ್ದವರಿಗಷ್ಟೇ ಹಾಲು ಬ್ರೆಡ್ ಕೊಡಿಸಿದೆ. ನಾನು ನನ್ನ ಸ್ವಂತಕ್ಕೆ ಎಂದೂ ಬ್ರೆಡ್ ಹಾಲು ತಕ್ಕೊಳ್ಳಲಿಲ್ಲ. ಶ್ರೀ. ಚಿಪಕರರ ಮೇಲೆ ಅದರ ಪರಿಣಾಮ ಬಹಳವಾಗಿ ನಾನು ಬಿಡುಗಡೆಯಾಗಿ ಬಂದ ಮೇಲೆಯೂ ಅವರು ಬೆಳಗಾವಿಯಲ್ಲಿ ಇರುವ ವರೆಗೆ ನಮ್ಮಿಬ್ಬರ ಸ್ನೇಹ ಅತಿ ನಿಕಟವಾಗಿ ಉಳಿಯಿತು.

ಸತ್ತಿ ರಾವಜೆಪ್ಪನವರ ಗತ್ತು.

ಜೇಲಿನಲ್ಲಿ ಕಾಲರಾ ಉಗ್ರರೂಪದಲ್ಲಿದ್ದಾಗ ದೊಡ್ಡ ದೊಡ್ಡ ಜನರೆಲ್ಲ ಹೆದರಿ ಹೋಗಿದ್ದರು. ತಮ್ಮ ಮೇಲೆ ವಿನಾಕಾರಣವಾಗಿ ಅಪವಾದ ತಕ್ಕೊಳ್ಳಬಾರದೆಂದು ಸರ ಕಾರ ಯೋಚಿಸಿ ಮುದುಕರನ್ನೂ ಅಶಕ್ತರನ್ನೂ ಬಿಡುಗಡೆ ಮಾಡುವಂತೆ ಸಿವಿಲ್ ಸರ್ಜನರಿಗೆ ಅಧಿಕಾರ ಕೊಟ್ಟರು. ಈ ಸಂಗತಿ ಸತ್ತಿಯ ರಾವಜೆಪ್ಪ ಕುಲಕರ್ಣಿಯವರಿಗೆ ತಿಳಿಯಿತು. ಅವರು ಗಂಗಾಧರರಾವ ದೇಶಪಾಂಡೆಯವರ ಲಂಗೋಟಿ ವಿತ್ರರೂ ಆಗರ್ಭ ಶ್ರೀಮಂತರೂ ಕಟ್ಟಾ ಕಾಂಗ್ರೇಸಿಗರೂ ಆಗಿದ್ದರು. ಪೋಲೀಸರು ಇವರನ್ನೂ ಆಗಸ್ಟ ೮–೯ ನೇ ತಾರೀಖಿಗೆ ಬಂಧಿಸಿ ಹಿಂಡಲಗಿ ಜೇಲಿನಲ್ಲಿ ಸ್ಥಾನಬದ್ಧರನ್ನಾಗಿಟ್ಟಿದ್ದರು. ಅವರಿಗೆ ತುಂಬಾ ವಯಸ್ಸೂ ಆಗಿತ್ತು. ಕಾಲರಾದ ಉಗ್ರತನಕ್ಕೆ ಹೆದರಿ ಬಿಡುಗಡೆಯಾಗಿ ಹೋಗುವ ಯುಕ್ತಿ ಹುಡಕಹತ್ತಿದರು. ಶ್ರೀ. ಚಿಪಕರರು ಶಿಫಾರಸು ಮಾಡಿದರೆ ಬಿಡುಗಡೆ ಯಾಗುವದೆಂಬದನ್ನು ಅವರು ತಿಳಿದಿದ್ದರು. ಒಂದು ದಿನ ಮುಂಜಾನೆ ಚಿಪಕರ ಸರ್ಜನರು ಅವರ ಬರಾಕಿಗೆ ಬಂದಾಗ ಮೆಲ್ಲಗೆ ಅವರನ್ನು ಬದಿಗೆ ಕರೆದು ತನ್ನ ಬಿಡುಗಡೆಯ ರಿಪೋರ್ಟು ಮಾಡಬೇಕೆಂದೂ ಅದಕ್ಕಾಗಿ ತಾನು ಎರಡು ನೂರು ರೂಪಾಯಿ ಕೊಡುವವಾಗಿಯೂ ಅವರ ಕಿವಿಯಲ್ಲಿ ಹೇಳಿದರು. ಎರಡು ನೂರು ರೂಪಾಯಿ ಎಂದು ಹೇಳುವಾಗ ಸಂಕೇತವಾಗಿ ಎರಡು ಬೊಟ್ಟುಗಳನ್ನು ಮಾಡಿದ್ದರು. ಇದನ್ನು ಕೇಳಿದ ಚಿಪಕರರು ಕೂಡಲೇ ಗಂಗಾಧರರಾಯರ ಕಡೆಗೆ ಹೋಗಿ ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ಆಗ ಗಂಗಾಧರರಾಯರು ಶ್ರೀ. ರಾವಜೆಪ್ಪನವರನ್ನು ಕರೆದು "ಏನು ರಾವಜಿ, ನೀನು ನಿನ್ನ ಬಿಡುಗಡೆಗಾಗಿ ಎರಡು ನೂರು ರೂಪಾಯಿ ಕೊಡುವಿಯೋ? '' ಎಂದು ಚಿಪಕರರ ಸಮ್ಮುಖದಲ್ಲಿಯೇ ಪ್ರಶ್ನೆ ಹಾಕಿದರು. ಆಗ ರಾವಜೆಪ್ಪನವರು "ನಾನೇನು ಮೂರ್ಖನೋ, ನಿಮ್ಮನ್ನೆಲ್ಲ ಇಲ್ಲಿ ಬಿಟ್ಟು ಹೊರಗೆ ಹೋಗಲು ನನಗೆ ಬುದ್ಧಿಯಿಲ್ಲವೇ? ಚಿಪಕರರು ಹೇಳುವದೆಲ್ಲ ಶುದ್ಧ ಸುಳ್ಳು. ನಾನು ಎರಡು ಬೊಟ್ಟು ಮಾಡಿದ್ದು ನಿಜ. ಆದರೆ ಎರಡು ಬೊಟ್ಟು ಅಂದರೆ ಎರಡು ನೂರು ರೂಪಾಯಿಯೆಂದು ಈ ಮೂರ್ಖ ಚಿಪಕರರು ತಿಳಿಕೊಂಡರೆ ನಾನೇನು ಮಾಡಲಿ ? ನಾನು ಎರಡು ಬೊಟ್ಟು ಮಾಡಿದ್ದು

ಶೌಚಕ್ಕೆ ಆಗಹತ್ತಿದೆ. ಔಷಧಿಕೊಡಿರೆಂದು ಹೇಳುವದಕ್ಕಾಗಿ ಮಾತ್ರ'' ಎಂದು ಚಾಣಾಕ್ಷ. ತನದಿಂದ ಮಾತು ತಿರುವಿದಾಗ ಎಲ್ಲರೂ ಬಿದ್ದು ಬಿದ್ದು ನಕ್ಕರು.

ಜೇಲ ಸುಪರಿಂಟೆಂಡೆಂಟರಿಗೆ ಪಾದರಕ್ಷೆಯ ಪ್ರಸಾದ!

ಕಿಲ್ಲೆ ಸಬ್ ಜೇಲಿನಲ್ಲಿಯೂ ಐದಾರು ನೂರು ರಾಜಕೀಯ ಕೈದಿಗಳಿದ್ದರು. ಸ್ಥಳ ತುಂಬಿಹೋಗಿತ್ತು. ಸ್ನಾನಕ್ಕೆ ನೀರಿಲ್ಲ. ದುರ್ಗಂಧಮಯ ವಾತಾವರಣ. ಸರಿಯಾದ ಊಟವಿಲ್ಲ. ರಾತ್ರಿ ಮಲಗಿದರೆ ತಗಣಿ, ಚಿಕ್ಕಾಡು ಗುಂಗಾಡುಗಳ ವಿಪರೀತ ಕಾಟ, ಮೈಕೆರೆದು ಕೆರೆದು ಮೈತುಂಬ ಗಾದೆಗಳು. ಇದನ್ನು ಸುಧಾರಿಸಬೇಕೆಂದು ನಮ್ಮ ಜನರು ಮೇಲಧಿಕಾರಿಗಳಿಗೆ ಎಷ್ಟೇ ತಿಳಿಸಿ ಹೇಳಿದರೂ ಪ್ರಯೋಜನವಾಗಲಿಲ್ಲ. ಚಿಕ್ಕೋಡಿ ತಾಲೂಕಿನ ಬೋರಗಾವಿಯ ಡಾಕ್ಟರ ಟೋಳ ಎಂಬವರು ಇದೇ ಕಿಲ್ಲೆ ಜೇಲಿನಲ್ಲಿ ಡೆಟಿನ್ಯು ಆಂತ ಇದ್ದರು. ದಮ್ಮಿನ ಪ್ರಕೃತಿಯ ಬಡಕ ಆಶಕ್ತ ಗ್ರಹಸ್ಥರಿವರಾಗಿದ್ದರು. ದೇಶಭಕ್ತಿ ಮತ್ತು ಅನ್ಯಾಯದ ವಿರುದ್ಧ ಕಿಡಿಕಿಡಿಯಾಗಿ ಕೂಡಲೆ ಅಹಿಂಸೆ ಹಿಂಸೆಯ ವಿಚಾರ ಮಾಡದೆ ಸ್ವತಃ ತಾವೇ ಕ್ರಮ ತೆಗೆದುಕೊಳ್ಳುವದು ಅವರ ಸ್ವಭಾವ ವಾಗಿತ್ತು. ಜನಸೇವೆಯೆಂದರೆ ಜನಾರ್ದನನ ಸೇವೆಯೆಂದು ನಂಬಿದ ಇವರು ಬಹಳೇ ಸಿಟ್ಟಿನ ಸ್ವಭಾವದವರಾಗಿದ್ದರು. ತಾಳ್ಮೆ ಸಹನಶೀಲತೆ ಕಡಿಮೆ. ಎಷ್ಟು ಹೇಳಿದರೂ ಬಿನ್ನ ವಿಸಿದರೂ ಜೇಲಿನಲ್ಲಿಯ ಅಸ್ವಚ್ಛತೆ, ದುರ್ಗಂಧ ಕಡಿಮೆಯಾಗದ್ದನ್ನು ಕಂಡು ಇವರು ಉಗ್ರರೂಪ ತಾಳಿದರು. ಸೋಮವಾರ ವಾಡಿಕೆಯಂತೆ ಜೇಲ ಸುಪರಿಂಟೆಂಡೆಂಟರಾದ ಲ್ಯಾಕಸ್ಟನ್ ಸಾಹೇಬನು ಇನಸ್ಪೆಕ್ಶನ್ನಿಗೆ ಬಂದಾಗ ಕೈದಿಗಳು ಸಾಲಾಗಿ ನಿಂತಿದ್ದರು. ಸುಪರಿಂಟೆಂಡೆಂಟರ ರಕ್ಷಣೆಗಾಗಿ ಯಾವಾಗಲೂ ೪-೫ ಪೋಲೀಸರು ದಂಡಾ ಹಿಡಿದು ಸಜ್ಜಾಗಿಯೇ ಅವರ ಗೂಡ ಇರುತ್ತಿದ್ದರು. ಸುಪರಿಂಟೆಂಡೆಂಟರು ಡಾಕ್ಟರ ಟೋಳರ ಮುಂದೆ ಬಂದಾಗ ಜೇಲಿನ ಅವ್ಯವಸ್ಥೆಯ ಬಗ್ಗೆ ಡಾಕ್ಟರ ಟೋಳರು ತಕರಾರು ಮಾಡಿದರು. ಆಗ ಸಾಹೇಬರು ಉದ್ದಟತನದಿಂದ ಏನೋ ಉತ್ತರ ಕೊಟ್ಟರು. ಡಾ. ಟೋಳರಿಗೆ ಆದು ಸಹನವಾಗದೆ ತತ್‌ಕ್ಷಣ ಕಾಲಲ್ಲಿಯ ಚಪ್ಪಲಿ ತೆಗೆದು ಕೈಯಲ್ಲಿ ಹಿಡಿದು ಫಟ್ ಫಟ್ ಎಂದು ಎರಡು ಪೆಟ್ಟುಗಳನ್ನು ಸಾಹೇಬರ ಕೆನ್ನೆಗೆ ಹೊಡೆದೇ ಬಿಟ್ಟರು ! ಒಮ್ಮೆಲೆ ಗಡಿಬಿಡಿ ಎದ್ದಿತು. ಭಯಸೂಚಕ ಗಂಟೆ ಪೋಲೀಸರ ಸೀಟಿ ಬಾರಿಸಹತ್ತಿದವು. ಹತ್ತಿಪ್ಪತ್ತು ಪೋಲೀಸರು ಧಾವಿಸಿ ಬಂದು ಡಾ. ಟೋಳರನ್ನು ಮುತ್ತಿ ದಂಡದಿಂದ ಹೊಡೆಯ ಹತ್ತಿದರು. ದನಗಳೂ ಈ ಪೆಟ್ಟು ತಾಳದಂತಿತ್ತು. ಕೈಯ್ಕೊಳ್ಳಗಿನ ದಂಡಾ ಮುರಿಯುವವರೆಗೆ ಈ ಪೋಲೀಸರೆಲ್ಲ ಕೂಡಿ ಡಾ. ಟೋಳರನ್ನು ಬಡೆದರು. ತಲೆ ಒಡೆಯಿತು. ಮೈಯೆಲ್ಲ ರಕ್ತ ಬಂಬಾಳವಾಯಿತು. ಆದರೇನು ಪ್ರತಿಪೆಟ್ಟಿಗೂ

'ಭಾರತ ಮಾತಾಕೀ ಜೈ' ಎಂದು ಜೈಕಾರ ಹಾಕುತ್ತ ಡಾಕ್ಟರರು ಸಾಹೇಬರನ್ನು ಬೈಯುತ್ತಲೇ ಇದ್ದರು. ಪೋಲೀಸರು ಬಡೆದು ಬಡೆದು ಸಾಕಾಗಿ ಬಿಟ್ಟು ಬಿಟ್ಟರು. ಡಾ. ಟೋಳ ಅವರ ವೀರಶ್ರೀಯನ್ನು ನೋಡಿ ಜೇಲಿಗೆ ಜೇಲೇ ಬೆರಗಾಯಿತು!

ಧ್ವಜದ ಬಣ್ಣಕ್ಕೆ ರಕ್ತದಾನ !

೨೬ ನೇ ಜಾನೇವರಿ ಬಂದಿತ್ತು. ಕಿಲ್ಲೆ ಕ್ಯಾಂಪ ಜೇಲಿನಲ್ಲಿ ಧ್ವಜವಂದನೆಯು ಸಿದ್ದತೆ ನಡೆಯಿತು. ಬಿಳೀ ಹಸಿರು ಮತ್ತು ಕೇಶರಿ ಬಂಣದ ಚರಖಾಂಕಿತ ತ್ರಿವರ್ಣ ಧ್ವಜವೇ ಆಗ ಕಾಂಗ್ರೆಸ್ಸಿನ ಧ್ವಜವಾಗಿತ್ತು, ಅದಕ್ಕೇ ಎಲ್ಲರೂ ರಾಷ್ಟ್ರ ಧ್ವಜ ವೆಂದು ಸಂಬೋಧಿಸುತ್ತಿದ್ದರು. ಧ್ವಜಕ್ಕಾಗಿ ಬಿಳೀ ವಸ್ತ್ರ ದೊರಕಿಸುವದು ನಮ್ಮ ಕೈದಿಗಳಿಗೆ ಕಠಿಣವಾಗಿದ್ದಿಲ್ಲ. ಹಸಿರು ಬಣ್ಣಕ್ಕಾಗಿ ಗಿಡದ ತೊಪ್ಪಲ ಅರೆದು ರಸ ತೆಗೆದು ಧ್ವಜದ ಒಂದು ಪಟ್ಟಿಗೆ ಹಚ್ಚಲಾಯಿತು. ಕೆಂಪು ಅಥವಾ ಕೇಶರಿ ಬಣ್ಣ ತರುವದೆಲ್ಲಿಂದ ಎಂದು ನಮ್ಮ ಕಾರ್ಯಕರ್ತರು ಚಿಂತೆಗೊಳಗಾದರು. ಡಾಕ್ಟರ ಟೋಳರವರು ಮುಂದೆ ಬಂದವರೇ ತಕ್ಕೊಳ್ಳಿರಿ ಕೆಂಪು ಬಣ್ಣ ಎಂದು ಅನ್ನುತ್ತ ಒಂದು ಚಾಕುವಿನಿಂದ ತಮ್ಮ ಎಡಗೈ ರಟ್ಟೆಯಂ ಮೇಲೆ ಹೊಡೆದುಕೊಂಡು ರಕ್ತ ಸುರಿಸಹತ್ತಿದರು! ಜನ ಗಾಬರಿಯಾದರು. ಒಂದು ಪಟ್ಟಿಗೆ ಸಾಲುವಷ್ಟು ಕೆಂಪು ಬಣ್ಣ ತಕ್ಕೊಳ್ಳಿರಿ ಎಂದೆನ್ನುತ್ತ ರಟ್ಟೆಯಿಂದ ರಕ್ತವನ್ನು ಆ ಧ್ವಜದ ಮೇಲೆ ಸುರಿಸಿದರು. ಭಾರತ ಮಾತೆಯು ತನ್ನ ಸತ್ಪುತ್ರನ ಈ ಮಾತೃಪ್ರೇಮವನ್ನೂ ದೇಶಭಕ್ತಿಯನ್ನೂ ನೋಡಿ ಆನಂದಾಶ್ರುಗಳನ್ನು ಸುರಿಸಿದಳು! ಧ್ವಜವಂದನೆ ಅತ್ಯಂತ ವೀರಶ್ರೀ ಯುಕ್ತವಾಗಿ ನಡೆಯಿತು. ಡಾ. ಟೋಳರ ವೀರಶ್ರೀ ಮತ್ತು ಕೆಚ್ಚು ಹಾಗೂ ದೇಶಭಕ್ತಿಗಳು ಅವರ್ಣನೀಯವಾಗಿದ್ದವು. ಇಂದಿಗೂ ಅವರು ಬೋರಗಾವಿಯಲ್ಲಿ ಜನಸೇವೆ ಮಾಡುತ್ತಲಿದ್ದಾರೆ.

ರಾವಪಾಂಡೆಗೆ ಶ್ರೀ. ಲಾಡರ ಬುದ್ಧಿಮಾತು.

ಅಕ್ಕತೆಂಗೇರಹಾಳದ ಓರ್ವ ಹೊರಾಟಗಾರರು ತಮ್ಮ ಶಿಕ್ಷೆಯ ಅವಧಿ ಮುಗಿಸಿ ಬಿಡುಗಡೆ ಹೊಂದುವಾಗ ಅವರಿಗೆ ಬೀಳ್ಕೊಡಲು ಕಿಲ್ಲೆ ಜೇಲಿನಲ್ಲಿ ಧ್ವಜವಂದನೆಯ ಕಾರ್ಯಕ್ರಮ ಏರ್ಪಡಿಸಲಾಯಿತು. ಆಗ ಧ್ವಜದ ಬಳಿ ಹಿಟ್ಟಿನಿಂದ ಭಾರತದ ಚಿತ್ರವನ್ನು ತೆಗೆದಿದ್ದರು. ಆ ಜೇಲಿನ ಜಮಾದಾರ ರಾವಪಾಂಡೆ ಎಂಬವನು ಅದನ್ನು ನೋಡಿ ಧಾವಿಸಿ ಬಂದು ಬೂಟಗಾಲಿನಿಂದ ಒರಿಸ ಹತ್ತಿದನು, ಆಗ ಮುರಗೋಡದ ಪೂಜೇರಿ ಎಂಬ ಹುಡುಗನು ಟಣ್ಣನೆ ಜಿಗಿದು ರಾವಪಾಂಡೆಯ ಕಪಾಳಿಗೆ ಎರಡೇಟು

ಬಿಗಿದನು, ಕೂಡಲೆ ಅಕ್ಕತಂಗೇರಹಾಳದ ಹೋರಾಟಗಾರರು ಮುಗಿಬಿದ್ದು ರಾವಪಾಂಡೆ ನನ್ನು ಒಳಿತಾಗಿ ಥಳಿಸಿದರು, ಜೇಲ ಪೋಲೀಸರು ಸೀಟಿ ಊದುತ್ತ ಧಾವಿಸಿ ಬಂದು ನೆರೆದ ರಾಜ ಬಂದಿಗಳನ್ನು ಒಳಗೆ ನೂಕಿದರು, ಕಿಲ್ಲೇ ಜೇಲಿನಲ್ಲಿ ದೊಂಬಿ ಎದ್ದಿದೆ ಯೆಂದು ತಿಳಿಯುತ್ತಲೆ ಕಲೆಕ್ಟರ ಡ್ಯೂ೯, ಜಿಲ್ಲಾ ನಾಯಾಧೀಶ ಶ್ರೀ. ಲಾಡ ಮೊದಲಾದ ವರು ಪರಿಸ್ಥಿತಿಯನ್ನರಿಯಲು ಅಲ್ಲಿಗೆ ಬಂದರು. ಅಷ್ಟರಲ್ಲಿ ಎಲ್ಲ ಶಾಂತವಾಗಿತ್ತು. ರಾವಪಾಂಡೆಯವರು ಅಧಿಕಾರಿಗಳಿಗೆ " ನನ್ನನ್ನು ಕಪಾಳಿಗೆ ಬಡೆದ ಸೂಳೆಮಗ ಇವನೆ " ಎಂದು ಶ್ರೀ. ಪೂಜೇರರನ್ನು ತೋರಿಸಿದರು. ಆಗ ಜಿಲ್ಲಾ ನ್ಯಾಯಾಧೀಶ ಶ್ರೀ. ಲಾಡ ಅವರು ಅವನನ್ನು ಹಳಿದು–" ಇವರು ದೇಶಭಕ್ತರು, ದೇಶಕ್ಕಾಗಿ ಜೇಲಿಗೆ ಬಂದವರು, ಅವರಿಗೆ ನೀವು ಹೀಗೆ ಅಪಶಬ್ದ ಉಪಯೋಗಿಸಬಾರದು. " ಎಂದು ಬುದ್ಧಿ ಮಾತು ಹೇಳಿದರು.

ಡ್ಯೂ೯ ಸಾಹೇಬರು ಡಾಕ್ಟರರನ್ನು ಒದ್ದರು !

ಶ್ರೀ. ಡ್ಯೂ೯ ಅವರು ಕಲೆಕ್ಟರರಾಗಿ ಬಂದನಂತರ ಒಂದು ದಿನ ಕಿಲ್ಲೆ ಜೇಲಿಗ ಬುದರು. ಆಗ ಶ್ರೀ. ರಾಮಚಂದ್ರ ಕುಲಕರ್ಣಿ ಮಾಸ್ತರ, ಹೊಸೂರ, ಅವರು ಅವ ರನ್ನು ತಮ್ಮ ಕೋಣೆಯ ಮುಂದೆ ಅಡ್ಡನಿಂತು ತರುಬಿದರು. " ಯಾಕೆ ? ಏನು ಹೇಳು ವದಿದೆ "? ಎಂದು ಡ್ಯೂ೯ ಸಾಹೇಬರು ಅವರನ್ನು ಕೇಳಿದರು. " ಹೇಳುವದೇನೂ ಇಲ್ಲ, ತೋರಿಸುವದಿದೆ " ಎಂದು ಮಾಸ್ತರರು ಉತ್ತರಿಸಿದರು. ಕಲೆಕ್ಟರರು " ಅದೇನು ತೋರಿಸಿರಿ " ಎನ್ನುತ್ತಲೆ ಮಾಸ್ತರರು ತಿರುಗಿನಿಂತು ಧೋತರದ ಕಚ್ಚಿ ಕಳೆದು ಪೋಲೀ ಸರ ಹೊಡೆತದಿಂದ ಮಂಜುಗಟ್ಟಿದ ತಮ್ಮ ತಿಗಗಳನ್ನು ಸಾಹೇಬರಿಗೆ ತೋರಿಸಿ " ಡಾಕ್ಟ ರರು ಇದಕ್ಕೆ ಮಲಮು ಸಹ ಹಚ್ಚಿಲ್ಲ " ಎಂದು ಹೇಳಿದರು. ಡ್ಯೂ೯ ಸಾಹೇಬರು ಕೋಪಾವಿಷ್ಟರಾಗಿ ಬದಿಗೆ ನಿಂತ ಡಾಕ್ಟರರನ್ನು ಬೂಟುಗಾಲಿನಿಂದ ಒದೆದರು ! ಬಡಿತ ತಿಂದ ರಾಜಬಂದಿಗಳ ನೋವುಗಳಿಗೆ ತಮ್ಮ ಸಮಕ್ಷಮವೇ ಅವರು ಮಲಮು ಹಚ್ಚಿಸಿ ಹೋದರು. ಅಂದಿನಿಂದ ಕೈದಿಗಳಿಗೆ ಔಷಧೋಪಚಾರ ಸರಿಯಾಗಿ ನಡೆಯಿತೆಂಬದನ್ನು ಬೇರೆ ಹೇಳಬೇಕಾಗಿಲ್ಲ.

ಹಸಿಬಿಸಿ ಮುಖಂಡರ ಬಣ್ಣ ಬಯಲಾಯಿತು !

ಕೇವಲ ದೊಡ್ಡಿಸ್ತನಕ್ಕಾಗಿ ಮತ್ತು ಸ್ವಾರ್ಥಸಾಧನೆಗಾಗಿ ಅನೇಕರು ಕಾಂಗ್ರೆಸ ಸೇರುವ ಕಾಲ ೧೯೩೭ ರಿಂದ ಸುರು ಆಯಿತು. ಕ್ಯಾಂಗ್ರೆಸ್ಸು ಪ್ರಥಮವಾಗಿ ಪ್ರಾಂತ ಗಳಲ್ಲಿ ಮಂತ್ರಿಮಂಡಲ ರಚಿಸಲು ಸಮರ್ಥವಾದದ್ದರಿಂದ ಅವರಿಗೆ ರಾಜನಿಷ್ಠತನದಲ್ಲಿ

ಸ್ಪರ್ಧೆಗಿಳಿದಿದ್ದ ಮತ್ತು ಜಾತೀಯವಾದದ ಬಂಡವಲವನ್ನೇ ಆಧಾರವಾಗಿಟ್ಟುಕೊಂಡು ಸಮಾಜ ಮುಖಂಡರೆಂದು ಸರಕಾರಕ್ಕೆ ತೋರಿಸುತ್ತ ಅದಕ್ಕಾಗಿಯೇ ಕಾಂಗ್ರೆಸ್ಸನ್ನೂ ಕಾಂಗ್ರೆಸ ಮುಖಂಡರನ್ನೂ ಮನಸೋಕ್ತ ಟೀಕೆ ಮಾಡುತ್ತ ಬಂದಿದ್ದ ಪ್ರತಿಷ್ಠಿತರು ಇನ್ನು ಹೊರಗೆ ಉಳಿಯುವದರಲ್ಲಿ ಅರ್ಥವಿಲ್ಲೆಂದು ತಿಳಿದರು, ಇಂದಿಲ್ಲ ನಾಳೆ ದೇಶದ ರಾಜ್ಯ ಸೂತ್ರಗಳು ಕಾಂಗ್ರೆಸಿನವರ ಕೈಯಲ್ಲಿಯೇ ಬರುವ ಸ್ಪಷ್ಟ ಲಕ್ಷಣಗಳು ಕಾಣ ಹತ್ತಿದಾಗ ತುವ್ವ ಮೂಲಿಗುಂಪಾಗಿ ಕೂಡಬೇಕಾದೀತೆಂಬ ಭಯದಿಂದ ಇವರು ಮೆಲ್ಲ ಮೆಲ್ಲಗೆ ಕಾಂಗ್ರೆಸ್ಸಿನಲ್ಲಿ ಸೇರತೊಡಗಿದರು. ಜನ್ಮವನ್ನೆಲ್ಲ ಬ್ರಿಟಿಶ ಸರಕಾರದ ಸೇವೆಯಲ್ಲಿ ಕಳೆದ ಇವರು ಪರಿಸ್ಥಿತಿಯನ್ನರಿತು ಮುಂಧೋರಣೆಯಿಂದ ಈ ನಿರ್ಣಯಕ್ಕೆ ಬರ ಹತ್ತಿದರು. ೧೯೩೬ ನೇ ಇಸವಿಯಲ್ಲಿ ಎಲ್ಲ ಕಡೆಗೆ ಪ್ರಾಂತಿಕ ಅಸೆಂಬ್ಲಿಗಳ ಚುನಾವಣೆಯಲ್ಲಿ ಕಾಂಗ್ರೆಸ್ಸು ಪ್ರಚಂಡ ಬಹುಮತಗಳಿಸಿ ಮಂತ್ರಿಮಂಡಲ ನ್ಥಾಪಿಸಿದ್ದರಿಂದ ಇನ್ನು ಹೋರಾಟದ ಕಾಲ ಮುಗಿಯಿತು, ಅಧಿಕಾರ ಚಲಾಯಿಸುವ ಕಾಲ ಬಂದಿತೆಂದು ಅಂದಾಜು ಮಾಡಿ ಈ ಜನರು ದೊಡ್ಡ ದೊಡ್ಡ ಮಾತು ಹೇಳುತ್ತ ಕಾಂಗ್ರೆಸ ಸೇರಿದರು. ಸೇರಿದವರೇ ಕಾಂಗ್ರೆಸ ಕಮೀಟಿಯ ಅಧಿಕಾರ ತಮ್ಮ ಕಡೆಗೆ ಬರಬೇಕೆಂದು ನಾನಾ ಪ್ರಕಾರದ ಕುಯುಕ್ತಿಗಳನ್ನೂ ಕುತುಂತ್ರಗಳನ್ನೂ ಹೂಡಹತ್ತಿದರು, ಸ್ವಚ್ಛವಾದ ಇಸ್ತ್ರೀ ಖಾದಿ ಬಟ್ಟೆ ಧರಿಸಹತ್ತಿದರು. ಕಾರ್ಯಕರ್ತರ ಬಟ್ಟೆಗಳು ಯಾವಾಗಲೂ ಮಾಸಿದ ಬಣದವೇ ಇರುತ್ತಿದ್ದವು. ಜನ ಕೂಡಿದಲ್ಲಿ ಬಟ್ಟೆಯ ಥಳಕು ನೋಡಿ ಇವರೇ ದೊಡ್ಡ ದೇಶಭಕ್ತರೆಂದು ಜನ ಭಾವಿಸಿತು. ಆದರೆ ಅವರ ಆಶಾ ಅಂಕುರಗಳು ೧೯೪೨ ನೇ ಇಸವಿಯ ಕ್ರಾಂತಿಯ ಆಂದೋಲನದಲ್ಲಿ ಕಮರ ಹತ್ತಿದವು. ದ್ವಿತೀಯ ಮಹಾಯುದ್ಧ ಸುರು ಆಗುವದೆಂದೂ ಮಂತ್ರಿಮಂಡಲಗಳು ರಾಜೀನಾಮೆ ಕೊಟ್ಟು ಮತ್ತೆ ವನವಾಸ ಕಾರಾಗ್ರಹವಾಸ ಬರಬಹುದೆಂದು ಇವರಿಗೆ ತಿಳಿದಿರಲಿಲ್ಲ. ಒಮ್ಮೆಲೆ ೧೯೩೯ ರಲ್ಲಿ ಯುದ್ಧ ಸುರು ಆಗಿ ಕಾಂಗ್ರೆಸ ಮಂತ್ರಿ ಮಂಡಲಗಳೆಲ್ಲ ರಾಜೀನಾಮೆ ಕೊಟ್ಟವು. ಗಾಂಧೀಜಿಯವರು ಯುದ್ಧ ವಿರೋಧಿ ಘೋಷಣೆಯ ವೈಯಕ್ತಿಕ ಸತ್ಯಾಗ್ರಹ ಸುರು ಮಾಡಿದರು, ಆದರೆ ಈ ಸತ್ಯಾಗ್ರಹದಲ್ಲಿ ಈ ಹಸಿಬಿಸಿ ಮುಖಂಡರು ಭಾಗ ವಹಿಸಲಿಲ್ಲ. ೧೯೪೨ ರ ಚಲೇಜಾವ ಆಂದೋಲನ ಸುರು ಆಯಿತು. ತಾವಾಗಿ ಜೇಲಿಗೆ ಹೋಗಲಿಕ್ಕೆ ಸರಕಾರ ಅಸ್ಪದವನ್ನೇ ಕೊಡಲಿಲ್ಲ, ಸರಕಾರವೇ ಮುಂಗಡವಾಗಿ ಭರಭರನೆ ಸಂಶಯ ಬುದ ಎಲ್ಲರನ್ನು ಹಿಡಿದು ಜೇಲಿನಲ್ಲಿ ಚಲ್ಲಿತು. ಜಾತಿವಂತ ಹೋರಾಟಗಾರರಿಗೆ ಇದು ಸುವರ್ಣ ಸಂಧಿಯಾದರೆ ಈ ಹಸಿಬಿಸಿ ಮುಖಂಡರಿಗೆ ಅದು ದುರ್ದೈವದ್ದಾಯಿತು,

ಅದರಲ್ಲಿಯೂ ಜೇಲಿನಲ್ಲಿ ಕಾಲರಾ ಸುರು ಆಗಿ ೧೭ ಜನರ ಆಹುತಿಯಾದಾಗ ಈ ದೇಶಭಕ್ತಿ ಇವರಿಗೆ ಬಹಳ ತುಟ್ಟಿಯದೆಂದೆನಿಸಿತು. ಒಂದಿಲ್ಲೊಂದು ಯುಕ್ತಿ ನೆವ ಹುಡಕಿ ಜೇಲಿನಿಂದ ಬಿಡುಗಡೆಯಾಗಬೇಕೆಂದ ಹವಣಿಸ ಹತ್ತಿದರು. ತಮ್ಮ ಆರೋಗ್ಯ ಸರಿಯಿಲ್ಲೆಂದು ಕೆಲವರೂ ತಮ್ಮ ಆಪ್ತೇಷ್ಟರು ಗಂಭೀರ ಬೇನೆಯಿಂದ ಬಿದ್ದಿರುವರೆಂದು ಕೆಲವರೂ, ಈ ಚಳವಳಿ ತಮಗೆ ಮಾನ್ಯವಿಲ್ಲೆಂದು ಮತ್ತೆ ಕೆಲವರೂ ಇನ್ನು ಮೇಲೆ

ಚಳವಳಿಯ ಉಸಾಬರಿ ಮಾಡುವದಿಲ್ಲೆಂದು ಕೆಲವರು ಹೀಗೆ ಬೇರೆ ಬೇರೆ ರೀತಿಯಿಂದ ತಮ್ಮ ಅಭಿಪ್ರಾಯಗಳನ್ನು ಗುಪ್ತವಾಗಿ ಸರಕಾರಕ್ಕೆ ತಿಳಿಸಿ ಈ ಮಹನೀಯರು ಬಿಡುಗಡೆ ಹೊಂದುವ ಪ್ರಯತ್ನ ಮಾಡಹತ್ತಿದರು. ಸರಕಾರಕ್ಕೆ ಇದೇ ಬೇಕಾಗಿತ್ತು. ಮನಸ್ಸಿಲ್ಲದ ಕಚ್ಚಾ ಜನರನ್ನು ಬೇಕಂತೆ ಹಿಡಿದು ಜೇಲಿನಲ್ಲಿ ಚಲ್ಲುವದು, ಆ ಮೇಲೆ ಅವರು ಕ್ಷಮೆ ಬೇಡಿದ ಕಾರಣ ಬಿಡುಗಡೆ ಮಾಡಲಾಯಿತೆಂದು ಹೇಳಿ ಜನತೆಯಲ್ಲಿಯ ನೈತಿಕ ಧೈರ್ಯ ಕುಗ್ಗಿಸುವದು ಸರಕಾರವ ನೀತಿಯೇ ಆಗಿತ್ತು. ಕೆಲವರಿಂದ ಕ್ಷಮಾ ಪತ್ರ ಬರೆಯಿಸಿಕೊಂಡು ಕೆಲವದಿಂದ ಬಾಯಿಯಿಂದ ಕ್ಷಮೆ ಬೇಡಿಸಿಕೊಂಡು ಇಂಥವರನ್ನು ಬಿಡುಗಡೆ ಮಾಡಲಾಯಿತು. ಇದರಿಂದ ಸರಕಾರವು ಭಾವಿಸಿದಂತೆ ಜನತೆಯ ನೈತಿಕ ಧೈರ್ಯವಂತೂ ಕಡಿಮೆ ಆಗಲಿಲ್ಲ. ತದ್ವಿರುದ್ಧ ಹೀಗೆ ಬಿಡುಗಡೆಯಾಗಿ ಬಂದವರ ಬಗ್ಗೆ ತಿರಸ್ಕಾರ ಮಾತ್ರ ಬೆಳೆಯಿತು, ಏನೇನೋ ಮಾಡಿ ಎರಡು ಮೂರು ತಿಂಗಳಲ್ಲಿಯೇ ಕೆಲವರು ಹೊರಗೆ ಬಂದರು.

ಮಾಫಿ ಬೇಡುವದಕ್ಕೆ ತಡೆ

೧೯೪೩ ರ ಮಾರ್ಚ ತಿಂಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಭಾರೀ ಬಂಧನ ಸತ್ರನಡೆಯಿತು. ಪೋಲೀಸರ ಅನನ್ವಿತ ಅತ್ಯಾಚಾರಗಳೂ ಆಗ ನಡೆದವು. ಈ ಬಂಧನ ಸತ್ರದಲ್ಲಿ ಹಳ್ಳಿಪಳ್ಳಿಗಳ ಅಲ್ಲದ ಸಲ್ಲದ ಜನರನ್ನು ಎಲ್ಲೆಡೆಯಲ್ಲಿ ಹಿಡಿದು ಹಿಂಡಲಗಿ ಜೇಲಿನಲ್ಲಿ ಸೇರಿಸಿದ್ದರು. ಅವರಲ್ಲಿ ಬಹಳಷ್ಟು ಜನರು ಸರಕಾರಕ್ಕೆ ಕ್ಷಮಾ ಯಾಚನೆಯ ಅರ್ಜಿಗಳನ್ನು ಮಾಡಿಕೊಳ್ಳ ಹತ್ತಿದರು. ಆವರ ಈ ಮಾಫಿ ಅರ್ಜಿಗಳನ್ನು ಶ್ರೀ. ಆರ್, ಎಚ್. ಕುಲಕರ್ಣಿಯವರು ಬರೆದು ಕೊಡುತ್ತಿದ್ದರು. ಈ ಅರ್ಜಿ ಬರೆದು ಅನುಭವವೇ ಮುಂದೆ ತಮ್ಮ ವಕೀಲಿಯಲ್ಲಿ ಒಳ್ಳೇ ಉಪಯೋಗವಾಯಿತೆಂದು ಅವರು ವಿನೋದದಿಂದ ಹೇಳುತ್ತಿರುತ್ತಾರೆ. ಭಟ್ಟ ಫೌಜದಾರರ ಪಿಸ್ತೂಲ ಪ್ರಕರಣದಲ್ಲಿ ವಿಚಾರಣೆಗಾಗಿ ಹೊರಗೆ ಕೊಂಡೊಯ್ದ ಶ್ರೀ. ಜಯದೇವ ಕುಲಕರ್ಣಿಯವರನ್ನೂ ಜೂನ ತಿಂಗಳ ೧೪ ನೇ ದಿನಾಂಕಕ್ಕೆ ಪುನಃ ಹಿಂಡಲಗಿ ಜೇಲಿಗೆ ಹಾಕಿದಾಗ ಅವರಿಗೆ ಈ ಮಾಫಿ ಬೇಡುವವರ ಕ್ಯೂ ಕಾಣಿಸಿತು, ಕೂಡಲೆ ಅಂಥವರಲ್ಲರನ್ನು ಒಂದೆಡೆ ಸೇರಿಸಿ ಅವರಿಗೆ— "ದೇಶಸೇವೆಯ ಈ ಸುಸಂಧಿ ನಿಮಗೆ ಅನಾಯಾಸವಾಗಿ ಒದಗಿದೆ. ಧೈರ್ಯದಿಂದ ಜೇಲು ಸೋಸಿ ಸ್ವರಾಜ್ಯ ಸಂಪಾದನೆಯಲ್ಲಿ ಶ್ರೇಯೋಭಾಗಿ ಆಗಿರಿ. ಕ್ಷಮಾ ಪತ್ರಗಳನ್ನು ಹಿಂದೆಗೆದುಕೊಳ್ಳಿರಿ" ಎಂದು ಮುಂತಾಗಿ ಬೋಧಿಸಿದರು. ಇಂಥ ಅರ್ಜಿ ಬರೆದು ಕೊಡಬಾರದೆಂದು ಶ್ರೀ. ಆರ್. ಎಚ್. ಕುಲಕರ್ಣಿಯವರಿಗೂ ಹೇಳಿದರು. ಆಗ ಈ ಅವಮಾನಕಾರಕ ಕೆಲಸಕ್ಕೆ ತಡೆ ಬಿದ್ದಿತು.

ಜೇಲಿನಲ್ಲಿಯ ಕಷ್ಟಕಾರ್ಪಣ್ಯಗಳು

ಜೇಲಿನ ರುಕ್ಷ ಜೀವನವನ್ನು ಪ್ರತ್ಯಕ್ಷ ಅನುಭವಿಸಿಯೇ ನೋಡದ ಹೊರ್ತು ಉಳಿದವರಿಗೆ ಅದರ ಕಲ್ಪನೆ ಬರಲಾರದು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಮ್ಮ ಜೇಲುಗಳು ಮುಂಚಿನ ಜೇಲುಗಳಾಗಿ ಉಳಿದಿಲ್ಲ. ಈಗ ಅವು ಕಾಲೇಜ ವಿದ್ಯಾರ್ಥಿಗಳ ವಸತಿಗೃಹಗಳಾಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕೈದಿಗಳು ಮೈಯಿಂದ ದಳದಳ ಬೆವರು ಸೋರಿಸುತ್ತ ಬೀಸುವ ಆ ಬೀಸುವ ಕಲ್ಲುಗಳು ಕೈದಿಗಳ ಎದೆ ನಡಗಿಸುತ್ತಿದ್ದವು! ಓಣಿಯ ಬದಿಗೆ ಹಾಗೂ ಹೊಲದಲ್ಲಿ ಹಾಳಿಯ ಮೇಲೆ ಬೆಳೆದ ಗೋಳಿ, ಉತ್ತಾಣಿ ಹಾಗು ಪಪ್ಪಟಿಯಿಯ ತೊಪ್ಪಲ ಕೂಡಿದ ಹಸರಾಣಿ ಪಲ್ಲೆ, ಆ ಪಲ್ಲೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಳಹುಪ್ಪಡಿ, ಇರುವೆ. ಜಿಟ್ಟಿಗಳು, ಅಂದಮಾನದ ಜೇಲಿನಲ್ಲಿ ಪಲ್ಲೆದಲ್ಲಿ ಬರುತ್ತಿದ್ದ ಹಾವಿನ ತುಂಡುಗಳು, ಓದಲು ಪುಸ್ತಕಗಳಿಲ್ಲದ, ಬರೆಯಲು ಕಾಗದ ಪೆನಸೀಲು ಕೊಡದ ಆ ಪ್ರತಿಬುಧ, ವೃತ್ತಪತ್ರಗಳಿಗೆ ಅವಕಾಶವಿಲ್ಲದ ಆ ಕಠೋರ ನಿಯಮ, ಸಾರ್ವಜನಿಕ ಸಂಡಾಸಗಳಲ್ಲ ಜನರು ಸೇದಿ ಒಗೆದ ಬೀಡಿಯ ಸುಟಿಕಗಳಿಗೂ ಒಂದಕ್ಕೆ ಎರಡಾಣೆಯಂತೆ ಕಳವಿನಿಂದ ಕೈದಿಗಳು ಕೂಡುತ್ತಿದ್ದ ಆ ಬೆಲೆ, ಉಪ್ಪಿನ ಹರಳನ್ನೂ ನೋಡಲು ಸಿಗದ ಆ ಜೀವನ, ಜಡ್ಡಾಗಿದೆಯೆಂದು ಕ್ವೆದಿಯು ದವಾಖಾನೆಗೆ ಹೋದರೆ " ಯೇ ಲೇವ್ ದವಾ " (ಇಕೋ ತಕ್ಕೊ ಔಷದ) ಎಂದು ಗರ್ಜಿಸುತ್ತ ಜೇಲ ಡಾಕ್ಟರನು ಕೈದಿಯ ಬೆನ್ನ ಮೇಲೆ ಮಾಡುತ್ತಿದ್ದ ರೂಲ ಕಟ್ಟಿಗೆಯ ಪ್ರಹಾರ, ಸ್ವಾಭಿಮಾನಕ್ಕೆ ಭಂಗ ಬರುವಂಥ ಜೇಲ ನಿಯಮ, ಮತ್ತು ಆ ನಿಯಮಗಳನ್ನು ಮುರಿದದ್ದಕ್ಕೆ ಕೊಡಲಾಗುತ್ತಿದ್ದ ಜೇಲಿನೊಳಗಿನ ವಿಧವಿಧದ ಶಿಕ್ಷೆ, ಕೈದಿವಾರ್ಡರರು ತಮ್ಮ ಕೈಯೊಳಗಿನ ದಂಡಾದಿಂದ ಅಗಾಗ ಕೈದಿಗಳನ್ನು ಹೊಡೆಯುತ್ತಿದ್ದ ಆ ದೃಶ್ಯ, ಆರಾರು ತಿಂಗಳು ವರುಷ ಗಟ್ಟಲೆ ಮನೆಯವರ ಭೆಟ್ಟಿಯಿಲ್ಲದ ಪತ್ರವಿಲ್ಲದ ಮನೋವೇದನೆ, ಎರಡೇ ಎರಡು ಹಸಿಬಿಸಿ ರೊಟ್ಟಿ ಹಸರಾಣಿ ಭಾಜಿ ವರುಷ ಗಟ್ಟಿಲೆ ತಿನ್ನಬೇಕಾದ ಪ್ರಸಂಗ, ಕಾತಿಯ ತಟ್ಟಿನ ಮೇಲೆ ೧॥ ಘೊಟನ ಅಗಲಿನಲ್ಲಿಯೇ ಮಲಗಬೇಕಾಗಿದ್ದ ಆ ಸರ್ಕಸ್ಸು! ಇವನ್ನೆಲ್ಲ ನೆನೆದರೆ ಜೀವನ ಹತಾಶವಾಗದೆ ಉಳಿದೀತೇ?

ದೇಶಭಕ್ತಿಯ ನಿಶೆ ಏರಿದ್ದರಿಂದ ಮತ್ತು ಸಾವಿರಗಟ್ಟಲೆ ಚಳವಳಿ ಜನರು ಜೇಲಿಗೆ ಜಾತ್ರೆಯಂತೆ ಬಂದದ್ದರಿಂದ ಮಾತ್ರ ನಮ್ಮ ಜನರಿಗೆ ಮೇಲಿನ ಕಷ್ಟಗಳಿಲ್ಲವೂ ಸಹನೀಯವಾದವು. ಆದರೂ ದುರ್ಬಲ ಮನಸ್ಸಿನ ಹಲವಾರು ಕಾರ್ಯಕರ್ತರು ರಾತ್ರಿ " ಧುತ್ " ಎಂದು ಎದ್ದು ಕೂತು " ಹೀಗೆಯೇ ನಾವು ಎಷ್ಟುದಿನ ಕಾಲಕಳೆಯ

ಬೇಕಪ್ಪ!'' ಎಂದು ತಮ್ಮಷ್ಟಕ್ಕೆ ತಾವೇ ನಿಟ್ಟುಸಿರು ಬಿಡುತ್ತಿದ್ದರು. ಕ್ರಾಂತಿಯ ಆಂದೋಲನ ನಡೆದಾಗ ಅದರಲ್ಲಿ ಭಾಗವಹಿಸುವವರಲ್ಲಿ ಜನಜಂಗುಳಿಯೂ ಇದ್ದೇ ಇರುವದರಿಂದ ವಿವಿಧ ರೀತಿಯ ಜನ ಈ ಸಾರೆ ಜೇಲಿಗೆ ಬಂದಿದ್ದರು. ಬೀಡಿ ಸೇದುವವರು, ತಂಬಾಕ ತಿನ್ನುವವರು, ನಸ್ಯ ಏರಿಸುವವರು ಮುಂತಾದ ಹಲವಾರು ಚಟಗಳಿದ್ದವರೂ ಆವರಲ್ಲಿ ಸ್ವಾಭಾವಿಕವಾಗಿಯೇ ಅನೇಕರಿದ್ದರು. ವಿಸಾಪೂರ ಜೇಲಿನಲ್ಲಿ ಗಾಂಜಿ ಸೇದುವವರೂ ಒಬ್ಬರಿದ್ದರು. ಸಂಯಮ ವೃತ್ತಿಯ ಕಾರ್ಯಕರ್ತರಿಗೆ ಜೇಲಿನಲ್ಲಿ ವಿಶೇಷ ತೊಂದರೆ ಯಾಗುವದಿಲ್ಲ. ಅದರೆ ಸಾಮಾನ್ಯ ಜೀವಿಗಳಿಗೆ ಜೇಲುಗಳು ಭಾರಿ ಭಯಾನಕವಾಗಿದ್ದವು. ಜಾತ್ರೆಯಂತೆ ಜನ ಜೇಲಿನಲ್ಲಿ ತುಂಬಿದ್ದರಿಂದಲೇ ಒಬ್ಬರನ್ನು ನೋಡಿ ಇನ್ನೊಬ್ಬರು ಇದ್ದುದರಲ್ಲಿಯೇ ಸಮಾಧಾನಪಟ್ಟುಕೊಳ್ಳುತ್ತಿದ್ದರು. ಆದರೂ ತಿಂಗಳುಗಟ್ಟಲೆ ವರುಷ ಗಟ್ಟಲೆ ಮೇಲೆ ವರ್ಣಿಸಿದ ಸ್ಥಿತಿಯಲ್ಲಿ ಜೇಲಿನಲ್ಲಿ ಕಾಲಕಳೆಯುವದು ಸುಲಭವಾಗಿದ್ದಿಲ್ಲ. ಅವರ ಮನಸ್ಥಿತಿಯನ್ನು ಅರಿತು ದುರ್ಬಲತೆಯುಳ್ಳ ಅವರನ್ನು ಹೆಚ್ಚಾಗಿ ಅವರಿಸದಂತೆ ನೋಡುವದೂ ನಿಷ್ಠಾವಂತ ಕಾರ್ಯಕರ್ತರ, ಮುಖಂಡರ ಕರ್ತವ್ಯವಾಗಿತ್ತು. ಆದರೆ ಎಲ್ಲರೂ ಜೇಲಿನಲ್ಲಿಯೇ ಇದ್ದಾಗ ಮುಖಂಡರಾದರೂ ಮಾಡುವದೇನು ?

ಜೇಲಿನಲ್ಲಿ ಉಂಡಿ ಕಡಬುಗಳು !

ಈ ಆಂದೋಲನದಲ್ಲಿ ಜೇಲಿಗೆ ಹೋದವರಲ್ಲಿ ಶಿಕ್ಷೆ ಆದವರು ಸ್ಥಾನಬದ್ಧರು ಹೀಗೆ ಎರಡು ಪ್ರಕಾರದ ಕೈದಿಗಳಿದ್ದರು. ಶಿಕ್ಷೆ ಆದವರಲ್ಲಿ "ಬ" ಮತ್ತು "ಕ" ಹೀಗೆ ಎರಡು ವರ್ಗದವರೂ, ಸ್ಥಾನಬದ್ಧರಲ್ಲಿ ೧ ನೇ ವರ್ಗ ಎರಡನೇ ವರ್ಗ ಹೀಗೆ ಎರಡು ವರ್ಗದವರೂ ಇದ್ದರು. ಅವೆರನ್ನೆಲ್ಲ ಜೇಲಿನಲ್ಲಿಯ ಬೇರೆ ಬೇರೆ ಕಡೆಗೆ ಇಡುತ್ತಿದ್ದರು. ಜೇಲಿನಲ್ಲಿಯ ಕ್ವಾರಂಟಾಯಿನ್ ಹಾಗು ಅಂಡರ ಟ್ರಾಯಲ ವಾರ್ಡಗಳಲ್ಲಿ ೧ ನೇ ವರ್ಗದ ಸ್ಥಾನಬದ್ಧರನ್ನು ಇಟ್ಟಿದ್ದರು. ಉಳಿದವರನ್ನು ಸರ್ಕಲಗಳಲ್ಲಿ ಇಟ್ಟಿದ್ದರು. ಶಿಕ್ಷೆ ಆದವಂಗೆ ಮುಂಜಾನೆ ಜೋಳದ ಹಿಟ್ಟಿನ ಗಂಜಿ, ಮಧ್ಯಾಹ್ನ ಎರಡು ಜೋಳದ ರೊಟ್ಟಿ ಬ್ಯಾಳಿ, ಸಂಜೆಗೆ ರೊಟ್ಟಿ ಜೊತೆಗೆ ತೆಳ್ಳನ ಹಸರಾಣಿ ಭಾಜಿ (ಪಲ್ಯ) ಹೀಗೆ ಆಹಾರ ಕೊಡುತ್ತಿದ್ದರು.

ಸ್ಥಾನಬದ್ಧರಿಗೆ ತಮ್ಮ ಮನೆಯಿಂದ ಬೇಕಾದದ್ದನ್ನು ತರಿಸಿಕೊಳ್ಳಲು ಪ್ರತಿಬಂಧ ವಿದ್ದಿಲ್ಲ. ತಮ್ಮ ಮನೆಯ ಅರವೆ ಅಂಚಡಿ, ಹಾಸಿಗೆ ಹೊದಿಕೆ, ಬೀಡಿ ಸಿಗರೇಟು ನಾಸೀ ಪಂಡಿ, ಚಹಾ, ಕಾಫಿ, ಬ್ರೆಡ್, ಬಿಸ್ಕೀಟು, ಎಣ್ಣೆ, ತುಪ್ಪ, ಉಂಡಿ, ಅಪಲಕ್ಕಿ ಮುಂತಾದ ಬೇಕಾದ ವಸ್ತುಗಳನ್ನು ತಮ್ಮ ಖರ್ಚಿನಿಂದ ತರಿಸಿಕೊಳ್ಳಲು ಅವರಿಗೆ

ಆಸ್ಪದವಿತ್ತು. ಇದಲ್ಲದೆ ಜೇಲಧಿಕಾರಿಗಳು ಅವರಿಗಾಗಿ ಬೇರೆ ಅಡಿಗೆ ಮಾಡಿಕೊಳ್ಳಲೂ ಅವಕಾಶ ಕೊಟ್ಟಿದ್ದರು. ಜೇಲಿನಿಂದ ಕೊಡುವ ಆಹಾರದಲ್ಲಿ ಈ ಸ್ಥಾನಬದ್ದರಿಗೆ ಶಿಕ್ಷೆ ಆದ ಕೈದಿಗಳಿಗೆ ಕೊಡುತ್ತಿದ್ದ ಊಟದಕಿಂತ ತುಸು ಹೆಚ್ಚು ಪದಾರ್ಥಗಳನ್ನೂ ಪೂರೈಸುತ್ತಿದ್ದರು. ಮೇಲಾಗಿ ಇವರಿಗೆ ಕೆಲಸವಿದ್ದಿಲ್ಲ. ರಾಟಿಯ ಮೇಲೆ ನೂಲುವದು ಪುಸ್ತಕ ವರ್ತಮಾನಪತ್ರ ಓದುವದು, ಇಸ್ಪೇಟ ಆಡುವದು, ಹರಟೆ ಹೊಡೆಯುವದು, ತಮ್ಮ ಅಡಿಗೆ ತಾವೇ ಮಾಡಿಕೊಳ್ಳುವದು ಮುಂತಾದರಲ್ಲಿ ಅವರ ವೇಳೆ ಸಹಜವಾಗಿ ಹೋಗುವಂತಿತ್ತು. ಅಡಿಗೆ ಮಾಡಲು ಶಿಕ್ಷೆ ಆದ ಕ್ರಿಮಿನಲ್ ಕೈದಿಗಳನ್ನೂ ಕೊಟ್ಟಿದ್ದರು. ಬೇಕಾದಷ್ಟು ಪತ್ರ ಬರೆಯಲಿಕ್ಕೂ ತರಿಸಲಿಕ್ಕೂ ಪ್ರತಿಬಂಧವಿದ್ದಿಲ್ಲ. ಗುದುಗಿನ ಶ್ರೀ. ಆನಂತರಾವ ಜಾಲಿಹಾಳ ವಕೀಲರು ಮಧ್ವರಾವ ಜೋಶಿ ವಕೀಲರು ಹುಕ್ಕೇರಿ, ಮತ್ತು ಶ್ರೀ. ಆಧ್ಯಾಪಕ ಇವರು ಎಲ್ಲ ಸ್ಥಾನಬದ್ಧರ ಅಡಿಗೆ ಒಂದೆಡೆ ಆಗುವಂತೆಯೂ ಅದನ್ನು ಚನ್ನಾಗಿ ಮಾಡುವಂತೆಯೂ ಉತ್ಸಾಹದಿಂದ ಹೊಣೆಗಾರಿಕೆ ಹೊತ್ತು ಅದನ್ನು ಕಡೆತನಕ ಉತ್ತಮವಾಗಿ ನೀಗಿಸಿದರು,

ಡಾಕ್ಟರ ಹಣಮಂತರಾವ ತೆರಗುಂಡಿಯವರು ಚಳವಳಿಯಲ್ಲಿ ಪ್ರತ್ಯಕ್ಷ ಭಾಗವಹಿಸದೆ ಎಲೆಯ ಮರೆಯಲ್ಲಿಯ ಹೂವಿನಂತೆ ಕಾರ್ಯಕರ್ತರಿಗೆ ಅನೇಕ ರೀತಿಯಿಂದ ಸಹಾಯ ಸಲ್ಲಿಸುತ್ತಿದ್ದರು, ಅವರ ಹಿರಿಯ ಮಗಳ ಮದುವೆ ಇದೇ ಕಾಲಕ್ಕೆ ನಡೆಯಿತು, ಜೇಲಿನಲ್ಲಿಯ ತಮ್ಮ ಬಾಂಧವರ ಕಡೆಗೆ ಅವರ ಲಕ್ಷ್ಯವಿತ್ತು. ಅಂತೆಯೇ ಅವರು ಮದುವೆಯ ಫರಾಳ ಅಂತ ನೂರಾರು ಉಂಡಿ, ಕರಚೀಕಾಯಿ, ಚಿರೋಟಿ, ಚಕ್ಕಲಿ, ಚಿವುಡಾ ಮುಂತಾದವುಗಳನ್ನು ಸ್ಥಾನಬದ್ಧರ ಹೆಸರಿನಿಂದ ಜೇಲಿಗೆ ಕಳಿಸಿದರು. ಈ ಫರಾಳದ ತಿನಸನ್ನು ಯುಕ್ತಿಯಿಂದ ಒಳಗಿನ ನಮ್ಮ ಶಿಕ್ಷೆ ಹೊಂದಿದ ಕೈದಿಗಳಿಗೆ ತುಸು ತಸು ಮುಟ್ಟುವ ವ್ಯವಸ್ಥೆಯನ್ನು ನಮ್ಮ ಸ್ಥಾನಬದ್ಧರು ಮಾಡಿದರು.

ತಮಗೆ ಜೇಲಿನಿಂದ ಸಿಗುತ್ತಿದ್ದ ರೇಶನ್‌ದಲ್ಲಿ ಉಳಿತಾಯ ಮಾಡಿ ಪ್ರತಿ ತಿಂಗಳಿಗೆ ಅಥವಾ ಎರಡು ತಿಂಗಳಿಗೊಮ್ಮೆ ಒಳಗಿನ ನಮ್ಮ ರಾಜಬಂದಿಗಳಿಗೆ ಕಡಬು ಉಂಡಿ, ಜಿಲೇಬಿ ಮುಂತಾದವುಗಳನ್ನು ಮಾಡಿ ಒಬ್ಬೊಬ್ಬರಿಗೆ ಒಂದೊಂದಾದರೂ ಬರುವಂತೆ ಗೋಡೆಯಿಂದ ಗೋಡೆಗೆ ಜಿಗಿದು ಅಥವಾ ವಾರ್ಡರರ ಮುಖಾಂತರ ಹಂಚುವ ಕೆಲಸವನ್ನೂ ಆಗಾಗ ನಮ್ಮ ಸ್ಥಾನಬದ್ಧರು ಮಾಡುತ್ತಿದ್ದರು.

ಶ್ರೀ. ಶಂಕರರಾವ ಕಾಮತ (ಬೈಲಹೊಂಗಲ), ಶಂಕರರಾವ (ಅಣ್ಣಪ್ಪ) ಪದಕಿ (ಸವದತ್ತಿ) ಇವರೂ ಆಗ ಸ್ಥಾನಬದ್ಧತೆಯಲ್ಲಿದ್ದರು. ಇವರಿಬ್ಬರೂ ಶ್ರೀಮಂತರೂ ಉದಾರಿಗಳೂ ಆಗಿದ್ದರು. ದಿನಾಲು ಇವರು ನೂರಾರು ಬಂಡಲ ಬೀಡಿಗಳನ್ನು ಹೊರಗಿನಿಂದ ತರಿಸುತ್ತಿದ್ದರು, ತಾವು ಸೇದುವದು ಅಷ್ಟಕ್ಕಷ್ಟೇ. ಆದರೆ ಜೇಲಿನಲ್ಲಿಯ ಚಟಗಾರ ಕೈದಿಗಳಿಗೆ ತುಸುವಾದರೂ ಸಮಾಧಾನವಾಗುವದಕ್ಕಾಗಿ ಈ ಬಂಡಲುಗಳನ್ನೆಲ್ಲ ಅವರು ಜೇಲಿನಲ್ಲಿಯ ಕೈದಿಗಳಿಗೆ ಹಂಚುತ್ತಿದ್ದರು. ಇದರಿಂದ ಇಡೀ

ಜೇಲಿನಲ್ಲಿ ಇವರಿಬ್ಬರು ಅತ್ಯಂತ ಲೋಕಪ್ರಿಯತೆಯನ್ನು ಸಂಪಾದಿಸಿದರು. ಇವರು ಹೇಳುವ ಯಾವದೇ ಕೆಲಸ ಮಾಡಲು ಕ್ರಿಮಿನಲ ಕೈದಿಗಳು ಸಿದ್ಧರಾಗಿರುತ್ತಿದ್ದರು.

ಎರಡನೆ ವರ್ಗದ ಸ್ಥಾನಬದ್ಧರ ಸ್ಥಿತಿಗತಿ.

ಎರಡನೇ ವರ್ಗದ ಸ್ಥಾನಬದ್ಧರನ್ನು ಮುಖ್ಯವಾಗಿ ೨ ನೇ ನಂಬರ ಸರ್ಕಲದಲ್ಲಿ ಇಟ್ಟಿದ್ದರು, ೧ ನೇ ನಂಬರ ಸರ್ಕಲದಲ್ಲಿಯೂ ಕೆಲವರಿದ್ದರು. ಅವರಿಗೆ ಜೇಲಭಿಸಿಯಿಂದಲೇ ಊಟ ಪೂರೈಸಲಾಗುತ್ತಿತ್ತು. ಅವರಿಗೆ ದಿನಾಲು ಮುಂಜಾನೆ ಚಹಾ ಕೊಡುತ್ತಿದ್ದರು. ಊಟಿಕ್ಕೆ ವಾರದಲ್ಲಿ ಎರಡು ಸಲ (ಬುಧವಾರ, ರವಿವಾರ) ಗೋದಿ ರೊಟ್ಟಿ, ಉಳಿದ ದಿನಗಳಿಲ್ಲಿ ಜೋಳದ ರೊಟ್ಟಿ ಕೊಡುತ್ತಿದ್ದರು. ಚಹಾ ಗೋದಿ ರೊಟ್ಟಿ ಬಿಟ್ಟರೆ ಶಿಕ್ಷೆ ಆದ ' ಕ ' ವರ್ಗದ ಕೈದಿಗಳಂತೆಯೇ ೨ ನೇ ವರ್ಗದ ಡೆಟಿನ್ಯೂಗಳ ಆಹಾರ ವಿದ್ದಿತು. ವಾರಕ್ಕೊಂದು ಪತ್ರ ಬರೆಯಲು ವಾರಕೊಮ್ಮೆ ಮನೆಯವರ ಭೆಟ್ಟಿ ತಕ್ಕೊಳ್ಳಲು ಅನುಮತಿ ಇತ್ತು. ಮುಂದೆ ಜೇಲಧಿಕಾರಿಗಳಗೂಡ ಜಗಳವಾಗಿ ಮುಂಜಾನೆಯ ಚಹಾ ಸ್ವತಃ ಮಾಡಿಕೊಳ್ಳಲು ಇವರಿಗೆ ಒಲೆಯ ಅನುಕೂಲತೆ ಮಾಡಿ ಕೊಡಲಾಯಿತು. ರತ್ನಾಗಿರಿಯ ಶ್ರೀ. ಅಪ್ಪಾಸಾಹೇಬ ಪಟವರ್ಧನ ಅವರು ೨ ನೇ ವರ್ಗವನ್ನು ಬೇಡಿ ಇವರೊಂದಿಗೆ ಸರ್ಕಲದಲ್ಲಿ ಇರುತ್ತಿದ್ದರು. ಜೇಲಿನಲ್ಲಿರುವಾಗಲೆ ಶ್ರೀಮತಿ ಸುಶೀಲಾಬಾಯಿ ಕುಲಕರ್ಣಿಯವರು ಮ್ಯಾಟ್ರಿಕ ಪರೀಕ್ಷೆ ಪಾಸಾದದ್ದು ತಿಳಿದಾಗ ಶ್ರೀ. ಜಯದೇವ ಕುಲಕರ್ಣಿಯವರು ೨ ನೇ ವರ್ಗದ ಸ್ಥಾನಬದ್ಧರಿಗೆ ಹಾಗು ಶಿಕ್ಷೆ ಆದ ರಾಜಬಂದಿಗಳಿಗೆ ಉಂಡಿ ಊಟ ಹಾಕಿಸಿದ್ದರು. ಅವರನ್ನು ವಿಸಾಪೂರ ಜೇಲಿನಿಂದ ೧೯೪೪ ಜಾನೇವಾರಿಯಲ್ಲಿ ಪುನ: ಹಿಂಡಲಗಿ ಜೇಲಿಗೆ ತಂದ ನಂತರ ಅವರು ಮತ್ತು ಶ್ರೀ. ಸದಾಶಿವರಾವ ಪರಾಂಜಪೆಯವರು ರುಚಿಕರ ಅಡಿಗೆ ಮಾಡಿ ೧ ನೇ ಹಾಗೂ ೨ ನೇ ವರ್ಗದ ಸ್ಥಾನಬದ್ಧರಿಗೆ ಒತ್ತಟ್ಟಿಗೆ ಊಣ ಬಡಿಸುತ್ತಿದ್ದರು. ರುಚಿಕರವಾದ ಅಡಿಗೆ ಮಾಡುವದರಲ್ಲಿ ಇವರಿಬ್ಬರೂ ಪಳಗಿದವರಾದುದರಿಂದ ೧ ನೇ ವರ್ಗದಲ್ಲಿಯ ಮುಖಂಡರು ಜೇಲಧಿಕಾರಿಗಳ ಪರವಾನಗಿ ಪಡೆದು ಆಗಾಗ ಇವರಿಬ್ಬರನ್ನು ತಮ್ಮಲ್ಲಿಗೆ ಬರಮಾಡಿಕೊಂಡ್ ಭೋಜನ ಕೂಟ ನಡೆಯಿಸುತ್ತಿದ್ದರು. ಜೇಲು ವಾಸದ ಕೊನೆಯ ದಿನಗಳು ಇಂತು ಸರಾಗವಾಗಿ ಸಾಗಿದವು.

ಅತಾತ್ವಿಕವಾದರೂ ಅತ್ಯಗತ್ಯ.

ಬಂಧಿಸಲ್ಪಟ್ಟ ಮೇಲೆ ಶ್ರೀ. ಅಣ್ಣುಗುರೂಜಿಯವರ ಮೇಲೆ ಯಾವುದೋ ಒಂದು ಖಿಟ್ಲೆ ಹಾಕಿ ೭ ತಿಂಗಳ ಶಿಕ್ಷೆ ವಿಧಿಸಲಾಯಿತು. ಆಗ ಅವರು ಹಿಂಡಲಗಿ ಜೇಲಿನ ೨ ನೇ ಸರ್ಕಲಿನಲ್ಲಿದ್ದರು. ಶಿಕ್ಷೆ ಮುಗಿದ ನಂತರ ಬಿಡುಗಡೆಯಾಯಿತು. ಆದರೆ ಜೇಲಿನ ಬಾಗಿಲದಲ್ಲಿಯೇ ಪೋಲೀಸರು ಅವರನ್ನು ಪುನಃ ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟರು. ಸುಮಾರು ೨ ವರುಷ ಅವರು ಸ್ಥಾನಬದ್ಧತೆಯಲ್ಲಿದ್ದರು. ಈ ಅವಧಿಯಲ್ಲಿ ಶ್ರೀ. ಕುರುಳಕರ

ಎಂಬ ಜೇಲರರು ಇದ್ದರು. ವಿಚಿತ್ರ ಸ್ವಭಾವದ ಈ ವ್ಯಕ್ತಿಯನ್ನು ನೋಡುತ್ತಲೆ ರಾಜ ಬಂದಿಗಳಿಗೆ ನಗೆ ಬರುತ್ತಿತ್ತು. ದಿನಾಲು ಮುಂಜಾನೆ ಎದ್ದ ಕೂಡಲೆ ಸ್ನಾನಬದ್ಧರ ಬರಾಕಿಗೆ ಗೀತೆಯ ಶ್ಲೋಕಗಳನ್ನು ಅನ್ನುತ್ತ ಬರುವ ಪರಿಪಾಠ ಅವರದಿತ್ತು. ಅಣ್ಣು ಗುರೂಜಿಯವರ ಮುಂದೆ ಬಂದು " ಸತ್ಯಂ ವದ ಧರ್ಮಂ ಚರ " ಎಂದು ಅಂದವರೇ " ನೀವು ಬೀಡಿ ಸೇದುವಿರಾ ? " ಎಂದು ಪ್ರಶ್ನಿಸುತ್ತಿದ್ದರು. ಅದಕ್ಕೆ ಅವರು " ನಾನು ಸ್ನಾನಬದ್ಧನಾಗಿರುವೆ, ನನಗೆ ಬೀಡಿ ಸೇದಲು ಅಧಿಕಾರವಿಲ್ಲವೇ ? " ಎಂದು ಮರು ಪ್ರಶ್ನೆ ಹಾಕುತ್ತಿದ್ದರು. ಆಗ ಅವರು—" ನೀವು ಬೀಡಿ ಸೇದುವದಿಲ್ಲೆಂಬದು ನನಗೆ ಗೊತ್ತಿದೆ. ನಾನು ಆ ಬಗ್ಗೆ ಪ್ರತಿಜ್ಞಾಪೂರ್ವಕವಾಗಿ ಹೇಳಬಲ್ಲೆ. ನಿನ್ನೆ ನಿಮ್ಮ ಹೆಸರಿನಿಂದ ೧೦ ಸಾವಿರ ಬೀಡಿ ಯಾರೋ ತಂದು ಇಟ್ಟಿದ್ದಾರೆ. ಆದ್ದರಿಂದ ನಾನು ನಿಮಗೆ ಕೇಳುತ್ತಿದ್ದೇನೆ. ಹೇಳಿರಿ ನೀವು ಬೀಡಿ ಸೇದುವಿರೋ ? " ಎಂದು ತಿರುತಿರುಗಿ ಪ್ರಶ್ನೆ ಹಾಕುತ್ತಿದ್ದರು. ಅಣ್ಣು ಗುರೂಜಿಯವರು ಮತ್ತೆ ಅದೇ ಉತ್ತರ ಕೊಡುತ್ತಿದ್ದರು, ಆಗ ಅವರು " ನೀವು ಖಂಡಿತ ಸೇದುವದಿಲ್ಲ, ಉಳಿದವರಿಗೆ ಅವನ್ನು ಪೂರೈಸುತ್ತೀರೆಂದು ಸಂಶಯವಿದೆ. " ಎಂದು ಅನ್ನುತ್ತಿದ್ದರು. ಅದಕ್ಕೆ ಅಣ್ಣು ಗುರೂಜಿಯವರು—" ಹಾಗೆ ಮಾಡುವಾಗ ನನ್ನನ್ನು ಹಿಡಿದು ಖಿಟ್ಟೆ ಹಾಕಬಹುದು. ನಾನು ಬೀಡಿ ಸೇದುವೆನೋ ಇಲ್ಲವೋ ಎಂಬದನ್ನು ನಿಮಗೆ ಕೇಳಲು ಬರಲಾರದು. ಬೀಡಿ ತರಿಸಲಿಕ್ಕೆ ನನಗೆ ಅಧಿಕಾರ ವಿದೆ ಆದ್ದರಿಂದ ಸುಮ್ಮನೆ ಆ ಬೀಡಿಗಳನ್ನು ನನ್ನ ಕಡೆಗೆ ಕಳಿಸಿರಿ. " ಎಂದು ಹೇಳುತ್ತಿದ್ದರು, " ಸತ್ಯಂ ವದ ಧರ್ಮಂ ಚರ " ಅನ್ನುತ್ತ ಜೇಲರರು ತಿರುಗಿ ಹೋಗಿ ಆ ಬೀಡಿಗಳನ್ನು ಒಳಗೆ ಕಳಿಸುತ್ತಿದ್ದರು. ಅವನ್ನು ಅಣ್ಣು ಗುರೂಜಿಯವರು ಅವರವರಿಗೆ ಮುಟ್ಟಿಸುತ್ತಿದ್ದರು. ಹೀಗ ಯಾವಾಗಲೂ ನಡದೇ ಇತ್ತು.

ಒಮ್ಮೆ ಶ್ರೀ, ಅಧ್ಯಾಪಕರು " ಈ ಸಾರೆ ಒಂದು ಚಲೋ ಊಟ ಮಾಡಿಸತಕ್ಕದ್ದಿದೆ. ಸಾಮಾನು ತರಿಸಿಕೊಡಬೇಕು. " ಎಂದು ಶ್ರೀ. ಜೋಶಿ ನಾರಾಯಣರಾಯರಿಗೆ ಕೇಳಿದರು. " ಬೇಕಾದ ಸಾಮಾನು ತರಿಸಿಕೊಳ್ಳಿರಿ. " ಎಂದು ನಾರಾಯಣರಾಯರು ಒಪ್ಪಿದರು. ಆಗ ಅಧ್ಯಾಪಕರು ರವಾ, ಸಕ್ಕರೆ, ತುಪ್ಪ, ಯಾಲಕ್ಕಿ ಮುಂತಾದ ಸಾಮಾನಿನ ಜೊತೆಗೆ ೧೦ ಸಾವಿರ ಬೀಡಿಗಳನ್ನೂ ಬರೆದು ತರಿಸಿಕೊಂಡರು. ಆ ಸಾಮಾನುಗಳ ಬೆಲೆ ಕೊಡುವಾಗ ಶ್ರೀ. ನಾರಾಯಣರಾಯರು ಯಾದಿ ನೋಡಿದರು. ಅದರಲ್ಲಿ ಬೀಡಿ ೧೦ ಸಾವಿರ ಅಂತ ಇತ್ತು. ಆಗ ನಾರಾಯಣರಾಯರು ಅಧ್ಯಾಪಕರಿಗೆ—" ಅಧ್ಯಾಪಕರೇ ನಿಮಗೆ ಬೇಕಾದಷ್ಟು ಅಕ್ಕಿ, ತುಪ್ಪ, ಸಕ್ಕರಿ ಮುಂತಾದವುಗಳನ್ನು ನನ್ನ ಹೆಸರಿನಿಂದ ತರಿಸಿಕೊಳ್ಳಿರಿ. ಆದರೆ ಬೀಡಿ ಸಿಗರೇಟು ಮುಂತಾದವುಗಳನ್ನು ನನ್ನ ಹೆಸರಲೆ ದಯವಿಟ್ಟು ತರಿಸಬೇಡಿರಿ. " ಎಂದು ಕೇಳಿಕೊಂಡರು. ಶ್ರೀ, ನಾರಾಯಣರಾಯರಂಥವರಿಗೆ ಇದು ಸರಿಯೇ ಇತ್ತು. ಆದರೆ ಒಳಗಿನ ದುರ್ಬಲ ಜನರು ಕ್ಷಮಾಯಾಚನೆ ಮಾಡಿ ಹೊರಗೆ ಹೋಗಬಾರದೆಂದು ಅಣ್ಣು ಗುರೂಜಿಯಂಥವರಿಗೆ ಕೆಲವು ಅತಾತ್ವಿಕ ಕಾರ್ಯಗಳನ್ನು ಜೇಲಿನಲ್ಲಿ ಮಾಡಬೇಕಾಯಿತು,

ಅಣ್ಣಾಗುರೂಜಿಯವರ ಅನುಭವ

ಇಲ್ಲಿ ನನ್ನ ವೈಯ್ಯಕ್ತಿಕ ಜೀವನದ ಬಗ್ಗೆ ಒಂದೆರಡು ಮಾತು ಬರೆದರೆ ತಪ್ಪಾಗ ಲಿಕ್ಕಿಲ್ಲ. ಗಾಂಧೀಜಿಯವರ ವಿಚಾರ ಸರಣಿಯು ನನ್ನ ಜೀವನದ ಮೇಲೆ ಬಹಳಷ್ಟು ಪರಿ ಣಾಮ ಮಾಡಿದೆ. ಗಾಂಧಿಜಿಯವರ ವಿಹಾರಗಳನ್ನು ನನ್ನ ಮಟ್ಟಿಗೆ ನಾನು ಆದಷ್ಟು ಕಟ್ಟುನಿಟ್ಟಾಗಿ ಕಾರ್ಯರೂಪದಲ್ಲಿ ತರುವ ಪ್ರಯತ್ನ ಈ ವರೆಗೂ ಮಾಡುತ್ತ ಬುದಿ ದ್ದೇನೆ. ಆದರೆ ಅನ್ಯರು ಅಷ್ಟೇ ಕತೊರವಾಗಿ ಗಾಂಧಿವಿಚಾರಗಳನ್ನು ತಮ್ಮ ಜೀವನ ದಲ್ಲಿ ಅಳವಡಿಸಿಕೊಂಡಿರದಿದ್ದರೆ ಅವರ ಬಗ್ಗೆ ನನಗೆ ತಿರಸ್ಕಾರವಿಲ್ಲ. ನಾನು ಅದರ ಬಗ್ಗೆ ಎಂದೂ ಯಾರನ್ನೂ ಹೀಯಾಳಿಸಲಿಲ್ಲ.

ನನಗೆ ೧೯೩೦ ನೇ ಇಸವಿಯಲ್ಲಿ ಮೊದಲನೇ ಸಲ ೯ ತಿಂಗಳು ಶಿಕ್ಷೆಯಾಯಿತು. ಶಿಕ್ಷೆಯ ಮೊದಲು ೩ ದಿನ ನಾನು ಸೀ ಕ್ಲಾಸ ಕೈದಿಗಳ ಜೊತೆಗಿದ್ದೆ. ಜೇಲಿನಲ್ಲಿ ಕ್ಲಾಸು ಗಳಿದ್ದೆದ್ದು ನನಗೆ ಗೊತ್ತೇ ಇರಲಿಲ್ಲ. ಎ, ಬಿ. ಸಿ. ಕ್ಲಾಸುಗಳೆಂದು ಸರಕಾರದವರು ಮೂರು ವರ್ಗಗಳನ್ನು ಅದೇ ಸಾರೆ ಮಾಡಿದ್ದರು. ಎ ಕ್ಲಾಸಿನಲ್ಲಿ ಶ್ರೀ. ದಿವಾಕರ ರಂಗ ರಾಯರೂ ಬಿ ಕ್ಲಾಸಿನಲ್ಲಿ ಶ್ರೀ. ನಾರಾಯಣರಾವ ಜೋಶಿ, ಕೇಶವರಾಯ ಗೋಖಲೆ. ಬಳವಂತರಾವ ದಾತಾರ, ಬಾಬುರಾವ ಠಾಕೂರ, ವಾಮನರಾವ ಬಿದರಿ ಮೊದಲಾದ ವರಿ ದ್ದರು. ಉಳಿದ ನೂರಾರು ಕಾರ್ಯಕರ್ತರೆಲ್ಲ ಸೀ ಕ್ಲಾಸಿನಲ್ಲಿಯೇ ಇದ್ದರು. ದೇಶಕ್ಕಾಗಿ ಸೆರೆಮನೆ ಸೇರುವದೆಂದು ಒಂದೇ ಕೆಲಸಮಾಡಿ ಶಿಕ್ಷೆಯಾದವರಲ್ಲಿ ಹೀಗೇಕೆ ವರ್ಗ ಮಾಡ ಬೇಕು? ಬೀ ಕ್ಲಾಸಿನಲ್ಲಿ ಕುಳಿತ ನಮ್ಮ ಮುಖಂಡರಿಗೆ ನಾವು ಸೀ ಕ್ಲಾಸಿನಲ್ಲಿ ತಿನ್ನುತ್ತಿ ರುವ ಹಸಿಬಿಸಿ ರೊಟ್ಟಿ ಹಸರಾಣಿ ಭಾಜಿ ಕಾಣುವದಿಲ್ಲವೇ ? ಇವರೆಂಥ ಮುಖಂಡರು? ಎಂದು ಧಿಃಕರಿಸಿ ನಮ್ಮ ಕಾರ್ಯಕರ್ತರು ಮಾತಾಡುತ್ತಿದ್ದರು. ಆಗ ನಾನು "ಸರ ಕಾರ ಮಾಡಿದ ವರ್ಗಗಳು ಅನ್ಯಾಯದ್ದೇನೋ ನಿಜ. ಆದರೆ ನಾವೆಲ್ಲರೂ ಸೀ ಕ್ಲಾಸಿ ನಲ್ಲಿ ಕೆಟ್ಟ ಊಟ ಮಾಡುವದಕ್ಕಿಂತ ನಮ್ಮಲ್ಲಿಯ ಕೆಲವರಿಗಾದರೂ ಬೀ ಕ್ಲಾಸದಲ್ಲಿ ಚಲೋ ಊಟ ಸಿಗುತ್ತಿದ್ದರೆ ನಾವೇಕೆ ಸಂಕಟ ಪಡಬೇಕು" ಎಂದು ಸಮಾಧಾನ ಹೇಳು ತ್ತಿದ್ದೆ.

ನನ್ನ ದುರ್ದೈವದಿಂದಲೋ ಸುದೈವದಿಂದಲೋ ನನಗೆ ಮುಂದೆ ಬಿ ಕ್ಲಾಸು ದೊರೆಯಿತು. ಅಲ್ಲಿ ಹೋಗಿ ನಾವು ಕೆಲವರು ಒಂದು ಚಳವಳಿಯನ್ನೇ ಪ್ರಾರಂಭಿಸಿ ದೆವು. ಶ್ರೀ. ರಾಮಕೃಷ್ಣ ಪ್ರಭು, ಶ್ರೀಪಾದರಾವ ಕಿತ್ತೂರ ಮೊದಲಾದವರು ನನ್ನೊಂದಿಗೆ ಈ ಚಳವಳಿಯಲ್ಲಿದ್ದರು. ಎಲ್ಲ ರಾಜಕೀಯ ಕೈದಿಗಳಿಗೆ ಬಿ ಕ್ಲಾಸೊಂದೆ ಕೊಡಬೇಕು ಅಥವಾ ನಮಗೂ ಸಿ ಕ್ಲಾಸಿನದೇ ಊಟ ಕೊಡಬೇಕು ಎಂಬುದೇ ನಮ್ಮ

ಚಳವಳಿ ಆಗಿತ್ತು. ಶ್ರೀ. ದಿವಾಕರ, ದಾತಾರ ಮೊದಲಾದ ಕೆಲ ಮುಖಂಡರು ನಮ್ಮ ಚಳವಳಿಗೆ ಬೆಂಬಲಕೊಟ್ಟರು. ಸರಕಾರವು ನಮ್ಮ ಮೊದಲನೇ ಬೇಡಿಕೆಯನ್ನು ಮಾನ್ಯ ಮಾಡುವದು ಶಕ್ಯವಿದ್ದಿಲ್ಲ. ಅರ್ಥಾತ್ ನಮ್ಮ ಎರಡನೇ ಬೇಡಿಕೆಗೆ ಅವರ ಅಡ್ಡಿಯಿದ್ದಿಲ್ಲ. ಆದ್ದರಿಂದ ಬಿ ಕ್ಲಾಸಿನಲ್ಲಿಯೇ ನಮ್ಮ ಶಿಕ್ಷೆ ಮುಗಿಯುವ ವರೆಗೆ ನಾವು ೧೫ ಜನರು ಸಿ ಕ್ಲಾಸ ಊಟವನ್ನೇ ತಕ್ಕೊಳ್ಳುತ್ತಿದ್ದೆವು.

ಮುಂದೇ ನಾಲ್ಕು ಸಲ ನಾನು ಬೇರೆ ಬೇರೆ ಇಸವಿಯ ಚಳವಳಿಗಳಲ್ಲಿ ಜೇಲಿಗೆ ಹೋಗಿ ಶಿಕ್ಷೆ ಅನುಭವಿಸಿದೆ. ಈ ಎಲ್ಲ ಶಿಕ್ಷೆಗಳಲ್ಲಿಯೂ ನನಗೆ ಸಿ ಕ್ಲಾಸವನ್ನೇ ಕೊಟ್ಟವ್ವರಿಂದ ಎಲ್ಲರ ಜೊತೆಗೆ ಇದ್ದ ಆನಂದವನ್ನು ನಾನು ಅನುಭವಿಸಿದೆ. ಒನೇ ಸಲ ನನ್ನನ್ನು ಸ್ಥಾನ ಬದ್ಧತೆಯಲ್ಲಿಟ್ಟಿದ್ದರು. ಆಗಲೂ ನಾನು ಸಿ ಕ್ಲಾಸದ ಊಟವನ್ನೇ ತಕ್ಕೊಳ್ಳುತ್ತಿದ್ದೆ. ಆದರೆ ಡಬಟನ್ನೂ ಅಂತ ನನಗೆ ಸಿಗುತ್ತಿದ್ದ ಸವಲತ್ತುಗಳ ಉಪಯೋಗವನ್ನು ದುರ್ಬಲ ಮನಸ್ಸಿನ ನಮ್ಮ ರಾಜಕೀಯ ಕೈದಿಗಳಿಗಾಗಿ ಮಾಡಿದ್ದು, ಅದು ಜೇಲ ನಿಯಮಕ್ಕೆ ವಿರುದ್ಧವಾಗಿದ್ದರೂ ಆದನ್ನು ಮಾಡಿದೆ. ನನ್ನ ಮುಂದೆ ಒಂದು ದೃಷ್ಟಿಯಿತ್ತು– ಸ್ಥತಃ ಸಾಮಾನ್ಯರಂತೆ ಇರುವದು ಮತ್ತು ಸಾಧ್ಯವಿದ್ದ ಎಲ್ಲ ಸವಲತ್ತುಗಳನ್ನು ಅಶಕ್ತ ದುರ್ಬಲ ಮನಸ್ಸಿನ ನಮ್ಮ ಬಂಧುಗಳಿಗೆ ದೊರಕಿಸಿಕೊಡುವದು. ದೇವರು ಕೊನೆಯ ವರೆಗೂ ಈ ವ್ರತ ಪಾಲಿಸುವಂತೆ ನನಗೆ ಧೈರ್ಯ, ಸಂಯಮ ಮತ್ತು ಶಕ್ತಿಗಳನ್ನು ಒದಗಿಸಿದ್ದು ನನ್ನ ಸುದೈವ ! ನಾನು ಮಾಡಿದ್ದು ಸರಿಯೋ ಅಲ್ಲವೋ ತಿಳಿಯದು. ಆದರೆ ಅದರಿಂದ ನನ್ನ ಮನಸ್ಸಿಗೆ ಪೂರ್ಣ ಸಮಾಧಾನವಾಗಿದೆಯೆಂಬುದನ್ನು ಹೇಳದಿರಲಾರೆ.

ತಿಗಡೊಳ್ಳಿಯ ಶ್ರೀ. ಶಿವಪ್ಪ ಮಲಶೆಟ್ಟಿ ಎಂಬವರು ನಮ್ಮೊಂದಿಗೆ ಸ್ನಾನಬದ್ಧತೆಯಲ್ಲಿದ್ದರು. ಅವರಿಗೆ ಮೂಗಿನಲ್ಲಿ ಏನೋ ರೋಗವಾದದ್ದರಿಂದ ಹೊಲಸು ವಾಸನೆ ಬರುತ್ತಿತ್ತು. ಅದರಲ್ಲಿ ಅವರದೇನು ತಪ್ಪು ? ರೋಗ ಬರುವದು ಭೋಗಿಸುವದು ದೈವ ನಿರ್ಮಿತವಾಗಿರುವಾಗ ಇಂಥ ರೋಗಿಗಳೊಂದಿಗೆ ಅವರ ಮನಸ್ಸಿಗೆ ನೋವಾಗದಂತೆ ನಡೆಯುವದು ಮನುಷ್ಯಧರ್ಮ. ಆದರೆ ಅನೇಕರು ಅವರೊಂದಿಗೆ ಇರಲು ಇಷ್ಟಪಡುತ್ತಿದ್ದಿಲ್ಲ. ನನಗೆ ಇದರ್ನು ನೋಡಿ ಕನಿಕರವೂ ದುಃಖವೂ ಆಯಿತು. ನಮ್ಮ ಬರಾಕಿನಲ್ಲಿಯೇ ಅವರನ್ನು ಕರೆತಂದು ಅವರೊಂದಿಗೆ ಹರಟೆ ಹೊಡೆಯುವದು ನೂಲುವದು, ಅಭ್ಯಾಸ ಹೇಳುವದು ಮುಂತಾದುದನ್ನು ಮಾಡುತ್ತ ಸಾಧ್ಯವಿದ್ದಷ್ಟು ಅವರು ತಮ್ಮ ಕಷ್ಟ ಹಗರು ಮಾಡಿಕೊಳ್ಳುವಂತೆ ಮಾಡಿದೆ.

ಶ್ರೀ. ಅಂಣಾಸಾಹೇಬ ಸಹಸ್ರಬುದ್ಧೆ

ಮಹಾರಾಷ್ಟ್ರದ ಪ್ರಸಿದ್ಧ ತತ್ವನಿಷ್ಠ ಗಾಂಧೀವಾದಿ ಮುಖಂಡರೂ ಧೇಯವಾದಿ ಕರ್ಮಯೋಗಿಗಳೂ ಬ್ರಹ್ಮಚಾರಿಗಳೂ ಆದ ಶ್ರೀ. ಅಣ್ಣಾಸಾಹೇಬ ಸಹಸ್ರಬುದ್ಧೆಯವರೂ ನಮ್ಮ ಜೊತೆಗೆ ಹಿಂಡಲಗಿ ಜೇಲಿನಲ್ಲಿ ಸ್ಥಾನಬದ್ಧರಾಗಿ ಎರಡು ವರುಷಗಳ ವರೆಗೆ ಇದ್ದರು. ತರುಣ ಕಾರ್ಯಕರ್ತರ ಮೇಲೆ ಅವರ ಪ್ರೀತಿ ಬಹಳ. ಚೂರುಚಾರು ತತ್ವಬಿಟ್ಟು ನಡೆದರೂ ಅಡ್ಡಿಯಿಲ್ಲ ಆದರೆ ಪುರುಷಾರ್ಥ ಮಾಡಬೇಕೆಂಬುದೇ ಅವರ ಕಟಾಕ್ಷ. ಗಾಂಧೀವಾದದ ಮುಸುಕಿನಲ್ಲಿ ಹೇಡಿತನ ತೋರಿಸುವದನ್ನು ಅವರು ಉಗ್ರವಾಗಿ ಖಂಡಿಸುತ್ತಿದ್ದರು. ಪುಣೆಯಲ್ಲಿ ಅವರು ಬಾಂಬು ತಯಾರಿಸುತ್ತಿರುವರೆಂಬ ಸಂಶಯದಿಂದ ಪೋಲೀಸರು ಅವರನ್ನು ಬಂಧಿಸಿದ್ದರು. ಅವರು ದಿನಾಲು ಸ್ಥಾನಬದ್ಧರ ಬರಾಕಿನಲ್ಲಿ ವ್ಯವಸ್ಥಿತವಾದ ಕಾರ್ಯಕ್ರಮವನ್ನು ರೂಢಿಗೊಳಿಸಿದರು. ಮುಂಜಾನೆ ಸರಿಯಾಗಿ ೪ ಗಂಟೆಗ ಏಳುವದು, ೪॥ ಯಿಂದ ೫॥ ವರೆಗೆ ಸಾಮೂಹಿಕ ಪ್ರಾರ್ಥನೆ ವಾಚನ, ೫॥ ದಿಂದ ೭ ರ ವರೆಗೆ ಸ್ನಾನ ವ್ಯಾಯಾಮ ಆಸನ ಮುಂತಾದವು, ೭ ರಿಂದ ೯ ರ ವರೆಗೆ ನೂಲುವದು, ೯ ರಿಂದ ೧೧ ಅಡಿಗೆ ಊಟ, ೧೨ ರಿಂದ ೨ ವಿಶ್ರಾಂತಿ, ೨ ರಿಂದ ೪ ವಾಚನ ನೂಲುವದು, ೪ ರಿಂದ ೬ ರ ವರೆಗೆ ಅಡ್ಡಾಡುವದು, ಊಟ. ರಾತ್ರಿ ೭ ರಿಂದ ೮॥ ವಾಚನ ಭಾಷಣ ಮುಂತಾದವು. ೮॥ ಯಿಂದ ೯॥ ಸಾಮೂಹಿಕ ಪ್ರಾರ್ಥನೆ. ಹೀಗೆ ವೇಳಾಪತ್ರಿಕೆಯಂತೆ ಆಶ್ರಮ ರೀತಿಯ ಕಾರ್ಯಕಲಾಪ ನಡೆಯುತ್ತಿದ್ದವು. ಶ್ರೀ. ಅಂಣಾಸಾಹೇಬರು ಬರಾಕಿಗೆ ಹಿರಿಯರಾಗಿ ನೇತೃತ್ವವಹಿಸಿ ಕಾರ್ಯಸಾಗಿಸುತ್ತಿದ್ದರು. ಇಂಥ ಮಹನೀಯರ ಸತ್ಸಂಗದಿಂದ ಎಲ್ಲ ಕಾರ್ಯಕರ್ತರಿಗೆ ಆದ ಲಾಭ ಅಷ್ಟಿಷ್ಟಲ್ಲ.

ಹುಬ್ಬಳ್ಳಿಯ ಕಠೋರ ದೇಶಭಕ್ತರೊ ಸ್ವತಂತ್ರ ವಿಚಾರ ಧಾರೆಯವರೂ ಆದ ಶ್ರೀ. ವಿಷ್ಣು ಕೃಷ್ಣ ಗೋಖಲೆಯವರು ರಾತ್ರಿ ವೇಳೆಯಲ್ಲಿ ನಕ್ಷತ್ರಗಳನ್ನು ತೋರಿಸುತ್ತ ಜ್ಯೋತಿಃ ಶಾಸ್ತ್ರದ ಪರಿಚಯ ಮಾಡಿಕೊಡುತ್ತಿದ್ದರು.

ಶ್ರೀ. ದುಬೆಯವರ ದುರ್ಬಲತೆ.

ಒಂದು ದಿನ ಭಾಜೀ ಕಮೀಟಿಯು ಜನರು ನಮ್ಮ ಬರಾಕಿಗೆ ಬಂದಾಗ ಒಂದು ಘಟನೆ ನಡೆಯಿತು. ಭಾಜಿ ಕಮೀಟಿಯೆಂದರೆ ಜೇಲಿನಲ್ಲಿಯ ಅಡಿಗೆ ಊಟ ಮುಂತಾದವು ಸರಿಯಾಗಿ ನಡೆದಿವೆಯೋ, ಜನರ ತಕರಾರು ಏನಾದರೂ ಅವೆಯೋ,

ಎಂಬದನ್ನು ಕೇಳಿ ಹೋಗಲು ಸರಕಾರದವರು ತಮ್ಮ ರಾಜನಿಷ್ಠ ಜನರನ್ನೊಳಗೊಂಡು ಕೆಲ ಅಧಿಕಾರಿಗಳಿಂದ ಕೂಡಿದ ಒಂದು ಕಮೀಟಿಯನ್ನು ನೇಮಿಸಿದ್ದರು. ಮೂರು ತಿಂಗಳಿಗೊಮ್ಮೆ ಈ ಕಮೀಟಿಯು ಜೇಲಿಗೆ ಬಂದು ಹೋಗುತ್ತಿತ್ತು. ಅವರ ಶಿಫಾರಸು ಗಳಿಗೂ ಯಾವದೇ ಬೆಲೆಯಿದ್ದಿಲ್ಲ. ಇಂಥ ಒಂದು ಕಮೀಟಿಯು ಒಮ್ಮೆ ನಮ್ಮ ಸ್ಥಾನ ಬದ್ಧರ ಬರಾಕಿಗೆ ಬಂತು. ಆಗ ನಮ್ಮ ಜೊತೆಗೆ ಧಾರವಾಡದ ಶ್ರೀ. ಶಂಕರ ಕುರ್ತಕೋಟಿಯವರೂ ವಿಜಾಪೂರದ ಶ್ರೀ. ರಾಜಾರಾಮ ದುಬೆಯವರೂ ಇದ್ದರು. ಶ್ರೀ. ದುಬೆಯವರು ಈ ಕಮೀಟಿಯ ಸದಸ್ಯರನ್ನು ಕಂಡು–" ನಾನು ಯಾವ ತಪ್ಪು ಮಾಡಿದೆನೆಂದು ಸರಕಾರ ನನ್ನನ್ನು ಹಿಡಿದು ಸ್ಥಾನಬದ್ಧತೆಯಲ್ಲಿಟ್ಟಿದೆ ? ನನಗೆ ಚಳವಳಿಯ ಯಾವ ಸಂಬಂಧವೂ ಇಲ್ಲ. ಹೀಗಿದ್ದರೂ ನನ್ನನ್ನು ಹಿಡಿದು ಇಟ್ಟಿರುವದು ನ್ಯಾಯವೇ? ನನ್ನನ್ನು ಕೂಡಲೆ ಬಿಡುವಂತೆ ರಿಪೋರ್ಟು ಮಾಡಬೇಕು" ಎಂದು ಕೇಳಿಕೊಂಡರು. ಇದು ನಮ್ಮ ಕೆಲಸವಲ್ಲ ಎಂದು ಹೇಳಿ ಕಮಿಟಿಯವರು ತಿರುಗಿ ಹೊರಟು ಹೋದರು.

ಭಾಜಿ ಕಮೀಟಿಯವರು ಹೋದ ಬಳಿಕ ಶ್ರೀ. ಶಂಕರ ಕುರ್ತಕೋಟಿಯವರು ಶ್ರೀ. ದುಬೆಯವರ ಹತ್ತರ ಹೋಗಿ " ದುಬೆಯವರೇ ನೀವು ಎಲ್ಲ ಸ್ಥಾನಬದ್ಧರ ಮಾನ ಕಳೆದು ಬಿಟ್ಟಿರಿ. ಭಾಜಿ ಕಮೀಟಿಯು ಮುಂದೆ ಚಳವಳಿಗೆ ನಿಮ್ಮ ಯಾವ ಸಂಬಂಧವೂ ಇಲ್ಲವೆಂದು ಯಾಕೆ ಹೇಳಿದಿರಿ? ಇದು ನಿಮ್ಮ ಹಾಗೂ ನಮ್ಮೆಲ್ಲರ ಅಪಮಾನವಲ್ಲವೇ?" ಎಂದು ಕೇಳಿದರು. ಆಗ ಕೂಡಲೆ ಶ್ರೀ. ದುಬೆಯವರು ಕ್ರೋಧಸಂತಪ್ತರಾಗಿ ತಮ್ಮ ಕಾಲೊಳಗಿನ ಪಾದರಕ್ಷೆಯನ್ನು ತಕ್ಕೊಂಡು ಕುರ್ತಕೋಟಿಯವರಿಗೆ ಫಟ್‌ಫಟ್ ಎಂದು ಎರಡು ಪೆಟ್ಟು ಹಾಕಿದರು ! ಆಲ್ಲಿಯೇ ಸಮೀಪದಲ್ಲಿದ್ದ ಶ್ರೀ. ಅಣ್ಣಾ ಸಾಹೇಬರು ಮುಂದೆ ಹೋಗಿ ಕುರ್ತಕೋಟಿಯವರನ್ನು ಎಳೆದು ಕೊಂಡು ಬಂದರು. ಶ್ರೀ. ಕುರ್ತ ಕೋಟಿಯವರು ನಮಗೆಲ್ಲ ತಿಳಿದಂತೆ ಶೀಘ್ರ ಕೋಪಿಗಳು, ಹೊಡದಾಟ ಪ್ರಿಯರು. ಶ್ರೀ. ದುಬೆಯವರಿಗಿಂತ ತರೀರ ಸಾಮರ್ಥ್ಯದಲ್ಲಿ ಸಹ ಬಲಿಷ್ಟರೂ ಆಗಿದ್ದರು. ಬರಾಕದ ಎಲ್ಲ ಜನರೂ ಈ ಘಟನೆಯನ್ನು ನೋಡಿ ದಿಙ್ಮೂಢರಾದೆವು. ಕುರ್ತಕೋಟಿಯವರು ಆಶ್ಚರ್ಯಕಾರಕ ಸಂಯಮ ತಳೆದರು. ಜೇಲಜೀವನಕ್ಕೆ ಬೇಸತ್ತು ನಿರಾಶರಾಗಿ ಶ್ರೀ. ದುಬೆಯವರು ಈ ಅವಿವೇಕತನ ಮಾಡಿರುವರೆಂದೂ ಅವರ ಬಗ್ಗೆ ವಿಚಾರಿಸ ಬಾರದೆಂದೂ ಎಲ್ಲರೂ ನಿರ್ಣಯಿಸಿದರು.

ಈ ರೀತಿಯ ಅಳುಬುರಕ ದೇಶಭಕ್ತರೇ ಮುಂದೆ ದೊಡ್ಡ ಮುಖಂಡರಾಗಿ ಮೆರೆದರು. ಪಾರ್ಲಿಮೆಂಟಿನ ಸಭಾಸದರಾದರು, ಕೇಂದ್ರ ಉಪಮಂತ್ರಿಯ ಸ್ಥಾನಕ್ಕೆ ಸಮಾನವಾದ ಅಧಿಕಾರದ ಗದ್ದುಗೆಯೆನ್ನು ಏರಿದರು. ಸ್ವಾಭಿಮಾನಿ ಕುರ್ತೆಕೋಟಿಯವರು ಕಡೆತನಕ ಸ್ವಯಂ ಸೇವಕರಾಗಿಯೇ ಉಳಿದರು ।

ಖಾನೆಕೊ ನ್ಯೆಂ ಔರ್ ಲಡನೆಕೊ ಮೇರಾ ಬಡಾ ಭಾಯಿ!

೧೯೨೮ ನೇ ಇಸವಿಯಲ್ಲಿ ನಡೆದ ಮತ್ತೊಂದು ಚಿಕ್ಕ ಘಟನೆ ನೆನಪಿಗೆ ಬರುತ್ತದೆ. ಚಿಕ್ಕ ನವಕರಿಗೆ ರಾಜೀನಾಮೆ ಕೊಟ್ಟು ೧೯೨೧ ನೇ ಇಸವಿಯಲ್ಲಿ ಮನೆತನವೆಲ್ಲ ಖಾದಿ ಧಾರಿಯಾಗಿ ಚಳವಳಿಯಲ್ಲಿ ಭಾಗವಹಿಸಿ ಮೂರು ವರುಷ ರಾಷ್ಟ್ರೀಯ ಶಾಲೆ ನಡಿಸಿ ಮೂರು ವರುಷ ಖಾದಿಕಾರ್ಯಕರ್ತನಾಗಿ ಕೆಲಸ ಮಾಡಿದ ನಾನು, ೧೯೨೮ ರ ಸುಮಾರಿಗೆ ದೇಶವೆಲ್ಲ ನಿರಾಶೆಯ ಕತ್ತಲಲ್ಲಿ ಮುಳುಗಿದಾಗ, ನಮ್ಮ ಮನೆತನದ ವತನೀ ಹಕ್ಕಾದ ಕುಲಕರ್ಣಿಕಿ ಮಾಡಬೇಕೆಂದು ಅದರ ನೇಮಣೂಕಿಗಾಗಿ ಚಿಕ್ಕೋಡಿ ರೋಡ ಸ್ಟೇಶನ್ ಹತ್ತರದ ಜೋಡಟ್ಟಿ ಸರಕಾರಿ ಬಂಗ್ಲೆಗೆ ಪ್ರಾಂತ ಸಾಹೇಬರ ಕಡೆಗೆ ಹೋಗಿದ್ದೆ. ಪ್ರಾಂತ ಸಾಹೇಬರಾಗಿದ್ದ ಶ್ರೀ. ಜಿ. ಎ. ಹಿರೇಮಠ ಎಂಬವರು ನನಗೆ ಒಂದು ಕರಾರು ಹಾಕಿದರು. ಟೆರಿಟೋರಿಯಲ್ ಫೋರ್ಸದಲ್ಲಿ (ಸರಕಾರಿ ಪ್ರಾದೇಶಿಕ ಸೈನ್ಯ ಪಡೆ) ಸೇರುವದಾದರೆ ಕೂಡಲೇ ಕುಲಕರ್ಣಿ ಕೆಲಸ ಕೊಡುಪೆನೆಂದು ಅವರು ಹೇಳಿದಾಗ "ಅದನ್ನು ನಾನು ಮಾಡಲಾರೆ, ಸರಕಾರದ ನವಕರಿ ನಾನು ಮಾಡುವದಿಲ್ಲ. ಕುಲಕರ್ಣಿಕಿಯು ವತನ ಇರುವದರಿಂದ ಅದು ನವಕರಿಯಲ್ಲ" ಎಂದು ಮುಂತಾಗಿ ಹೇಳಿದೆ. ಅಲ್ಲಿಯೇ ಶ್ರೀ ಎಂ. ಪಿ. ಪಾಟೀಲರು (ಸಂಕೇಶ್ವರ) ಮಿಲಿಟರಿ ವೇಷಧಾರಿಯಾಗಿ ಕುಳಿತಿದ್ದರು. ಅವರು ಅದೇ ತಾನೆ ಎಲ್. ಎಲ್. ಬಿ. ಆಗಿ ಬಂದಿದ್ದರು. ಟೆರಿಟೋರಿಯಲ್ ಫೋರ್ಸಿನಲ್ಲಿ ಅವರು ಜಿಲ್ಲಾ ಕಮಾಂಡಂಟರಾಗಿದ್ದರು. ಅವರು ನನ್ನನ್ನು ಬದಿಗೆ ಕರೆದು "ಖಾದಿಯ ಈ ಹುಚ್ಚು ಚ್ಚಾರ ಅರಿವೆ ಧರಿಸಿರುವ ನೀವು ಪಾಚ್ಛಾಪುರದವರೇ" ಎಂದು ಕೇಳಿದರು. ನಾನು "ಆಹುದು" ಎಂದೆ, ಅವರು ಮತ್ತೆ ಹೇಳಹತ್ತಿದರು "ಹುಚ್ಚಾ, ನಿನಗೆ ಸರಕಾರದರಬಾರದಲ್ಲಿ ಮಾನ ಸಿಗುವದು. ಸುಮ್ಮನೆ ನಮ್ಮ ಟೆರಿಟೋರಿಯಲ್ ಫೋರ್ಸಿಗೆ ಸೇರು. ಕುಲಕರ್ಣಿಕಿ ನೇಮಣೂಕಿಯೂ ಆಗುವದು ಸರಕಾರಿ ಮಾನವೂ ಸಿಗುವದು" ಎಂದು ಪರಿಪರಿಯಾಗಿ ಹೇಳಿದರೂ ನಾನದಕ್ಕೆ ಒಪ್ಪದೆ ತಿರುಗಿ ಬಂದೆ.

೧೯೪೨ ರ ಆಗಸ್ಟ ಕ್ರಾಂತಿ ಆರಂಭವಾದ ಮೇಲೆ ಪಂತ ಬಾಳೇಕುಂದ್ರಿಯಲ್ಲಿ ಭೂಗತ ಕಾರ್ಯಕರ್ತರ ಗುಪ್ತ ಸಭೆ ಕೂಡಿದಾಗ ಶ್ರೀ. ಎಂ. ಪಿ. ಪಾಟೀಲರೂ ಬಂದಿದ್ದರು. ಆವರು "ಈ ಚಳವಳಿಯು ನಮ್ಮಂಥವರಿಗೆ ನೀಗುವದಲ್ಲ. ಹೊರಗೆ ಉಳಿಯಲು ನನಗೆ ಸಾಧ್ಯವಿಲ್ಲ" ಎಂದು ಎರಡೇ ಎರಡು ಮಾತು ಹೇಳಿ ಬೆಳಗಾವಿಗೆ ಹೋಗಿ ಪೋಲೀಸರಿಂದ ಬಂಧಿತರಾಗಿ ಜೇಲಿಗೆ ಹೋಗಿ ಬಿಟ್ಟರು. ಇವರೇ ಮುಂದೆ ಶಾರೀರಿಕವಾಗಿ ಅಸಮರ್ಥರಾಗುವ ವರೆಗೂ ಅಖಂಡವಾಗಿ ಮಂತ್ರಿಗಳಾದರು ! ಕಾಂಗ್ರೆಸಿನ ಕಡೆಗೆ ತಿರುಗಿ ಸಹ ನೋಡದೆ ವಕೀಲಿ ಮಾಡಿ ಹಣ ಗಳಿಸುವದರಲ್ಲಿ ನಿರತರಾಗಿ, ೧೯೪೨ ರ ಕೊನೆಯ ಹೋರಾಟದ ಕಾಲಕ್ಕೆ ಹೆದರಿ ಚಳುವಳಿಗೆ ಸಂಬಂಧವಿದ್ದವರಾರೂ ತಮ್ಮ ಮನೆಗೆ ಬರಕೂಡದೆಂದು ಹೇಳಿದ ಶ್ರೀ. ಬಳವಂತರಾವ ದಾತಾರ ಅವರು ಸ್ವರಾಜ ಸಿಕ್ಕ ನಂತರ ಸಾಯುವ ತನಕ ಕೇಂದ್ರದ ಗೃಹಖಾತೆಯಲ್ಲಿ ಮಂತ್ರಿಗಳಾಗಿದ್ದರು! ಹೇಳುವ ಉದ್ದೇಶವಿಷ್ಟೇ, ಅಧಿಕಾರಸ್ಥಾನಕ್ಕೆ ಕಚ್ಚಾಡಿದಂತೆ ತ್ಯಾಗಕ್ಕೆ, ಕಷ್ಟಕ್ಕೆ ಕಚ್ಚಾಡುವವರು ವಿರಳ. ಇರಲಿ.

ಶ್ರೀ. ದಿವಾಕರರು ಬಂದರು.

೧೯೪೪ ನೇ ಇಸವಿಯ ಮಧ್ಯದಲ್ಲಿ ಮ. ಗಾಂಧೀಜಿಯವರ ಬಿಡುಗಡೆ ಆಯಿತು. ದೇಶದಲ್ಲಿಯ ಆಂದೋಲನದ ಕಸುವೂ ಕುಗ್ಗಿಹೋಗಿತ್ತು. ಮಹಾಯುದ್ಧದಲ್ಲಿ ಜರ್ಮನಿಯ ರಭಸವೂ ಕಡಿಮೆಯಾಗುತ್ತ ನಡೆದಿತ್ತು. ಭೂಗತರಾಗಿ ಉಳಿದ ಕೆಲವೇ ಕಾರ್ಯಕರ್ತರಿಗೆ ಪೋಲೀಸರ ಕಣ್ಣು ತಪ್ಪಿಸುವದೊಂದೇ ಕೆಲಸವಾಗಿತ್ತು. ಗಾಂಧೀಜಿಯವರು ಹೊರಗೆ ಬಂದ ಕೂಡಲೆ ಗುಪ್ತತೆ ಮತ್ತು ವಿಧ್ವಂಸನಗಳು ತಮ್ಮ ಕಾರ್ಯಕ್ರಮದಲ್ಲಿ ಕೂಡುವದಿಲ್ಲವಾದುದರಿಂದ ಹೊರಗೆ ಉಳಿದ ಭೂಗತಕಾರ್ಯಕರ್ತರೆಲ್ಲ ಪ್ರಕಟರಾಗಿ ಜೇಲಿಗೆ ಹೋಗಬೇಕೆಂದು ಆದೇಶಕೊಟ್ಟರು. ಈ ಆದೇಶಕ್ಕನುಸರಿಸಿ ಈ ವರೆಗೂ ಪೋಲೀಸರಿಗೆ ಮಂಕುಬೂದಿ ಹಚ್ಚಿದ ಶ್ರೀ. ದಿವಾಕರ ರಂಗರಾಯರೂ ಬೆಳಗಾವಿ ಜಿಲ್ಲೆಯ ಸೇನಾಪತಿಗಳಾದ ಶ್ರೀ. ಬಿದರಿ ವಾಮನ ರಾಯರೂ ಮತ್ತು ಕೆಲವು ಕಾರ್ಯಕರ್ತರೂ ೯ ನೇ ಆಗಸ್ಟ ೧೯೪೪ ನೇ ದಿನ ಪ್ರಕಟರಾಗಿ ಜೇಲಿಗೆ ಬಂದರು. ಪಾಚ್ಚಾಪುರೆದ ಶ್ರೀ. ವಾಮನ ಜೋಶಿ ಎಂಬ ಕಾರ್ಯಕರ್ತರೂ ಜೇಲಿಗೆ ಬಂದರು. ಪೂರ್ಣ ಎರಡು ವರ್ಷ ಊಟ ನಿದ್ರೆಯ ಪರಿವೆಯಿಲ್ಲದೆ ಜೀವದ ಹಂಗು ತೊರೆದು ಕಾದಾಡಿದ ಈ ವೀರ ವಾಮನದ್ವಯರು ಜೇಲಿಗೆ ಬರುತ್ತಲೆ ರೋಗಕ್ಕೆ ಆಶ್ರಯದಾತರಾದರು. ಶ್ರೀ. ಬಿದರಿ ವಾಮನರಾಯರು ಆಮಾಂಶದಿಂದ ಬಳಲ ಹತ್ತಿದರು. ವಾಮನ ಜೋಶಿಗೆ ಕ್ಷಯರೋಗ ಗಟ್ಟಿಬಿತ್ತು. ವಾಮನ ಜೋಶಿಯನ್ನು ಮತ್ತು ಅವನ ಶುಶ್ರೂಷೆಗಾಗಿ ನನ್ನನ್ನೂ ಹೀಗೆ ಇಬ್ಬರನ್ನೇ ಫಾಸೀ ಗೇಟಿನಲ್ಲಿ ಇಟ್ಟರು. ಶ್ರೀ ಚಿಪಕರ ಸಿವಿಲ್ ಸರ್ಜನರು ವಾಮನ ಜೋಶಿಗೆ ಎಲ್ಲ ರೀತಿಯಿಂದ ಸಹಾಯ ಸಲ್ಲಿಸಿದರು. ಫಾಸೀಗೇಟಿನಲ್ಲಿ ನಾವಿಬ್ಬರೂ ೪-೬ ತಿಂಗಳ ಇದ್ದೆವು. ರಾತ್ರಿ ಮಲಗುವಾಗ ಈ ಕೋಣೆಯಲ್ಲಿದ್ದವರು ಎಷ್ಟು ಜನ ಫಾಸಿಗೆ ಹೋಗಿದ್ದಾರೋ ದೇವರಿಗೇ ಗೊತ್ತು ಎಂದು ಅನ್ನುತ್ತಿದ್ದೆವು. ಆದರೆ ಒಂದೂ ದಿನ ಯಾವ ಹೆದರಿಕೆಯೂ ಬರಲಿಲ್ಲ.

ಫಾಸೀ ಗೇಟಿನಲ್ಲಿ ಹೆದರಿದೆ.

ನಾವಿಬ್ಬರೇ ಇಡೀ ಫಾಸೀ ಗೇಟಿನಲ್ಲಿ ಇದ್ದೆವು. ಅದೂ ರಾತ್ರಿ ಬೇರೆ ಬೇರೆ ಕೋಣೆಗಳಲ್ಲಿ. ಒಂದು ದಿನ ರಾತ್ರಿ ಎರಡು ಗಂಟೆಯ ಸುಮಾರಿಗೆ 'ಊಂ ಹೂಂ ಊಂ ಹೂಂ' ಎಂಬ ಭಯಾನಕ ನೆರಳುವ ಧ್ವನಿ ಕೇಳ ಬರಹತ್ತಿತು. ಈ ಧ್ವನಿ ಅರ್ಧ ಗಂಟೆಯ ವರೆಗೆ ನಡು ನಡುವೆ ಬಿಟ್ಟು ಬಿಟ್ಟು ಕೇಳಬರುತ್ತಿತ್ತು. ಯಾರೋ ಮನುಷ್ಯರು ಭಾರಿ ನೋವಿನಿಂದ ಬಳಲುತ್ತ ನೆರಳುತ್ತಿರುವಂತೆ ಈ ಊಂ ಹೂಂ ಧ್ವನಿ ಇತ್ತು.

ಇದೇನು ಸಪ್ಪಳವೆಂದು ನಾನು ವಾಮನನಿಗೂ ವಾಮನನು ನನಗೂ ಕೇಳಹತ್ತಿದೆವು. ಏನೂ ತಿಳಿಯದಾಯಿತು. ಧ್ವನಿ ಹಾಗೆಯೇ ಬಿಟ್ಟು ಬಿಟ್ಟು ನಡೆದೇ ಇತ್ತು. ಹಾಸಿಗೆಯ ಮೇಲೆ ಎದ್ದು ಕೂಳಿತು ಇಬ್ಬರೂ ಯೋಚಿಸ ತೊಡಗಿದೆವು ! ಈ ವರೆಗೆ ೪–೬ ತಿಂಗಳಲ್ಲಿ ಎಂದೂ ಕೇಳದ ಧ್ವನಿ ಈಗ ಹೇಗೆ ಎಲ್ಲಿಯದೆಂಬದು ತಿಳಿಯದ್ದರಿಂದ ನಿಜವಾಗಿ ಗಾಬರಿಯಾದೆವು. ಆದರೆ ಮಾಡುವದೇನು. ಯಾರೂ ಹತ್ತರವೂ ಇಲ್ಲ. ಸುತ್ತು ಮುತ್ತಲೂ ಇಲ್ಲ. ದೇವರ ಧ್ಯಾನ ಆರಂಭಿಸಿದೆ. ಅಷ್ಟರಲ್ಲಿ ಜೇಲ ಕಾವಲುಗಾರ ಸಿಪಾಯಿ ಬಂದು ನಾವು ಹಾಸಿಗೆಯ ಮೇಲೆ ಎದ್ದು ಕುಳಿತ ಕಾರಣ ಕೇಳಿದ. ಅವನಿಗೆ ಎಲ್ಲವನ್ನೂ ಹೇಳಿದೆ. ಅವನಿಗೂ ಆ ಧ್ವನಿ ಕೇಳಬಂತು ! ಆಗ ಅವನು ಇದು ಯಾರ ನರಳುವ ಧ್ವನಿಯಲ್ಲವೇ ದೂ ಅಲ್ಲ ನೆಲಗುಮ್ಮ ಎಂಬ ಪಕ್ಷಿಯ ಧ್ವನಿಯಂದೂ ಹೇಳಿ ಹೊರಗೆ ಹೋದವನೇ ಒಂದು ಕಲ್ಲು ತಕ್ಕೊಂಡು ಸಮೀಪದ ಗಿಡದಲ್ಲಿ ಬೀಸಾಡಿದನು. ಆಗ ಒಂದು ಪಕ್ಷಿಯು ಫಡಫಡ ಎಂದು ಸಪ್ಪಳ ಮಾಡುತ್ತ ಹಾರಿ ಹೋಯಿತು. ಧ್ವನಿ ನಿಂತಿತು ನೆಲಗುಮ್ಮ ಎಂಬ ಪ್ರಾಣಿಯು ಮನುಷ್ಯ ನೆರಳುವಂತೆ ಧ್ವನಿ ಮಾಡುತ್ತಿದೆಯೆಂಬುದು ಅಂದೇ ನಮಗೆ ತಿಳಿದು ಬಂತು !

ಗಲ್ಲಿಗೇರುವಾಗ ಬಿಸಿ ನೀರಿನ ಸ್ನಾನ !

ನಾವು ಫಾಸೀ ಗೇಟಿನಲ್ಲಿರುವಾಗ ಹತ್ತಂಟು ಜನರನ್ನು ಗಲ್ಲಿಗೇರಿಸಿದರು. ಮುನ್ನಾದಿನ ರಾತ್ರಿ ಅವರನ್ನು ತಂದು ಫಾಸೀ ಗೇಟಿನ ಒಂದು ಕೋಣೆಯಲ್ಲಿ ಇಡುತ್ತಿದ್ದರು. ಇಲ್ಲಿ ಒಟ್ಟು ಆರು ಕೋಣೆಗಳೂ ಒಂದು ಚಿಕ್ಕ ವಾರ್ಡೂ ಅವೆ. ಫಾಸೀ ಶಿಕ್ಷೆಯಾದವರನ್ನು ಈ ಕೋಣೆಗಳಲ್ಲಿಯೇ ಇಡುತ್ತಾರೆ. ಆದರೆ ಜೇಲಿನ ತುಂಬ ಚಳವಳಿಯವರೇ ಬಂದ ಕಾರಣ ಫಾಸೀ ಗೇಟನ್ನೂ ಚಳವಳಿ ಕೈದಿಗಳಿಗಾಗಿ ತೆರವು ಮಾಡಿಕೊಟ್ಟು ಫಾಶೀ ಕೈದಿಗಳನ್ನು ಮತ್ತೊಂದು ಕಡೆಗೆ ತಾತ್ಪೂರ್ತಿಕವಾಗಿ ಇಡಹತ್ತಿದ್ದರು. ಮುನ್ನಾದಿನ ರಾತ್ರಿ ಮಾತ್ರ ಈ ಕೋಣೆಯಲ್ಲಿ ಅವನನ್ನು ಇಟ್ಟು ಮರುದಿನ ಮುಂಜಾನೆ ೮ ಗಂಟೆಗೆ ಗಲ್ಲಿಗೇರಿಸುತ್ತಿದ್ದರು. ಒಂದು ದಿನ ಗಲ್ಲಿಗಾಗಿ ಒಬ್ಬನನ್ನು ರಾತ್ರಿ ತರಲಾಯಿತು. ರಾತ್ರಿಯೆಲ್ಲ ದೇವರ ಭಜನೆಯಲ್ಲಿ ಅತ ಕಾಲಕಳೆದು ಮುಂಜಾನೆ ಗಲ್ಲಿಗೆ ಸಿದ್ಧನಾದ. ಇನ್ನೊಂದು ತಾಸು ಮಾತ್ರ ನನ್ನ ಆಯುಷ್ಯವಿದೆ. ನನಗೆ ಬಿಸಿ ನೀರ ಸ್ನಾನ ಮಾಡಿಸುವಿರಾ ? ಎಂದು ಆತ ನನ್ನನ್ನು ಕೇಳಿದ. ವಾಮನ ಜೋಶಿಗಾಗಿ ಬಿಸಿ ನೀರು ಬಂದಿತ್ತು. ಅದನ್ನೇ ಅವನಿಗೆ ಕೊಟ್ಟೆ. ಹಮಾಮ ಸೋಪು ಅದೆಯೋ ಎಂದು ಮತ್ತೆ ಕೇಳಿದ. ಅದನ್ನು ಹಚ್ಚಿ ನಾನೇ ಬೆನ್ನು ತೊಳೆದು ಬಿಸಿ ನೀರು ಸ್ನಾನ ಮಾಡಿಸಿದೆ. ಅತ ಆನಂದದಿಂದ ಸ್ನಾನ ಮಾಡಿ ಗಂಜೀ ಕುಡಿದ. ಮಗ್ಗಲಲ್ಲಿಯೇ ಇದ್ದ ಡೆಟಿನ್ಯು ಬರಾಕದಿಂದ ಒಂದೆರಡು ಸಿಗರೇಟು ತರಿಸಿಕೊಟ್ಟೆ. ಅವನ್ನು ಸೇದಿ ನನಗೆ ಕೈ ಮುಗಿದು ಸರಸರನೆ ಫಾಶೀ ಫಳಿಯ ಮೆಟ್ಟಲು ಏರಿ ನಿಮಿಷಾರ್ಧದಲ್ಲಿ ಪರಲೋಕ ಮುಟ್ಟಿದ ! ಇಂಥ ಉದ್ಯಾಹರಣೆ ತೀರ ಕಡಿಮೆ. ಮುನ್ನಾ ದಿನ ಸಂಜೆಗೇ ಅವರ ಜೀವ ಹೋದಂತಾಗಿರುವವರೇ

ನೂರಕ್ಕೆ ೯೯ ರಷ್ಟು. ಅವರನ್ನು ಕುರಿಯನ್ನು ಎಳೆದಂತೆ ಎಳೆದೊಯ್ದು ಗಲ್ಲಿಗೇರಿಸ ಬೇಕಾಗುತ್ತದೆ!

ನಿಬಂಧ ಸ್ಪರ್ಧೆ, ನೂಲುವ ಸ್ಪರ್ಧೆ

ಶ್ರೀ. ದಿವಾಕರರು ನಮ್ಮ ಬರಾಕಿನಲ್ಲಿ ಬಂದ ಮೇಲೆ ಎಲ್ಲರಿಗೂ ಮತ್ತಿಷ್ಟು ಆನಂದವಾಯಿತು. ಕಾರ್ಯಕ್ರಮಗಳು ಮತ್ತಿಷ್ಟು ರಭಸದಿಂದ ನಡೆಯಹತ್ತಿದವು. ಭೂಗತರಾಗಿದ್ದದ್ದು ಸರಿಯೇ, ವಿಧ್ವಂಸಕ ಕಾರ್ಯ ಮಾಡಿದ್ದು ಯೋಗ್ಯವೇ ಎಂಬ ಬಗ್ಗೆ ಭಾರಿ ಚರ್ಚೆ ನಡೆಯಿತು. ಈ ಬಗ್ಗೆ ಎಲ್ಲರೂ ನಿಬಂಧ ಬರೆಯಬೇಕೆಂದು ಶ್ರೀ ದಿವಾಕರರು ಸೂಚಿಸಿದರು. ಶಿಕ್ಷೆ ಹೊಂದಿದ ನಮ್ಮ ಕೈದಿಗಳಿಗೂ ನಿಬಂಧ ಬರೆಯಲು ತಿಳಿಸಲಾಯಿತು. ಸುಮಾರು ೨೦ ಜನರು ನಿಬಂಧಗಳನ್ನು ಬರೆದುಕೊಟ್ಟರು. ಅದರಲ್ಲಿ ನನಗೆ ಪ್ರಥಮ ಸ್ಥಾನ ದೊರೆಕಿದೆಯೆಂದು ಶ್ರೀ. ದಿವಾಕರರು ಪರೀಕ್ಷಿಸಿ ಸ್ಪರ್ಧೆಯ ಫಲಿತಾಂಶ ಸಾರಿದರು. ಈ ನಿಬಂಧದಲ್ಲಿ ನಾನು ಭೂಗತರಾಗಿರುವದು ಮತ್ತು ವಿಧ್ವಂಸಕ ಚಟುವಟಿಕೆ ಮಾಡುವದು ಗಾಂಧೀವಾದದಲ್ಲಿ ಕೂಡುವದಿಲ್ಲವಾದರೂ ೮ ನೇ ಆಗಸ್ಟ ೧೯೪೨ ನೇ ದಿನ ಕೊನೆಯ ಹೋರಾಟದ ಘೋಷಣೆ ಮಾಡಿ ಸಾರ್ವತ್ರಿಕ ಬಂಧನವಾದ ಪರಿಸ್ಥಿತಿಯಲ್ಲಿ ನಾವು ಮಾಡಿದ್ದು ಅನಿವಾರ್ಯವೂ ಸಮರ್ಥನೀಯವೂ ಆಗಿತ್ತೆಂದು ಪ್ರತಿಪಾದಿಸಿದ್ದೆ.

ಶ್ರೀ. ದಿವಾಕರರ ನೇತೃತ್ವದಲ್ಲಿ ಒಮ್ಮೆ ಇಡೀ ಜೇಲಿನಲ್ಲಿಯ ರಾಜಕೀಯ ಕೈದಿಗಳಿಗಾಗಿ ನೂಲುವ ಸ್ಪರ್ಧೆಯನ್ನೂ ಏರ್ಪಡಿಸಲಾಗಿತ್ತು. ಎಲ್ಲರಿಗೂ ಈ ಸಾರೆಯರವಡಾ ಚರಖಗಳನ್ನು ಇಡಲು ಜೇಲಧಿಕಾರಿಗಳು ಆಪ್ಪಣೆ ಕೊಟ್ಟಿದ್ದರು. ೧ ತಾಸಿನ ಈ ಸ್ಪರ್ಧೆಯಲ್ಲಿ ಶ್ರೀ. ದಿವಾಕರರಿಗೆ ಪ್ರಥಮ ಸ್ಥಾನವೂ ನನಗೆ ದ್ವಿತೀಯ ಸ್ಥಾನವೂ ದೊರಕಿತ್ತು.

ಶ್ರೀ. ಅಪ್ಪಾಸಾಹೇಬ ಪಟವರ್ಧನ ರತ್ನಾಗಿರಿ ಅವರು ಎರಡನೇ ವರ್ಗದ ಸ್ಥಾನ ಬದ್ಧರ ಬರಾಕದಲ್ಲಿಯೇ ಕಡೆತನಕ ಉಳಿದಿದ್ದರು. ಧಾರವಾಡದ ಶ್ರೀ. ಕೆ. ಜಿ. ಜೋಶಿ ಮಾಸ್ತರರೂ ಕಡೆತನಕ ಶಿಕ್ಷಾ ಬರಾಕದಲ್ಲಿಯೇ ಇದ್ದು ಎಲ್ಲರಿಗೂ ರಾಷ್ಟ್ರೀಯ ಪದ ಜಾನಪದ ನೃತ್ಯ ಕಲಿಸುತ್ತಿದ್ದರು. ಶ್ರೀ. ಜಯದೇವ ಕುಲಕರ್ಣಿಯವರು ಹಿಂಡಲಗಿ ಜೇಲಿನಲ್ಲಿರುವಾಗ ಒಂದು ಹಸ್ತಲಿಖಿತ ಮಾನಪತ್ರಿಕೆ ಹೊರಡಿಸುತ್ತಿದ್ದರು. ಅದರಲ್ಲಿ ೨ ನೇ ವರ್ಗದ ಸ್ಥಾನಬದ್ಧರ ಲೇಖನಗಳು ಚಿತ್ರಗಳು ಬರುತ್ತಿದ್ದವು.

ಕಾರವಾರ ಜಿಲ್ಲೆಯಿಂದ ಬಂದ ನಮ್ಮ ಬಂಧುಗಳಿಗೆ ಜೇಲಿನಲ್ಲಿಯ ರೊಟ್ಟಿಯ ಊಟ ಮೊದಮೊದಲು ಹಿಡಿಸುತ್ತಿದ್ದಿಲ್ಲ. ಆದರೆ ಬರಬರುತ್ತ ಅಭ್ಯಾಸವಾಗಿ ಎಲ್ಲವೂ ಸರಿಹೋಯಿತು !

ರಾಜಬಂದಿಗಳ ಕುಟುಂಬದವರಿಗೆ ಆರ್ಥಿಕ ಸಹಾಯ.

ಆರ್ಥಿಕ ತೊಂದರೆಯಲ್ಲಿದ್ದ ಬೆಳಗಾವಿ ಜಿಲ್ಲೆಯ ರಾಜಬಂದಿಗಳ ಕುಟುಂಬದವರಿಗೆ ಸಹಾಯ ಮಾಡುವದಕ್ಕಾಗಿ ಮುಂಬಯಿಯ ಕೆಲವು ಧನಿಕ ಉದ್ಯೋಗಪತಿಗಳು ಹಣ ಕಳಿಸಿದ್ದರು. ಸ್ಥಾನಿಕ ವ್ಯಾಪಾರಿಗಳಾದ ಶ್ರೀ. ಪುರುಷೋತ್ತಮ ತೆಂಡೂಲಕರರೂ ಕೆಲವು ಹಣ ಕೊಟ್ಟಿದ್ದರು. ಬೆಳಗಾವಿಯ ವಿದ್ಯಾರ್ಥಿ ಸಂಘದವರೂ ಹಣ ಶೇಖರಿಸಿದ್ದರು. ಈ ನಿಧಿಯೊಳಗಿಂದ ಬಡ ರಾಜಬಂದಿಗಳ ಕುಟುಂಬಗಳಿಗೆ ಪ್ರತಿ ತಿಂಗಳ ೧೫ ರಿಂದ ೩೦ ರೂ. ಯ ವರೆಗೆ ಆರ್ಥಿಕ ಸಹಾಯ ಮಾಡಲಾಗುತ್ತಿತ್ತು. ಜೇಲಿನಲ್ಲಿದ್ದವರಿಗೂ ಬೇಕಾಗುವ ಸಾಮಾನುಗಳನ್ನೂ ಔಷಧಗಳನ್ನೂ ಪುಸ್ತಕಗಳನ್ನೂ ಪೂರೈಸಲಾಗುತ್ತಿತ್ತು. ಚಳುವಳಿ ರಭಸದಲ್ಲಿದ್ದಾಗ ಶಿಕ್ಷೆಯಾಗಿ ಯರವಡಾ ಕ್ಯಾಂಪ ಜೇಲಿನಲ್ಲಿಟ್ಟ ಕೆಲ ಕೈದಿಗಳು ಜೇಲಿನಿಂದ ಪಾರಾಗಿ ಬರಲು ಅಪೇಕ್ಷಿಸಿದಾಗ ಅವರಿಗೆ ಧನ ಸಹಾಯ ಮಾಡುವದಕ್ಕಾಗಿ ೩೫ ಸಾವಿರ ರೂಪಾಯಿಗಳನ್ನು ಶ್ರೀ. ತ್ರಿರಂಗ ಕಾಮತರ ಸಹಕಾರಿಗಳೂ ಬೈಲಹೊಂಗಲದ ವೀರ ಹೋರಾಟಗಾರರೂ ಆದ ಶ್ರೀ. ಚಿದಂಬರ ಸರಾಫ ಇವರ ಕಡೆಗೆ ಒಪ್ಪಿಸಲಾಗಿತ್ತು. ಆಗ ಅವರು ಯರವಡಾ ಕ್ಯಾಂಪ ಜೇಲಿನಲ್ಲಿ ೨೫ ವರ್ಷದ ಶಿಕ್ಷೆ ಅನುಭೋಗಿಸುತ್ತಿದ್ದರು. ೧೯೩೦ ಮತ್ತು ೧೯೩೨ ರಲ್ಲಿಯೂ ಅವರಿಗೆ ಅನುಕ್ರಮವಾಗಿ ೬ ತಿಂಗಳ ಹಾಗು ೨ ವರ್ಷ ಶಿಕ್ಷೆ ಆಗಿತ್ತು. ಕಾಮತರ ಸ್ನೇಹಿತರೆಂದು ಮುಂಬಯಿಯವರಾರೋ ಅವರಿಗೆ ಈ ಹಣ ಕಳಿಸಿಕೊಟ್ಟಿದ್ದರು. ಆ ಹಣದ ಉಪಯೋಗ ಮಾಡಿ ಅವರು ಕೆಲವು ರಾಜಬಂದಿಗಳಿಗೆ ಜೇಲಿನಿಂದ ಪಾರಾಗಲು ಸಹಾಯ ಮಾಡಿದರು, ೧೯೪೩ ರ ಸಪ್ಟೆಂಬರದಲ್ಲಿ ಬಿಡುಗಡೆ ಹೊಂದಿದ ಶ್ರೀ. ಕೃಷ್ಣರಾವ ಯಾಳಗಿ ಅವರು ರಾಜಕೀಯ ಖಟ್ಲೆಗಳ ಉಸ್ತುವಾರಿ ಮಾಡುವ ಜೊತೆಗೆ ರಾಜಬಂದಿಗಳ ಕುಟುಂಬದವರಿಗೆ ಸಹಾಯಧನ ಮುಟ್ಟಿಸುವ ವ್ಯವಸ್ಥೆಯನ್ನು ಮಾಡಿದರು. ೧೯೪೩ ರ ಸಪ್ಟೆಂಬರದಲ್ಲಿ ಶ್ರೀ. ಎಮ್. ಪಿ. ಪಾಟೀಲರು ಬಿಟ್ಟು ಬಂದನಂತರ ರಾಜಕೀಯ ಸಂತ್ರಸ್ತರ ಕಷ್ಟನಿವಾರಣ ಸಮಿತಿ ಸ್ಥಾಪನವಾಗಿ ಆದಕ್ಕೆ ಅವರು ಅಧ್ಯಕ್ಷರಾದರು. ಶ್ರೀ. ಎಮ್. ಎಸ್. ಕುಲಕರ್ಣಿಯವರು ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಶ್ರೀಮತಿ ಪ್ರಮಿಲಾತಾಯಿ ದೇಶಪಾಂಡೆ (ಕಾಮತ) ಅವರು ಈ ಕೆಲಸದಲ್ಲಿ ಅವರಿಗೆ ನೆರವಾದರು, ಮುಂದೆ ೧೯೪೪ ರ ಮಧ್ಯದಲ್ಲಿ ಬಿಡುಗಡೆಯಾದ ಶ್ರೀ. ಜಯದೇವ ಕುಲಕರ್ಣಿಯವರು ಈ ಸಮಿತಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು.

ನಿಧನವಾರ್ತೆಗಳು !

ಡಾ. ಜೋಶಿ (ಪಾಜ್ಹಾಪುರ) ಇವರು ತೀರಿಕೊಂಡ ಸುದ್ದಿಯ ನಂತರ ನಾವು ಜೇಲಿನಲ್ಲಿ ಇರುವಾಗಲೇ ಶ್ರೀ. ಜೋಶಿ ನಾರಾಯಣರಾಯರು ಹೊರಗೆ ತೀರಿಕೊಂಡ ಸುದ್ದಿ

ಜೀಲಿನಲ್ಲಿ ಬಂದಿತು, ಮುಂದೆ ಬೇಗನೆ ಬಿದರಿ ವಾಮನರಾಯರು ಜಮಖಂಡಿ ಯಲ್ಲಿ ನಿಧನರಾದ ಸುದ್ದಿ ಬಂದಾಗ, ಇಡೀ ಜೇಲು ದುಃಖಸಾಗರದಲ್ಲಿ ಮುಳುಗಿತು ! ಇವರಿಬ್ಬರೂ ಉಚ್ಚ ಪ್ರತಿಯ ದೇಶಭಕ್ತರು. ಶ್ರೀ. ನಾರಾಯಣರಾಯರು ತಮ್ಮ ವಕೀಲಿ ವ್ಯವಸಾಯ ಮಾಡುತ್ತಲೇ ಜಿಲ್ಲೆಯ ಕಾಂಗ್ರೆಸ ಸಂಘಟನೆಗಾಗಿ ಅತ್ಯಂತ ಪ್ರಾಮಾಣಿಕ ತನದಿಂದಲೂ ಸೇವಾ ಬುದ್ಧಿಯಿಂದಲೂ ನಮ್ರತೆಯಿಂದಲೂ ದುಡಿದು ಜನಾದರಣೀ ಯರಾಗಿದ್ದರು. ಶಾಂತಸ್ವಭಾವದ ಮತ್ತು ಕಾರ್ಯಕರ್ತರನ್ನು ಗೌರವಿಸುವ ಹಿರಿಯ ಮುಖಂಡರೊಬ್ಬರು ಕಣ್ಮರೆಯಾದರು.

ಶ್ರೀ. ವಾಮನರಾವ ಬಿದರಿಯವರ ಬಗ್ಗೆ ಬರೆಯಲು ನನಗೆ ಶಬ್ದಗಳೇ ಸಾಲವು. ಜಮಖಂಡಿ ಸಂಸ್ಥಾನದ ಬಿದರಿಯಲ್ಲಿ ಹುಟ್ಟಿ ಕನ್ನಡ ಪ್ರಾಥಮಿಕ ಶಾಲೆಯ ಶಿಕ್ಷಣ ಮುಗಿಸಿ ಬೆಳಗಾವಿಗೆ ಹೈಸ್ಕೂಲ ಶಿಕ್ಷಣಕ್ಕಾಗಿ ಬಂದರು. ೧೯೧೭ ೧೮ ನೇ ಇಸವಿ ಯಲ್ಲಿ ಬೆಳಗಾವಿಯಲ್ಲಿ ಶ್ರೀ. ಗೋಪಾಳರಾವ ದೇಶಪಾಂಡೆ ಹುದ್ಲಿ, ಶಾಂತಾರಾಮ ಸುಂಠಣಕರ, ಹಣಮಂತ ಸದಾಸಿವ ಪರಾಂಜಪೆ, ಬಾಬೂರಾವ ಠಾಕೂರರನ್ನು ಕೂಡಿ ಕೊಂಡು ಸ್ನೇಹವರ್ಧಕ ಭಜನೀ ಸಂಘವೆಂಬ ಸಂಘಟನೆ ಸ್ಥಾಪಿಸಿ ಆಗಿನಿಂದಲೇ ದೇಶ ಕಾರ್ಯಕ್ಕೆ ಆರಂಭ ಮಾಡಿದರು. ಹೈಸ್ಕೂಲ ಶಿಕ್ಷಣವನ್ನು ಪೂರ್ತಿಗೊಳಿಸದೆ ೧೯೨೦ ನೇ ಇಸವಿಯ ಅಸಹಕಾರ ಆಂದೋಲನದಲ್ಲಿ ಧುಮುಕಿದರು. ಶ್ರೀ. ಗಂಗಾಧರರಾವ ದೇಶಪಾಂಡೆಯವರ ಕಡೆಗೆ ಶ್ರೀ. ಪುಂಡಲೀಕಜಿಯವರೊಂದಿಗೆ ದೇಶಸೇವೆಯ ದೀಕ್ಷೆ ಪಡೆದರು. ಖಾದಿ ಗ್ರಾಮೋದ್ಯೋಗ, ಗ್ರಾಮಸಂಘಟನೆ, ಹಳ್ಳಿವಾಸ, ಇವರ ಜೀವ ನದ ವೈಶಿಷ್ಟ್ಯಗಳಾಗಿದ್ದವು. ಉತ್ತಮ ಭಾಷಣಕಾರರು ಅತ್ಯಂತ ಕಳಕಳಿಯ ಕಾರ್ಯ ಕರ್ತರೆಂದು ಇಡೀ ಜಿಲ್ಲೆಗೆ ಹೆಸರಾದರು. ತ್ಯಾಗದಲ್ಲಿ ಇವರನ್ನು ಸರಿಗಟ್ಟುವ, ಕಷ್ಟ ಸಹಿಷ್ಣುತೆಯಲ್ಲಿ ಇವರನ್ನು ಹಿಂಬಾಲಿಸುವ ಕಾರ್ಯಕರ್ತರನ್ನು ನಾನು ಈ ವರೆಗೂ ನೋಡಿಲ್ಲ. ಇಡೀ ಮನೆತನಕ್ಕೇ ದೇಶಸೇವೆಯ ದೀಕ್ಷೆಕೊಟ್ಟು ಸರ್ವಸ್ವತ್ಯಾಗ ಮಾಡಿ ದರು. ಕುಮರಿ ಆಶ್ರಮ, ಡೆಮ್ಮ ಉರಬಿನಹಟ್ಟಿ, ಅಕ್ಕತಂಗೇರಹಾಳ, ಈರನಹಟ್ಟಿ, ಕೊಳವಿ ಮುಂತಾದ ಕುಗ್ರಾಮಗಳಲ್ಲಿ ನಿಂತು ಜನತೆಗಾಗಿ ಚಂದನದಂತೆ ದೇಹ ಸವಿಸಿ ದರು. ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಕಾಲಿನಿಂದ ಪಿರಿಪಿರಿ ತಿರುಗಿ ಸಂಘ ಟನೆ ಮಾಡಿದ ಶ್ರೇಯಸ್ಸು ಇವರಿಗೇ ಸಲ್ಲುವದು. ೧೯೩೦, ೧೯೩೨, ೧೯೩೪, ೧೯೪೧, ೧೯೪೨ ರಲ್ಲಿ ನಡೆದ ಪ್ರತಿಯೊಂದು ಸ್ವಾತಂತ್ರ್ಯದ ಹೋರಾಟಗಳಲ್ಲಿ ಅತ್ಯಂತ ಹುಮ್ಮಸ್ಸಿನಿಂದ ಭಾಗವಹಿಸಿ ಜೇಲಿಗೆ ಹೋದರು, ಕೊನೆಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ (೧೯೪೨) ಕಡೆತನಕ ಇವರು ಭೂಗತರಾಗಿ ಉಳಿದರು. ಇವರನ್ನು ಹಿಡಿದುಕೊಡುವ ವರಿಗೆ ಅಥವಾ ಹಿಡಿಯಲು ಸಹಾಯವಾಗುವ ಮಾಹಿತಿ ಕೊಡುವವರಿಗೆ ೫೦೦೦ ರೂಪಾಯಿಯ ಬಹುಮಾನವನ್ನು ಸರಕಾರ ಜಾಹೀರ ಮಾಡಿದ್ದರೂ ಇವರು ಪೋಲೀ ಸರಿಗೆ ಕಡೆತನಕ ಸಿಗಲಿಲ್ಲ. ಗಾಂಧೀಜಿಯವರು ಜೇಲಿನಿಂದ ಬಿಡುಗಡೆಯಾಗಿ ಹೊರಗೆ ಬಂದು ಎಲ್ಲ ಭೂಗತರು ಪ್ರಕಟರಾಗಬೇಕೆಂದು ಆಜ್ಞೆ ಕೊಟ್ಟಾಗಲೇ ಇವರು ತಾವಾ ಗಿಯೇ ೯ ನೇ ಆಗಸ್ಟ ೧೯೪೪ ನೇ ದಿನ ಜಿಲ್ಲಾ ಕಾಂಗ್ರೆಸ ಕಮೀಟಿಯಲ್ಲಿ ಪ್ರಕಟರಾಗಿ

ಜೇಲಿಗೆ ಬಂದರು. ಜೇಲಿಗೆ ಬಂದಾಗ ಇವರ ಆರೋಗ್ಯ ಸಾಕಷ್ಟು ಕೆಟ್ಟಿತ್ತು. ೬-೮ ತಿಂಗಳಲ್ಲಿಯೇ ಇವರನ್ನು ಸರಕಾರ ಮುಕ್ತ ಮಾಡಿತು. ಜಮಖಂಡಿ ಸಂಸ್ಥಾನ ಪ್ರಜಾ ಪರಿಷತ್ತು ಶ್ರೀ. ಬಾಳಾಸಾಹೇಬ ಖೇರ ಅವರ ಅಧ್ಯಕ್ಷತೆಯಲ್ಲಿ ಕೂಡಿದಾಗ ಮೈಯೊಳಗೆ ೧೦೩, ೧೦೪ ಡಿಗ್ರಿ ಜ್ವರ ಇದ್ದಾಗಲೂ ಪರಿಷತ್ತಿಗಾಗಿ ತಿರುಗಾಡಿ ದುಡಿದದ್ದರ ಪರಿಣಾಮವಾಗಿ ನ್ಯೂಮೋನಿಯಾ ಆಗಿ ಪರಲೋಕವಾಸಿಗಳಾದರು! ಬೆಳಗಾವಿ ಜಿಲ್ಲಾ ಕಾಂಗ್ರೆಸ ಕಮೀಟಿಯನ್ನು ಅನಾಥರನ್ನಾಗಿ ಮಾಡಿ ಕಣ್ಮರೆಯಾದರು! ನನಗಂತೂ ಅವರು ಗುರುಗಳೂ ಹೌದು ಹಿರಿಯರೂ ಹೌದು ಮಿತ್ರರೂ ಹೌದು. ಇಂಥ ಆತ್ಮೀಯ ಬಂಧುವಿನ ನಿಧನದ ಸುದ್ದಿ ಕೇಳಿ ಜೇಲಿನಲ್ಲಿದ್ದ ನಾನು ದಿಙ್ಮೂಢನಾದೆ. ಜೇಲಿಗೆ ಜೇಲೇ ದುಃಖಸಾಗರದಲ್ಲಿ ಮುಳುಗಿತು.

ಸಂಧಿ ಕಾಲದ ಸಂಗತಿಗಳು.

ಗಾಂಧೀಜಿಯವರ ಬಿಡುಗಡೆಯಾದ ನಂತರ ಭೂಗತರಾಗಿದ್ದ ಕಾರ್ಯಕರ್ತರೂ ಹೋರಾಟಗಾರರೂ ಪ್ರಕಟವಾಗಿ ಕೆಲಸ ಮಾಡಬೇಕೆಂದು ಆದೇಶ ಕೊಟ್ಟರೂ ಕೆಲವು ಕಾರ್ಯಕರ್ತರು ಕಡೆತನಕ (ಅಂದರೆ ೧೯೪೬ ರಲ್ಲಿ ಕಾಂಗ್ರೆಸ, ಮಂತ್ರಿಮಂಡಳ ಬರುವ ತನಕ) ಭೂಗತರಾಗಿಯೇ ಉಳಿದರು. ಅಂಥವರಲ್ಲಿ ನಮ್ಮ ಜಿಲ್ಲೆಯ ಶ್ರೀ. ಬಸವಣ್ಣೆಪ್ಪಾ ಸಾಣಿಕೊಪ್ಪ ಹಾಗು ಕೊಲ್ಹಾಪೂರದ ಶ್ರೀ. ರತ್ನಪ್ಪಾ ಕುಂಬಾರ ಅವರು ಪ್ರಮುಖರು. ರತ್ನಪ್ಪಾ ಕುಂಬಾರರಂತೂ ಸ್ವರಾಜ್ಯ ಬಂದು ಸಂಸ್ಥಾನಗಳು ವಿಲೀನವಾಗುವವರೆಗೆ ಪ್ರಕಟವಾಗಲೇ ಇಲ್ಲ. ಹಾಗೆ ಮಾಡುವದರಲ್ಲಿ ಅವರ ಉದ್ದೇಶವೇನಿತ್ತೊ ತಿಳಿಯಲಿಲ್ಲ.

ಭೂಗತ ಸೈನ್ಯಕ್ಕೆ ಸಕ್ರಿಯ ಸಹಾಯ ಮಾಡುತ್ತಿದ್ದ ಶ್ರೀ. ಶಂಕರರಾವ ಗ್ರಾಮೋಪಾಧ್ಯೆ ಹಾಗು ವಿಷ್ಣು ನೀಲಕಂಠ ಪುರಾಣಿಕ ಇವರ ಬಂಧನ ಕಡೆತನಕ ಆಗಲೇ ಇಲ್ಲ. ಶ್ರೀ. ಪುರಾಣಿಕರು ಶ್ರೀ. ಜಯದೇವ ಕುಲಕರ್ಣಿ ಅವರ ಬಂಧನ ಆಗುವವರೆಗೆ ಗುಪ್ತ ಸಂಘಟನೆಯ ಕೇಂದ್ರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಶ್ರೀ. ಗ್ರಾಮೋಪಾಧ್ಯೆ ಅವರು ಶ್ರೀ. ವಾಮನರಾವ ಬಿದರಿಯವರ ಸಹಾಯಕರಾಗಿ ಬೆಳಗಾವಿಯಲ್ಲಿ ಕೆಲಸ ಮಾಡುತ್ತಿದ್ದರು, ಶ್ರೀ. ವಡವಿ ಮಾಸ್ತರರು ಬೆಳಗಾವಿಯಲ್ಲಿರುವಾಗ ಅವರ ಊಟ ಉಪಚಾರದ ವ್ಯವಸ್ಥೆ, ಪತ್ರ ವ್ಯವಹಾರದ ನಿರ್ವಹಣೆ ಇತ್ಯಾದಿ ಒಳ್ಳೇ ದಕ್ಷತೆಯಿಂದ ಹಾಗು ಜಾಗರೂಕತೆಯಿಂದ ಮಾಡುತ್ತಿದ್ದರು. ಅವರ ಹೊಲಿಗೆಯ ಅಂಗಡಿಯೆಂದರೆ ಗುಂಪುಗಳಿಗೆ ಸಂದೇಶ ಕಳಿಸುವ ಗುಪ್ತ ಅಂಚೆ ಕಚೇರಿಯೇ ಆಗಿತ್ತು.

೧೯೪೪ ರ ಉತ್ತರಾರ್ಧ ಹಾಗು ೧೯೪೫ ರ ಪೂರ್ವಾರ್ಧದಲ್ಲಿ ಬಹುತರ ಎಲ್ಲ ಮುಖಂಡರ ಹಾಗು ಬಹಳಷ್ಟು ಕಾರ್ಯಕರ್ತರ ಬಿಡುಗಡೆ ಆಯಿತು. ಶ್ರೀ. ಅಣ್ಣಾ ಗುರೂಜಿ, ಶ್ರೀರಂಗ ಕಾಮತ, ಚನ್ನಪ್ಪ ವಾಲಿ, ವೆಂಕರಡ್ಡಿ ಹೂಲಿ ಮೊದಲಾದ ಕೆಲವು

ಕಾರ್ಯಕರ್ತರು ಇನ್ನೂ ಬಂಧನದಲ್ಲಿಯೇ ಉಳಿದರು. ಕೆಲವು ಹೋರಾಟಗಾರರ ಮೇಲಿನ ಖಟ್ಲೆಗಳು ಇನ್ನೂ ನಡೆದಿದ್ದವು. ಕಾಂಗ್ರೆಸ ಕಮೀಟಿಗಳು ಕಾನೂನು ಬಾಹಿರವಾಗಿದ್ದುದರಿಂದ ಅವುಗಳು ಚಟುವಟಿಕೆ ನಡೆಯಿಸುವಂತಿದ್ದಿಲ್ಲ. ಆಗ ಅನ್ನ ಧಾನ್ಯದ ಪರಿಸ್ಥಿತಿಯೂ ಬಿಕ್ಕಟ್ಟಿನದಾಗಿದ್ದರಿಂದ ದೇಶದಲ್ಲಿ ಶ್ರೀ. ಮೀನೂ ಮಸಾನಿ, ಕೆ, ಎಮ್. ಮುನಸಿ ಮೊದಲಾದವರು ಸ್ಥಾಪಿಸಿದ ಅಖಿಲ ಭಾರತ ಜನತಾ ಧಾನ್ಯ ಸಮಿತಿಯ ಜಿಲ್ಲಾ ಶಾಖೆಯಾಗಿ ಬೆಳಗಾವ ಜಿಲ್ಲಾ ಜನತಾ ಧಾನ್ಯ ಸಮಿತಿಯ ಕೆಲಸ ಮಾಡಹತ್ತಿತು. ಕಾಂಗ್ರೆಸ ಕಾರ್ಯಕರ್ತರು ಒತ್ತಟ್ಟಿಗೆ ಬರಲು ಆದೊಂದು ಸಂಘಟನೆ ಆಯಿತು. ಆಗ ಶ್ರೀ. ಎಮ್. ಪಿ. ಪಾಟೀಲರ ಹೊರತು ಯಾವ ಮುಖಂಡರೂ ಕಾಂಗ್ರೆಸ ಕಾರ್ಯಕರ್ತರ ಸಂಪರ್ಕ ಇಟ್ಟುಕೊಳ್ಳಲು ಹಾಗು ಜನತಾ ಧಾನ್ಯ ಸಮಿತಿಯ ಕೆಲಸವಾಗಲಿ, ರಾಜಕೀಯ ಸಂತ್ರಸ್ತರಿಗೆ ಸಹಾಯ ಮಾಡುವ ಕೆಲಸವಾಗಲಿ, ಮಾಡಲು ಮುಂದೆ ಬರಲಿಲ್ಲ.

ನಮ್ಮ ಜಿಲ್ಲೆಯ ಸ್ಥಿತಿ ಹೀಗಿರುವಾಗ ಕರ್ನಾಟಕದಲ್ಲಿ ಕಾಂಗ್ರೆಸಿನ ಕಾಯದೆಬದ್ಧ ಚಟುವಟಿಕೆಗಳ ಪುನರುಜ್ಜೀವನ ಮಾಡುವದಕ್ಕಾಗಿ ವಿಜಾಪೂರದ ಶ್ರೀ. ಅಂಬಲಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಕಾಂಗ್ರೆಸ ಕಾರ್ಯಕರ್ತರ ಪರಿಷತ್ತು ಬೆಳಗಾವಿಯಲ್ಲಿ ೧೯೪೫ ರಲ್ಲಿ ಕೂಡಿತು, ಮತ್ತು ಶ್ರೀ. ಅಂಬಲಿಯವರ ಅಧ್ಯಕ್ಷತೆಯಲ್ಲಿಯೇ ' ಕರ್ನಾಟಕ ಕಾಂಗ್ರೆಸ ಕಾರ್ಯಕರ್ತರ ಸಭೆ ' ಎಂಬ ಸಂಘಟನೆ ಸ್ಥಾಪಿತವಾಯಿತು. ನಮ್ಮ ಜಿಲ್ಲೆಯಿಂದ ಶ್ರೀ ದ. ಲ. ಅಧ್ಯಾಪಕ, ಜಯದೇವ ಕುಲಕರ್ಣಿ ಮೊದಲಾದವರು ಈ ಸಂಘಟನೆಯಲ್ಲಿದ್ದರು. ಕ್ರಮೇಣ ಕಾಂಗ್ರೆಸಿನ ನಿತ್ಯದ ಚಟುವಟಿಕೆಗಳು ಸುರು ಆದವು.

೧೯೪೬ ರಲ್ಲಿ ಪ್ರಾಂತಗಳಲ್ಲಿ ಕಾಂಗ್ರೆಸ ಮಂತ್ರಿಮಂಡಳಗಳು ರಚಿತವಾದವು. ಕಾಂಗ್ರೆಸ ಕಮೀಟಿಗಳ ಮೇಲಿನ ನಿರ್ಬಂಧಗಳು ರದ್ದಾಗಿ ಅವು ಎಂದಿನಂತೆ ಕಾರ್ಯ ಮಾಡ ತೊಡಗಿದವು. ಮುಂದೆ ಒಂದೇ ವರುಷದಲ್ಲಿ ಬ್ರಿಟಿಶರು ಭಾರತ ಬಿಟ್ಟು ತೊಲಗಿದರು. ದೇಶವು ಸ್ವತಂತ್ರವಾಯಿತು.

೭

ಸ್ವಾತಂತ್ರ್ಯೋತ್ತರ ಕಾಲ

ಸ್ವರಾಜ್ಯವು ಸುರಾಜ್ಯವಾಗುವದೆಂತು ?

ಸ್ವರಾಜ್ಯದ ಅರುಣೋದಯ !

ಚಲೇಜಾವ ಚಳವಳಿಯೇ ಸ್ವಾತಂತ್ರ್ಯದ ಕೊನೆಯ ಹೋರಾಟವೆಂದು ಭವಿಷ್ಯ ನುಡಿದು ಅದಕ್ಕಾಗಿಯೇ " ಮಾಡು ಇಲ್ಲವೆ ಮಡಿ " ಎಂಬ ಮಂತ್ರದಿಂದ ಗಾಂಧೀಜಿ ಯವರು ಭಾರತದ ಜನಾಂಗಕ್ಕೆ ವಿದ್ಯುತ್ ಶಕ್ತಿಯ್ನು ಸ್ಫೂರ್ತಿಕೊಟ್ಟು ೮ ನೇ ಆಗಸ್ಟದ ಗೊತ್ತುವಳಿಯನ್ನು ಪಾಸು ಮಾಡಿಸಿಕೊಂಡಿದ್ದರು. ನಾವು ಬೇಡ ಬೇಡವೆಂದರೂ ಬ್ರಿಟಿ ಶರು ತುಸು ದಿನಗಳಲ್ಲಿಯೇ ಸ್ವರಾಜ್ಯಕೊಟ್ಟು ಭಾರತದಿಂದ ತೊಲಗುವರೆಂದು ಸರದಾರ ವಲ್ಲಭಭಾಯಿ ಪಟೇಲರು ಆತ್ಮವಿಶ್ವಾಸದಿಂದ ಹೇಳಿದ್ದರು. ದೂರದೃಷ್ಟಿಯ ಚತುರ ರಾಜಕಾರಣಿಗಳಿಗೆ ಹತ್ತೆಂಟು ವರುಷದ ಮುಂದಿನ ಚಿತ್ರದ ಸಾಕ್ಷಾತ್ಕಾರವಾಗುವದು. ಅದು ಸಾಮಾನ್ಯ ಜನರಿಗೆ ತಿಳಿಯುವದಿಲ್ಲ. ೧೯೪೨ ರ ಚಲೇಜಾವ ಕ್ರಾಂತಿಯೇ ಭಾರ ತೀಯ ಸ್ವಾತಂತ್ರ್ಯ ಸಂಗ್ರಾಮದ ಕೊನೆಯ ಹೋರಾಟವಾಯಿತು. ಈ ಕ್ರಾಂತಿಯ ಹೋರಾಟದ ಉಗ್ರತೆ ೧೯೪೪ ರ ಮಧ್ಯಕ್ಕೆ ಕಡಿಮೆಯಾಗಿ ಗಾಂಧೀಜಿಯವರ ಬಿಡು ಗಡೆಯಾಯಿತು. ಕ್ರಾಂತಿವೀರ ಸುಭಾಷಚಂದ್ರ ಬೋಸರು ಬ್ರಿಟಿಶರ ಬಂಧನದಿಂದ ಯುಕ್ತಿಯಿಂದ ನುಸುಳಿ ಪಾರಾಗಿ ಅಫಗಾನಿಸ್ತಾನ ಮಾರ್ಗವಾಗಿ ಯುರೋಪ ಖಂಡಕ್ಕೆ ಹೋಗಿ ಹಿಟ್ಲರ ಮುಸಲೋನಿಯವರನ್ನು ಕಂಡು ಅವರೊಂದಿಗೆ ಮಾತುಕತೆ ನಡೆಸಿ ಪೂರ್ವಕ್ಕೆ ಬಂದರು. ಬ್ರಿಟಿಶರ ಅಂಕೆಯಲ್ಲಿದ್ದ ಭಾರತೀಯ ಸೈನ್ಯದಲ್ಲಿ ಅಶಾಂತಿ ಅಸಂ ತೋಷಗಳನ್ನು ಉಂಟು ಮಾಡಿ ' ಆಝಾದ ಹಿಂದ ಫೌಜ " ಎಂಬ ಸಶಸ್ತ್ರ ಸೇನಾ ಪಡೆಯನ್ನು ನಿರ್ಮಿಸಿ ಜಪಾನೀ ಸೈನ್ಯದೊಂದಿಗೆ ಬ್ರಹ್ಮದೇಶದಲ್ಲಿ ನುಗ್ಗಿ ಭಾರತದ ಪೂರ್ವಗಡಿಯಲ್ಲಿಯ ಮಣಿಪೂರದ ಮೇಲೆ ದಾಳಿ ಇಟ್ಟರು. ಅತ್ತ ಸಿಂಗಾಪೂರದ ಪತನವಾಯಿತು. ದ್ವಿತೀಯ ಮಹಾಯುದ್ಧದಲ್ಲಿ ಮೊದಮೊದಲು ಹಿಟ್ಲರನಿಗೆ ಭಾರಿ ಜಯ ದೊರಕಿತಾದರೂ ಎರಡುಕಡೆಗೆ ಯುದ್ಧಕ್ಷೇತ್ರ ವಿಸ್ತರಿಸಿದ್ದರಿಂದ (ಭೂಮಧ್ಯ ಸಮುದ್ರ ಮತ್ತು ರಶಿಯಾ) ಯುದ್ಧದ ರೂಪ ಬದಲಾಗಹತ್ತಿತು. ಜಪಾನದ ಹಿರೋ ಶಿಮಾದಲ್ಲಿ ಅಟಂ ಬಾಂಬು ಬಿದ್ದಾ ಕ್ಷಣಾರ್ಧದಲ್ಲಿ ಲಕ್ಷಾವಧಿ ಜನರು ಅದಕ್ಕೆ ಆಹುತಿ ಯಾದದ್ದೇ ಯುದ್ಧದ ಕೊನೆಯ ಅಂಕಿಗೆ ಕಾರಣವಾಯಿತು. ಮುಸಲೋನಿ ಹಿಟ್ಲರರು ಆತ್ಮಹತ್ಯೆ ಮಾಡಿಕೊಂಡರು. ಜಪಾನವೂ ಜರ್ಮನಿಯೂ ಶರಣು ಬಂದು ಯುದ್ಧ ನಿಲ್ಲಿಸಿದವು.

ಭಾರತೀಯ ಸೈನ್ಯಪಡೆಯ ಸಾವಿರಾರು ಜನರು ಜಪಾನದ ಸೈನ್ಯಕ್ಕೆ ಶರಣು ಬಂದಾಗಲೇ ಸುಭಾಷಚಂದ್ರ ಬೋಸರು ಅದಕ್ಕೆ ನಾಯಕರಾಗಿ ಅದೇ ಸೈನ್ಯವನ್ನು

ನುಗ್ಗ ಹತ್ತಿದ್ದರು, ಯಾವದೇ ಪರಕೀಯ ಸರಕಾರಗಳ ಸೈನಿಕ ಸಹಾಯ ಪಡೆದು ಸ್ವತಂತ್ರರಾಗವದು ಕಾಂಗ್ರೇಸಿಗೆ ಬೇಕಾಗಿದ್ದಿಲ್ಲ. ಅದರಿಂದ ಬ್ರಿಟಿಶರ ಪಾಶ ತಪ್ಪಿದರೂ ಜರ್ಮನಿಯ ಇಲ್ಲವೆ ಜಪಾನದ ದಾಸ್ಯಪಾಶ ಕೊರಳಿಗೆ ಬಿದ್ದೀತೆಂಬ ಭಯದಿಂದ ಪಂ. ಜವಾಹರಲಾಲರೂ ಸುಭಾಷಚಂದ್ರರ ಜಪಾನಿ ಸಹಾಯದಿಂದ ಯೋಜಿತ ಆಕ್ರಮಣ ವನ್ನು ವಿರೋಧಿಸಿದ್ದರು.

ಪಾಯಿಸರಾಯರು ನಾಮಕರಣ ಮಾಡಿ ಕೇಂದ್ರ ಸರಕಾರದಲ್ಲಿ ಕಾಂಗ್ರೆಸ್ಸು ಮುಸ್ಲೀಂ ಲೀಗಿನ ಸಮಪ್ರಮಾಣದ ಮಿಶ್ರಣ ಮಾಡಿದರು. ಆರೆಂಟು ತಿಂಗಳಲ್ಲಿಯೇ ಅದು ಪೂರ್ಣ ಅಯಶಸ್ವಿಯಾಯಿತು. ದಿನಾಲು ಮಂತ್ರಿಮಂಡಳದಲ್ಲಿ ಘರ್ಷಣೆಯೇ ಘರ್ಷಣೆ. ಸರಕಾರದ ಒಂದು ಗೊತ್ತುವಳಿಯೂ ಸುಸೂತ್ರವಾಗಿ ಆಗಲಿಲ್ಲ. ಪ್ರತಿಯೊಂದಕ್ಕೂ ಅಡೆತಡೆ ಯನ್ನೊಡ್ಡುವದೇ ಜಿನ್ನಾಸಾಹೇಬರ ಮುಸ್ಲಿಂ ಲೀಗಿನ ಧೋರಣೆ ಆಗಿತ್ತು. ಇನ್ನು ಕೂಡಿ ನಡೆಯುವದು ಶಕ್ಯವೇ ಇಲ್ಲೆಂಬ ಪರಿಸ್ಥಿತಿ ನಿರ್ಮಾಣವಾಯಿತು. ಪಾಕಿಸ್ತಾನದ ಬೇಡಿಕೆ, ಕೂಗು, ಪ್ರಬಲವಾಗಹತ್ತಿತು. ಪಂ. ಜವಾಹರಲಾಲ ಸರದಾರ ವಲ್ಲಭಭಾಯಿ, ರಾಜಗೋಪಾಲಾಚಾರ್ಯ ಮೊದಲಾದವರು ಒಳ್ಳೇ ಪೇಚಿನಲ್ಲಿ ಬಿದ್ದರು. ಇದರ ಲಾಭವನ್ನು ಜಿನ್ನಾಸಾಹೇಬರು ಸಾಕಷ್ಟು ಪಡೆದರು. ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಘೋಷಣೆ ಪಾರ್ಲಿಮೆಂಟನಲ್ಲಿ ಆಗಿತ್ತು. ಪಾಕಿಸ್ತಾನ ನಿರ್ಮಾಣ ಮಾಡದೆ ಭಾರತಕ್ಕೆ ಸ್ವಾತಂತ್ರ್ಯ ಕೊಡುವದನ್ನು ತಾನು ಉಗ್ರವಾಗಿ ಪ್ರತಿಭಟಿಸುವ ದಾಗಿ ಮುಸ್ಲೀಂ ಲೀಗೂ, ಜಿನ್ನಾಸಾಹೇಬರೂ ಅರ್ಭಟಿಸಿದರು. ಬ್ರಿಟಿಶ ಸರಕಾರಕ್ಕೂ ಇದೇ ಬೇಕಾಗಿತ್ತು. ಮುಸ್ಲೀಂ ಲೀಗು ಅವರ ಮುದ್ದಿನ ಕೂಸಾಗಿತ್ತು. ದೇಶವಿಭಜನೆಯ ವಿಷಗಾಳಿ ಭರದಿಂದ ಬೀಸಹತ್ತಿತು.

ಗಾಂಧೀಜಿಯವರ ಉದಾರತೆ.

ಗಾಂಧೀಜಿಯವರಿಗೆ ಅತ್ಯಂತ ದುಃಖವಾಯಿತು. ಒಂದು ಕಡೆಗೆ ದೇಶವಿಭಜನೆಯ ಚಿತ್ರ, ಇನ್ನೊಂದು ಕಡೆಗೆ ಅನಿವಾರ್ಯವಾಗಿ ಅದಕ್ಕೆ ಒಪ್ಪಬೇಕೆಂಬ ಕಾಂಗ್ರೆಸ ವರ್ಕಿಂಗ ಕಮಿಟಿಯ ಬಹುಮತದ ವಿಚಾರ ಧಾರೆಯ ಚಿತ್ರ ! ಈ ಭಾರಿ ಗೊಂದಲದ ದ್ವಂದದಲ್ಲಿ ಗಾಂಧೀಜಿಯವರು ಸಿಕ್ಕರು.

ಮುಸ್ಲೀಂ ಲೀಗಿನ, ಜಿನ್ನಾಸಾಹೇಬರ, ಮನವೊಲಿಸುವ ಯಾವ ಪ್ರಯತ್ನವನ್ನೂ ಗಾಂಧೀಜಿ ಬಿಡಲಿಲ್ಲ. ಪಾಕಿಸ್ತಾನದ ಬೇಡಿಕೆಯನ್ನು ಬಿಟ್ಟದ್ದಾದರೆ ಭಾರತವನ್ನು ಮುಸ್ಲೀಂರೇ ಆಳುವಂತೆ ಘಟನೆಯಲ್ಲಿ ಬದಲಾವಣೆ ಮಾಡಿಕೊಡುವದಾಗಿಯೂ ಸಹ ಅವರು ಹೇಳಿದರು. ಸಂಯುಕ್ತ ಮತದಾನ ಪದ್ಧತಿಯಿಂದ ಪಾರ್ಲಿಮೆಂಟನಲ್ಲಿ, ರಾಜ್ಯ ಶಾಸನ ಸಭೆಗಳಲ್ಲಿ, ನೂರಕ್ಕೆ ೪೦ ರಷ್ಟು ಸ್ಥಳಗಳನ್ನು ಮುಸ್ಲೀಮರಿಗೆ ಕಾದಿಡಲೂ ತಾನು ಒಪ್ಪುವದಾಗಿ ಗಾಂಧೀಜಿ ಸಾರಿದರು. ಗಾಂಧೀಜಿಯವರು ಹಿಂದೂ ಮುಸ್ಲೀಂ

ಎಲ್ಲರ ಮೇಲೆ ಮಾತೃವಾತ್ಸಲ್ಯದಿಂದ ಪ್ರೀತಿ ಮಾಡುತ್ತಿದ್ದದ್ದೇ ಇದಕ್ಕೆ ಕಾರಣ. ಹಟಮಾರಿ ಹುಡುಗನಿಗೆ, ಮೂರ್ಖ ಮಗನಿಗೆ, ತುಸು ಅಧಿಕಾರ ಹೆಚ್ಚು ಕೊಟ್ಟರೂ ಅಡ್ಡಿಯಿಲ್ಲ ಮನೆ ಒಡೆಯಬಾರದೆಂದು ಅವರು ಈ ರೀತಿ ಉದಾರತೆ ತೋರಿಸಿದರು. ಆದರೆ ಮುಸ್ಲೀಂ ಲೀಗಿನಮೇಲೆ ಇದರ ಯಾವ ಪರಿಣಾಮವೂ ಆಗಲಿಲ್ಲವಷ್ಟೇ ಅಲ್ಲ ಕಾಂಗ್ರೆಸಿಗರಾದ ಮುಸಲ್ಮಾನರೂ ಕೊನೆಗೆ ಗಾಂಧೀಜಿಯನ್ನು ನಂಬಲಿಲ್ಲ. ಅವರಿಗೆ ನಿಷ್ಠ ನಾದ ಒಬ್ಬ ಮುಖಂಡನೂ ಉಳಿಯಲಿಲ್ಲ. ಇದಾಯಿತು ಮುಸ್ಲೀಮರ ಬಗ್ಗೆ. ನೂರಕ್ಕೆ ೪೦ ರಷ್ಟು ಸ್ಥಳ ಕಾಯಿದೆ ಮಂಡಲಗಳಲ್ಲಿ ಮುಸ್ಲೀಮರಿಗೆ ಕಾದಿಡುವದರಿಂದ ಇಡೀ ಭಾರತವೇ ಪಾಕಿಸ್ತಾನವಾದೀತೆಂದು ರಾಜಾಜಿ, ವಲ್ಲಭಭಾಯಿ, ಪಂಡಿತಜಿಯವರೂ ಭಾವಿಸಿ ಗಾಬರಿಯಾದರು. ದೇಶವಿಭಜನೆ ಅನಿವಾರ್ಯವೇ ಆದರೆ ಆಗಲಿ, ಆದರೆ ಇಡೀ ಭಾರತವೇ ಪಾಕಿಸ್ತಾನವಾಗುವದು ಬೇಡವೆಂದು ಅವರು ಆಲೋಚಿಸಹತ್ತಿದರು. ಜನತೆಯ ಅಭಿಪ್ರಾಯವೂ ಇದೇ ರೀತಿಯದಾಗಿತ್ತು.

ಕಾಲಕರ್ಮ ಕೂಡಿಬಂತು !

ದೇಶವಿಭಜನೆ ಅನಿವಾರ್ಯವಾಯಿತು. ಆಳರಸರಿಗೆ, ಬ್ರಿಟಿಶರಿಗೆ ಸ್ವತಂತ್ರ ಭಾರತವು ಸಮರ್ಥ ಭಾರತವಾಗುವದು ಬೇಕಾಗಿದ್ದಿಲ್ಲ. ಅದು ದುರ್ಬಲವಾಗಿರಬೇಕೆಂಬ ಅತ್ಯಂತ ಹೀನ ವಿಚಾರದಿಂದ ಅವರು ಚದುರಂಗದಾಟ ಆಡಹತ್ತಿದರು. ಭಾರತವನ್ನು ಒಡೆದು ಎರಡು ಹೋಳು ಮಾಡುವಷ್ಟರಿಂದಲೇ ಅವರಿಗೆ ಸಮಾಧಾನವಿದ್ದಿಲ್ಲ. ಆದರೆ ೫೬೪ ದೇಶೀ ಸಂಸ್ಥಾನಿಕರಿಗೂ ಸಂಪೂರ್ಣ ಸ್ವಾತಂತ್ರ್ಯ ಕೊಡಲು ಅವರು ಯೋಚಿಸಿದರು. ಈವರೆಗೆ ಕುನ್ನಿಗಳಂತೆ ಬ್ರಿಟಿಶರ ಕಾಲು ನೆಕ್ಕುತ್ತ ಬಂದ ಅಭಿಮಾನಶೂನ್ಯರಾಗಿದ್ದ ಸಂಸ್ಥಾನಿಕರಿಗೆ, ಅವರು ಎಂದೂ ಕನಸಿನಲ್ಲಿ ಸಹ ಸ್ವತಂತ್ರತೆಯನ್ನು ಬೇಡದಿದ್ದರೂ ಅವರೆಲ್ಲರಿಗೂ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಹವಣಿಕೆಯಲ್ಲಿ ಸರಕಾರಕ್ಕೆ ಆನಂದವಾಗಹತ್ತಿತು. ಈ ಸ್ವಾತಂತ್ರ್ಯವನ್ನು ಕೊಡುವದೇ ಆಗಿದ್ದರೆ ಸಂಸ್ಥಾನೀ ಪ್ರಜೆಗಳಿಗೆ ಕೊಡಬೇಕಾಗಿತ್ತು. ಕೆಲವೊಂದು ಸಂಸ್ಥಾನಗಳಲ್ಲಿ ಪ್ರಜೆಗಳು ಆ ರೀತಿ ಆಂದೋಲನವನ್ನೂ ಹೂಡಿದ್ದರು. ಅವರನ್ನು ಸಮಾಧಾನ ಪಡಿಸುವದನ್ನು ಬಿಟ್ಟು ಎಂದೂ ಸ್ವಾತಂತ್ರ್ಯ ಬೇಡದ ಸಂಸ್ಥಾನಿ ಯಜಮಾನರಿಗೆ ಸಂಪೂರ್ಣ ಸ್ವಾತಂತ್ರ್ಯ ದಯಪಾಲಿಸಲು ಬ್ರಿಟಿಶ ಸರಕಾರ ದುಷ್ಟಬುದ್ಧಿಯಿಂದ ಮುಂದಾಯಿತು ! ಸುಮಾರು ಆರುನೂರು ಸಂಸ್ಥಾನಿಕರು ಅಲ್ಲಲ್ಲಿ ಸ್ವತಂತ್ರ ಘಟಕಗಳನ್ನು ಸ್ಥಾಪಿಸಿದರೆ ಮೊದಲೇ ವಿಭಜನೆಯಿಂದ ದುರ್ಬಲವಾದ ಭಾರತವು ಅತ್ಯಂತ ದುರ್ಬಲವಾಗಿ ಕಡೆತನಕ ಪಾರ್ಶ್ವವಾಯುವಿನ ಬೇನೆಯಿಂದ ಬಳಲುತ್ತಿರಬೇಕೆಂಬ ನೀಚ, ಹೀನವೃತ್ತಿಯನ್ನು ಬ್ರಿಟಿಶ ಸರಕಾರ ತಳೆಯಿತು. ಪಾಕಿಸ್ತಾನ ನಿರ್ಮಾಣ ಮಾಡಿ ಹಿಂದೂ ಮುಸ್ಲೀಂ ಭೂತವನ್ನು ಎಬ್ಬಿಸಿ ಹೊರಗೂ ಒಳಗೂ ಯುದ್ಧದ

ವಾತಾವರಣ ನಿರ್ಮಿಸುವದು ಮತ್ತು ಸಂಸ್ಥಾನಿಕರಿಗೆ ಸ್ವಾತಂತ್ರ್ಯ ಕೊಟ್ಟು ಭಾರತೀಯ ಐಕ್ಯಕ್ಕೆ ನಿರಂತರವಾಗಿ ಕಿಟಿಕಿಟಿ, ತಲೆಶೂಲಿ ಉಂಟುಮಾಡುವದು, ಇಂಥ ಈ ಹೇಯವಾದ ಧೋರಣೆಯನ್ನು ರೂಪಿಸಿ ಬ್ರಿಟನ್ನು ತನ್ನ ದುಷ್ಪವೃತ್ತಿಯ ಪ್ರದರ್ಶನ ಜಗತ್ತಿಗೆ ಮಾಡಿ ಕೊಟ್ಟಿತು. ದ್ವಿತೀಯ ಮಹಾಯುದ್ಧದಲ್ಲಿ ಮಿತ್ರ ರಾಷ್ಟ್ರಗಳಿಗೆ ಜಯ ದೊರಕಿದರೂ ಅದು ನಿಜವಾಗಿ ಅಮೇರಿಕಾ ಮತ್ತು ರಶಿಯಾ ಇವೆರಡೇ ದೇಶಗಳ ಜಯವಾಗಿತ್ತು. ಬ್ರಿಟನ್ನು ಈ ಯುದ್ಧದಲ್ಲಿ ಸತ್ತು ಸತ್ತು ಉಳಿಯಿತು. ಸಾಮ್ರಾಜ್ಯವೆಲ್ಲ ನಾಶವಾಗಿ ತನ್ನಷ್ಟಕ್ಕೆ ತಾನು ಉಳಿದರೆ ಸಾಕೆಂಬ ಸ್ಥಿತಿಗೆ ಅದು ಬಂದಿತ್ತು ಜಗತ್ತಿನಲ್ಲಿಯೇ ಪ್ರಥಮ ದರ್ಜೆಯ ರಾಷ್ಟ್ರವೆಂದೂ, ತನ್ನ ಸಾಮ್ರಾಜ್ಯದ ಮೇಲೆ ಸೂರ್ಯನು ಎಂದೂ ಮುಳುಗುವದಿಲ್ಲವೆಂದೂ ಸೊಕ್ಕಿನಿಂದ ಉನ್ಮತ್ತತೆಯಿಂದ ಜಂಭಕೊಚ್ಚಿಕೊಳ್ಳುತ್ತಿದ್ದ ಬ್ರಿಟನ್ನು ಎರಡನೇ ಮೂರನೇ ತರಗತಿಯಿಂದಲೂ ಕೆಳಗಿಳಿದು ನಾಲ್ಕನೇ ತರಗತಿಯ ರಾಷ್ಟ್ರವಾಗುವ ಭಾರೀ ಅಪಮಾನದ ಸ್ಥಿತಿ ಅದಕ್ಕೆ ಒದಗಿದರೂ ಸುವಿಚಾರ ಉದಯಿಸಲಿಲ್ಲ. ಕುಟಿಲ ಕಾರಸ್ಥಾನ ಮತ್ತು ಮನೆಮುರುಕತನದ ಆಟ ಮಾಡಿಯೇ ಅದು ಸಾಮ್ರಾಜ್ಯ ಬೆಸಿಳೆತ್ತು. ಸಾಮ್ರಾಜ್ಯ ಸೂರ್ಯ ಅಸ್ತಮಿಸುವಾಗಲೂ ಅದೇ ಕುಟಿಲ ಕಾರಸ್ಥಾನ ನಡೆಯಿಸಿ ಭಾರತವನ್ನು ನಿರಂತರ ದುರ್ಬಲ ಮಾಡಿ ಈ ದೇಶದಿಂದ ಕಾಲುಕಿತ್ತುವ ಆಟ ಆಡಿತು. ಮುಸ್ಲೀಮರು ಬಹುಸಂಖ್ಯಾತರಾಗಿ ಇರುವ ಪ್ರಾಂತಗಳನ್ನು ಅಂದರೆ ಸಿಂಧ, ವಾಯವ್ಯ ಸರಹದ್ದ ಪ್ರಾಂತಗಳನ್ನು ಪೂರ್ತಿಯಾಗಿಯೂ ಪಂಜಾಬ ಮತ್ತು ಬಂಗಾಲಗಳಲ್ಲಿಯ ಮುಸ್ಲೀಮ ಬಹುಮತವುಳ್ಳ ಅರ್ಧ ಭಾಗಗಳನ್ನೂ ಕೂಡಿಸಿ ಪಾಕಿಸ್ತಾನ ನಿರ್ಮಾಣ ಮಾಡಿ ಹಾಗು ಸಂಸ್ಥಾನಿಕರಿಗೆ ಸ್ವಾತಂತ್ರ್ಯ ದಯಪಾಲಿಸಿ ತುಂಡು ತುಂಡಾದ ಭಾರತಕ್ಕೆ ಸ್ವರಾಜ್ಯ ದಾನ ಮಾಡಲು ಬ್ರಿಟಿಶ ಸರಕಾರ ನಿಶ್ಚಯಿಸಿತು. ಇಂಥ ದುರ್ಬಲ ಸ್ವಾತಂತ್ರ್ಯ ಒಪ್ಪಬಾರದೆಂದೂ ಭಾರತವನ್ನು ಹೋಳು ಮಾಡಿ ಹಾಳು ಮಾಡುವ ಬ್ರಿಟಿಶ ಕುಟಿಲತನವನ್ನು ಮನ್ನಿಸಬಾರದೆಂದೂ ಗಾಂಧೀಜಿಯವರು ಸ್ಪಷ್ಟರೀತಿಯಿಂದ ಸಲಹೆ ಕೊಟ್ಟರು. ಆದರೆ ಪಂ. ಜವಾಹರಲಾಲ, ಸರದಾರ ವಲ್ಲಭಭಾಯಿ ಪಟೇಲ, ರಾಜಾಜಿ ಮೊದಲಾದ ಕಾಂಗ್ರೆಸಿನ ವರ್ಕಿಂಗ ಕಮಿಟಿಯ ಸದಸ್ಯರೆಲ್ಲ ಅನಿವಾರ್ಯವಾಗಿ ಈ ದುರ್ಬಲ ಸ್ವರಾಜ್ಯಕ್ಕೆ ಒಪ್ಪುತ್ತ ಎನ್ನುವದಕ್ಕೆ ಮುಂದಾದರು !

ಸ್ವರಾಜ್ಯದ ಸೂರ್ಯೋದಯ

ಅರುಣೋದಯದ ಕೆಂಪು ಒಡೆದು ಸೂರ್ಯೋದಯವಾಗುವಂತೆ ಭಾರತೀಯ ಸ್ವಾತಂತ್ರ್ಯ ರವಿಯು ರಕ್ತದ ಅರುಣೋದಯವನ್ನೇ ಮೊದಲು ಕಳಿಸಿ ಕೊಟ್ಟನು. ಕುಟಿಲತನದಲ್ಲಿ ಜಗತ್ತನ್ನೇ ಮೀರಿಸಿದ ಬ್ರಿಟಿಶರು ಭಾರತೀಯ ಸ್ವಾತಂತ್ರ್ಯದ ಘೋಷಣೆ ಮಾಡಿದರು. ಅದು ಎಂಥ ಸ್ವಾತಂತ್ರ್ಯ ? ದೇಶ ವಿಭಜನೆ ಮಾಡಿ,

ನಿರಂತರವಾಗಿ ಗಡಿಯಲ್ಲಿ ಘರ್ಷಣೆ ತಪ್ಪದಂತೆ ಪಾಕಿಸ್ತಾನದ ರಚನೆ ಮಾಡಿ, ಮತ್ತು ಸಂಸ್ಥಾನಿಕರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಒಡೆದು ಚೂರು ಚೂರಾದ ಕನ್ನಡಿಯಂತಹ ಒಡಕು ಸ್ವರಾಜ್ಯ ! ಗಾಂಧೀಜಿಯವರಿಗೆ ಈ ಸ್ವರಾಜ್ಯದಿಂದ ಸಮಾಧಾನವಾಗಲಿಲ್ಲ. ಅವರು ದುಃಖದ ಭಾರದಿಂದ ನೊಂದು ಹಂಡಾದರು. ೧೫ನೇ ಆಗಷ್ಟದ ಸ್ವಾತಂತ್ರ್ಯದ ಸ್ಥಾಪನೆಯ ಪ್ರಪ್ರಥಮ ದಿನ ದಿಲ್ಲಿಯಲ್ಲಿಯ ಆ ವೈಭವ, ಆ ಆನಂದ, ಆ ಕೃಣತ, ಆ ಸಂಭ್ರಮ, ಆ ಅಲಂಕಾರ, ಆ ತೋಷಿನ ಮಾನಪಂದನೆ, ಆ ಕೆಂಪು ಕೋಟೆಯ ಮೇಲೆ ಹಾರಿಸಲಾದ ತ್ರಿವರ್ಣ ಧ್ವಜ, ಈ ಯಾವ ಸಡಗರವನ್ನು ನೋಡುವ ಮನಸ್ಸು ಗಾಂಧೀಜಿಯವರಿಗಿದ್ದಿಲ್ಲ. ಅಂದು ಅವರು ದುಃಖದ ಕಣ್ಣೀರು ಒರೆಸಲು ಸುದೂರವಾದ ಕಲಕತ್ತೆಯ ಅಚೆಗೆ ನೌಖಾಲಿಯಲ್ಲಿದ್ದರು. ಬ್ರಿಟಿಶರು ಮಣಿಯುಲಿಕ್ಕೆ ಹಂಡಾಗಲಿಕ್ಕೆ ವಾತಾವರಣ ನಿರ್ಮಿಸಿದವರು ಕ್ರಾಂತಿಕಾರಕರು, ಕಾಂಗ್ರೆಸ್ಸಿಗರು, ತಮ್ಮ ಅತ್ಮ, ಬಲಿದಾನದಿಂದ ಖುದೀರಾಮ ಬೋಸ ಚಾಫೆಕರ ಬಂಧು, ವಾಸುದೇವ ಫಡಕೆ ಭಗತಸಿಂಗ, ಜತೀಂದ್ರನಾಥ ಮೊದಲಾದ ಹುತಾತ್ಮರು ಸ್ವರಾಜ್ಯಕ್ಕಾಗಿ ಗಲ್ಲಿಗೇರಿದರು. ಸಾವರಕರ ಬಂಧು, ಸೇನಾಪತಿ ಬಾಪಟ, ಬಟುಕೇಶ್ವರ ದತ್ತ ಮೊದಲಾದ ನರರತ್ನರು ಆಜನ್ಮ ಕಾರಾಗ್ರಹ ಅನುಭವಿಸಿದರು. ಲೋಕಮಾನ್ಯ ಬಾಲ ಗಂಗಾಧರ ತಿಲಕ, ಮಗಾಂಧೀಜಿಯವರು ಚಂದನದಂತೆ ತಮ್ಮ ದೇಹ ಸವಿಸಿದರು. ಲಕ್ಷಾವಧಿ ಬಾಂಧವರು ಭಾರತ ಮಾತೆಯ ಬಂಧ ವಿಮೋಚನೆಗಾಗಿ ಅನೇಕ ಕಷ್ಟನಷ್ಟ ಸಹಿಸಿದರು. ಜೇಲಿಗೆ ಹೋದರು. ಬಿಸಿಲಿನ ಮೋರೆಯನ್ನೂ ಎಂದೂ ನೋಡದ ಅಗರ್ಭ ಶ್ರೀಮಂತ ಮಹಿಳೆಯರೂ, ವಿದ್ಯಾರ್ಥಿಗಳೂ,ತರುಣರೂ, ಸುಶಿಕ್ಷಿತ, ಅಶಿಕ್ಷಿತರು, ಶ್ರೀಮಂತರು, ಬಡವರು ಪಟ್ಟಣವಾಸಿಗಳೂ,ಹಳ್ಳಿಗರು ಯಾತನೆಗಳನ್ನು ಸಹಿಸಿದರು ಸುಭಾಷಚಂದ್ರ ಬೋಸರಂಥವರು ಸೈನ್ಯದಲ್ಲಿ ಬಂಡಾಯವೆಬ್ಬಿಸಿದರು. ದ್ವಿತೀಯ ಮಹಾಯುದ್ಧದಲ್ಲಿ ಬ್ರಿಟನ್ನು ಹಣಾಗಾಯಿ ನೀರುಗಾಯಿಯಾಗಿ ಜೀವ ಉಳಿಸಿಕೊಳ್ಳುವದೇ ಸಾಕು ಸಾಕಾಯಿತು.

ಈ ಎಲ್ಲ ಪ್ರಯತ್ನದಲ್ಲಿ, ಸ್ವರಾಜ್ಯದ ಹೋರಾಟದಲ್ಲಿ, ಪಟ್ಟ ಕಷ್ಟದಲ್ಲಿ ಮುಸ್ಲೀಮ ಲೀಗಿನ ಪಾತ್ರವೆಷ್ಟಿತ್ತು ? ಸ್ವರಾಜ್ಯದ ಬೇಡಿಕೆಗೆ ಸ್ವಾತಂತ್ರ್ಯದ ಹೋರಾಟಕ್ಕೆ ಅಖಂಡವಾಗಿ ಒಂದೇಸವನೆ ವಿರೋಧ ಮಾಡುವದೂ, ಬ್ರಿಟಿಶರ ಬಾಲಬಡೆಯುವದೂ ಈ ಎರಡೇ ಕೆಲಸಗಳನ್ನು ಮುಸ್ಲೀಂ ಲೀಗು ಮತ್ತು ಅದರ ಸರ್ವಾಧಿಕಾರಿ ಜಿನ್ನಾ ಸಾಹೇಬರು ಮಾಡಿದರು. ಸಾಸಿವೆ ಕಾಳಿನಷ್ಟೂ ತ್ಯಾಗ ಮಾಡದ, ಕನಸಿನಲ್ಲಿಯೂ ಕಷ್ಟದ ಕಲ್ಪನೆ ತರದ ಮುಸ್ಲೀಮ ಲೀಗಿನ ಜಿನ್ನಾಸಾಹೇಬರನ್ನು ಕರೆದು ಅವರ ಉಡಿಯಲ್ಲಿ ಪಾಕಿಸ್ತಾನದ ದಾನವನ್ನು ಬ್ರಿಟಿಶ ಸರಕಾರ ಹಾಕಿತು ! ವಾಯವ್ಯ ಸರಹದ್ದಿನ ಪ್ರಾಂತದ ಮುಸ್ಲೀಮರು ಖಾನ ಅಬದುಲ್ ಗಫಾರ ಖಾನರ ನೇತೃತ್ವದಲ್ಲಿ ಯಾವ ಭಾರತೀಯರಿಗಿಂತ ಕಡಿಮೆ ಅಲ್ಲದಷ್ಟು ಕಿಂಬಹುನಾ ತುಸು ಹೆಚ್ಚೆ ಕಷ್ಟ ತ್ಯಾಗಗಳನ್ನು ಸ್ವರಾಜ್ಯಕ್ಕಾಗಿ ಸಹಿಸಿದರು. ಅವರ ಬೇಡಿಕೆ ಅವರ ಮಾತಿಗೆ ಏನೂ ಬೆಲೆ ಕೊಡದೆ ಆರಾಮ ಖುರ್ಚಿಯಮೇಲೆ ಸಿಗರೇಟು ಸೇದುತ್ತ ಹೊಗೆ ಬಿಡುತ್ತ ಕುಳಿತ ಜಿನ್ನಾಸಾಹೇಬರ ಮಾತು ಕೇಳುವದರ ಉದ್ದೇಶವೇನಾಗಿತ್ತೆಂಬದನ್ನು ಬೇರೆ ಹೇಳುವ ಕಾರಣವಿಲ್ಲ.

ಅದರಂತೆಯೇ ದೇಶೀ ಸಂಸ್ಥಾನಿಕರದು ಸಹ ! ಸಂಸ್ಥಾನಿ ಪ್ರಜೆಗಳು ಇಮ್ಮಡಿ ದಾಸ್ಯದಲ್ಲಿ ಕೊಳೆಯುತ್ತಿರುವಾಗ ಆಲ್ಲಿಯ ಪ್ರಜಾಪರಿಷತ್ತಿನವರು ನಡೆಯಿಸಿದ ಹೋರಾಟ ಚಳವಳಿಗಳನ್ನು ಲಕ್ಷಿಸಿ ಅವರಿಗೆ ಸ್ವರಾಜ್ಯ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಮಧ್ಯಯುಗದಲ್ಲಿಯ ವಾತಾವರಣವಲ್ಲಿ ಸೊಕ್ಕಿನಿಂದ ಮೆರೆಯುವ ಬರಗಾಲದ ಭವಣೆಯಲ್ಲಿ ಪ್ರಜೆಗಳು ನೀರಿಗಾಗಿ ಕೂಳಿಗಾಗಿ ಬಾಯಿಬಿಡುವಾಗ, ನಾಯಿಯ ಮದುವೆಗಾಗಿ ಲಕ್ಷಗಟ್ಟಲೆ ರೂಪಾಯಿ ಹಾಳು ಮಾಡುತ್ತಿದ್ದಂಥ ಬ್ರಿಟಿಶ ಆಳರಸರ ಕಾಲಾನೆಕ್ಕುತ್ತ ವೇಳೆಕಳೆಯುವ ನಿರ್ಬುದ್ಧ ದುರ್ಬಲ ಸಂಸ್ಥಾನಿಕರಿಗೆ, ಸಂಪೂರ್ಣ ಸ್ವಾತಂತ್ರ್ಯವನ್ನು ಅವರು ಎಂದೂ ಕೇಳಿದಿದ್ದರೂ, ಬ್ರಿಟಿಶರು ಕೊಡುವದಾಗಿ ಘೋಷಣೆ ಮಾಡಿದರು.

ಈ ಎರಡೂ ಘಟನೆಗಳ ಉದ್ದೇಶವೊಂದೇ ಸ್ವತಂತ್ರ ಭಾರತವು ಬಹಿರಂಗವಾಗಿ ಪಾಕಿಸ್ತಾನದಿಂದ ಮತ್ತು ಅಂತರಿಕವಾಗಿ ಐದಾರು ನೂರು ಸ್ವತಂತ್ರ ದೇಶೀಯ ಸಂಸ್ಥಾನಿಕರಿಂದ ನಿರಂತರವಾಗಿ ಪೇಚಿಗೆಸಿಕ್ಕು ಅತ್ಯಂತ ದುರ್ಬಲವಾಗಿ ಉಳಿಯಬೇಕೆಂಬ ನೀಚ ಹೀನ ವೃತ್ತಿಯೇ ಇದಕ್ಕೆ ಕಾರಣವಾಗಿತ್ತೆಂಬುದನ್ನು ತಿಳಿಗೇಡಿಯೂ ಅರಿತುಕೊಳ್ಳುವ ಸಂಗತಿಯಾಗಿತ್ತು.

ಇಂಥ ದುರ್ಬಲ ಸ್ವರಾಜ್ಯ, ಅರ್ಧಾಂಗವಾಯುವಿನಿಂದ ವಿಕೃತವಾದ ಸ್ವರಾಜ್ಯ ಅದಾಗಿತ್ತು.

ಸಂಹಾರ ತಡೆಯಲು ಶಾಂತಿದೂತನ ಸಂಚಾರ !

ಪಾಕಿಸ್ತಾನದ ಘೋಷಣೆಯಾಗುವದೇ ತಡ ಆಲ್ಲಿಯ ಅಲ್ಪಸಂಖ್ಯಾಕ ಹಿಂದೂ ಶೀಖ. ಸಿಂಧಿಗಳ ನರ ಬೇಟೆ ಸುರು ಆಯಿತು. ಈ ಅಲ್ಪಸಂಖ್ಯರನ್ನು ಕಾಡಿಸಿ ಓಡಿಸಿ ಹಿಂಸಿಸಿ ಕೊಲ್ಲಿಸಿ ತಮ್ಮ ರಾಕ್ಷಸಿ ಅತ್ಯಾಚಾರಗಳನ್ನು ಕ್ರೂರ ಪಶುಗಳಿಗಿಂತ ಪಶುಗಳಾಗಿ ಆಲ್ಲಿಯ ಮುಸ್ಲೀಮರು ನಡೆಸಿದರು ಸುಮಾರು ೩೦ ಲಕ್ಷ ಅಲ್ಪಸಂಖ್ಯಾಂಕರ ಕೊಲೆಯಾಯಿತು. ಸ್ತ್ರೀಯರ ಮಾನಭಂಗ, ಆಸ್ತಿ ಲೂಟಿ ಮುಂತಾದವುಗಳಿಗೆ ಮಿತಿ ಉಳಿಯಲಿಲ್ಲ. ಉಳಿದವರೆಲ್ಲರೂ ಓಡಿ ನಿರಾಶ್ರಿತರಾಗಿ ಭಾರತಕ್ಕೆ ವಲಸೆ ಬಂದರು.

ಪಾಕಿಸ್ತಾನದಿಂದ ನಿರ್ಗತಿಕರಾಗಿ ಓಡಿ ಭಾರತಕ್ಕೆ ಬರುತ್ತಿದ್ದ ಆಲ್ಲಿಯ ಅಲ್ಪಸಂಖ್ಯಾಕ ಹಿಂದೂ, ಶೀಖ ಮುಂತಾದವರು ತಮ್ಮ ಮೇಲೆ ಮುಸ್ಲೀಮರು ನಡೆಯಿಸಿದ ಅಮಾನುಷ ಅತ್ಯಾಚಾರಗಳನ್ನು ಇಲ್ಲಿಯ ಬಾಂಧವರಿಗೆ ಹೇಳಹತ್ತಿದ್ದರಿಂದ ಅದರ ಪ್ರತಿಕ್ರಿಯೆ ಇಲ್ಲಿಯೂ ಕೆಲಮಟ್ಟಿಗೆ ನಡೆಯದೆ ಉಳಿಯಲಿಲ್ಲ. ಪಶ್ಚಿಮ ಬಂಗಾಲ್ಕ ಪೂರ್ವ ಪಂಜಾಬ ದಿಲ್ಲಿ ಮುಂತಾದ ಕಡೆಗೆ ಅಲ್ಪಸಂಖ್ಯಾಕರಾಗಿದ್ದ ಮುಸಲ್ಮಾನರನ್ನು ಅಲ್ಲಿಯ ಬಹುಸಂಖ್ಯ ಹಿಂದು ಶೀಖರು ಹಿಂಸಿಸುವದು ಸುರು ಆಯಿತು. ಲಕ್ಷಾವಧಿ ಅಲ್ಪಸಂಖ್ಯಾಂಕ ಮುಸ್ಲೀಮರ ಕೊಲೆ ಇಲ್ಲಿಯೂ ಆಯಿತು. ಅತ್ತಿಂದ ಇತ್ತ ಇತ್ತಿಂದ ಅತ್ತ ನಿರಾಶ್ರಿತರ ಲಕ್ಷಾವಧಿ ಜನಜಂಗುಳಿ ಓಡಿ ಬರುವದು ನಡೆಯಿತು. ದಿಲ್ಲಿಯಂಥ ಭಾರತದ ರಾಜಧಾನಿಯಲ್ಲಿ ಕಾಯದೆ ಸುವ್ಯವಸ್ಥೆ ಕಾಯ್ದುಕೊಳ್ಳುವದು ಸರಕಾರಕ್ಕೆ

ಕಠಿಣವಾಗಿ ಹೋಯಿತು ! ಎಷ್ಟೋ ಶತಮಾನಗಳಿಂದ ಈ ಭಾರತದ ಭೂಮಿಯಲ್ಲಿ ಬೇರೆ ಬೇರೆ ಧರ್ಮದ ಜನರು ಬಂಧುಗಳಂತೆ ಸೌಹಾರ್ದದಿಂದ ಬಾಳುತ್ತ ಬಂದವರೇ ಈಗ ಹುಲಿಸಿಂಹಾದಿ ಕ್ರೂರ ವನ್ಯ ಮೃಗಗಳಂತೆ ಒಬ್ಬರನ್ನೊಬ್ಬರು ಕೊಲ್ಲುತ್ತಿರುವ, ರಕ್ತದ ಹೊಳೆ ಹರಿಯುತ್ತಿರುವ ದಾರುಣ ದೃಶ್ಯವು ಪಾಕಿಸ್ತಾನ ಮತ್ತು ಹಿಂದುಸ್ತಾನದಲ್ಲಿ ಕಾಣಹತ್ತಿತು. ಗಾಂಧೀಜಿಯವರ ಭಾವನೆ ಉಕ್ಕೇರಿ ಬಂದವು. ಇದೆಂಥ ಸ್ವರಾಜ್ಯ ? ಇದೆಂಥ ಸ್ವಾತಂತ್ರ್ಯ ? ಬೇಡ ಬೇಡವೆಂದು ಹೇಳಿದರೂ ವಿಭಜನೆಗೆ ಒಪ್ಪಿದ ಕಾಂಗ್ರೆಸ ಮುಖಂಡರು ತಮ್ಮ ಅನುಯಾಯಿಗಳೇ ಆಗಿದ್ದರೆಂಬುದನ್ನು ನೋಡಿ ಅವರು ದುಃಖದಿಂದ ನೊಂದು ಹೋದರು. ದಿಲ್ಲಿಯ ಒಂದು ದರ್ಗಾವನ್ನು ಜನಜಂಗುಳಿ ಹೊಕ್ಕು ಧ್ವಂಸ ಮಾಡುವದನ್ನು ನೋಡಿ ಅವರು ೨೧ ದಿನದ ಉಪವಾಸ ಸುರು ಮಾಡಿದರು. ಉಪವಾಸದ ಪರಿಣಾಮವಾಗಿ ಆ ದರ್ಗಾವನ್ನು ಮತ್ತೆ ಮುಸಲ್ಮಾನರ ವಶಕ್ಕೆ ಕೊಡಲಾಯಿತು. ಆದರೆ ಪೂರ್ವ ಬಂಗಾಲದಲ್ಲಿ ಅಂದರೆ ಪಾಕಿಸ್ತಾನದಲ್ಲಿ ಅಲ್ಲಿಯ ಬಹುಸಂಖ್ಯಾಂಕ ಮುಸ್ಲಿಮರು ಹಿಂದೂ ಅಲ್ಪಸಂಖ್ಯಾಂಕರ ಮೇಲೆ ವಿಪರೀತ ಅತ್ಯಾಚಾರ ನಡೆಸುತ್ತಿದ್ದಾಗ ಯಾವ ಮುಸ್ಲೀಮನು ಉಪವಾಸ ಮಾಡಬಲ್ಲವನಾಗಿದ್ದನು ? ಮತ್ತೆ ಅಲ್ಲಿಯೂ ಗಾಂಧೀಜಿಯವರೇ ಹೋದರು. ಹಿಂದುಸ್ತಾನದಲ್ಲಿಯ ಅಲ್ಪಸಂಖ್ಯ ಮುಸ್ಲೀಮರ ಮೇಲೆ ಅತ್ಯಾಚಾರ ನಡೆಯಬಾರದೆಂದು ಹೇಳಲಿಕ್ಕೂ, ಪಾಕಿಸ್ತಾನದಲ್ಲಿಯ ಅಲ್ಪಸಂಖ್ಯ ಹಿಂದುಗಳಮೇಲೆ ಅತ್ಯಾಚಾರ ನಡೆಯಬಾರದೆಂದು ಹೇಳಲಿಕ್ಕೂ ಗಾಂಧೀಜಿಯೊಬ್ಬರೇ ಏಕಾಕಿಯಾಗಿದ್ದರು. ಮಾನವೀಯತೆಯ, ಅಹಿಂಸೆಯ ಪೂಜಾರಿಯಾಗಿದ್ದ ಅವರಿಗೆ ಬೇರೆ ಯಾವ ದಾರಿಯೂ ಇದ್ದಿಲ್ಲ. ಜನ ಕೇಳಲಿ ಬಿಡಲಿ ಒಬ್ಬಂಟಿಗನಾಗಿ ಗಾಂಧೀಜಿ ನೌಖಾಲಿಗೆ ಹೋಗಿ ಬಿಟ್ಟರು. ಅಲ್ಲಿಯ ಬಹುಸಂಖ್ಯ ಮುಸ್ಲೀಮರಿಗೆ ಎರಡು ವಿವೇಕದ ಮಾತು ಹೇಳುತ್ತ ಅಲ್ಪಸಂಖ್ಯ ಹಿಂದುಗಳಿಗೆ ಸಾಂತ್ವನ ಮತ್ತು ಧೈರ್ಯ ಕೊಡುತ್ತ ತನ್ನ ಸ್ವಂತದ ರಕ್ಷಣೆಯ ಹೊಣೆಯನ್ನು ಆ ಸರ್ವಶಕ್ತ ಪರಮಾತ್ಮನಮೇಲೆ ಹಾಕಿ ಕಾರ್ಯ ಮಾಡಹತ್ತಿದ ಆ ಮಹಾ ವಿಭೂತಿಗೆ ದಿಲ್ಲಿಯ ಕೆಂಪು ಕೋಟೆಯ ೧೫ನೇ ಅಗಷ್ಟದ ವೈಭವ ನೋಡುವ ಮನಸ್ಸು ಹೇಗಾಗಬೇಕು ? ಅವರಿಗೆ ಕೆಂಪು ಕೋಟೆಯ ಬದಲು ಪರಸ್ಪರರು ಹರಿಸುತ್ತಿರುವ ಕೆಂಪು ರಕ್ತ ಕಾಣಿಸುತ್ತಿತ್ತು !

ರಾಷ್ಟ್ರಕವಿತನ ಪೂರ್ಣಾಹುತಿ !

ಸ್ವಾತಂತ್ರ್ಯವು ದೊರಕಿತು, ದೇಶದ ಎಲ್ಲ ಅಧಿಕಾರ ಸೂತ್ರಗಳು ಕಾಂಗ್ರೆಸ್ಸಿನ ಕೈಯ್ಯಲ್ಲಿ ಬಂದವು. ಇನ್ನೇನು ಭಾರತದ ಸರ್ವಾಂಗೀಣ ವಿಕಾಸ ಕಾಲ ಸಮೀಪಿಸಿತು. ರಾಮರಾಜ್ಯ ಸ್ಥಾಪನೆಯಾಯಿತು ಎಂದು ಸುಖಸ್ವಪ್ನದಲ್ಲಿ ಜನತೆ ಲೋಲಾಡುತ್ತಿರುವಷ್ಟರಲ್ಲಿ " ಹಾ ಹಂತ ಹಂತ ನಲಿನೀಂ ಗಜ ಉಚ್ಚಹಾರ" ಎಂಬಂತೆ ಭಾರತಮಾತೆಯ ಸ್ಥಿತಿ ಆಯಿತು ! ಸ್ವಾತಂತ್ರ್ಯ ಪ್ರಾಪ್ತವಾಗಿ ಐದು ತಿಂಗಳು ಸಹ ಗತಿಸಿರಲಿಲ್ಲ, ರಾಷ್ಟ್ರ

ಪಿತ ಮ. ಗಾಂಧೀಜಿಯವರನ್ನು ಭಾರತೀಯನೇ ಅದರಲ್ಲಿಯೂ ಉಚ್ಚವರ್ಣದವನೆಂದು ಹೇಳಿಕೊಳ್ಳುತ್ತಿದ್ದ ಒಬ್ಬ ತಲೆತಿರುಕ ಮೀಚ ಹಿಂದುವೇ ಗುಂಡಿಕ್ಕಿಕೊಂದು ಭಾರತಮಾತೆಯನ್ನು ಅನಾಥಳನ್ನಾಗಿ ಮಾಡಿಬಿಟ್ಟನು ! ೩೦ ನೇ ಜನವರಿ ೧೯೪೮ ನೇ ಇಸವಿಯ ಶುಕ್ರವಾರ ದಿವಸ ದಿಲ್ಲಿಯಲ್ಲಿ ಬಿರ್ಲಾ ಭವನದ ಎದುರಿನ ಬೈಲಲ್ಲಿ ನಿತ್ಯದಂತೆ ಗಾಂಧೀಜಿಯವರು ಪ್ರಾರ್ಥನೆಗಾಗಿ ನಡೆದು ಬರುತ್ತಿದ್ದರು. ಸಾವಿರಾರು ಪ್ರೇಕ್ಷಕರು ಭಕ್ತರು ನೆರೆದಿದ್ದರು. ನಮಸ್ಕಾರ ಮಾಡಲು ಬರುವವನಂತೆ ನಟಿಸುತ್ತ ನಥೂರಾಮ ಗೋಡಸೆ ಎಂಬವನು ಮುಂದೆ ಬಂದು ತನ್ನ ಕೈಯೊಳಗಿನ ರಿವಾಲ್ವರದಿಂದ ಮೂರು ಗುಂಡು ಬಾಪೂಜಿಯ ಎದೆಗೆ ಹೊಡೆದನು ! ಹೇ ರಾಮ, ಹೇ ರಾಮ ! ಎಂದು ಅನ್ನುತ್ತಿರುವಂತೆ ಮಹಾತ್ಮರ ಕೃಶ ದೇಹ ಧೊಪ್ಪನೆ ನೆಲಕ್ಕೆ ಕುಸಿಯಿತು. ಎಲ್ಲಿ ನೋಡಿದಲ್ಲಿ ಹಾಹಾಕಾರ ! ಕ್ಷಣಾರ್ಧದಲ್ಲಿ ದುಃಖಪರಿತಪ್ತರಾದ ಲಕ್ಷಾವಧಿ ಜನರ ಸಾಗರವು ವಿದ್ಯುತ್ತಿನ ಆಘಾತವಾದಂತೆ ಹೌ ಹಾರಿ ಬಿರ್ಲಾ ಭವನದ ಕಡೆಗೆ ಧಾವಿಸಿತು ! ದೇಶದ ತುಂಬ ಆಕಾಶವಾಣಿಗಳು ಈ ದುಃಖಾತಿರೇಕದ ಸುದ್ದಿಯನ್ನು ತತ್‌ಕ್ಷಣ ಬಿತ್ತರಿಸಿದವು ! ಜನರಿಗೆ ತಮ್ಮ ಕಿವಿಯ ಮೇಲೆಯೇ ವಿಶ್ವಾಸವೆನಿಸಲಿಲ್ಲ. ಈ ಸುದ್ದಿ ನಿಜವಿರಬಹುದೇ ಎಂದು ಪ್ರತಿಯೊಬ್ಬ ಭಾರತೀಯನು ಸಂಶಯದಲ್ಲಿ ಮುಳುಗಿದನು. ಆದರೆ ಕೆಟ್ಟ ಸುದ್ದಿ ಸುಳ್ಳಾಗಿಲ್ಲವೆಂದು ನಿಮಿಷಾರ್ಧದಲ್ಲಿ ಮನವರಿಕೆಯಾಯಿತು !

ಅಂದು ಬೆಳಗಾಂವಿ ಜಿಲ್ಲಾ ಕಾಂಗ್ರೆಸ ಕಮಿಟಿಯ ಸಕಲ ಸದಸ್ಯರ ಸಭೆ ಚಿಕ್ಕೋಡಿ ರೋಡ ಸ್ಟೇಶನ್ನಿನ ಹತ್ತರದ ಜೋಡಟ್ಟಿಯ ರೆಸ್ಟ ಹೌಸದ ಬೈಲಲ್ಲಿ ಕೂ ತ್ತು. ಕೊಲ್ಹಾಪೂರ ಸಂಸ್ಥಾನವನ್ನು ಗದಗದ ನಡುಗಿಸಿ ೧೯೪೭ ರ ಕೊನೆಯ ಅಂದೋಲನದಲ್ಲಿ ಕಡೆತನಕ ಭೂಗತರಾಗಿ ಉಳಿದು ಕಾರ್ಯ ಮಾಡುತ್ತಿದ್ದ ಸಂಸ್ಥಾನ ಪ್ರಜಾಧುರೀಣರಾದ ಶ್ರೀ ರತ್ನಪ್ಪಣ್ಣ ಕುಂಭಾರ ಅವರು ಈ ಸಭೆಗೆ ಬಂದಿದ್ದರು. ಅದೇ ತಾನೇ ಪ್ರಕಟವಾಗಿದ್ದ ರತ್ನಪ್ಪಣ್ಣ ನವರನ್ನು ನೋಡಲು ಸಾವಿರಾರು ಸಂಖ್ಯೆಯಲ್ಲಿ ಜನ ಕೂಡಿತ್ತು. ಜಿಲ್ಲೆಯ ಮೂರು ನಾಲ್ಕು ನೂರು ಕಾರ್ಯಕರ್ತರು ಸಭೆಗೆ ಬಂದಿದ್ದರು. ಮಧ್ಯಾಹ್ನದ ಊಟ ಮುಗಿದಿತ್ತು. ಶ್ರೀ ರತ್ನಪ್ಪಣ್ಣ ೪ ಗಂಟೆಗೆ ಬಂದು ಸಭೆಯ ವೇದಿಕೆಯಮೇಲೆ ಹತ್ತುತ್ತಿರುವಾಗಲೇ ಯಾರೋ ಬಂದು ಗಾಬರಿಯ ಧ್ವನಿಯಲ್ಲಿ ಅಧ್ಯಕ್ಷ ಶ್ರೀ. ವೆಂಕರಡ್ಡಿಯವರ ಕಿವಿಯಲ್ಲಿ ಈ ಭಯಾನಕವಾದ ಗಾಂಧೀಹತ್ಯೆಯ ಸುದ್ದಿ ಪಿಸುಗುಟ್ಟಿದರು ! ಶ್ರೀ ಅಣ್ಣಾ ಗುರುಜಿಯವರು ಸಭಿಕರಿಗೆ ಬಹಿರಂಗವಾಗಿ ಈ ಸುದ್ದಿ ತಿಳಿಸುವದೇ ತಡ ಜನರು ದುಃಖಾಶ್ರುಗಳನ್ನು ಸುರಿಸುತ್ತ ಅಯ್ಯೋ ಎಂದು ಎದೆ ಎದೆ ಬಡಕೊಳ್ಳುತ್ತ ಬೋರಿಟ್ಟರು. ಸಭೆ ನಡೆಯಲೇ ಇಲ್ಲ.ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೊರಡಲನುವಾದರು.ಈಗಿನಂತೆ ಬಸ್ಸುಗಳ ಅನುಕೂಲತೆಯೂ ಆಗ ಇರಲಿಲ್ಲ.ರೇಡಿಯೋ ಟ್ರಾನ್ಸಿಸ್ಟರಗಳೂ ಅದೇ ಬಳಕೆಯಲ್ಲಿ ಬರಹತ್ತಿದ್ದವು. ಜನ ರೇಲ್ವೆ ಸ್ಟೇಶನ್ನಿಗೆ ಧಾವಿಸಿತು. ಬಂದ ಗಾಡಿಗಳಲ್ಲಿ ವಿಪರೀತ ದಟ್ಟಣೆಯಲ್ಲೂ ಹತ್ತಿದರು. ರೇಲ್ವೆ ಡಬ್ಬಿಗಳಲ್ಲಿ ಕುಳಿತವರಿಂದ ಈ ಕೆಟ್ಟ ಸುದ್ದಿ ನಿಜವೆಂದು ಮನವರಿಕೆ ಮಾಡಿಕೊಂಡರು.

ಯಾರೋ ಒಬ್ಬ ದುಷ್ಟ ಮುಸಲ್ಮಾನ ತಲೆತಿರುಕನ ಕೆಲಸ ಇದಾಗಿರಬಹುದೆಂದೇ ದೇಶದಲ್ಲಿ ಎಲ್ಲರೂ ತಿಳಿದಂತೆ ನಾವೂ ತಿಳಿದೆವು. ಪಾಕಿಸ್ತಾನ ನಿರ್ಮಾಣದಿಂದ ದೇಶದ

ತುಂಬ ವಿಶೇಷತಃ ಉತ್ತರ ಭಾರತವಲ್ಲಿ ನಡೆದಿದ್ದ ಹಿಂದೂ ಮುಸಲ್ಮಾನರ ದಂಗೆ ಕೊತೆ ಸುಲಿಗೆಗಳ ಕಾಲದಲ್ಲಿ ಹೀಗೆ ತಿಳಿಯುವದು ಸಹಜವಾಗಿತ್ತು. ಗಾಂಧೀಜಿಯವರನ್ನು ಕೊಲೆ ಮಾಡಿದವನು ಮುಸಲ್ಮಾನನೇ ಇರಬಹುದೆಂದು ತಕ್ಷಣ ಮುಸಲ್ಮಾನರೇ ಭಾವಿಸಿ ತಮ್ಮ ಮೇಲೆ ಅಪಾರ ಸಂಕಟ ಬಂತೆಂದು ಗಾಬರಿಯಾಗಿ ತಮ್ಮ ಆತ್ಮ ರಕ್ಷಣೆಯ ಗಡಿಬಿಡಿಯಲ್ಲಿ ಅವರು ಬಿದ್ದರು. ಆದರೆ ವಸ್ತುಸ್ಥಿತಿ ಬೇರೆಯಾಗಿದೆಯೆಂದೂ ಗಾಂಧೀಜಿಯವರ ಕೊಲೆ ಮಾಡಿದ ಪಾತಕಿಯು ಹಿಂದುವೇ ಆಗಿರುವನೆಂದೂ ಮರುದಿನ ಆಕಾಶವಾಣಿಯು ಸಾರಿತು. ಮುಸಲ್ಮಾನರು ಜೀವ ಉಳಿಯಿತೆಂದು ನಿಟ್ಟುಸಿರು ಬಿಟ್ಟರು. ಪ್ರಕ್ಷುಬ್ಧ ಜನತೆಗೆ ಏನು ಮಾಡಬೇಕೆಂಬುದೇ ತಿಳಿಯದಾಯಿತು !

ಗಾಂಧೀಜಿಯವರ ಕೊಲೆಯು ಪೂರ್ವದಲ್ಲಿಯೇ ದೇಶದ ವಾತಾವರಣವು ಜಾತೀಯ ದ್ವೇಷದಿಂದ ತುಂಬಿ ಹೋಗಿತ್ತು. ದೇಶ ವಿಭಜನೆಯ ಕಾಲಕ್ಕೆ ಆದ ಸಾಲ ಸೊತ್ತುಗಳ ಹಂಚಿಕೆಯ ಕರಾರಿನನ್ವಯ ಭಾರತವು ಪಾಕಿಸ್ತಾನಕ್ಕೆ ಸುಮಾರು ೫೫ ಕೋಟಿ ರೂಪಾಯಿ ಕೊಡಬೇಕಾಗಿತ್ತು. ಪಾಕಿಸ್ತಾನವು ಭಾರತಕ್ಕೆ ಸುಮಾರು ಇಪ್ಪತ್ತು ಕೋಟಿ ರೂಪಾಯಿ ಕೊಡಬೇಕಾಗಿತ್ತು. ಪಾಕಿಸ್ತಾನದ ಪ್ರಥಮ ಗವರ್ನರ ಜನರಲ್‌ರಾಗಿದ್ದ ಭಾರತದ್ವೇಷಿ ಹಿಂದುಗಳ ಕಡುವೈರಿ ಬ್ಯಾ. ಜಿನ್ನಾಸಾಹೇಬರು ಭಾರತಕ್ಕೆ ಕೊಡಲಿರುವ ಹಣವನ್ನು ತಾನು ಕೊಡುವದಿಲ್ಲೆಂದು ಹಾರಿಸಿಕೊಂಡರು. ಪ್ರತಿಯಾಗಿ ಸರದಾರ ವಲ್ಲಭ ಭಾಯಿಯವರು ಭಾರತಕ್ಕೆ ಕರಾರಿನನ್ವಯ ಸಲ್ಲ ಬೇಕಾದ ಹಣವನ್ನು ಪಾಕಿಸ್ತಾನವು ಕೊಡುವದಿಲ್ಲವಾದರೆ ಭಾರತವೂ ಪಾಕಿಸ್ತಾನಕ್ಕೆ ಸಲ್ಲಿಸಬೇಕಾಗಿದ್ದ ಹಣವನ್ನೂ ತಾವು ಕೊಡುವದಿಲ್ಲೆಂದು ಗರ್ಜಿಸಿ ಬಿಟ್ಟರು ! ಜಿನ್ನಾಸಾಹೇಬರು ಬರತಕ್ಕ ಹಣ ಮಾತ್ರ ತೀಪ್ರ ಬರಬೇಕೆಂದು ದುಂಬಾಲು ಬಿದ್ದರು. ಗಾಂಧೀಜಿಯವರಿಗೆ ಇವೆಲ್ಲ ತಿಳಿಯಿತು. ಸರದಾರ ವಲ್ಲಭಭಾಯಿಯವರನ್ನು ಕರೆಯಿಸಿ ತಮ್ಮ ತತ್ತ್ವೋಪದೇಶ ಮಾಡಿದರು. ಕರಾರದಂತೆ ನಡೆಯುವದು ಸಜ್ಜನರ ಕರ್ತವ್ಯ.ಅನ್ಯರು ಏನು ಮಾಡುತ್ತಾರೆಂಬದನ್ನೂ ಹೇಗೆ ನಡೆಯುತ್ತಾರೆಂಬದನ್ನೂ ನೋಡದೆ ನಾವು ನಮ್ಮ ಕರ್ತವ್ಯ ಪಾಲಿಸಬೇಕು ನೀತಿಯಂತೆ ನಡೆ ನಡೆಯಬೇಕು. ಪಾಕಿಸ್ತಾನವು ಕರಾರು ಪಾಲಿಸದಿದ್ದರೂ ಭಾರತವು ಪಾಲಿಸಬೇಕು. ಎಂದು ಮುಂತಾಗಿ ಉಪದೇಶಿಸಿದರು. ಸರದಾರರು ಗಾಂಧೀಜಿಯವರ ಮಾತನ್ನು ಒಪ್ಪ ದಾದರು. ಆಗ ಗಾಂಧೀಜಿಯವರು ತಮ್ಮ ಕಾದಿಟ್ಟ ಶಸ್ತ್ರವಾದ ಉಪವಾಸ ಶಸ್ತ್ರ ಹೊರ ತೆಗೆದದ್ದರಿಂದ ಅನಿವಾರ್ಯವಾಗಿ ೫೫ ಕೊಟಿ ರೂಪಾಯಿಗಳಿಗಿಂತ ಗಾಂಧೀಜಿಯ ಪ್ರಾಣ ಖಂಡಿತವಾಗಿ ಅಗಣಿತವಾಗಿ ಶ್ರೇಷ್ಠವೆಂದು ಬಗೆದು ಆ ಹಣವನ್ನು ಪಾಕಿಸ್ತಾನಕ್ಕೆ ಸರದಾ ರರು ಕೊಟ್ಟು ಬಿಟ್ಟರು !

ಗಾಂಧೀಜಿಯವರು ಮುಸಲ್ಮಾನ ಪಕ್ಷಪಾತಿಗಳಿರುವರೆಂದೂ " ಹಿಂದುಸ್ತಾನ ಹಿಂದುವೊಂಕಾ ನಹಿ ಕಿಸಿಕೆ ಬಾಪಕಾ " ಎಂದು ಗರ್ಜಿಸುತ್ತ ಆರ್. ಎಸ್. ಎಸ್. [ರಾಷ್ಟ್ರೀಯ ಸ್ವಯಂಸೇವಕ ಸಂಘ] ವೂ, ಹಿಂದೂಸಭಾವಾದಿಗಳೂ ಪ್ರಖರವಾದ ಪ್ರಚಾರವನ್ನು ವರುಷಗಟ್ಟಲೆ ನಡೆಸಿದ್ದರು. ತಾಲೂಕ ಮಟ್ಟದ ಆರ್. ಎಸ್. ಎಸ್. ದ ಶಾಲೆಗಳಲ್ಲಿಯೂ ಗಾಂಧಿ ದ್ವೇಷದ ಪ್ರಮುಖ ವಿಷಯ ಕಲಿಸಲ್ಪಡುತ್ತಿತ್ತು. ಹಿಂದೆ ಕ್ರಾಂತಿಕಾರಿಗಳೆಂದು ಹೆಸರಾದ ಮುಖಂಡರೂ ಜಾತಿದ್ವೇಷದ ಈ ಬೆಂಕಿಯಲ್ಲಿ ಮತ್ತಿಷ್ಟು

ಎಣ್ಣೆ ಸುರಿಯುವ ಪ್ರಯತ್ನವನ್ನೂ ಮಾಡಿದರು. ಕೆಲ ಕಾಂಗ್ರೆಸ ಮುಖಂಡರೂ ಬಹಿರಂಗವಾಗಿ ಆರ್. ಎಸ್. ಎಸ್. ವನ್ನು ಆಶೀರ್ವದಿಸುತ್ತಿದ್ದರು. ಇವೆಲ್ಲದರ ಪರಿಣಾಮವಾಗಿ ಗಾಂಧೀಜಿಯವರ ಪೂರ್ಣಾಹುತಿಯಾಯಿತು.

ಗಾಂಧಿ ಹತ್ಯೆಯನಂತರ ಹಿಂಸಾಚಾರ !

ಮುಸಲ್ಮಾನನೇ ಗಾಂಧೀಜಿಯವರ ಕೊಲೆ ಮಾಡಿದನೆಂಬ ಭಾವನೆಯಿಂದ ಮುಸಲ್ಮಾನರ ಸೇಡು ತೀರಿಸಿಕೊಳ್ಳಬೇಕೆಂದು ಹೊಂಚು ಹಾಕಿದ ಹಿಂದೂ ತಲೆತಿರುಕರಿಗೆ ಈ ಕೊಲೆ ಮಾಡಿದವನು ಮುಸಲ್ಮಾನನಲ್ಲ, ಬ್ರಾಹ್ಮಣ ಜಾತಿಯ ಗೋಡಸೆ ಎಂದು ತಿಳಿದಾಗ ಅವರ ಸಿಟ್ಟು ಬ್ರಾಹ್ಮಣ ಸಮಾಜದ ಕಡೆಗೆ ಹೊರಳಿತು. ಮೊದಲಿನಿಂದಲೇ ಬ್ರಾಹ್ಮಣ ಬಾಹ್ಮಣೇತರ ವಾದವನ್ನು ಎಬ್ಬಿಸಿ ದ್ವೇಷ ಬೆಳಸಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದ ಇಂಥ ಮುಖಂಡರಿಗೆ ಇದೊಂದು ಅಪೂರ್ವ ಸಂಧಿ ಲಭಿಸಿತು. ಗೋಡಸೆ ಬ್ರಾಹ್ಮಣನು, ತದ್ವಾರಿಂದ ಬ್ರಾಹ್ಮಣರೆಲ್ಲ ನೀಚರು,ಅವರ ಮನೆ ಸುಡಬೇಕು,ಆಸ್ತಿ ಲೂಟಿ ಮಾಡಬೇಕು, ಹೊಡೆಯ ಬೇಕು, ಬಡೆಯಬೇಕು ಎಂದು ಈ ಮುಖಂಡರು ಭಾವನಾಪ್ರಧಾನ ಅವಿವೇಕಿ ತರುಣರನ್ನು ಪ್ರಚೋದಿಸಿದರು. ಎಲ್ಲಿ ನೋಡಿದಲ್ಲಿ ಬ್ರಾಹ್ಮಣರ ಮನೆಗಳಿಗೆ ಬೆಂಕಿ ಹಚ್ಚುವದು, ಆಸ್ತಿ ಲೂಟಿ ಮಾಡುವದು ಅವರನ್ನು ಊರು ಬಿಟ್ಟು ಓಡಿಸುವದು ಮುಂತಾದ ಅರಾಷ್ಟ್ರೀಯ ಪುಂಡಾಟಿಕೆ ಸುರು ಆಯಿತು.

ಮಹಾರಾಷ್ಟ್ರವು ಈ ಪುಂಡಾಟಿಕೆಯ ಕೇಂದ್ರವಾಯಿತು. ಮಂತ್ರಿಗಳಾಗಿ ಮೆರೆಯುತ್ತಿರುವ ಕೆಲವರೂ, ಕಾಂಗ್ರೆಸ ಮುಖಂಡರಾಗಿದ್ದ ಹಲವರೂ ಸ್ವತಃ ಮುಂದೆ ನಿಂತು ಬ್ರಾಹ್ಮಣರ ಮನೆಗಳನ್ನು ಸುಡಿಸಿ ಕೃತಕೃತ್ಯರಾದರು. ಹಳ್ಳಿಹಳ್ಳಿಗಳಿಂದ ಬ್ರಾಹ್ಮಣರು ಓಡಿಬಂದು ಪಟ್ಟಣ ಸೇರಹತ್ತಿದರು. ಪಾಕಿಸ್ತಾನದಿಂದ ಹಿಂದುಗಳು ಓಡಿಬರುತ್ತಿದ್ದಂತಯೇ ಈ ದೃಶ್ಯವಿತ್ತು. ಕೊಲ್ಹಾಪೂರ ಸಾಂಗ್ಲಿಯಲ್ಲಿ ನಡೆದ ಘಟನೆಗಳು ಅಮಾನುಷವಾಗಿದ್ದವು.

ಬೆಳಗಾವಿ ಜಿಲ್ಲೆಯಲ್ಲಿಯೂ ಈ ಬಿಸಿ ಸಾಕಷ್ಟು ಪ್ರಮಾಣದಲ್ಲಿ ಬ್ರಾಹ್ಮಣರಿಗೆ ತಗಲಿತು. ಈ ಜಿಲ್ಲೆಯಲ್ಲಿಯೂ ಬ್ರಾಹ್ಮಣೇತರ ಪಕ್ಷವೂ ಮುಖಂಡರೂ ಹಿಂದೆ ಸಾಕಷ್ಟು ಜಾತಿದ್ವೇಷವನ್ನು ಸರಕಾರದ ಉತ್ತೇಜನದಿಂದ ಬೆಳೆಸಿದ್ದರು. ಆದರೆ ಜಿಲ್ಲೆಯ ಜನತೆಯು ಸಮಂಜಸಸಮಾದರ್ಶದಿಂದ ಅವರ ಪ್ರಯತ್ನಕ್ಕೆ ಅಷ್ಟು ಯಶ ಬರಲಿಲ್ಲ.ವಿಶೇಷವಾಗಿ ನೆನಪಿಡುವ ಸಂಗತಿಯೆಂದರೆ ಈ ಜಿಲ್ಲೆಯ ಕನ್ನಡಮಾತಾಡಿ ಗಡಿಯಲ್ಲಿಯೇ ಗಾಂಧಿ ಹತ್ಯೆಯ ಕಾಲಕ್ಕೆ ಪುಂಡಾಟಿಕೆ ನಡೆಯಿತು. ಉಳಿದಕಡೆಗೆ ಎಲ್ಲಿಯೂ ಈ ಪಿಡುಗು ಹಬ್ಬಲಿಲ್ಲ. ಬ್ರಾಹ್ಮಣರ ಸಂಖ್ಯೆ ಈ ಜಿಲ್ಲೆಯಲ್ಲಿ ನೂರಕ್ಕೆ ಒಂದೋ ಎರಡೋ ಇರಬಹುದು. ಲಿಂಗಾಯತ, ರಡ್ಡಿ, ಕುರುಬ, ಹರಿಜನ ಮುಂತಾದವರು ನೂರಕ್ಕೆ ೨೫, ೫, ೧೦, ೧೨ ಹೀಗೆ ಇರಬಹುದು. ಆದರೆ ಈ ಗಾಂಧಿಹತ್ಯೆಯ ಪುಂಡಾಟಿಕೆಯಲ್ಲಿ ಎಲ್ಲಿಯೂ ತಪ್ಪಿಸಹ ಈ ಸಮಾಜದವರಿಂದ ಬ್ರಾಹ್ಮಣರಿಗೆ ಎಳ್ಳಷ್ಟೂ ತೊಂದರೆ ಯಾಗ

ಲಿಷ್ಟವಷ್ಟೇ ಅಲ್ಲ ಸಂರಕ್ಷಣೆ ದೊರೆಯಿತು. ಚಂದಗಡ ತಾಲೂಕಿನ ವಿಂಧ್ಯಾಣೆ, ತಾಕೋವಾಡಿ, ಹಲಕರ್ಣ, ಅಡಕೂರ; ಬೆಳಗಾವಿ ತಾಲೂಕಿನ ಕಾಲಕುಂದ್ರಿ, ಉಚಗಾವ, ಅಂಬೇವಾಡಿ, ಕಾಕತಿ, ಕಣಬರ್ಗಿ; ಹುಕ್ಕೇರಿ ತಾಲೂಕಿನ ದಡ್ಡಿ, ಸಂಕೇಶ್ವರ, ಕಣಗಲಿ; ಚಿಕ್ಕೋಡಿ ತಾಲೂಕಿನ ಅಕ್ಕೋಳ, ಕುರ್ಲಿ, ಆಥಣಿ ತಾಲೂಕಿನ ಸಂಬರಗಿ ಮುಂಗಸೂಳಿ ಮುಂತಾದ ಊರುಗಳಲ್ಲಿ ಬ್ರಾಹ್ಮಣರ ಮೇಲೆ ಕಠೋರವಾಗಿ ದಾಳಿ ನಡೆದವು, ಮನೆ ಸುಟ್ಟಿವು, ಆಸ್ತಿ ಲೂಟಿಯಾಯಿತು. ಈ ಎಲ್ಲ ಪುಂಡಾಟಕೆ ನಡೆದದ್ದು ಮರಾಠೀ ಗಡಿಪ್ರದೇಶದಲ್ಲಿ. ಅದೂ ಮರಾಠಾ ಪುಂಡರಿಂದ ಎಂಬುದನ್ನು ವಿಚಾರಿಸಿದರೆ ಮಹಾರಾಷ್ಟ್ರದಲ್ಲಿ ಜಾತಿದ್ವೇಷದ ಪ್ರಚಾರ ಎಷ್ಟು ಸಂಘಟಿತವಾಗಿ ನಡೆಯುತ್ತಿತ್ತು ಎಂಬುದರ ಕಲ್ಪನೆ ಬರಬಹುದು.

ಒಂದು ವ್ಯಕ್ತಿ ದುಷ್ಟನೆಂದು, ನೀಚನೆಂದು ಆ ವ್ಯಕ್ತಿಯ ಜಾತಿಯವರೆಲ್ಲ ದುಷ್ಟರು ನೀಚರೆಂದು ತಿಳಿಯುವದಾಗಲೀ ಒಂದು ವ್ಯಕ್ತಿಯು ಶ್ರೇಷ್ಠನಾಗಿದ್ದರೆ ಅವನ ಜಾತಿಯವರೆಲ್ಲ ಶ್ರೇಷ್ಠರೆಂದು ತಿಳಿಯುವದಾಗಲಿ. ಎರಡೂ ಅಷ್ಟೇ ಮೂರ್ಖ ಕಲ್ಪನೆಗಳಾಗಿವೆಯೆಂದು ಇತಿಹಾಸ ಸಾರಿ ಹೇಳುತ್ತಿದೆ. ಶ್ರೀ ರಾಮಕೃಷ್ಣ ಪರಮಹಂಸ, ಲೋಕಮಾನ್ಯ ತಿಲಕ ಗೋಖಲೆ, ರಾನಡೆ, ಸಾವರಕರ ಮುಂತಾದವರು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದರೆಂದು ಬ್ರಾಹ್ಮಣರೆಲ್ಲ ಶ್ರೇಷ್ಠರಾಗಬಹುದೋ. ಮಲ್ಲಪ್ಪ ಶೆಟ್ಟಿ, ಸೂರ್ಯಾಜಿ ಪಿಸಾಳರಂಥ ಫಿತೂರಿಗಳು ಹುಟ್ಟಿದ ಸಮಾಜದವರೆಲ್ಲ ಫಿತೂರಿಗಳೆಂದು ತಿಳಿಯುವದು ಮೂರ್ಖತನವೂ ಅವಿವೇಕತನವೂ ಆಗಿದೆ. ಪ್ರತಿಯೊಂದು ಜಾತಿಯಲ್ಲಿ ದುಷ್ಟರೂ, ಶಿಷ್ಟರೂ ಇರತಕ್ಕವರೇ. ದಕ್ಷಿಣ ಭಾರತದಲ್ಲಿ ಪರಕೀಯರ ಗುಲಾಮಗಿರಿಯ ಬಂಧನ ಹರಿದು ಸ್ವಾತಂತ್ರ್ಯ ಸೂರ್ಯನ ದರ್ಶನ ಮಾಡಿಸಿದ ಸ್ವಾತಂತ್ರ್ಯ ಸೂರ್ಯ ಶಿವಾಜಿ ಮಹಾರಾಜನು ಮರಾಠಾನಲ್ಲವೇ ? ಮಹಾತ್ಮರಿಗೆ, ಶಿಷ್ಟರಿಗೆ ಜಾತಿಪಂಥವಿಲ್ಲ. ಅವರು ಲೋಕವಂದಿತರು. ದುಷ್ಟರು ಯಾವ ಜಾತಿಯಲ್ಲಿಯೇ ಹುಟ್ಟಿರಲಿ ಲೋಕನಿಂದಿತರು, ಎಂಬ ವಿವೇಕವನ್ನು ನಾವು ಇನ್ನೂ ಅಳವಡಿಸಿಕೊಂಡಿಲ್ಲವೆಂದೇ ಆಗಾಗ ಅಲ್ಲಲ್ಲಿ ಜಾತೀಯ ಘರ್ಷಣೆ ಮತ್ಸರಗಳನ್ನು ಕಾಣುತ್ತಿದ್ದೇವೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರವೂ ಈ ಘರ್ಷಣೆ ಕಡಿಮೆಯಾಗಿಲ್ಲವೆಂಬದು ದುರ್ದೈವದ ಸಂಗತಿಯಾಗಿದೆ.

ಇತಿಹಾಸದಿಂದ ನಾವು ಇನ್ನೂ ಪಾಠ ಕಲಿತಿಲ್ಲ. ಭಾರತೀಯ ಪುರಾತನ ಮಹಾಭಾರತದ ಯುದ್ಧದಲ್ಲಿ ಒಬ್ಬರನ್ನೊಬ್ಬರು ಕೊಂದು ೧೮ ಅಕ್ಷೋಹಿಣಿ ಸೈನ್ಯದ ನಾಶಕ್ಕೆ ಕಾರಣರಾದ ಕೌರವಪಾಂಡವರು ಒಂದೇ ಜಾತಿಯ ಒಂದೇ ವಂಶದವರಾಗಿದ್ದರು.

ಆಧುನಿಕ ಭಾರತದಲ್ಲಿ ಸ್ವತಂತ್ರ ಭಾರತವನ್ನು ಪರತಂತ್ರ ಮಾಡಲು ರಜಪೂತರ ಕೊನೆಯ ಅರಸ ಪೃಥ್ವಿರಾಜ ಚವ್ಹಾಣನಮೇಲೆ ಏರಿಬರಲು ಪರಕೀಯ ಮುಸಲ್ಮಾನ ಮಹಮ್ಮದ ಘೋರಿಗೆ ಸಹಾಯ ಮಾಡಿದ ಜಯಚಂದನು ಪೃಥ್ವೀರಾಜ ಚವ್ಹಾಣನ ಜಾತಿಯವನೇ ವಂಶದವನೇ ಆಗಿದ್ದನು.

ರಜಪೂತ ರಾಜ್ಯವನ್ನು ಹಾಳು ಮಾಡಿ ದಿಲ್ಲಿಯನ್ನು ಗೆದ್ದ ಪಠಾಣ ಅರಸರಲ್ಲಿಯ ಕೊನೆಯ ಅರಸನಾದ ಇಬ್ರಾಹಿಮ ಲೋದಿಯನ್ನು ಕೊಂದು ರಾಜ್ಯಗೆದ್ದ ಬಾಬರನು ಅದೇ ಜಾತಿಯವನಾಗಿದ್ದನು.

ಮೊಗಲರ ಕೊನೆಯ ಅರಸನಾಗಿದ್ದ ಔರಂಗಜೇಬನ ರಾಜ್ಯವನ್ನು ಮಂಣುಪಾಲು ಮಾಡಲು ಮುಖ್ಯಕಾರಣರಾದ ಆದಿಲಶಾಹಿ, ಕುತುಬಶಾಹಿ ಮುಂತಾದ ಪಂಚಶಾಹಿ ಅರಸರು ಒಂದೇ ಜಾತಿಯವರಾಗಿದ್ದರು.

ಮರಾಠಾ ಸಾಮ್ರಾಜ್ಯವನ್ನು ಛಿತೂರಿಯಿಂದ ನಾಶಪಡಿಸಿದ ಸರದಾರರು ಒಂದೇ ಜಾತಿಯವರಾಗಿದ್ದರು.

ಪೇಶವೆಯವರ ರಾಜ್ಯದ ಆಳಿಗಾಲಕ್ಕೆ ಖಡಕಿ ಯುದ್ಧದಲ್ಲಿ ಕಾರಣವಾದವನು ಛಿತೂರಿಯು, ಅದೇ ಪೇಶವೆಯವರ ಜಾತಿಯವನೇ ಆಗಿದ್ದನು.

ನಮ್ಮ ಕರ್ನಾಟಕದ ಚಿಕ್ಕ ರಾಜ್ಯಗಳಾಗಿದ್ದ ನರಗುಂದ ಕಿತ್ತೂರಗಳನ್ನು ಛಿತೂರಿಯಿಂದ ಹಾಳು ಮಾಡಿದವರು ಅದೇ ಅರಸರ ಜಾತಿಯವರಾಗಿದ್ದರು.

ಪ್ರಥಮ ಮಹಾಯುದ್ಧದಲ್ಲಿಯೂ ದ್ವಿತೀಯ ಮಹಾಯುದ್ಧದಲ್ಲಿಯೂ ಒಂದೇ ಒಂದಾದ ಕ್ರಿಶ್ಚನ್ನ ಧರ್ಮದವರೇ ಒಬ್ಬರಿಗೊಬ್ಬರು ಶತ್ರುಗಳಾಗಿ ಕೋಟ್ಯಾವಧಿ ಜನಸಂಹಾರ ಮಾಡಿದರು.

ಒಂದೇ ಬೌದ್ಧ ಧರ್ಮದವರಾದ ಚೀನ-ಜಪಾನ ದೇಶದ ಯುದ್ಧದಲ್ಲಿ ೬೦ ಲಕ್ಷ ಜನರು ಸತ್ತರು.

ಹಿಂದುಗಳ ವಿರುದ್ಧ ಕೋಲಾಹಲ ಏಬ್ಬಿಸಿ ಪಾಕಿಸ್ತಾನ ನಿರ್ಮಾಣ ಮಾಡಿಸಿ ಕೊಂಡ ಮುಸಲ್ಮಾನರೇ ಮೊನ್ನೆ ಮೊನ್ನೆ ಬಂಗಲಾ ದೇಶ ಸ್ವತಂತ್ರವಾಗುವಾಗ ಮೂವತ್ತು ಲಕ್ಷ ಮುಸಲ್ಮಾನರ ಕ್ರೂರ ಕೊಲೆ, ಲಕ್ಷಾವಧಿ ಮಹಿಳೆಯರ ಮೇಲೆ ರಾಕ್ಷಸಿ ಅತ್ಯಾಚಾರ ಮಾಡಿದರು.

ಇವನ್ನೆಲ್ಲ ನೋಡಿದಾಗ ' ಜಾತಕೋ ಜಾತ ವೈರಿ ಪಾನಿಕೋ ಖಿಂಜಾರ (ಹಾವಸೆ) ವೈರಿ " ಎಂಬ ಹಿಂದೀ ಗಾದೆಯ ವಾಕ್ಯ ನೆನಪಾಗುತ್ತಿದೆ. ಇರಲಿ

ಗಾಂಧೀಜಿಯವರ ಕೊಲೆಯ ಕಾಲಕ್ಕೆ ಅದು ವಧೆಯೋ ಹತ್ಯೆಯೋ ಎಂಬ ಬಗ್ಗೆಯೂ ಒಂದು ಶಬ್ದಚ್ಛಲ ವೃತ್ತಪತ್ರಗಳಲ್ಲಿ ಕೆಲದಿನ ನಡೆಯಿತು. ವಧೆ ಅಂದರೂ ಕೊಲೆ ಹತ್ಯೆಯೆಂದರೂ ಅದೇ. ಸಂಸ್ಕೃತ ಶಬ್ದಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ

ಅರ್ಥವಿರುವದು ಸಾಮಾನ್ಯ ಜನತೆಗೆ ಗೊತ್ತಿರದ್ದರಿಂದ ಹಾಗೆ ಅರ್ಥಮಾಡುವದು ಸಹಜವಾಗಿತ್ತು. ಆದರೆ ನಿಷ್ಪಾಪ ಜೀವಿಗಳನ್ನು ಕೊಲ್ಲುವದಕ್ಕೆ ಹತ್ಯೆ ಎಂತಲೂ ಪಾಪಿಷ್ಠರನ್ನು ಕೊಲ್ಲುವದಕ್ಕೆ ವಧೆಯೆಂತಲೂ ಸಂಸ್ಕೃತದಲ್ಲಿ ಶಬ್ದಪ್ರಯೋಗವಿದೆ. ಅಂತೆಯೇ ಬ್ರಹ್ಮಹತ್ಯೆ, ಸ್ತ್ರೀಹತ್ಯೆ, ಬಾಲಹತ್ಯೆ, ಗೋಹತ್ಯೆ ಎಂದಲೂ ಕಂಸವಧೆ, ಕೀಚಕವಧ, ಬಕಾಸುರವಧೆ, ರಾವಣವಧೆ, ಎಂತಲೂ ಒಂದೇ ಕ್ರಿಯೆಗೆ ಬೇರೆ ಬೇರೆ ಎರಡು ಶಬ್ದಗಳಿವೆ. ಇದರ ಚರ್ವಿತ ಚರ್ವಣವಾದಮೇಲೆಯೇ ಎಲ್ಲರೂ ಗಾಂಧಿ ಕೊಲೆಗೆ ಗಾಂಧಿಹತ್ಯೆ ಎಂದು ಅನ್ನಹತ್ತಿದರು. ಇನ್ನೂ ಕೆಲವರು ಅಜ್ಞಾನದಿಂದ ಗಾಂಧಿಹತ್ಯೆಗೆ ಗಾಂಧಿವಧೆ ಎಂದು ಕರೆಯುವವರೂ ಇರಬಹುದು. ಅದು ತಪ್ಪು. ಗಾಂಧಿ ಕೊಲೆಯು ಗಾಂಧಿ ಹತ್ಯೆಯೇ ಹೌದು.

ಈ ರೀತಿ ರಾಷ್ಟ್ರಪಿತನ ಪೂರ್ಣಾಹುತಿಯಾಯಿತು. ಮಹಾತ್ಮರ ಮರಣವೂ ಒಂದು ಕಾರ್ಯಸಾಧಿಸಿಯೇ ಬಿಡುವದು ಸುಳ್ಳಲ್ಲ. ಆ ಕಾಲಕ್ಕೆ ಮುಸಲ್ಮಾನರೇ ದುಷ್ಟರೆಂದೂ ದೇಶದ್ರೋಹಿಗಳೆಂದೂ ಸಾಮಾನ್ಯ ತಿಳುವಳಿಕೆ ಬೆಳೆಯುತ್ತ ನಡೆದಿತ್ತು. ಗಾಂಧೀಜಿಯವರ ಮರಣದಿಂದ ಈ ತಿಳುವಳಿಕೆ ತಪ್ಪೆಂದೂ ಎಲ್ಲ ಜಾತಿ ಧರ್ಮದವರಲ್ಲಿ ಸುಷ್ಟು ದುಷ್ಟರಿರುವರೆಂದೂ ಸ್ಪಷ್ಟವಾಗಿ ಜನತೆಗೆ ಕಂಡುಬಂತು. ಗಾಂಧೀಜಿಯವರಿಗೆ ತಮ್ಮ ಮರಣ ಈ ರೀತಿಯಿಂದಾಗಬಹುದೆಂದು ಮೊದಲೇ ತಿಳಿದಿತ್ತು. ಆ ಬಗ್ಗೆ ಎಂದೂ ಅವರು ಚಿಂತಿಸಲಿಲ್ಲವಷ್ಟೇ ಅಲ್ಲ, ತಮ್ಮನ್ನು ಯಾರಾದರೂ ಗುಂಡಿಕ್ಕಿ ಹೊಡೆಯುವಾಗಲೂ ಆ ವ್ಯಕ್ತಿಯ ಮೇಲೆ ದ್ವೇಷ ಮಾಡುವದಿಲ್ಲವೆಂದೂ ಈ ರೀತಿ ಪ್ರಾಣ ಬಿಡುವಾಗಲೂ ತನ್ನ ಬಾಯಿಯಿಂದ ದೇವರ ಹೆಸರು ಬರದಿದ್ದರೆ ತನ್ನ ಅಹಿಂಸೆಯ ಸಾಧನೆ ವ್ಯರ್ಥವೆಂದೂ ಅವರು ಪದೇ ಪದೇ ಹೇಳುತ್ತಿದ್ದರು. ಅದರಂತೆಯೇ ಆಯಿತು. ಗುಂಡು ತಾಗಿ ಕೆಳಗೆ ಬೀಳುವಾಗ ಆ ಮಹಾತ್ಮನ ಬಾಯಿಯಿಂದ ಬಂದ ಕೊನೆಯ ಶಬ್ದಗಳೆಂದರೆ " ಹೇ ರಾಮ, ಹೇ ರಾಮ !"

ಗಾಂಧೀಜಿಯವರ ಕೊಲೆ ಮಾಡುವ ಸಂಚು ಸರದಾರ ವಲ್ಲಭಭಾಯಿಯವರಿಗೂ ಪಂ. ಜವಾಹರಲಾಲರಿಗೂ ತಿಳಿದಿತ್ತು. ಅಂತೆಯೇ ಅವರು ಸಾಕಷ್ಟು ಮುಂಜಾಗ್ರತೆ ವಹಿಸಿದ್ದರು. ಪ್ರಾರ್ಥನೆಯ ಕಾಲಕ್ಕೆ ಅನೇಕ ಗುಪ್ತ ಪೋಲೀಸರನ್ನು ಸಾದಾ ಉಡುಪಿನಲ್ಲಿ ಇಡಲು ವ್ಯವಸ್ಥೆಯಾಗಿತ್ತು. ಆದರೆ ಈ ರೀತಿ ಪೋಲೀಸರ ರಕ್ಷಣೆ ತನಗೆ ಬೇಡವೆಂದೂ ಪ್ರಾರ್ಥನಾ ಸಭೆಯಲ್ಲಿ ಯಾವದೇ ಗುಪ್ತ ಪೋಲೀಸರು ಖಂಡಿತ ಇರಕೂಡದೆಂದು ಗಾಂಧೀಜಿ ಕಟ್ಟಪ್ಪಣೆ ಮಾಡಿದ್ದರಿಂದ ಸರದಾರ ವಲ್ಲಭಭಾಯಿಯವರಿಗೆ ಅನಿವಾರ್ಯವಾಗಿ ಗುಪ್ತಪೋಲೀಸರನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕಾಯಿತು.

ಗಾಂಧೀಜಿಯವರ ನಿಧನದಿಂದ ದೇಶ ಅನಾಥವಾಯಿತು ದೇಶಕ್ಕೆ ಮಾರ್ಗದರ್ಶನವಿಲ್ಲದಾಯಿತು. ಗೋಡಸೆಯು ಗಾಂಧೀಯವರ ದೇಹವನ್ನು ಕೊಲೆ ಮಾಡಿದ

ಪಾತಕಿಯೆಂದು ಸೂರ್ಯ ಚಂದ್ರರಿರುವವರೆಗೆ ಅವನ ಪಾಪ ಮರೆಯುವಂತಾಯಿತು. ಆದರೆ ಗಾಂಧಿಭಕ್ತರೆಂದೆನಿಸಿಕೊಳ್ಳುತ್ತ ಗಾಂಧಿ ಟೊಪ್ಪಿಗೆ ಧರಿಸಿ ಗಾಂಧಿ ಹೆಸರಿನ ಪುಣ್ಯದಿಂದ ಆರಿಸಿ ಅಧಿಕಾರಕ್ಕೆ ಬಂದು ಗಾಂಧಿ ತತ್ವಗಳನ್ನು ದಿನಾಲೂ ತುಳಿದು ಅವರ ಆತ್ಮವನ್ನೇ ಗುಂಡಿಕ್ಕಿ ಹೊಡೆಯುತ್ತಿರುವ ನಮ್ಮಂಥ ಪಾತಕಿಗಳಿಗೆ ಯಾವ ಶಿಕ್ಷೆಯೂ ಕಾದಿಲ್ಲವೇ ಎಂಬುದನ್ನು ಅಂತರಂಗದಲ್ಲಿ ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಡವೇ ?

ಸರದಾರರು ಸ್ವರಾಜ್ಯ ಉಳಿಸಿದರು

ಸರದಾರ ವಲ್ಲಭಭಾಯಿ ಪಟೇಲರು ಆ ವೇಳೆಯಲ್ಲಿ ಜೀವದಿಂದ ಇದ್ದುದರಿಂದಲೇ ನಮ್ಮ ಇವತ್ತಿನ ಸ್ವರಾಜ್ಯವಾದರೂ ಭದ್ರವಾಗಿ ಉಳಿಯಿತು. ಒಂದೇ ಒಂದು ವರುಷದಲ್ಲಿ ಭಾರತದಲ್ಲಿಯ ಐದೂವರೀನೂರು ದೇಶೀ ಸಂಸ್ಥಾನಗಳನ್ನು ನಾನಾತರದ ಯುಕ್ತಿ ಪ್ರಯುಕ್ತಿ ನಡೆಯಿಸಿ ಭಾರತವಲ್ಲಿ ವಿಲೀನಗೊಳಿಸಿ ನಿಜವಾಗಿ ಸ್ವತಂತ್ರ ಭಾರತವನ್ನು ಸಮರ್ಥವಾಡುವ ಶಿಲ್ಪಿ ಎಂದು ಹೆಸರಾದರು. ಸೊಕ್ಕಿನ ನಿಜಾಮರನ್ನೂ ರಜಾಕಾರರನ್ನೂ ಮೂರೇ ಮೂರುದಿನಗಳಲ್ಲಿ ಮಂಣುಮುಕ್ಕಿಸಿ ಏಕತಂತ್ರ ಭಾರತ ನಿರ್ಮಾಣ ಮಾಡಿದರು. ಇಂಥ ಅದ್ವಿತೀಯ ಉಕ್ಕಿನ ಮುಖಂಡನಿಗೂ ಸ್ವತಂತ್ರ ಭಾರತದಲ್ಲಿ ಯೋಗ್ಯ ಮರ್ಯಾದೆ ಸಿಗಲಿಲ್ಲ. ಅಂದೇ ಸ್ವರಾಜ್ಯದ ದುರ್ದಿನಗಳು ಆರಂಭವಾದವು. ದೇಶಭಕ್ತಿಯ ಬದಲು ವೈಯಕ್ತಿಕ ಅಸೂಯೆ, ದ್ವೇಷಗಳು ಅಂತರಂಗದಲ್ಲಿ ಮೊಳಕೆ ಒಡೆದವು. ಸ್ವರಾಜ್ಯದ ಜನ್ಮದಿನವೇ ಈ ವೈಯಕ್ತಿಕ ದ್ವೇಷದ ಬೀಜಾರೋಪಣೆ ಯಾಗಬೇಕೇ ? ಪಾ. ನೆಹರು ಅವರ ಮೊಟ್ಟಮೊದಲನೇ ಮಂತ್ರಿಮಂಡಳದಲ್ಲಿ ಸರದಾರ ಪಟೇಲರ ಹೆಸರು ಇಲ್ಲದ್ದು ಬಾರ್ಡ್ ಮೌಂಟ ಬಾಟನ್‌ರಿಗೆ ತಿಳಿಯಿತು. ಅವರಮೇಲೆ ಪಂಡಿತ ಜವಾಹರಲಾಲರ ವಿಶ್ವಾಸವಿತ್ತು. " ಸರದಾರ ವಲ್ಲಭಭಾಯಿಯವರ ಕರ್ತೃತ್ವ ಶಕ್ತಿ ಅವರ್ಣನೀಯವಾಗಿದೆ. ಇದೇ ಹುಟ್ಟಿದ ಭಾರತೀಯ ಸ್ವರಾಜ್ಯ ರಕ್ಷಣೆಗೆ ಅವರು ರಕ್ಷಾಕವಚದಂತಿದ್ದಾರೆ " ಎಂದು ಮುಂತಾಗಿ ಅವರು ಹೇಳಿದರು.ಆಗ ಕೇಂದ್ರ ಮಂತ್ರಿಮಂಡಳದಲ್ಲಿ ಸರದಾರರ ಸೇರ್ಪಡೆ ಆಯಿತು. ಇದು ನಮ್ಮ ಭಾರತೀಯರ ಕರ್ಮ ಕಥೆ. ಈ ಕಥೆ ಇತ್ತಿತ್ತಲಾಗಿ ಜನರಿಗೆ ತಿಳಿಯಿತು. ಮೊದಲು ಯಾರಿಗೂ ಗೊತ್ತಾಗಲಿಲ್ಲ. ಆ ಮಹಾಪುರುಷ, ಸರದಾರರಿಗೆ ಈ ಅಪಮಾನ ಸಹಿಸುವದು ಶಕ್ಯವಿದ್ದಿಲ್ಲ. ಆದರೆ ಗಾಂಧೀಜಿಯ ಆಗ್ರಹ ಮತ್ತು ದೇಶದ ಸ್ಥಿತಿಗಳನ್ನು ಮನಗಂಡು ಅದನ್ನು ಸಹಿಸಿಕೊಂಡು ತಮ್ಮ ಪಾಲಿನ ಕರ್ತವ್ಯವನ್ನು ದೇಶಸೇವೆಯ ಭಾವನೆಯಿಂದ ಮಾಡಿದರು. ಏಕಸಂಧ ಬಾರತವೇ ಅವರ ಮಹಾನ್ ಕಾರ್ಯದ ಸಾಕ್ಷಿ. ಸ್ಮಾರಕ.

ಸ್ವರಾಜ್ಯ ರಥ ಎಡವುತ್ತ ತಡವುತ್ತ ಸಾಗ ತೊಡಗಿತು. ಮೊದಲಿನ ಹತ್ತುವರುಷ

ಏನಾದರೂ ಧ್ಯೇಯ ಕಂಣುಮುಂದೆ ಇಟ್ಟುಕೊಂಡು ರಾಜ್ಯರಥ ಸಾಗಿತು. ಮುಂದಿನ ಹತ್ತು ವರುಷದಲ್ಲಿ ರಾಜ್ಯರಥ ನಿಂತಲ್ಲಿಯೇ ನಿಂತು ಪ್ರಗತಿ ಕುಂಠಿತವಾಯಿತು. ನಿಂತ ನೀರಲ್ಲಿ ಕ್ರಿಮಿಗಳು ನಿರ್ಮಾಣವಾಗುವಂತೆ ವೈಯಕ್ತಿಕ ಸ್ವಾರ್ಥ, ವೈಯಕ್ತಿಕ ದ್ವೇಷಗಳ ಮುಂದೆ ದೇಶದ ವಿಚಾರ ಹಿಂದೆ ಬೀಳಹತ್ತಿತು. ಪ್ರಗತಿ ಪ್ರತಿಗಾಮಿ ಸ್ವರೂಪ ತಾಳಿತು. ಮುಂದಿನ ಐದು ವರ್ಷಗಳಲ್ಲಿಯಂತೂ ಇದೇನು ಸ್ವರಾಜ್ಯವೋ? ಸುರಾಜ್ಯವೋ ಸುರಾ ರಾಜ್ಯವೋ ಎಂದು ಬಹಿರಂಗವಾಗಿ ಚರ್ಚೆಸುವಮಟ್ಟಿಗೆ ನಮ್ಮ ಅಧೋಗತಿಯಾಯಿತು.

ಇದು ನನ್ನ ಸ್ವರಾಜ್ಯ !

ಸ್ವರಾಜ್ಯವು ಸುರಾಜ್ಯಕ್ಕಾಗಿ ಅವಶ್ಯವಿದ್ದ ಮೂಲಭೂತಸಂಗತಿಯೆಂದು ಲೋಕ ಮಾನ್ಯ ತಿಲಕರೂ, ಗಾಂಧೀಜಿಯವರೂ ಹೇಳುತ್ತ ಬಂದರು. ಸುರಾಜ್ಯವೆಂದರೆ ಒಳ್ಳೇ ರಾಜ್ಯ, ಕಲ್ಯಾಣರಾಜ್ಯ. ಸ್ವರಾಜ್ಯವೆಂದರೇ ಬ್ರಿಟಿಶರನ್ನು ಹೊರಗೆ ಹಾಕಿ ಆಡಳಿತೆಯನ್ನು ನಮ್ಮ ಜನರೇ ನಡೆಸುವದು ಎಂಬ ಸಂಕುಚಿತ ವಿಚಾರ ಅವರದಾಗಿದ್ದಿಲ್ಲ. ಹಾಗಾಗಿದ್ದರೆ ನಮ್ಮವರೇ ನಮ್ಮ ಜಾತಿಪಂಥದವರೇ ಆಗಿದ್ದ ದೇಶೀ ಸಂಸ್ಥಾನಗಳನ್ನು ವಿಲಯನ ಮಾಡುವ ಕಾರಣವೇ ಇದ್ದಿಲ್ಲ. ಆದರೆ ಅದು ಸ್ವರಾಜ್ಯವೆಂದರೆ ಜನರಿಗಾಗಿ ಜನರಿಂದ ಆರಿಸಲ್ಪಟ್ಟು ಜನರ ಕಲ್ಯಾಣದ ಸಲುವಾಗಿ ಆಡಳಿತೆ ನಡೆಸುವದು ಎಂಬ ಅರ್ಥವನ್ನು ಅವರು ಹೇಳಿದ್ದರು, ಜನರ ಕಲ್ಯಾಣವೆಂದರೇನು ಅವರ ಹೊಟ್ಟೆಬಟ್ಟೆ, ಆಸರೆ, ಆರೋಗ್ಯ ಅರಿವುಗಳ ವಿಚಾರ. ಅವುಗಳಪೂರೈಕೆಯ ಏರ್ಪಾಟು. ಜನಸಾಮಾನ್ಯರ ಬಡತನ ದೂರವಾಗಬೇಕು, ದುಡಿಯುವವರಿಗೆ ವ್ಯವಸ್ಥಿತ ಜೀವನ ಸಾಗಿಸುವಂತೆ ಅನುಕೂಲತೆ ಮತ್ತು ಆಸ್ಪದವಿರ ಬೇಕು, ಅವರ ಅಜ್ಞಾನ ದಾರಿದ್ರ್ಯ ಹೋಗಬೇಕು, ಅವರಲ್ಲಿ ನೀತಿ ಚಾರಿತ್ರ್ಯ ಸ್ವಾಭಿಮಾನ ಹುಟ್ಟಬೇಕು. ಅವರು ನಿರ್ವ್ಯಸನಿಗಳಾಗಬೇಕು, ಬಡವರ ಶ್ರೀಮಂತರ ಆದಾಯದಲ್ಲಿ ಬಹಳ ವ್ಯತ್ಯಾಸ ಇರಬಾರದು, ಎಲ್ಲರೂ ಜಾತಿ ನಿರ ಪೇಕ್ಷರಾಗಿ ಸ್ವತಂತ್ರತೆ ಸಮಾನತೆ ಬಂಧುತ್ವಗಳನ್ನು ನಿರಾತಂಕವಾಗಿ ಅನುಭೋಗಿಸಬೇಕು. ತನ್ನ ರಕ್ಷಣೆ ಮಾಡಿಕೊಳ್ಳುವ ಆತ್ಮವಿಶ್ವಾಸ ಸ್ವಾವಲಂಬನೆ ಇರಬೇಕು, ಇವೇಮುಂತಾದ ಕನಸುಗಳನ್ನು ನಾವೆಲ್ಲ ಹೋರಾಡುವಾಗ ಕಂಡಿದುರು ಕಟ್ಟಿಕೊಂಡಿದ್ದೆವು. ಆದರೆ ಆ ಕನಸು ಕನಸಾಗಿಯೇ ಉಳಿಯಿತು. ಸ್ವಾತಂತ್ರ್ಯ ಬಂದು ಕಾಲು ಶತಮಾನ ವಾದರೂ ಜನತೆಯ ಸ್ಥಿತಿಗತಿ ಯಾವ ರೀತಿಯವಾಗಿ ಉಳಿದಿದೆ ಎಂಬುದನ್ನು ನೋಡಿದರೆ ಇದ ಕ್ಕಾಗಿಯೇ ನಾವು ಹೋರಾಡಿದೆವೋ ? ಹುತಾತ್ಮರು ಬಲಿದಾನ ಮಾಡಿದರೇ ? ಎಂದು ಮನಸ್ಸು ವ್ಯಾಕುಲಗೊಳ್ಳುತ್ತದೆ !

ಶ್ರೀ ಸಾಮಾನ್ಯನ ಸ್ಥಿತಿಯಲ್ಲಿ ಯಾವ ವಿಶೇಷ ಬದಲಾವಣೆಯೂ ಆಗಿಲ್ಲ. ಅವನು ಇದ್ದಲ್ಲಿಯೇ ಇದ್ದಾನೆ. ಬಾಯಿಯಿಂದ ಸಮತಾವಾದ, ಗರೀಬಿ ಹಟಾವೋ ಘೋಷಣೆ ನಡೆದಿವೆ. ಘೋಷಣೆಯಿಂದ ಯಾರ ಹೊಟ್ಟೆಯೂ ತುಂಬಿಲ್ಲ, ತುಂಬುವದಿಲ್ಲ. ಶ್ರೀ ಸಾಮಾನ್ಯನ ಆದಾಯ ಮತ್ತು ಭಾರತದ ಪ್ರಥಮ ನಾಗರಿಕನ [ರಾಷ್ಟ್ರಪತಿಯ] ಆದಾಯದಲ್ಲಿ ೫೦೦ ಪಟ್ಟು ಅಂತರವಿದೆ ಈ ನಮ್ಮ ಸ್ವರಾಜ್ಯದಲ್ಲಿ !

ಮಾನವನ ಬುದ್ಧಿ ಹಾನಿ, ದ್ರವ್ಯಹಾನಿ, ಆತ್ಮಹಾನಿ, ಮಾಡಿ ಮಾನವನನು ದಾನವರನ್ನಾಗಿ ಮಾಡುವ ಸಿಂದಿ ಸೆರೆ ಮುಂತಾದ ದುರ್ವ್ಯಸನಗಳಿಗೆ ಹೆಚ್ಚೆಚ್ಚು ಪ್ರೋತ್ಸಾಹ ಸರಕಾರಗಳೇ ಕೊಡುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ವಿದ್ಯಾರ್ಥಿಗಳು ತರುಣರು ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಈ ದುರ್ವ್ಯಸನಗಳಿಗೆ ಭರದಿಂದ ಬಲಿಬೀಳುತ್ತ ಭಾರತದ ಭವಿತವ್ಯವನ್ನೇ ಅಂಧಃಕಾರದಲ್ಲಿ ನೂಕುತ್ತಿರುವರು ಈ ನಮ್ಮ ಸ್ವರಾಜ್ಯದಲ್ಲಿ !

ಲಾಟ್ರಿ ಮುಂತಾದವುಗಳನ್ನು ಸುರು ಮಾಡಿ ಸರಕಾರಗಳೇ ಜೂಜಾಟಕ್ಕೆ ಪ್ರೋತ್ಸಾಹ ಕೊಟ್ಟು ಪುರುಷಾರ್ಥ ನಾಶಕ್ಕೆ ಮುಂದಾಗುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ನೂರಕ್ಕೆ ಮುನ್ನೂರು ರೂಪಾಯಿಯ ಬಡ್ಡಿಯ ಸಾಲದಲ್ಲಿ ಮುಳುಗಿ ಮುಳುಗಿ ಗ್ರಾಮೀಣ ಜನತೆ ಸಾಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಕುಟುಂಬ ಯೋಜನೆಯ ನೆವದಲ್ಲಿ ಪಾವಿತ್ರ್ಯನಾಶ, ಚಾರಿತ್ರ್ಯನಾಶ, ಸಂಸ್ಕೃತಿ ನಾಶಗಳು ನಡೆದಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಹವೆ, ನೀರು, ಗಾಳಿಯಂತೆ ಸಾರ್ವತ್ರಿಕವಾಗಿ ಲಂಚಗುಳಿತನದ ಸಾಮ್ರಾಜ್ಯ ಬೆಳೆಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಊರೂರಿಗೆ ಹೈಸ್ಕೂಲ ಕಾಲೇಜುಗಳಾಗಿದ್ದರೂ ವಿದ್ಯಾರ್ಥಿಗಳ ಬುದ್ಧಿ ಮಟ್ಟ ನಾಚಿಕೆಪಡುವಷ್ಟು ಕೆಳಗೆ ಇಳಿಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಆಹಾರಧಾನ್ಯದ ಸಲುವಾಗಿ ಇನ್ನೂ ಪರದೇಶಗಳಿಂದ ಭಿಕ್ಷೆ ಬೇಡುವದು ತಪ್ಪದಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಜನತೆಯ ಪ್ರತಿನಿಧಿಗಳೆಂದು ಆರಿಸಿ ಹೋಗುವ ಮಹನೀಯರು ಚುನಾವಣೆಯಲ್ಲಿ ಲಕ್ಷಾವಧಿ ರೂಪಾಯಿಯ ಹುಚ್ಚು ಹೊಳೆ ಹರಿಸಿಯೂ ಖೊಟ್ಟಿಲೆಕ್ಕ ಒಪ್ಪಿಸುತ್ತಿ

ರುವದು ಈ ನಮ್ಮ ಸ್ವರಾಜ್ಯದಲ್ಲಿ !

ಅಧಿಕಾರ, ದುಡ್ಡು, ಲಂಚಕ್ಕಾಗಿ ನಾಯಿಗಳಂತೆ ಕಚ್ಚಾಡಿ ದಿನಕ್ಕೊಂದು ರೀತಿ ಪಕ್ಷಾಂತರದ ಪಿಡುಗಿಗೆ ಪ್ರತಿನಿಧಿಗಳು ಬಲಿಯಾಗುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ

ಜಾತ್ಯಾತೀತತೆಯನ್ನು ಗಂಟಲು ಹರಿಯುವಂತೆ ಕೂಗುತ್ತ ಹಿಂದುಗಳಿಗೊಂದು ಮುಸಲ್ಮಾನರಿಗೊಂದು ಹೀಗೆ ಬೇರೆ ಬೇರೆ ಕಾಯಿದೆಗಳನ್ನು ಮಾಡುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ. ರಾಷ್ಟ್ರೀಯ ಐಕ್ಯತೆಯ ಮಾತು ಹೆಜ್ಜೆ ಹೆಜ್ಜೆಗೂ ಹೇಳುತ್ತ ಚಿಕ್ಕ ಬಾಲಕರೂ ಪ್ರಾಥಮಿಕ ಶಾಲೆಗಳಲ್ಲಿ ಕಲಿಯವಾಗ ಪರಸ್ಪರರು ಎಂದೂ ತಪ್ಪಿಸಹ ಕೂಡದಂತೆ ಒಂದು ಕೋಮಿನ ವಿದ್ಯಾರ್ಥಿಗಳಿಗೆ ರವಿವಾರ ಸೂಟಿ ಕೊಟ್ಟು ಇನ್ನೊಂದು ಕೋಮಿನ ವಿದ್ಯಾರ್ಥಿಗಳಿಗೆ ಶುಕ್ರವಾರ ಸೂಟಿಕೊಟ್ಟು ರಾಷ್ಟ್ರೀಯ ಐಕ್ಯತೆಗೆ ಕೊಡಲಿ ಪೆಟ್ಟು ಸರಕಾರವೇ ಹಾಕುತ್ತಿರುವದು ನಮ್ಮ ಈ ಸ್ವರಾಜ್ಯದಲ್ಲಿ !

ಆದಷ್ಟು ಹೆಚ್ಚು ದುಡ್ಡು ಆದಷ್ಟು ಕಡಿಮೆದುಡಿತ ಧ್ಯೇಯವೆಂದು ಎಲ್ಲರೂ ತಿಳಿದು ನಡೆಯುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ವಿಕೇಂದ್ರೀಕರಣ, ಬಡತನ ನಿವಾರಣೆಯ ಘೋಷಣೆ ಮಾಡುತ್ತ ಕೇಂದ್ರೀಕರಣ ಮತ್ತು ಬಂಡವಲಶಾಹಿಗೆ ಉತ್ತೇಜನ ದೊರೆಯುತ್ತಿರುವ ಈ ನಮ್ಮ ಸ್ವರಾಜ್ಯದಲ್ಲಿ !

ಕಳ್ಳಪೇಟೆಯ ವ್ಯವಹಾರ ಸಾಗಿಸುವದು ರಾಷ್ಟ್ರದ್ರೋಹವಾಗಿರುವದರಿಂದ ಅವರಿಂದ ಅವರಿಗೆ ಘಟಕೆ ಹೊಡೆಯ ಬೇಕೆಂದು ಹಲ್ಲುಕಡಿಯುತ್ತ ಹೇಳಿ ಅಂಥ ಒಬ್ಬ ನನ್ನಾದರೂ ಈ ಕಾಲು ಶತಮಾನದಲ್ಲಿ ಶೋಧಿಸದಿರುವದು ಈ ನಮ್ಮ ಸ್ವರಾಜ್ಯದಲ್ಲಿ

ನ್ಯಾಯಾಂಗವೇ ಭಾರತೀಯ ಘಟನೆಯಲ್ಲಿ ಸರ್ವೋಚ್ಚ ತತ್ವವೆಂದು ಸಾರಿ ನ್ಯಾಯ್ಯಾಂಗವನ್ನು ಕಾರ್ಯಾಂಗದ ತೊತ್ತನ್ನಾಗಿ ಮಾಡುತ್ತಿರುವದು ನಮ್ಮ ಈ ಸ್ವರಾಜ್ಯದಲ್ಲಿ !

ಭಾರತೀಯ ನೀತಿ ಭಾರತೀಯ ಸಂಸ್ಕೃತಿಗಳಿಗೆ ತಿಲಾಂಜಲಿ ಕೊಟ್ಟು ಪರಕೀಯರ ಹುಚ್ಚು ಅನುಕರಣ ಮಾಡುತ್ತಿರುವದು ಈ ನಮ್ಮ ಸ್ವರಾಜ್ಯದಲ್ಲಿ !

ಮೋಟಾರ ಬಸ್ಸುಗಳಲ್ಲಿ ರೇಲ್ವೆಡಬ್ಬಿಗಳಲ್ಲಿ ಹೇಗೆ ಹತ್ತಬೇಕೆಂಬ ತೀರ ಸಣ ಮಾತೂ ಇನ್ನೂ ವರೆಗೆ ತಿಳಿಯಲಿಲ್ಲ ನಮ್ಮ ಈ ಸ್ವರಾಜ್ಯದಲ್ಲಿ !

ಸರ್ವಾಧಿಕಾರಿತ್ವದ ಕಡೆಗೆ ದೇಶ ರಭಸದಿಂದ ನುಗ್ಗುತ್ತಿದ್ದರೂ ಅದರ ವಿರುದ್ಧ ಚಕಾರ ಶಬ್ದವನ್ನೂ ತಗೆಯದೆ ಬೌದ್ಧಿಕ ಗುಲಾಮಗಿರಿಯಲ್ಲಿ ಹೊರಳಾಡುತ್ತಿರುವದು

ಈ ರೀತಿ ಸ್ವಾಭಿಮಾನ ಶೂನ್ಯತೆಯಿಂದ ಚಿತ್ತ ಲಹರಿಗೆ ಅನುಸರಿಸಿ ಆಡಳಿತೆ ಸಾಗಿರುವಾಗ ಜನತೆಯಾದರೂ ಜಾಗೃತವಾಗಿದೆಯೇ ? ಅದೂ ಇಲ್ಲ. ಐದು ವರುಷ ಕ್ಕೊಮ್ಮೆ ಚುನಾವಣೆ ಬಂದಾಗ ದುಡ್ಡುತಕ್ಕೊಂಡು, ಜಾತೀಯತೆಗೆ ಮನಸೋತು ಯಾರಿಗೆ ಬೇಕಾದವರಿಗೆ ಮತಹಾಕಿ ತಮ್ಮ ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡು ಮುಂದಿನ ಐದು ವರುಷದವರೆಗೆ ಅತ್ತ ಇಣಿಕಿ ಸಹ ನೋಡದಂತೆ ನಮ್ಮ ಮತದಾರರು ಹೊಣೆಗೆಟ್ಟು ಹೋಗಿದ್ದಾರೆ. ಪ್ರತಿಶತ ಐವತ್ತರೆಷ್ಟು ಅಂದರೆ ಸರಿ ಅರ್ಧದಷ್ಟು ಮತದಾರರು ಮತದಾನಕ್ಕೆ ಹೋಗುವ ಶ್ರಮವನ್ನೂ ಅದೂ ಐದು ವರುಷದಲ್ಲಿ ಒಮ್ಮೆ ಸಹ ತಕ್ಕೊಳ್ಳಲು ಸಿದ್ಧರಿಲ್ಲದವರಾಗಿದ್ದಾರೆ.

ಕಾರ್ಯಕರ್ತರೆಂಬುವರು ಸ್ವಾರ್ಥಸಾಧನೆಯಲ್ಲಿ ವಿಕ್ರಮ ಸಾಧಿಸುತ್ತಿದ್ದಾರೆ. ಆದರ್ಶಗಳೆಲ್ಲ ಹಾಳಾಗಿ ಹೋಗಿವೆ. ವೈಚಾರಿಕ ದಾಸ್ಯದಲ್ಲಿ ಹಿಂದೆ ಪರಕೀಯ ರಾಜ ವಿದ್ದಾಗಿನಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮುಳುಗಿಹೋಗಿದ್ದಾರೆ.

ಕೆಲರಸ್ತೆಗಳನ್ನು ಟಾರರೋಡ ಮಾಡಿ, ಹೈಸ್ಕೂಲ ಕಾಲೇಜಗಳ ಕಟ್ಟಡ ಕಟ್ಟಿ, ಆಫೀಸರರ ಸಂಖ್ಯೆ ಹೆಚ್ಚಿಸಿದ ಮಾತ್ರಕ್ಕೆ ದೇಶದ ಅಭಿವೃದ್ಧಿ ಸಾಧಿಸಿದಂತಾಗದು. ಮೂಲಭೂತ ಸಮಸ್ಯೆಗಳ ಪರಿಹಾರವಾಗದೆ ಕೇವಲ ಮಲಮುಪಟ್ಟಿ ಬಡಿಯುವದರಿಂದ ಉನ್ನತಿಯನ್ನು ಸಾಧಿಸಲಾಗದು.

೨೫ ವರುಷಗಳ ಈ ದೀರ್ಘ ಕಾಲಾವಧಿಯಲ್ಲಿ ನಾವು ಸಾಧಿಸಿದ್ದೇನು ಎಂಬದನ್ನು ಕಾರ್ಯಕರ್ತರು ಅಭ್ಯಾಸಮಾಡಿ ಈಗಲಾದರೂ ಕಾರ್ಯಪ್ರವೃತ್ತರಾದದ್ದಾದರೆ ನಾವೆಲ್ಲ ಸ್ವರಾಜ್ಯಕ್ಕಾಗಿ, ಸುರಾಜ್ಯಕ್ಕಾಗಿ ಕಷ್ಟಪಟ್ಟದ್ದು ಸಾರ್ಥಕವಾದೀತು.

ಸ್ವರಾಜ್ಯವು ಸುರಾಜ್ಯವಾಗಲಿ ಸುರಾರಾಜ್ಯವಾಗುವದು ಬೇಡ !

ಬ್ರಿಟಿಶರ ಮಾನವೀಯತೆ !

ಬ್ರಿಟಿಶರು ವ್ಯಾಪಾರದ ಆಶೆಯಿಂದ ಈಸ್ಟ ಇಂಡಿಯಾ ಕಂಪನಿಯೆಂಬ ವ್ಯಾಪಾರಿ ಸಂಸ್ಥೆ ಸ್ಥಾಪಿಸಿ ಇಲ್ಲಿಗೆ ಬಂದರು. ನಮ್ಮ ದಡ್ಡತನ, ಒಳಜಗಳ, ವಿಕರಾಷ್ಟ್ರೀಯತೆಯ ಅಭಾವ ಮುಂತಾದವುಗಳ ಲಾಭ ಪಡೆದು ೧೭೫೭ ರಲ್ಲಿ ಪ್ರಥಮವಾಗಿ ಅವರು ಬಂಗಾ

ಲದಲ್ಲಿ ೪ ಹಳ್ಳಿಗಳನ್ನು ದಾನ ಪಡೆದರು. ಬರಬರುತ್ತ ಇಡಿ ಭಾರತವನ್ನೇ ಬ್ರಿಟಿಶರು ತಮ್ಮ ಕಪಿಮುಷ್ಟಿಯಲ್ಲಿ ತಂದುಕೊಂಡರು. ೧೮೧೮ ರಲ್ಲಿ ಪೇಶವೆಯವರೊಂದಿಗೆ ಯುದ್ಧ ಮಾಡಿ ಅವರನ್ನು ಸೋಲಿಸಿ ಸಮ್ರಾಟರಾದರು. ಕಂಪನಿ ಸರಕಾರವು ದೋಚಿ ಕೊಂಡ ನಮ್ಮ ರಾಜ್ಯವನ್ನು ಪುನಃ ಪಡೆಯುವದಕ್ಕಾಗಿ ಸೈನ್ಯದಲ್ಲಿಯ ಅಸಂತೋಷದ ಹಾಗು ಬಂಡಾಯದ ಉಪಯೋಗ ಮಾಡಿಕೊಂಡು ನಾನಾಸಾಹೇಬ ಪೇಶವೆ ಝಾಂಶಿ ಲಕ್ಷ್ಮೀಬಾಯಿ ಮೊದಲಾದವರು ೧೮೫೭ ರಲ್ಲಿ ನಡೆಯಿಸಿದ್ದನ್ನು ಬಿಟ್ಟರೆ ೧೯೦೬ ವರೆಗೆ ಬ್ರಿಟಿಶ ಸಾಮ್ರಾಜ್ಯಕ್ಕೆ ಭಾರತದಲ್ಲಿ ಯಾವದೇ ರೀತಿ ವಿರೋಧವಿರಲಿಲ್ಲ. ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು ಇದ್ದು ಅದನ್ನು ನಾನು ಪಡೆದೇ ತೀರುವೆನೆಂಬ ಸಿಂಹಗರ್ಜನೆ ಮಾಡಿ ಲೋಕಮಾನ್ಯ ತಿಲಕರು ಕಾಂಗ್ರೆಸಿನ ಮುಖಾಂತರ ಚಳವಳಿ ಸುರು ಮಾಡಿದರು. ಕ್ರಾಂತಿಕಾರರು ಅಲ್ಲಲ್ಲಿ ವಿರಳವಾಗಿ ಗುಂಡು ಬಾಂಬು ಪಾರಿಸಿ ಕೆಲ ಯೂರೋಪಿಯನ್ ಅಧಿಕಾರಿಗಳನ್ನು ಕೊಂದರು. ಆದರೆ ಸಾರ್ವತ್ರಿಕ ಅಸಂತೋಷ ಮತ್ತು ದೇಶಾಭಿಮಾನ ಹುಟ್ಟಿಸಿ ಜನಸಾಮಾನ್ಯರನ್ನು ಸ್ವರಾಜ್ಯಕ್ಕಾಗಿ ಹೋರಾಟದಲ್ಲಿ ತೊಡಗಿಸಿದ ಶ್ರೇಯಸ್ಸು ಲೋಕಮಾನ್ಯರಿಗೆ ಮತ್ತು ಗಾಂಧೀಜಿಯರಿಗೇ ಸಲ್ಲುವದು. ೧೯೦೬ ರಿಂದ ೧೯೪೭ ರ ವರೆಗೆ ನಾಲ್ವತ್ತು ವರುಷ ನಾವು ಭಾರತೀಯರವರು ಸತತವಾಗಿ ಸಕ್ರಿಯವಾಗಿ ಸ್ವರಾಜ್ಯಕ್ಕಾಗಿ ಹೋರಾಡುತ್ತ ಬಂದೆವು. ನಿಶ್ಶಸ್ತ್ರ ಜನಾಂಗವು ಸರ್ವಸಮರ್ಥವಾಗಿದ್ದ ಒಂದು ಸಾಮ್ರಾಜ್ಯದ ವಿರುದ್ಧ ಹೋರಾಡಿದ ಉದಾಹರಣೆ ಭಾರತದ ಹೊರತು ಬೇರೆಕಡೆಗೆ ಸಿಗಲಾರದು. ಈ ನಾಲ್ವತ್ತು ವರುಷಗಳಲ್ಲಿ ಬ್ರಿಟಿಶ ಸರಕಾರ ಅನೇಕ ರೀತಿಯಿಂದ ದಬ್ಬಾಳಿಕೆ ನಡೆಸಿ ತಮ್ಮ ವರ್ಚಸ್ಸನ್ನು ಕಾಯ್ದು ಕೊಳ್ಳುವ ಪ್ರಯತ್ನ ಮಾಡಿತು ನೂರಾರು ದೇಶಭಕ್ತರನ್ನು ಗಲ್ಲಿಗೇರಿಸಿತು. ಒಂದೆರಡು ಸಾವಿರ ಜನರನ್ನು ಗುಂಡಿಕ್ಕಿ ಕೊಂದಿತು. ಮಹಿಳೆಯರಮೇಲೆ, ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಮಾಡಿತು. ಮೂರು ಲಕ್ಷದ ವರೆಗೆ ದೇಶಭಕ್ತರನ್ನು ಸೆರೆಮನೆಗೂ ಅಟ್ಟಿತು. ಇದೆಲ್ಲ ನಡೆದದ್ದು ೪೦ ಕೋಟಿ ಜನ ಸಂಖ್ಯೆಯ ಪ್ರಚಂಡ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಎಂಬುದನ್ನು ಗಮನಿಸಿದರೆ ಸ್ವರಾಜ್ಯವು ಸ್ವಾತಂತ್ರ್ಯವು ನಮಗೆ ಎಷ್ಟು ಅಗ್ಗದ ಬೆಲೆಯಲ್ಲಿ ದೊರಕಿತೆಂಬುದರ ಕಲ್ಪನೆ ಬಾರದಿರದು. ಬಾಡಿಗೆಯಿಂದ ಇದ್ದವರು ಮನೆ ಬಿಟ್ಟು ಸುಸೂತ್ರ ಹೊರಬೀಳದಿರುವಾಗ, ಹೊಲದಲ್ಲಿ ಹಾಳಿಯಸಲುವಾಗಿ, ಮನೆಯಲ್ಲಿ ಬಚ್ಚಲಕೀರಿನ ಸಲುವಾಗಿ ಪ್ರಾಣಗಳನ್ನು ಬಲಿಕೊಡಲು ಹಿಂಜರಿಯದ ನಾವು ಇಂಥ ಪ್ರಚಂಡ ದೇಶವನ್ನು ಸ್ವತಂತ್ರ ಮಾಡುವಾಗ ತೆತ್ತ ಬೆಲೆಯೆಷ್ಟು ಎಂಬುದನ್ನು ನಿರ್ವಿಕಾರವಾಗಿ ವಿಚಾರಿಸಿದಾಗ ಬಹಳ ಸ್ವಲ್ಪ ವೇಳೆಯಲ್ಲಿ ಬಹಳ ಸ್ವಲ್ಪ ತ್ಯಾಗದಲ್ಲಿ ನಾವು ಸ್ವತಂತ್ರರಾದವೆಂಬದನ್ನು ಒಪ್ಪಲೇ ಬೇಕಾಗುವದು.

ಈ ಹೋರಾಟದ ಅವಧಿಯಲ್ಲಿ ಬ್ರಿಟಿಶ ಸರಕಾರವು ನಮಗೆ ನಮ್ಮ ದೇಶಬಾಂಧವರಿಗೆ ಕೊಟ್ಟ ಹಿಂಸೆ, ಪೀಡೆ, ದಬ್ಬಾಳಿಕೆಗಳಬಗ್ಗೆ ಆಯಾ ಕಾಲಕ್ಕೆ ನಾವು ನಿಷೇಧ ಖಂಡನೆ ಮಾಡಿದ್ದೇವೆ. ಈಗ ಹೋರಾಟವಮುಗಿದಿದೆ. ಜಗತ್ತಿನ ಅನೇಕ ಘಟನೆಗಳನ್ನೂ ನೋಡಿದ್ದೇವೆ. ಅವನ್ನೆಲ್ಲ ಅಭ್ಯಸಿಸಿದರೆ ನಮಗೆ ತಿಳಿದು ಬರುವ ಸಂಗತಿ ಯಾವುದು ?

ತನ್ನ ವಿರುದ್ಧ ಚಟುವಟಿಕೆ ನಡೆಸಿದರೆಂಬ ಕಾರಣದಿಂದ ಹಿಟ್ಲರನು ೩೫ ಲಕ್ಷ ಜ್ಯೂ ಜನರನ್ನು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿದನು ! ಸಮತಾವಾದದ ಡಂಗುರ ಸಾರುತ್ತಿರುವ ರಶಿಯಾದಲ್ಲಿ ಆಡಳಿತದ ವಿರುದ್ಧ ಚಕಾರ ಶಬ್ದ ತೆಗೆಯುವವರನ್ನು ಸ್ವತಂತ್ರ ವಿಚಾರ ವ್ಯಕ್ತ ಮಾಡುವ ದೇಶ ಬಾಂಧವರನ್ನು ಸೈಬೇರಿಯಾಕ್ಕೆ ಅಟ್ಟಿ ಅವರ ಇತಿಶ್ರೀ ಮಾಡುವದನ್ನು ನಾವು ಕೇಳಿದ್ದೇವೆ !

ತೀರ ಇತ್ತೀಚೆಗೆ ಪಾಕಿಸ್ತಾನಿ ನರಾಧಮರು, ರಾಕ್ಷಸರು ಬಾಂಗಲಾ ದೇಶದಲ್ಲಿ ನಡೆಸಿದ ಅಮಾನುಷ ಅತ್ಯಾಚಾರಗಳು ನಮ್ಮ ಕಣ್ಣು ಮುಂದೆಯೇ ಇವೆ. ಸುಮಾರು ೪೦ ಲಕ್ಷ ದೇಶ ಬಾಂಧವರನ್ನು ಇರುವೆ ನೊಣದಂತೆ ತುಳಿದು ಗುಂಡಿಕ್ಕಿ ಕೊಲ್ಲಲಾಯಿತು. ಎರಡು ಲಕ್ಷ ಮಹಿಳೆಯರಮೇಲೆ ರಾಕ್ಷಸರೂ ನಾಚಿ ಹಿಂಜರಿಯುವಂಥ ಅತ್ಯಾಚಾರಗಳನ್ನು ಮಾಡಲಾಯಿತು. ಕೋಟ್ಯಾವಧಿ ಜನರು ಮನೆಮಾರು ಕಳಕೊಂಡು ನಿರಾಶ್ರಿತರಾಗಿ ಶರಣಾರ್ಥಿಗಳಾದರು !

ಈ ಘಟನೆಗಳ ಹಿನ್ನಲೆಯಲ್ಲಿ ಬ್ರಿಟಿಶ ಸರಕಾರ ನಮ್ಮ ಮೇಲೆ ನಡೆಸಿದ ದಬ್ಬಾಳಿಕೆಯನ್ನು ನೋಡೋಣ. "ಲೋಕಮಾನ್ಯ ತಿಲಕರು ಭಾರತೀಯ ಅಸಂತುಷ್ಟತೆಯ ಜನಕ" ರೆಂದು ಬ್ರಿಟಿಶ ಸರಕಾರ ಭಾವಿಸಿತ್ತು. ಬ್ರಿಟಿಶರನ್ನು ಹೊರಗೆ ಹಾಕಲು ಬಹಿರಂಗ ಬಂಡಾಯ ಹೂಡಿದ್ದ ಗಾಂಧೀಜಿಯನ್ನು ತಮ್ಮ ಕಡುವೈರಿಯೆಂದು ಅವರು ತಿಳಿದಿದ್ದರು. ಸಾವರಕರ, ಸೇನಾಪತಿ ಬಾಪಟರಂಥ ಕ್ರಾತಿಕಾರರನ್ನು ಕಂಡು ಅವರು ಹೆಲ್ಲುಕಡಿಯುತ್ತಿದ್ದರು. ಆದರೆ ಇವರೆಲ್ಲರೂ ಆಜನ್ಮ ತಮ್ಮ ಕೈಯಲ್ಲಿದ್ದಾಗ ಜೇಲಿನಲ್ಲಿದ್ದಾಗಲೂ ಅವರ ಜೀವಕ್ಕೆ ಅಪಾಯ ಮಾಡುವ ವಿಚಾರ ಬ್ರಿಟಿಶರು ಮಾಡಲಿಲ್ಲ. ಜೇಲಿನಲ್ಲಿ ಮುಖಂಡರು ಅನೇಕ ಸಾರೆ ಸಿಕ್ಕಾಗಲೂ ಅವರಿಗೆ ವಿಷ ಹಾಕಿ ಕೊಲ್ಲಬಹುದಾಗಿತ್ತು. ಆದರೆ ಇಂಥ ವಿಚಾರ ತಪ್ಪಿಸಹ ಅವರು ಮಾಡಲಿಲ್ಲವೆಂಬುದನ್ನು ನಾವು ಮರೆಯುವಂತಿಲ್ಲ

ನಮ್ಮವರೇ ಆದ ಅವರ ನವಕರರು ನಮ್ಮನ್ನು ಕಾಡಿದರು, ಪೀಡಿಸಿದರು, ಹಿಂಸಿಸಿದರು. ಅಧಿಕಾರಿಗಳು ತಮ್ಮ ದೊಡ್ಡಿಸ್ತನ ಬೆಳೆಯಿಸಿಕೊಳ್ಳಲು ಮೇಲಿನವರಿಂದ ಭಲೆ ಎನ್ನಿಸಿಕೊಂಡು ಮೇಲಿನ ದರ್ಜೆ ಪಡೆಯಲು ಅಧಿಕಾರಮೀರಿ ಅತ್ಯಾಚಾರ ಮಾಡಿದರೂ ಅವನ್ನೆಲ್ಲ ಪಾಕಿಸ್ತಾನಿ ಅತ್ಯಾಚಾರ, ರಶಿಯನ್ನರ ಅತ್ಯಾಚಾರ, ಹಿಟ್ಲರನ ಅತ್ಯಾಚಾರಗಳೊಂದಿಗೆ ಖಂಡಿತವಾಗಿಯೂ ಹೋಲಿಸಲಿಕ್ಕಾಗದು. ಹೋಲಿಸಲೂಬಾರದು. ಹೀಗೆ ವಿಚಾರ ಮಾಡಿದಾಗ ಬ್ರಿಟಿಶರ ಮಾನವೀಯತೆಯನ್ನು ನಾವು ಒಪ್ಪಲೇ ಬೇಕಾಗುವದು.

ಇದು ಭಾರತೀಯ ಸ್ವಾತಂತ್ರ್ಯದ ಬೆಳ್ಳಿಹಬ್ಬದ (ಕಾಲು ಶತಮಾನದ) ವರುಷವೂ ಆಹುದು. ಮಹಾಯೋಗಿ ಶ್ರೀ ಅರವಿಂದರ ಜನ್ಮಶತಾಬ್ದಿಯ ವರುಷವೂ

ಆಹುದು. ಆರವಿಂದರು ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ ಮಿತ್ರರಾಷ್ಟ್ರಗಳಿಗೆ ಅಂದರೆ ಬ್ರಿಟನ್ನ ಅಮೇರಿಕಾಗಳಿಗೆ ಜಯವಾಗಬೇಕೆಂದು ಅಪೇಕ್ಷಿಸುತ್ತಿದ್ದರು ಅವರ ಈ ಅಭಿಪ್ರಾಯವನ್ನು ಅವರ ಅನುಯಾಯಿಗಳಾಗಿದ್ದ ಶ್ರೀ ಆರ್.ಆರ್.ದಿವಾಕರ ಮೊದಲಾದವರು ಜೇಲಿನಲ್ಲಿದ್ದಾಗ ಹೇಳುತ್ತಿದ್ದರು. ನಮಗೆಲ್ಲ ಸಿಟ್ಟುಬರುತ್ತಿತ್ತು. ಬ್ರಿಟಿಶರ ವಿರುದ್ಧ ನಾವು ಬಂಡಾಯವೆದ್ದು ಜೇಲಿಗೆ ಬಂದಿರುವಾಗ ಬ್ರಿಟಿಶರಿಗೆ ಜಯವಾಗಬೇಕೆಂದು ಅರವಿಂದರು ಯಾಕೆ ಅಪೇಕ್ಷಿಸುತ್ತಾರೆ ಎಂಬುದು ನಮ್ಮ ವಿಚಾರಕ್ಕೆ ಹೊಳೆಯಲಿಲ್ಲ. ಹೇಳಿ ಕೇಳಿ ನಾವೆಲ್ಲ ಅಲ್ಪಜ್ಞ ಸ್ವಯಂಸೇವಕರು. ಸದ್ಯದ ಪರಿಸ್ಥಿತಿಯನ್ನು ಮಾತ್ರ ಅರಿಯಬಲ್ಲವರು. ಅರವಿಂದರು ದ್ರಷ್ಟಾರರು, ಮಹಾಯೋಗಿಗಳು, ಭವಿಷ್ಯ ರೂಪಿಸುವವರು, ಜಗತ್ ಶಾಂತಿಗಾಗಿ ಹಂಬಲಿಸುವರು, ಬ್ರಿಟಿಶರು ಮಾನವತಾವಾದಿಗಳೆಂದೂ ಹಿಟ್ಲರನು ರಾಕ್ಷಸತಾವಾದಿಯೆಂದೂ ಅವರ ಅಭಿಪ್ರಾಯವಿತ್ತು.

ಗಾಂಧೀಜಿಯವರು ಕೂಡ ಬ್ರಿಟಿಶರ ವಿರುದ್ಧ ಹೋರಾಡುತ್ತಿದ್ದರೂ ಅವರ ಮಾನವೀಯತೆಯನ್ನು ಅರಿತಿದ್ದರು. ದಾಸ್ಯವಿಮೋಚನೆಗಾಗಿ ಬ್ರಿಟಿಶ ಸರಕಾರವನ್ನು ಅವರು ವಿರೋಧಿಸುತ್ತಿದ್ದರಾದರೂ ಬ್ರಿಟಿಶ ಜನತೆಯನ್ನು ಅವರು ಪ್ರೀತಿಸುತ್ತಿದ್ದರು.

ಲೋಕಮಾನ್ಯ ತಿಲಕರು ಬ್ರಿಟಿಶರ ವಿರುದ್ಧ ಕಿಡಿಕಿಡಿಯಾಗಿ ಕಾದಾಡುತ್ತಿದ್ದರೂ ಅವರ ನ್ಯಾಯ ಬುದ್ಧಿ ಹಾಗು ಕಾಯದೆಯಲ್ಲಿ ಅವರಿಗಿದ್ದ ವಿಶ್ವಾಸ ಇವುಗಳನ್ನು ಮೆಚ್ಚಿದ್ದರು.

ಹಿಟ್ಲರನ ಅಥವಾ ಜಪಾನಿನ ಸೈನಿಕಸಹಾಯಪಡೆದು ಸುಭಾಷಚಂದ್ರ ಬೋಸರಂಥವರೂ ಭಾರತದಮೇಲೆ ದಾಳಿ ಮಾಡುವದನ್ನು ಪಂ. ಜವಾಹರಲಾಲರು ಅದಕ್ಕಾಗಿಯೇ ಸ್ವಾಗತಿಸಲಿಲ್ಲ.

ಬ್ರಿಟನ್ನು ಮತ್ತು ಅಮೇರಿಕೆಗಳು ನಿಜವಾಗಿಯೇ ಪ್ರಜಾಪ್ರಭುತ್ವದಲ್ಲಿ ನಂಬಿಗೆಯುಳ್ಳ ರಾಷ್ಟ್ರಗಳಾಗಿವೆಯೆಂದು ಎಲ್ಲರೂ ಇಂದಿಗೂ ಒಪ್ಪುತ್ತಾರೆ.

ಭಾರತೀಯ ಸ್ವಾತಂತ್ರ್ಯದ ಹೋರಾಟ ನಡೆದಾಗಲೂ ಬ್ರಿಟಿಶರು ಮಾನವೀಯತೆಯನ್ನು ಧಿಕ್ಕರಿಸಲಿಲ್ಲ ಎಂಬುದನ್ನು ನಾವು ಒಪ್ಪಬೇಕಾಗಿದೆ. ಹೋರಾಟದ ಕಾಲದ ಭಾವನೆಯನ್ನು ಈಗಲೂ ಇಡುವದು ಸರಿ ಅಲ್ಲ, ಸಮಂಜಸವೂ ಅಲ್ಲ. ವಿಶಾಲ ದೃಷ್ಟಿಯಿಂದ ಮತ್ತು ಜಾಗತಿಕ ಘಟನೆಗಳ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ನಮ್ಮ ಸ್ವಾತಂತ್ರ್ಯ ಬೇಗ ದೊರೆಯಿತು, ಸುಲಭವಾಗಿ ದೊರೆಯಿತು, ಅದಕ್ಕೆ ಬ್ರಿಟಿಶರ ಜಾಣತನದ ಮಾನವೀಯತೆಯೇ ಕಾರಣವಾಯಿತೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ.

ಜಗತ್ತು ಹುಟ್ಟಿದಾಗಿನಿಂದ ೧೫ ಆಗಸ್ಟ್ ೧೯೪೭ ರವರೆಗೆ ಯಾವದೇ ಖಂಡದಲ್ಲಿ ಯ. ಯಾವ ದೇಶವೂ ಸಶಸ್ತ್ರ ಯುದ್ಧ ಮಾಡದೆ, ರಕ್ತದ ಕಾವಲಿ ಹರಿಸದೆ, ಸ್ವತಂತ್ರ ವಾಗಿಲ್ಲ. ನಿ.ಶಸ್ತ್ರ ಪ್ರತಿಕಾರದಿಂದ, ಅಹಿಂಸಾತ್ಮಕ ಹೋರಾಟದಿಂದ ಭಾರತವು ಸ್ವತಂತ್ರ ವಾದದ್ದು ಜಗತ್ತಿನ ಇತಿಹಾಸದಲ್ಲಿಯೇ ಒಂದು ಅಭೂತಪೂರ್ವ ಘಟನೆ. ಇಂಥ ಹೊಸ ಇತಿಹಾಸವನ್ನು ನಿರ್ಮಿಸಿದ ಶ್ರೇಯಸ್ಸು ಮಹಾತ್ಮಾ ಗಾಂಧಿಯವರಿಗೇ ಸಂಪೂರ್ಣ ವಾಗಿ ಸಲ್ಲುತ್ತಿದ್ದರೂ ಅದರಲ್ಲಿಯ.ಒಂದಂಶ ಬ್ರಿಟಿಶರ ಮಾನವೀಯತೆಗೂ ಸಲ್ಲುತ್ತದೆ.

ನಮ್ಮ ಸ್ವರಾಜ್ಯವು ಸುರಾಜ್ಯ ಹೇಗಾದೀತು ?

ಸ್ವಾತಂತ್ರ್ಯ ವೀರರು ಕಷ್ಟಪಟ್ಟಿದ್ದಾಯಿತು. ತ್ಯಾಗಮಾಡಿದ್ದಾಯಿತು. ಅನೇಕರು ಪ್ರಾಣಕೊಟ್ಟಿದ್ದೂ ಆಯಿತು. ಸ್ವಾತಂತ್ರ್ಯ ಬಂದದ್ದೂ ಆಯಿತು. ಸ್ವಾತಂತ್ರ್ಯ ಬಂದು ಕಾಲುಶತಮಾನದ ಕಾಲ ಸಂದಿಹೋದದ್ದೂ ಆಯಿತು. ಆದರೆ ನಮ್ಮ ವೀರರು ತಮ್ಮ ಮನಸ್ಸಿನಲ್ಲಿ ರೂಪಿಸಿ ಸಾಧಿಸಿದ ನಮ್ಮ ಸ್ವರಾಜ್ಯವು ಸುರಾಜ್ಯವಾಗಲಿಲ್ಲ.ಕಲ್ಯಾಣರಾಜ್ಯದ ಮಾತಂತೂ ದೂರೇ ಉಳಿಯಿತು ಮೊದಲು ಸ್ವರಾಜ್ಯ, ಬಳಿಕ ಸುರಾಜ್ಯ, ಕೊನೆಗೆ ಕಲ್ಯಾಣರಾಜ್ಯ, ಹೀಗೆ ಮೂರು ಮೆಟ್ಟಿಲುಗಳನ್ನು ಏರಿದ ಮೇಲೆಯೇ ಸುಖ ಶಾಂತಿ. ಇದುವೇ ಮಾನವನ ಇಹಲೋಕದ ಆದರ್ಶ ಸಾಧನೆ. ಕಲ್ಯಾಣ ರಾಜ್ಯವೆಂದರೆ ಭೌತಿಕ ವಾಗಿ ಪ್ರಗತಿ ಸಾಧಿಸಿ ಆಧ್ಯಾತ್ಮದ ಕಡೆಗೆ ಸಾಗುವದು. ಪ್ರಗತಿಯಿಲ್ಲದ ಆಧ್ಯಾತ್ಮವಾದವು ಮರುಳ ವೇದಾಂತವಾದರೆ ಆಧ್ಯಾತ್ಮವಿಲ್ಲದ ಭೌತಿಕ ಪ್ರಗತಿಯು ಸ್ವೇಚ್ಛಾಚಾರ, ಶುದ್ಧ ಬೂಟಾಟಿಕೆ. ಕುರುಡ ಕುಂಟರಲ್ಲಿ ಸಹಕಾರವಿಲ್ಲದ ಹೊರ್ತು ಅವರಿಬ್ಬರ ದಾರಿ ಸಾಗದಂತೆ ಇದು ಆದೆ. ಕಲ್ಯಾಣರಾಜ್ಯವೆಂದರೆ ಬಿಜ್ಜಳನ ಕಲ್ಯಾಣ ರಾಜ್ಯವಲ್ಲ,ಕಲಬುರ್ಗಿಯ ರಾಜ್ಯವೂ ಅಲ್ಲ. ಸಾಂಸ್ಕೃತಿಕ ನೈತಿಕ, ಶೀಲ, ಚಾರಿತ್ರ್ಯದ ಪ್ರಗತಿಯೇ ಕಲ್ಯಾಣರಾಜ್ಯದ ಬುನಾದಿ. ಈ ಕಲ್ಯಾಣ ರಾಜ್ಯ ವಾಗಲು ಮೊದಲು ಸುವ್ಯವಸ್ಥಿತ ಆಡಳಿತವುಳ್ಳ ರಾಜ್ಯ ಬೇಕು. ಅದು ಇಂದು ನಮಗೆ ದೊರಕಿ ಕಾಲು ಶತಮಾನವಾಯಿತು. ಈ ಅವಧಿಯಲ್ಲಿ ಏನೇನೋ ವಿಚಾರಗಳನ್ನೂ ಮುಂದಿಟ್ಟುಕೊಂಡು ಸಾಗಿದ್ದೇವೆ. ಆದರೆ ಈ ಪದ್ಧತಿಯಿಂದ ಈ ರೀತಿಯಿಂದ, ಈ ಧೋರಣೆಯಿಂದ ಸಾಗಿದರೆ ನೂರು ವರುಷಗಳಾದರೂ ನಮ್ಮ ನಿಜವಾದ ಪ್ರಗತಿಯಾಗಲಾರದು, ಸುರಾಜ್ಯವಾಗಲಾರದು. ಎಲ್ಲಿಯೋ ನಾವು ತಪ್ಪಿದ್ದೇವೆ ಎಂಬದು ನಿಶ್ಚಿತ. ಕುರುಡನು ಹಗ್ಗ ಹೊಸೆದಂತೆ ನಮ್ಮ ಸ್ಥಿತಿ ಯಾಗಬಾರದೆಂದು ಎಲ್ಲರಿಗೆ ಅನಿಸಿದಾಗ ನಾವು ಎಲ್ಲಿ ತಪ್ಪಿದ್ದೇವೆ ಎಂಬುದರ ಸಿಂಹಾವಲೋಕನೆ ನಡೆದೀತು, ಮುಂದಿನ ದಾರಿಸಿಕ್ಕೀತು. ಈ ಬಗ್ಗೆ ಚರ್ಚೆ ವಿಚಾರಮಂಥನ ನಡೆಯಬೇಕು.ಸ್ವಾತಂತ್ರ್ಯ

ಪೀರರೂ ಸ್ವಾತಂತ್ರ್ಯ ಭಕ್ತರೂ ಹೊಸ ಪೀಳಿಗೆಯ ಯುವಕರೂ ಈ ಬಗ್ಗೆ ಗಂಭೀರವಾಗಿ ವಿಚಾರಿಸುವರೆಂದು ನಂಬಿ ಈ ಕೊನೆಯ ಅಧ್ಯಾಯದಲ್ಲಿ ಕೆಲ ವಿಚಾರಗಳನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ

ಇಪ್ಪತ್ತೈದು ವರುಷಗಳ ಅನುಭವದಿಂದ ನೋಡಿದ್ದಾದರೆ ಭಾರತೀಯ ಘಟನೆ (ಸಂವಿಧಾನ) ಬರೆಯುವಾಗ ಕೆಲವು ಕಾಲ್ಪನಿಕ ಆದರ್ಶಗಳನ್ನು ನಾವು ಇಟ್ಟುಕೊಂಡಿದ್ದೆವು. ಅವು ಪ್ರತ್ಯಕ್ಷದಲ್ಲಿ ಕೃತಿಗೆ ಇಳಿಯದ್ದರಿಂದ ಸಂವಿಧಾನ ತಿದ್ದುಪಡೆಯು ಪ್ರತಿ ನಿತ್ಯದ ಮಾತಾಗಿದೆಯಷ್ಟೇ ? ಸುಪ್ರೀಮು ಕೋರ್ಟಿನವರು ಮೂಲ ಭೂತ ಹಕ್ಕಿನ ಘಟನೆಯ ಕಲಮನ್ನು ತಿದ್ದಲು ಸರಕಾರಕ್ಕೆ ಅಧಿಕಾರವಿಲ್ಲೆಂದು ನಿರ್ಣಯ ಕೊಟ್ಟರೂ ಸಂವಿಧಾನ ತಿದ್ದುಪಡಿ ಹತಾತ್ತಾಗಿ ಮಾಡಲಾಗತ್ತಿದೆ. ಅಷ್ಟೇ ಅಲ್ಲ, ಈ ತಿದ್ದುಪಡೆಯನ್ನು ಪ್ರಶ್ನಿಸುವ ಅಧಿಕಾರವೂ ಕೋರ್ಟಿಗೆ ಇರಬಾರದೆಂದು ತಿದ್ದುಪಡಿಯಲ್ಲಿಯೇ ಬರೆದು ಬಿಟ್ಟಿದ್ದಾರೆ, ಅಂದಮೇಲೆ ಜನರ ಮನಸ್ಸಿಗೆ ಬಂದರಾಯಿತು, ಘಟನಾ ತಿದ್ದುಪಡಿಯಬಗ್ಗೆ ವಿಪೆಂಚಿಸುವ ಕಾರಣವಿಲ್ಲ. ಆದುದರಿಂದ ನಾನು ಇಲ್ಲಿ ಪ್ರಸ್ತಾಪಿಸುತ್ತಿರುವ ಕೆಲ ವಿಚಾರಗಳು ಜನರಿಗೆ ಒಪ್ಪಿಗೆ ಆದರೆ ಅದಕ್ಕವಶ್ಯವಿದ್ದ ಘಟನಾ ತಿದ್ದುಪಡಿ ಸಹಜವಾಗಿ ಮಾಡಬಹುದು. ನನ್ನ ಈ ವಿಚಾರಗಳು ಕಾಲಪ್ರವಾಹಕ್ಕೆ ವಿರುದ್ಧವಾಗಿ ಕಂಡುಬಂದರೂ ಅವು ಅವಶ್ಯವೆಂದು ಅನಿಸಿದ್ದರಿಂದ ಅವುಗಳಬಗ್ಗೆ ಬರಬಹುದಾದ ಟೀಕೆಗಳನ್ನು ಬಿಚ್ಚು ಮನಸ್ಸಿನಿಂದ ಸ್ವಾಗತಿಸಿ ಅವುಗಳನ್ನು ಇಲ್ಲಿ ಬರೆಯುತ್ತಿದ್ದೇನೆ.

ಕೆಲವು ಸೂಚನೆಗಳು

ಸ್ವರಾಜ್ಯದ ಆಡಳಿತ ಸುಧಾರಿಸಲು ಕೆಳಗಿನ ಕ್ರಮಗಳನ್ನು ನಾನು ಸೂಚಿಸುತ್ತೇನೆ.

೧) ಮತದಾರರ ವಯಸ್ಸು ೨೧ ಇರಬೇಕೆಂದು ಈಗಿದ್ದ ಘಟನೆಯಲ್ಲಿ ಹೇಳಲಾಗಿದೆ. ವಯಸ್ಸಿನ ಮಿತಿಯನ್ನು ೧೮ ಕ್ಕೆ ಇಳಿಸಬೇಕೆನ್ನುವ ಅಗ್ಗದ ಲೋಕಪ್ರಿಯತೆ ಸಂಪಾದಿಸುವ ಜನರೂ ಇದ್ದಾರೆ. ಪ್ರೌಢ ಮತದಾನದ ಉದ್ದೇಶ ಪ್ರೌಢತ್ವದ ಮತದಾನ. ಅಂದರೆ ಹೊಣೆಗಾರಿಕೆಯನ್ನರಿತು ಮಾಡುವ ಮತದಾನ. ೨೧ ವರುಷದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಥವಾ ಹಳ್ಳಿಯೊಳಗಿನ ಅಶಿಕ್ಷಿತ ತರುಣ ತರುಣಿಯರು ಸಾರಾಸಾರ ವಿಚಾರ ಮಾಡಲು ಶಕ್ಯರಾಗಿರುತ್ತಾರೆ ಎಂಬುದನ್ನು ನಿರ್ವಿಕಾರ ಮನಸ್ಸಿನಿಂದ ತೂಗಿ ನೋಡಿದರೆ ಅದು ಅಶಕ್ಯವೆಂದೇ ಒಪ್ಪಬೇಕು. ಉಚ್ಚ್ರಂಖಿಲ ಸ್ವೈರ ವೃತ್ತಿಯ ನವಯುವಕರಿಗೆ ತಮ್ಮ ಮನೆಯ ಕಡೆಗೇ ಲಕ್ಷ್ಯ ಪೂರೈಸಲು ಬಿಡುವು ಇಲ್ಲದಾಗ ರಾಷ್ಟ್ರದ ಭವಿತವ್ಯ ದೇಶಹಿತ ಮುಂತಾದ ಕಡೆಗೆ ನೋಡಲು ಹೇಗೆ ಆದೀತು ? ಪ್ರೌಢತ್ವವು ಈ ವಯಸ್ಸಿನಲ್ಲಿ ಖಂಡಿತವಾಗಿಯೂ ನಮ್ಮ ದೇಶದಲ್ಲಿ ಬರುವಂತಿಲ್ಲ. ಅಂದಮೇಲೆ ನಿಜವಾದ ಪ್ರೌಢತ್ವ ಬರುವ ಅಂದರೆ ಪ್ರಪಂಚದ ಭಾರಬಿದ್ದ ವಯಸ್ಸಿನವರಿಗೇ ಮತಾಧಿಕಾರ ಕೊಡುವದು ಸರಿಯಾಗಲಿಕ್ಕಿಲ್ಲವೇ ? ಈಗಿದ್ದ ೨೧ ವರುಷದ ಮಿತಿಯನ್ನು

ಹೆಚ್ಚಿಸಿ ಅದನ್ನು ೩೦ ಕ್ಕೆ ಏರಿಸುವದು ಅವಶ್ಯವಿದೆ ಅಂಧಾನುಕರಣದಲ್ಲಿ ನಾವು ಎಲ್ಲರಿಗಿಂತ ಮುಂದಾಗುತ್ತಿರುವದರಿಂದ ೨೧ ರ ವಯೋಮಿತಿಯನ್ನು ಇಳಿಸುವದೇ ಪ್ರಜಾಪ್ರಭುತ್ವವಾದರೆ ಅದನ್ನು ೧೫ ಕ್ಕೆ ೧೨ ಕ್ಕೆ ಏಕೆ ಇಳಿಸಬಾರದು ಎಂಬುದಕ್ಕೆ ಅವರ ಉತ್ತರವಿಲ್ಲ. ಅಂತೆಯೇ ಪ್ರೌಢತ್ವದ ವಯೋಮಿತಿ ೩೦ ಕ್ಕೆ ಏರಿಸುವದು ಸಾರ್ಥಕವಾದೀತು.

೨) ಚುನಾವಣೆಗಳಲ್ಲಿ ಮತದಾನ ಕಡ್ಡಾಯದ್ದಾಗಿರಬೇಕು. ಮತದಾನ ಮಾಡದವರಿಗೆ ೧೦ ರೂಪಾಯಿಯ ದಂಡ ವಿಧಿಸುವಂತೆ ಘಟನೆ ತಿದ್ದಲ್ಪಡಬೇಕು. ಇಂದು ಯಾವದೇ ಚುನಾವಣೆಯಲ್ಲಿ ನೂರಕ್ಕೆ ಸರಾಸರಿ ೫೦ ರಕ್ಕಿಂತ ಕಡಿಮೆ ಮತದಾರರು ಮತದಾನ ಮಾಡುತ್ತಾರೆ. ಅಂದರೆ ಸರಿ ಅರ್ಧದಷ್ಟು ಜನರು ತಮ್ಮ ದೇಶದ ಆಗು ಹೋಗುಗಳ ಬಗ್ಗೆ ಹೀಗೆ ಉದಾಸೀನರಾದರೆ ಪ್ರಜಾಪ್ರಭುತ್ವ ಯಶಸ್ವಿಯಾಗಿದೆ ಎಂದು ಹೇಳುವದರಲ್ಲಿ ಅರ್ಥವಿಲ್ಲ.

೩) ಹುರಿಯಾಳುಗಳಿಗೆ ಕನಿಷ್ಠ ಮಿತಿಯ ಶಿಕ್ಷಣ ತರಬೇತಿಯು ಕಡ್ಡಾಯವಾಗಿರಬೇಕು.

೪) ಗಾತ್ರ ಬೆಳೆದಂತೆ ಗುಣತ್ವ ಕಡಿಮೆಯಾಗುವದು ಸ್ವಾಭಾವಿಕವಾಗಿದೆ. ಆದುದರಿಂದ ಶಾಸಕರ ಸಂಖ್ಯೆಯನ್ನು ಒಮ್ಮೆಲೇ ಅರ್ಧಕ್ಕೆ ಇಳಿಸಬೇಕು.

೫) ಶಾಸನ ಸಭೆಗಳನ್ನು ಅಸ್ತಿತ್ವದಲ್ಲಿಟ್ಟು ಮಂತ್ರಿಮಂಡಲದ ಅಸ್ತಿತ್ವತಗೆದು ಹಾಕಬೇಕು. ಶಾಸನ ಸಭೆಗಳಲ್ಲಿ ಧೋರಣೆ ನಿರೂಪಿಸುವ ಗೊತ್ತುವಳಿ ಮಾಡಿ ಅವುಗಳ ಕಾರ್ಯಾಚರಣೆಯ ಹೊಣೆಯನ್ನು ಗವರ್ನರರ ಮೇಲೆ ಹೊರಿಸಬೇಕು ಕೇಂದ್ರದಲ್ಲಿ ಮಾತ್ರ ಮಂತ್ರಿಮಂಡಲ ಇರಬೇಕು.

೬) ಶಾಸಕರ ಸಂಬಳ ಕೂಡಲೆ ನಿಲ್ಲಿಸಬೇಕು. ದಿನದ ಭತ್ತೆಯ ಹಳೇ ಪದ್ಧತಿ ಸುರು ಆಗಬೇಕು.

೭) ಪಕ್ಷಾಂತರ ಮಾಡುವವರ ಸದಸ್ಯತ್ವ ತನ್ನಷ್ಟಕ್ಕೆ ತಾನೇ ರದ್ದು ಆಗಬೇಕು.

೮) ಯಾವದೇ ಕಾರಣದಿಂದ ಯಾವದೇ ಒಬ್ಬ ವ್ಯಕ್ತಿಯು ಎರಡುಸಲಕ್ಕಿಂತ ಹೆಚ್ಚಿಗೆ ಅಂದರೆ ಮೂರನೆ ಸಾರೆ ಚುನಾವಣೆಗೆ ನಿಲ್ಲದಂತೆ ಪ್ರತಿಬಂಧವಿರಬೇಕು.

೯) ಪ್ರತಿಯೊಂದು ವಿಷಯದಲ್ಲಿ ಬಹುಮತವೆಂದರೆ ೨/೩ ದ್ದಾಗಿರಬೇಕು.

೧೦) ಸ್ಥಾನಿಕ ಸಂಸ್ಥೆಗಳ ಚುನಾವಣೆ ಒಮ್ಮತದಿಂದ ನಡೆಯಬೇಕು, ಒಮ್ಮತ

ವಾಗದಿದ್ದಲ್ಲಿ ಚೀಟಿ ಎತ್ತುವ ಪದ್ಧತಿಯಿಂದ ನಡೆಯಬೇಕು. ಗುಪ್ತ ಮತದಾನ ಹಾಗೂ ಮತಗಳ ಎಣಿಕೆ ಇರಬಾರದು.

೧೧) ಪಾನಪ್ರತಿಬಂಧ, ಜೂಜಾಟ ಪ್ರತಿಬಂಧ, ಮಾದಕ ಪದಾರ್ಥ ಪ್ರತಿಬಂಧ ಕಟ್ಟಾಯದ್ದೆಂದು ಘಟನೆಯಲ್ಲಿ ಉಲ್ಲೇಖಿಸಿ ಅದರ ಕಾರ್ಯಾಚರಣೆ ಕಠೋರವಾಗಿ ನಡೆಯಬೇಕು.

೧೨) ದೇಶದ ಸಾಮಾನ್ಯ ವ್ಯಕ್ತಿಯ ಆದಾಯಕ್ಕಿಂತ ೩೦ ಪಟ್ಟು ಮಾತ್ರ ವರಿಷ್ಠ ಆದಾಯ ಸಂಬಳದ ಪ್ರಮಾಣ ಇಟ್ಟು ಬಿಡಬೇಕು.

೧೩) ಎಲ್ಲ ಜಾತಿಧರ್ಮದವರಿಗೆ ಎಲ್ಲ ಕಾಯಿದೆ ಮುಂತಾದವು ಸಮಾನವಾಗಿಯೇ ಅನ್ವಯಿಸಬೇಕು.

೧೪) ಸ್ಥಾನಿಕ ಸ್ವರೂಪದ ಎಲ್ಲ ವಿಷಯಗಳಲ್ಲಿ ಸರ್ವಾನುಮತದಿಂದ ರಚಿತವಾದ ಗ್ರಾಮಪಂಚಾಯತಿಗಳ ಅಭಿಪ್ರಾಯಕ್ಕೇ ಕೊನೆಯ ಮನ್ನಣೆ ಸಿಗುವಂತೆ ಕಾಯಿದೆ ತಿದ್ದುಪಡಿಯಾಗಬೇಕು, ಸಿಂದಿ, ಸೆರೆ, ಗಾಂಜಾ, ಅಫು ಚಹಾದಂಗಡಿಗೆ ಲಾಯಸನ್ಸ ಕೊಡುವದು ಬಿಡುವದು ಪಂಚಾಯತಿಯ ಅಧಿಕಾರಕ್ಷೆಯಲ್ಲಿ ಇರಬೇಕು. ಸುದೀರ್ಘ ವಿಚಾರ, ಅವ್ಯಾಹತ ತಪಶ್ಚರ್ಯದ ಬಲದಿಂದ ಪೂಜ್ಯ ವಿನೋಬಾಜಿಯವರು ತೋರಿಸಿದ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಆದರ್ಶವಾಗಿಟ್ಟುಕೊಂಡು ಯೋಗ್ಯ ಕಾಯಿದೆ ರಚನೆಯಾಗಬೇಕು.

ಇವೇ ಮುಂತಾದ ಸೂಚನೆಗಳನ್ನು ಒಪ್ಪಿ ಆಡಳಿತ ನಡೆಸಿದ್ದಾದರೆ ಭ್ರಷ್ಟಾಚಾರ ಲಂಚಗುಳಿತನ, ಶೋಷಣೆ, ವಿಷಮತೆ ಮುಂತಾದವು ನಿಶ್ಚಿತವಾಗಿ ಬಹಳ ಕಡಿಮೆಯಾಗಿ ಸ್ವರಾಜ್ಯವು ಸುರಾಜ್ಯವಾದೀತು. ನಮಗೆ ಹಿತಕರವಾಗುವಂಥ ರಾಜ್ಯ ನಿರ್ಮಾಣ ಮಾಡಿಕೊಳ್ಳುವದು ಬಿಡುವದು ನಮ್ಮನ್ನೇ ಕೂಡಿದೆ. ಜನರು ಏನಂದಾರು, ಅನ್ಯದೇಶಗಳು ಏನಂದಾವು ಎಂಬ ಹುಚ್ಚು ಪ್ರತಿಷ್ಠೆಗೆ ಅಂಧ ಅನುಕರಣೆಗೆ, ಬಲಿಬಿದ್ದು ಸರ್ವನಾಶವಾಗಹತ್ತಿರುವಾಗ ಅದನ್ನು ಸುಧಾರಿಸಲು ಕಾರ್ಯಕರ್ತರು ಗಂಭೀರವಾಗಿ ವಿಚಾರಿಸಿ ಮಾರ್ಗ ಸೂಚಿಸಬೇಕೆಂಬ ದೃಷ್ಟಿಯಿಂದ ಮೇಲಿನ ಕೆಲ ಸೂಚನೆಗಳನ್ನು ಮಾಡಲಾಗಿದೆಯಲ್ಲದೆ ಅವು ನಿರ್ಣಾಯಕವಲ್ಲ. ವಿಚಾರ ಪ್ರಚೋದಕವೆಂದು ತಿಳಿಯಬೇಕು.

ಹಣವಾಪಸೆಯೇ ಮನುಷ್ಯನನ್ನು ಲಂಚಗುಳಿತನ, ಕಾಳಸಂತೆ, ಜೂಜಾಟ, ಲಾಭಬಡಕತನ ಇತ್ಯಾದಿ ದುರ್ಗುಣಗಳಿಗೆ ಎಳಿಸುತ್ತಿರುವದರಿಂದ ಈ ದುರ್ಮಾರ್ಗದಿಂದ ಶ್ರಮವಿಲ್ಲದೆ ಸಂಪಾದನೆ ಮಾಡಿದ ಹಣವನ್ನು ಪತ್ತೆ ಹಚ್ಚಲು ಹಾಗು ಸಂಪತ್ತಿಯ ಕೇಂದ್ರೀಕರಣ ತಪ್ಪಿಸಲು ಚಲನಶುದ್ಧಿಯ ಉಪಾಯವನ್ನು ಕೈಕೊಳ್ಳುವದು ಅವಶ್ಯವಿದೆ. ಅದರಬಗ್ಗೆ ಇಲ್ಲಿ ಬರೆಯುವದು ಉಚಿತ.

ಚಲನಶುದ್ಧಿ

ಭಾರತದ ದಾರಿದ್ರ್ಯ ನಿವಾರಣೆಗೆ ವಿಷಮತೆ ಪರಿಣಾಮಕಾರಕವಾಗಿ ಕಡಿಮೆ ಯಾಗಲು ಅರ್ಥಾತ್ ಸಮತಾವಾದದ ಸ್ಥಾಪನೆಗೆ ಇನ್ನೊಂದು ಅತ್ಯಂತಪ್ರಭಾವಿಯಾದ ಮೂಲಭೂತವಾದ ಮಾತಿನ ಅವಶ್ಯಕತೆಯಿದೆ. ಅದೆಂದರೆ ಚಲನಶುದ್ಧಿ. ಪ್ರತಿವರುಷದ ಕೊನೆಯ ದಿನ ಅಂದರೆ ೩೧ ನೇ ಡಿಸೆಂಬರಕ್ಕೆ ಭಾರತದಲ್ಲಿ ಆಸ್ತಿತ್ವದಲ್ಲಿರುವ ಎಲ್ಲ ಕರೆನ್ಸಿ ನೋಟುಗಳು ರದ್ದು ಆಗುವಹಾಗೆ ಅದಕ್ಕಾಗಿ ಅವನ್ನು ರಿನ್ಯೂಅಲ ಮಾಡಿಸಿಕೊಂಡು ಹೊಸ ಇಸವಿಯ ನೋಟುಗಳನ್ನು ಪಡೆಯಬೇಕಾಗುವದೆಂದೂ ಸರಕಾರ ಕಾಯಿದೆ ಮಾಡಿ ಬಿಡಬೇಕು. ಮತ್ತು ಈ ರೀತಿ ಹಳೇ ನೋಟು ಕೊಟ್ಟು ಹೊಸತು ಮಾಡಿ ಕೊಳ್ಳುವಾಗ [ರಿನ್ಯೂಅಲ] ನೂರಕ್ಕೆ ೬ ರೂಪಾಯಿಯಂತೆ ಕಮಿಶನ್ ಕೊಡುವದು ಅಗತ್ಯವಾಗಿದೆಯೆಂದೂ ಸಾರಬೇಕು. ಈ ನಿಯಮ ಎಲ್ಲರಿಗೂ ಬಡವರಿಂದ ಶ್ರೀಮಂತ ರವರೆಗೆ ಅನ್ವಯಿಸಲ್ಪಡುವದರಿಂದ ಯಾರು ಎಲ್ಲಿಂದ ಹೇಗೆ ದುಡ್ಡು ಸಂಗ್ರಹಿಸಿರುವ ರೆಂಬುದನ್ನು ಕೇಳುವ ಕಾರಣವೇ ಇಲ್ಲ. ಕಳ್ಳಪೇಟೆಯಿಂದ ಲಂಚತಿಂದು ಅಥವಾ ಅನ್ಯ ಯಾವದೇ ರೀತಿಯಿಂದ ದುಡ್ಡಿನ ಸಂಚಯ ಮಾಡಿದವರಿಗೂ ಯಾವದೇ ಶಿಕ್ಷೆಯ ಭಯವಿಲ್ಲದಿರುವದರಿಂದ ಮತ್ತು ಎಲ್ಲ ನೋಟುಗಳು ತನ್ನಷ್ಟಕ್ಕೆ ತಾವೇ ರದ್ದಾಗುವದರಿಂದ ಯಾವದೇ ರೀತಿಯ ಒತ್ತಾಯವಿಲ್ಲದೆ ಎಲ್ಲರಕಡೆಗೆ ಸಂಗ್ರಹದಲ್ಲಿದ್ದ ನೋಟುಗಳು ತಾನಾಗಿಯೇ ಸರಕಾರದಕಡೆಗೆ ಬರುವವು. ಈ ನೋಟು ಹೊಸತು ಮಾಡುವಾಗ ಬರಲಿರುವ ಕಮಿಶನ್ ಹಣವು ನಿದಾನ ಪ್ರತಿವರುಷ ಎರಡು ಸಾವಿರ ಕೋಟಿ ರೂಪಾಯಿಯ ಹೊಸ ಆದಾಯ ಸರಕಾರಕ್ಕೆ ಬರಲಿರುವದರಿಂದ ಅಷ್ಟು ಹಣದ ವರೆಗಿನ ಕರಗಳನ್ನು ಉಪ್ಪಿನ ಕರ, ಸಕ್ಕರೆಯ ಮೇಲಿನ ಕರ ಮುಂತಾದವುಗಳನ್ನು ರದ್ದ ಮಾಡಬಹುದು. ಇದರಿಂದ ಸಾಮಾನ್ಯಜನತೆ ಸರಕಾರವನ್ನು ಪ್ರಾಡಿ ಹರಿಸಬಹುದು.

ಕೋಟ್ಯಾವಧಿ ರೂಪಾಯಿಯ ನೋಟುಗಳ ಸಂಗ್ರಹವಿರುವವರಿಗೆ ಒಂದು ಸವ ಲತ್ತನ್ನೂ ಕೊಡಬಹುದೆಂದು ಈ ಸೂತ್ರನಿರೂಪಿಸಿದ ಶ್ರೀ ಅಪ್ಪಾಸಾಹೆಬ ಪಟವರ್ಧನ ರತ್ನಾಗಿರಿ ಅವರು ಅಭಿಪ್ರಾಯಪಟ್ಟಿದ್ದಾರೆ. ಅದು ಹೀಗೆ: ದೊಡ್ಡ ಶ್ರೀಮಂತರು ಅಥವಾ ಸಣ್ಣ ಶ್ರೀಮಂತರು ಒಂದುವರುಷದ ತಮ್ಮ ವ್ಯವಹಾರಕ್ಕೆ ಬೇಕಾಗುವಷ್ಟೇ ನೋಟುಗಳನ್ನು ಹೊಸತು ಮಾಡಿಸಿಕೊಂಡು ಉಳಿದ ಎಲ್ಲ ಹಣ ಸರಕಾರದಕಡೆಗೆ ಬಡ್ಡಿ ಇಲ್ಲದ ಠೇವು ಅಂತ ಇಡಬಹುದು. ತಿರುಗಿಪಡೆಯುವ ಹಣ ಕ್ಕಷ್ಟೇ ಕಮಿಶನ ಕೊಡಬೇಕಾಗುವದು. ಈ ರಿಯಾಯತಿ ಕೊಟ್ಟಿದ್ದಾದರೆ ಯಾರೂ

ತಮ್ಮ ಹಣ ಮುಳುಗಿತೆಂದು ಎದೆ ಒಡೆದುಕೊಳ್ಳುವ ಕಾರಣ ಉಳಿಯುವದಿಲ್ಲ. ಇಟ್ಟ ಲ್ಲಿಯೇ ನೋಟುಗಳು ರದ್ದಾಗುವದರಿಂದ ಶ್ರೀಮಂತರು ತಮ್ಮ ಸಂಗ್ರಹದಲ್ಲಿದ್ದ ನೋಟು ಗಳನ್ನು ಕ್ಯೂ ಹಚ್ಚಿ ನಾಮುಂದೆ ನೀಮುಂದೆ ಎಂದು ಆತುರದಿಂದ ಸರಕಾರದಕಡೆಗೆ ತಂದು ಖಂಡಿತವಾಗಿ ಒಪ್ಪಿಸುವರು. ಈ ರೀತಿ ಬಂಡವಲಗಾರರ ಹತ್ತರ ಶಿಲಕು ಇರುವ ಎಲ್ಲ ನೋಟು ನಿಧಿಯ ಪ್ರಚಂಡವಾದ ಹಣ ಸರಕಾರಕ್ಕೆ ಬಡ್ಡಿ ಇಲ್ಲದೆ ಸಿಗುವದಿಂದ ಅದೇ ಹಣವನ್ನು ಸರಕಾರವು ನೂರಕ್ಕೆ ಒಂದೇ ಒಂದು ರೂಪಾಯಿಯು ನಾಮಮಾತ್ರ ಬಡ್ಡಿಯಿಂದ ಬ್ಯಾಂಕುಗಳಿಗೆ ಸಾಲ ರೂಪದಿಂದ ಕೊಡಬಹುದು. ಮತ್ತು ಬ್ಯಾಂಕುಗಳು ಜನರಿಗೆ–ಬಡವರಿಗೆ ತಮ್ಮ ಆಡಳಿತವೆಚ್ಚದ ನಾಮಮಾತ್ರ ಇನ್ನೊಂದು ರೂಪಾಯಿ ಸೇರಿಸಿ ನೂರಕ್ಕೆ ಎರಡರಂತೆ ಬಡ್ಡಿಯಿಂದ ಸಾಲ ಕೊಟ್ಟಿದ್ದಾದರೆ ಮಾತ್ರ ಗರಿಬಿ ಹಟಾವ ಆದೀತು ನೂರಕ್ಕೆ ೧೨ ರ ಬಡ್ಡಿಯಿಂದ ಬ್ಯಾಂಕುಗಳು ಸಾಲ ಕೊಡುತ್ತಿರುವ ಈಗಿನ ಪದ್ಧತಿಯಿಂದ ಮತ್ತು ನೂರಕ್ಕೆ ೩೦೦ ಬಡ್ಡಿಯಿಂದ ಪ್ರತಿಹಳ್ಳಿಯಲ್ಲಿಯೂ ನಡೆದ ಸಾವುಕಾರರ ವಾರದ ಬಡ್ಡಿಯ ಪದ್ಧತಿಯಿಂದಾಗುವ ಶೋಷಣೆಯಿಂದ ಜನರನ್ನು, ಬಡವರನ್ನು ಮುಕ್ತ ಮಾಡಬಹುದು. ಆಗ ಮಾತ್ರ–ಒಂದೇ ಕಲ್ಲಿನಿಂದ ಎರಡು ದುಷ್ಟ ಶಕ್ತಿಗಳನ್ನು ಅಂದರೆ ಬಂಡವಲಶಾಹಿ ಮತ್ತು ದರಿದ್ರ ರಾಕ್ಷಸ ಇವರಿಬ್ಬರನ್ನು ಇಲ್ಲದಂತೆ ಮಾಡಿ ನಿಜವಾದ ಸಮತಾ ರಾಜ್ಯ ಸ್ಥಾಪಿಸಬಹುದು.

ಇಂಥ ಅತ್ಯಂತ ಪ್ರಭಾವಿ, ಅತ್ಯಂತ ಕ್ರಾಂತಿಕಾರಿ, ಆದರೆ ಅಷ್ಟೇ ಸುಲಭ ಕ್ರಮ ಕೈಕೊಳ್ಳುವದನ್ನು ಬಿಟ್ಟು ಗರಿಬಿ ಹಟಾವದ ಪೊಳ್ಳು ಘೋಷಣೆ ಮಾಡುತ್ತ ನೂರಾರು ಪರುಷ ನಡೆದರೂ ಯಾವ ಉಪಯೋಗವೂ ಆಗಲಾರದೆಂದು ಈ ಮಂತ್ರದ ದೃಷ್ಟಾರ ರಾಗಿದ್ದ ದಿವಂಗತ ಅಪ್ಪಾ ಸಾಹೇಬ ಪಟವರ್ಧನರು ಪ್ರತಿಪಾದಿಸಿದ್ದಾರೆ. ಜನರು ಸರಕಾ ರಕ್ಕೆ ನೋಟು ಕೊಡಬೆ ಬಂಗಾರದ ರೂಪದಲ್ಲಿ ಅದನ್ನು ಕೊಂಡು ಸಂಗ್ರಹಿಸಿ ಇಡ ಬಹುದು ಇವೇ ಮುಂತಾಗಿ ನಿರರ್ಥಕ ಸಂಶಯಗಳಿಗೆಲ್ಲ ಅತ್ಯಂತ ಸಮರ್ಪಕವಾಗಿ ತಮ್ಮ ಪುಸ್ತಕದಲ್ಲಿ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಅಪ್ಪಾ ಸಾಹೇಬರೆಂದರೆ ಅದ್ವಿತೀಯ ತ್ಯಾಗದ, ಅನುಪಮ ದೇಶಭಕ್ತಿಯ ಅಪ್ರತಿಹತ ಬುದ್ಧಿವಂತಿಕೆಯ ಮತ್ತು ಅಲೌಕಿಕ ಚಾರಿತ್ರ್ಯ ಶುದ್ಧಿಯ ಮೂರ್ತಿಯೇ ಆಗಿದ್ದರು. ೧೯೨೦ ರ ಅಸಹಕಾರ ಆಂದೋಲನದಲ್ಲಿ ಪ್ರೊಫೆಸರ ಹುದ್ದೆಗೆ ರಾಜೀ ನಾಮೆಸಲ್ಲಿಸಿ ಅಂದಿನಿಂದ ಕೊನೆಯವರೆಗೆ ನಡೆದ ಪ್ರತಿಯೊಂದು ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಭಾಗವಹಿಸಿ ಮಹಾರಾಷ್ಟ್ರದ ಗಾಂಧಿ ಎಂಬ ಸಾರ್ಥಕನಾಮ ಪಡೆದು ಪ್ರಸಿದ್ಧಿಗೆ ಬಂದಿದ್ದ ಮಹಾನ್ ದೇಶಭಕ್ತರು ಅವರಾಗಿದ್ದರು ! ಇಂಥ ಮಹಾತ್ಮರು ತೋರಿಸಿದ ದಾರಿ ನಮ್ಮ ಸರಕಾರಕ್ಕೆ ಹುಚ್ಚತನದ್ದಾಗಿ ಕಾಣಿಸುತ್ತಿರುವದು ದೇಶದ ದುರ್ದೈವ ! ಇಂದಿಲ್ಲ ನಾಳೆ ಜನತೆಗೂ ಸರಕಾರಗಳಿಗೂ ವಿವೇಕೋದಯವಾದೀತೆಂಬ ಭರವಸೆಯನ್ನು ಅವರು ತಾಳಿದ್ದರು.

ಈ ಪ್ರಕರಣ ಬರೆಯುತ್ತಿರುವಾಗಲೇ ಇಂಥ ವಿವೇಕೋದಯವಾಗುತ್ತಿರುವ ಒಂದು ಅತ್ಯಂತ ಶುಭಸೂಚನೆಯೂ ದೇಶದಲ್ಲಿ ಒಂದುಕಡೆಗೆ ಕಾಣಹತ್ತಿದ್ದು ಭವಿಷ್ಯದ ಬಗ್ಗೆ ಆಶೆಯನ್ನು ಹುಟ್ಟಿಸುವಂಥದ್ದಾಗಿದೆ. ಅದೆಂದರೆ ಮದ್ರಾಸ ರಾಜ್ಯ ಸರಕಾರವು ಇತ್ತಿತ್ತಲಾಗಿ ಸುರುಮಾಡಿದ್ದ ಸೆರೆ ಸಿಂದಿ ಅಂಗಡಿಗಳನ್ನು ಮತ್ತೆ ಮುಚ್ಚಿ ಬಿಡುವ ನಿರ್ಣಯಕ್ಕೆ ಬಂದ ಸುದ್ದಿವೃತ್ತ ಪತ್ರಿಕೆಗಳಲ್ಲಿ ಪ್ರಸಿದ್ಧವಾದದ್ದು. ಬಡವರ ನಿಜವಾದ ಕಳಕಳಿ ಇದ್ದವರು ಈ ದಾರಿಗೆ ಬರಲೇ ಬೇಕಾಗುವದು. ನಮ್ಮ ಕಾಂಗ್ರೆಸ ಸರಕಾರಗಳು ದ್ರಾಮುಕ ಸರಕಾರದ ನೀತಿಯಿಂದಾದರೂ ಬುದ್ಧಿಕಲಿಯಲೆಂದು ಹಾರೈಸೋಣ.

ನಿರ್ಧಾರದಿಂದ ಕಾರ್ಯ ಪ್ರವೃತರಾಗಬೇಕು.

ಕೆಲವು ಅತ್ಯಂತ ಮಹತ್ವದ ಸಂಗತಿಗಳನ್ನು ಸಾಧಿಸಿಯೇ ತಿರುವೆವೆಂಬ ನಿರ್ಧಾರ ಬೇಕು. ಶ್ರದ್ಧೆ ಬೇಕು. ಶುಷ್ಕವಾದ ಹಾಳು ಹರಟೆ ಒಣ ಟೀಕೆ ನಿಲ್ಲಬೇಕು. ಅಂದರೆ ನಮ್ಮ ನಿಜವಾದ ಪ್ರಗತಿಯಾದೀತು. ಮತ ದೊರಕಿಸುವದಕ್ಕಾಗಿ ಹುರುಳಿಲ್ಲದ ಪೊಳ್ಳು ಘೋಷಣೆ ಮಾಡಿ ಈ ಕಾರ್ಯವಾಗಲಾರದು. ನಮ್ಮ ಯುವಕರು ಈ ಬಗ್ಗೆ ಗಂಭೀರವಾಗಿ ವಿಚಾರಿಸದಿದ್ದರೆ ಅವರ ಭವಿಷ್ಯ ಹಾಗೂ ದೇಶದ ಭವಿತವ್ಯ ಕತ್ತಲಲ್ಲಿಯೇ ಉಳಿದೀತು.

ಪಾನ ಪ್ರತಿಬಂಧ ಆಗಲಿ

ಅತ್ಯಂತ ಮಹತ್ವದ ಮೊದಲನೇ ವಿಷಯ ಪಾನಪ್ರತಿಬಂಧ. ಈ ವಿಷಯವನ್ನು ಎತ್ತುವದೇ ತಡ ತಾವು ಸುಶಿಕ್ಷಿತರೆಂದು ತಿಳಿದುಕೊಂಡಿರುವ ಅಶಿಕ್ಷಿತರೋ, ಅರ್ಧಶಿಕ್ಷಿತರೋ ಅಥವಾ ಕುಶಿಕ್ಷಿತರೋ, ಒಮ್ಮಲೆ ಇದು ಶಕ್ಯವಿಲ್ಲ, ಮಾಡಿ ನೋಡಿದ್ದಾಯಿತು ಇದು ಯಶಸ್ವಿಯಾಗಲಾರದು, ಎಂಬ ನಿರಾಶೆಯ ನಿಟ್ಟುಸುರು ಎಳೆಯುವದು, ಅವರ ವಿಚಾರಸರಣಿಯಲ್ಲಿಯೇ ಖಂಡಿತವಾಗಿ ದೋಷವಿದೆ ಯೆಂಬುದನ್ನು ಇಲ್ಲಿ ತೋರಿಸ ಬೇಕಾಗಿದೆ. ಪಾನಪ್ರತಿಬಂಧವು ಆಯೋಗ್ಯವೆಂದು ಯಾರು ಅನ್ನುವದಿಲ್ಲ. ಆದರೆ ಅದರ ಮೇಲೆ ಶ್ರದ್ಧೆಯಿಲ್ಲದ್ದರಿಂದ ಅವರ ನಿರಾಶೆವಾಗಿದೆ. ಪ್ರಾಚೀನಕಾಲದಿಂದಲೂ ಮಾದಕ ಪದಾರ್ಥ ಸೇವನೆ ನಡೆಯುತ್ತಲೇ ಬಂದಿರುವದರಿಂದ ಅದನ್ನು ನಿಲ್ಲಿಸುವಮ ಸಾಧ್ಯವಿಲ್ಲ ವೆಂಬದು ಅವರ ಮೊದಲನೇ ಆಕ್ಷೇಪ. ಈ ಆಕ್ಷೇಪದಲ್ಲಿ ಯಾವ ಹುರಳೂ ಇಲ್ಲ. ಬಹುದಿನಗಳಿಂದ ನಡೆಯುತ್ತ ಬಂದ ಕೆಟ್ಟರೂಢಿ ಕೆಟ್ಟ ನಿಯಮಗಳೆನ್ನು ಈಗ ನಾವು ತಿದ್ದುವ, ನಿಲ್ಲಿಸುವ ಪ್ರಯತ್ನ ಮಾಡಬಾರದೇ ? ಹಾಗಾದರೆ ನಮ್ಮ ದೇಶದ ನೂರಕ್ಕೆ

೯೦ ರಷ್ಟು ಜನರ ರಕ್ತಮಾಂಸಗಳಲ್ಲಿ ನೆಲೆಯೂರಿದ ಅಸ್ಪೃಶ್ಯತೆಯನ್ನು ಹಾಗೆಯೇ ಉಳಿಯುಗೊಡಬೇಕೇ ? ವೈಯಕ್ತಿಕ ಒಡೆತನದ ಮೋಹವನ್ನು, ಅದಕ್ಕೆ ಬಂಡವಲಶಾಹಿಯೆನ್ನಿರಿ ಏನೇ ಅನ್ನಿರಿ, ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕೇ ? ಎಷ್ಟೇ ಪ್ರಯತ್ನ ಮಾಡಿ ಕೆಟ್ಟರೂಡಿಗಳನ್ನು ವಿಚಾರಗಳನ್ನು ಇಲ್ಲದಂತೆ ಮಾಡಲೇ ಬೇಕು ಇಷ್ಟಾಗಿಯೂ ಅವು ನೂರಕ್ಕೆ ನೂರರಷ್ಟು ನಾಶವಾಗಲಿಕ್ಕಿಲ್ಲ. ತುಸು ತುಸು ಉಳಿಯು ಬಹುದಾದರೂ ನಿರಾಶೆ ಏಕೆ ? ಕಳವು ಕೊಲೆ ಸುಲಿಗೆಗಳಿಗೆ ಶಿಕ್ಷೆ ಕೊಡುತ್ತಿರುವದು ಆದಿಯಿಂದ ನಡೆಯುತ್ತ ಬಂದಿದ್ದರೂ ಸಂಪೂರ್ಣ ನಿಂತಿಲ್ಲವೆಂಬ ಕಾರಣದಿಂದ ಶಿಕ್ಷೆಯು ಈ ಕಲಮುಗಳನ್ನೇ ರದ್ದು ಪಡಿಸಬೇಕೆಂದು ಯಾವನೇ ಸಮಂಜಸ ವ್ಯಕ್ತಿಯು ಅನ್ನಲಾರ.

ಈ ವಿಷಯದಲ್ಲಿ ಎರಡನೆಯ ಮಹತ್ವದ ಮಾತೆಂದರೆ ನಮ್ಮ ಸದ್ಯವದಿಂದ ಭಾರತೀಯ ಸಂಸ್ಕೃತಿಯಲ್ಲಿ ಪಾನಪ್ರತಿಬಂಧಕ್ಕೆ ಮಹತ್ವದ ಸ್ಥಾನವಿದೆ. ಶ್ರೀ ಶಂಕರಾದಿ ಆಚಾರ್ಯರೂ, ಬಸವಾದಿ ಪ್ರಮಥರೂ, ಬುದ್ಧ, ಪೈಗಂಬರಾದಿ ಧರ್ಮಸ್ಥಾಪಕರೂ, ಮಹಾವೀರರೇ ಆದಿ ತೀರ್ಥಂಕರರೂ ಅತ್ಯಂತ ಕಠೋರವಾಗಿ, ಈ ದುಶ್ಚಟವನ್ನೂ ಖಂಡಿಸಿದ್ದರಿಂದಲೇ ಅವರ ಪ್ರಭಾವದಿಂದ ನಮ್ಮ ದೇಶದಲ್ಲಿ ಬಹಳಷ್ಟು ಜನ ಇನ್ನೂ ಈ ವ್ಯಸನದಿಂದ ಮುಕ್ತರೇ ಆಗಿದ್ದಾರೆ. ನೂರಕ್ಕೆ ೫೦ ರಷ್ಟು ಸಂಖ್ಯೆಯಲ್ಲಿರುವ ಸ್ತ್ರೀಯರೂ ೨೫ ರ ಕ್ಕಿಂತ ಹೆಚ್ಚಿಗೆ ಇರುವ ಮಕ್ಕಳು ಅಂದರೆ ನೂರಕ್ಕೆ ೭೬ರಷ್ಟು ಜನ ಇಂದಿಗೂ ಈ ವ್ಯಸನದಿಂದ ಮುಕ್ತರೇ ಆಗಿದ್ದಾರೆ. ಉಳಿದ ೨೪ ರಷ್ಟು ಜನರಲ್ಲಿ ಎಲ್ಲರೂ ಕುಡಿಯುವರೆಂದು ತಿಳಿಯುವದು ಮೂರ್ಖತನದ್ದಾದೀತು. ನಿಜವಾದ ಸುಶಿಕ್ಷಿತರು, ಸುವಿಚಾರಿಗಳು, ಸುಸಂಸ್ಕೃತರೂ, ನೀತಿವಂತರೂ, ಮರ್ಯಾದೆಯುಳ್ಳವರೂ ಕುಡಿಯುವದಿಲ್ಲ. ಇವರ ಪ್ರಮಾಣ ನಿಸ್ಸಂಶಯವಾಗಿ ಈ ೨೪ ರಲ್ಲಿ ೧೪ ಇದೆ. ಅಂದಮೇಲೆ ಕೇವಲ ನೂರಕ್ಕೆ ೧೦ ರಷ್ಟೇ ಜನರು ಮಾತ್ರ ಸದ್ಯ ಈ ವ್ಯಸನದಲ್ಲಿರುವರೆಂದೆಂಬದು ಸ್ಪಷ್ಟವಾಯಿತು. ನೂರಕ್ಕೆ ೯೦ ರಷ್ಟು ಜನರು ಸಹ ಮೈಮೆಲೆ ಅರಿವು ಇದ್ದಾಗ ಈ ಚಟಕೆಟ್ಟಿದ್ದಿಂತಲೇ ಒಪ್ಪುವದರಿಂದ ಅವರ ಅಪ್ರತ್ಯಕ್ಷ ಬೆಂಬಲವೂ ಇರುವಾಗ ನಮ್ಮ ಸರಕಾರಗಳಿಗೆ ಇದನ್ನು ಯಶಸ್ವಿ ಮಾಡಲು ಆಗುವದಿಲ್ಲವೆಂದು ತಿಳಿಯುವದು ಶುದ್ಧ ಆತ್ಮವಂಚನೆ ಆದೀತು. ನೂರಕ್ಕೆ ೯೦ ರಷ್ಟು ಜನರಂತೂ ಪೂರ್ಣಬೆಂಬಲ ಮನಸ್ಸಿನಿಂದ ಕೊಡುವಾಗ ಈ ಕೆಟ್ಟ ಚಟ ನಿರ್ನಾಮ ಮಾಡಲು ಆಗದೆಂದು ಹೇಳುವ ಸರಕಾರಕ್ಕೆ, ಮುಖಂಡರಿಗೆ, ವೃತ್ತಪತ್ರ ಸಂಪಾದಕರಿಗೆ, ಸುಶಿಕ್ಷಿತರೆಂಬ ಭ್ರಮೆಯಲ್ಲಿರುವ ಅರಣ್ಯ ಪಂಡಿತರಿಗೆ ಅಸ್ಪೃಷ್ಯತಾ ನಿವಾರಣೆ ಯಾಗುವದು ಸಾಧ್ಯವೆಂದು ಅನ್ನಲು ಹೇಗೆ ಬಂದಿತು ? ಮೇಲಿನಂತೆ ಅಂಕಿಸಂಖ್ಯೆಗಳಿಂದ ಹೇಳುವದಾದರೆ ನೂರಕ್ಕೆ ೫೦ ರಷ್ಟು ಸ್ತ್ರೀಯರೂ, ೨೫ ರಷ್ಟು ಮಕ್ಕಳೂ ೧೪ ರಷ್ಟು ಮಡಿವಂತರೂ ಶೀಲವಂತರೂ ಈ ಕ್ಷಣಕ್ಕೂ ಅಸ್ಪೃಶ್ಯತೆಯು ಅನಿವಾರ್ಯವೆಂದು ತಿಳಿಯುವದಿಲ್ಲವೇ ? ಆದರೂ ಈ ಕೆಟ್ಟಕಲಂಕ ಈ ಅನಿಷ್ಟ ರೂಢಿ ನಿರ್ನಾಮ ಮಾಡುವ ಪ್ರಯತ್ನ

ಮಾಡುತ್ತೆವೆಲ್ಲವೇ ? ಅದನ್ನು ಮಾಡಲೇ ಬೇಕು. ಅತ್ಯಂತ ತೀವ್ರವಾಗಿ ಮಾಡಬೇಕು. ಆಂದಮೇಲೆ ಪಾನಪ್ರತಿಬಂಧವೇಕೆ ಯಶಸ್ವಿಯಾಗಲಿಕ್ಕಿಲ್ಲ ? ಆಗಲೇಬೇಕೆಂಬ ಶ್ರದ್ಧೆ ಸರಕಾರದ್ದಾಗಿರೆ ಆಗಿಯೇ ತೀರುವದು.

ಕುಡಿಯುವವರಿಗೆ ಕಠಿಣ ಶಿಕ್ಷೆ

ಭಾರತೀಯರಾದ ನಮ್ಮ ಮನಸ್ಸು ಕಾಯದೆಗೆ ಶಿಕ್ಷೆಗೆ ಅಂಜುವ ಮನಸ್ಸಾಗಿದೆ. ಕಠೋರ ಕಾಯೆದೆ ಮತ್ತು ದಕ್ಷಕಾರ್ಯಾಚರಣೆಯಿಂದ ತೀರ ಕಡಿಮೆ ಅವಧಿಯಲ್ಲಿ ಈ ದುಶ್ಚಟ ಇಲ್ಲದಂತೆ ಮಾಡಬಹುದು. ಒಂದೆರಡು ರೂಪಾಯಿ ದಂಡ, ಕೋರ್ಟು ಏಳುವವರೆಗಿನ ಶಿಕ್ಷೆ ಮಾಡಿ ಹುಡುಗಾಟಕೆಯಿಂದ ನಡೆದರೆ ಇದನ್ನು ಸಾಧಿಸಲಾಗದು.

ಕುಡಿದವನಿಗೆ ಕನಿಷ್ಠ ೬ ತಿಂಗಳ ಶಿಕ್ಷೆ ಮತ್ತು ೫೦೦ ರೂ. ದಂಡ ಮತ್ತು ಭಟ್ಟಿ ಸೆರೆ ಮಾಡುವವರಿಗೆ ಕನಿಷ್ಠ ೨ ವರ್ಷ ಶಿಕ್ಷೆ ಮತ್ತು ಎರಡು ಸಾವಿರದ ದಂಡ ವಿಧಿಸುವ ದಾದರೆ ಒಂದೇ ವರುಷದಲ್ಲಿ ಈ ಸುರಾರಾಕ್ಷಸನು ನಿರ್ನಾಮವಾಗಬಹುದು. ದಂಡ ವಸೂಲ ಮಾಡುವಾಗ ಯಾವದೇ ಸವಲತ್ತು ತೋರಿಸದೆ ಮನೆ ಮಾರು ಕಾಳು ಕಡಿ, ದನಕರ ಬಟ್ಟೆಬರೆ ಪಾತ್ರೆ ಸಹ ಜಪ್ತಿ ಮಾಡಿದರೆ ಅದರ ಪರಿಣಾಮ ವಿಲಕ್ಷಣವಾದೀತು. ಹೇಡಿ ಸರಕಾರವೆಂದು ಕೇಡಿಗಳು ಆಡಿಕೊಳ್ಳುವ ಈ ಸರಕಾರದಿಂದ ಈ ಕೆಲಸ ಆಗದಿದ್ದರೆ ಈ ಸರಕಾರ ಕಿತ್ತಿ ಒಗೆಯುವ ವಿಶ್ವಾಸ ನಮ್ಮ ತರುಣರಿಗೆ ಬೇಕು. ೧೯೨೨ ರ ಆಂದೋಲನವನ್ನು ಆಗಿನ ಸರಕಾರ ಕೇವಲ ದಂಡದ ಹೆದರಿಕೆಯಿಂದಲೇ ನಿಲ್ಲಿಸಿಬಿಟ್ಟಿತ್ತು. ಅದು ಸ್ವರಾಜ್ಯದ ಚಳವಳಿಯಾಗಿತ್ತು. ಎಲ್ಲರ ಸಹಾನುಭೂತಿಯೂ ಇತ್ತು. ಆದರೂ, ಅದು ದಂಡದ ಭಯದಿಂದ ನಿಂತುಹೋಯಿತು. ಪಾನಪ್ರತಿಬಂಧಕ್ಕೆ ಇಡೀ ಜನತೆಯ ಬೆಂಬಲವಿರುವಾಗ ಅದು ಯಶಸ್ವಿ ಆಗಲೇ ಬೇಕು. ಆದರೆ ಅಂಥ ಶ್ರದ್ಧೆ ಬೇಕು ಸರಕಾರಕ್ಕೆ. ಅದು ಇರದಿದ್ದರೆ ಅಂಥ ಸರಕಾರವನ್ನು ಕಿತ್ತಿಹಾಕುವ ಹುಮ್ಮಸ ಬೇಕು ತರುಣರಿಗೆ. ನಿಷ್ಕ್ರಿಯರಿಂದ ಯಾವಸಿದ್ಧಿಯೂ ಆಗಲಾರದು, ಯಾವದೇಶವೂ ಪ್ರಗತಿ ಹೊಂದಲಾರದು.

ಭಯಸೂಚಕ ಗಂಟೆ

ಒಂದೇಒಂದು ಭಯಸೂಚಕ ಗಂಟೆ ಬಾರಿಸಿ ಈ ವಿಷಯ ಮುಗಿಸೋಣ. ನೂರಕ್ಕೆ ೧೦ ರಷ್ಟು ಕುಡಕರು ಬರಬರುತ್ತ ಬೆಳೆಯುತ್ತಿದ್ದಾರೆ. ಕಾಲೇಜ ವಿದ್ಯಾರ್ಥಿಗಳಲ್ಲಿ ಈ ಚಟ ಭರದಿಂದ ಪ್ರಸಾರವಾಗಹತ್ತಿದೆ. ಅಧಿಕಾರಿಗಳೂ ಮಂತ್ರಿಗಳೂ ಮೈಮೇಲೆ ಅರಿವು

ಇಲ್ಲದೆ ಈ ಚಟಕ್ಕೆ ಬಲಿ ಬೀಳಹತ್ತಿದ್ದಾರೆ. ಸುರಾಪಾನವು ಒಂದು ಫ್ಯಾಶನ್ ಆಗಹತ್ತಿದೆ. ಶಿಷ್ಟತನದ ಮುದ್ರೆ ಅದಕ್ಕೆ ಬೀಳಹತ್ತಿದೆ. ಮಾನವನನ್ನು ದಾನವನನ್ನಾಗಿ ಮಾಡುವ, ನೀತಿಯ ನೆಲಗಟ್ಟಿನ್ನೇ ಹಾಳುಮಾಡುವ ಈ ಮಹಾಭಯಂಕರ ಚಟದ ಕಡೆಗೆ, ರೋಗದ ಕಡೆಗೆ ದುರ್ಲಕ್ಷಮಾಡಿ ದೇಶದ ಪ್ರಗತಿಯಾಗಲಾರದು, ಕಲ್ಯಾಣವಾಗ ಲಾರದು. ಅಂತೆಯೇ ಗಾಂಧೀಜಿಯವರು ಈ ಬಗ್ಗೆ ಕರಳು ಹರಿದುಕೊಂಡು ಹೇಳಿದರು. ಪಾನಪ್ರತಿಬಂಧ ಕಠೋರವಾಗಿ ಅನುಷ್ಠಾನಕ್ಕೆ ತರದಿದ್ದರೆ ಗರೀಬಿ ಹಟಾವೂ ಘೋಷಣೆ ಶುದ್ಧ ಬಡಬಡಿಕೆಯಾದೀತು ! ಒಂದು ಬರಿದಾದ ಹೌದಿನಲ್ಲಿ ಒಂದು ಇಂಚಿನ ಪಾಯಿಪದಿಂದ ನೀರು ಬಿಟ್ಟು ಅದರ ಕೆಳಗೆ ಇರುವ ಎರಡು ಇಂಚಿನ ತೂತು ಮುಚ್ಚಿ ದಿದ್ದರೆ ಎಷ್ಟೇ ಎಂಜಿನ್‌ಸುಟ್ಟರೂ, ಇಂಜನ್ ಸವೆದರೂ, ಆ ಚಿಕ್ಕ ಹೌದು ಹೇಗೆ ತುಂಬ ಲಾರದೋ ಅದೇರೀತಿ ದುರ್ವ್ಯಸನಗಳಿಗೆ ಹಾಳಾಗಿ ಹೋಗುವ ಹಣ ನಿಲ್ಲಿಸದಿದ್ದರೆ ಬಡವರು ಆದಾಯ ಬೆಳಿಸಿಕೊಂಡರೂ ಅವರ ಬಡತನ ಹಿಂಗಲಾರದು. ದಿನಾಲು ಆರೆಂಟು ರೂಪಾಯಿ ಗಳಿಸುವ ಕೂಲಿಯವನು ಮನೆಗೆ ಬರುವಾಗ ದುರ್ವ್ಯಸನಗಳಲ್ಲಿ ಏಳು ರೂಪಾಯಿ ಹಾಳು ಮಾಡಿ ಒಂದೇ ರೂಪಾಯಿ ತರಹತ್ತಿದರೆ ಅವನು ಸಾಯುವ ವರೆಗೂ ಸ್ಥಿತಿವಂತನಾಗುವದಿಲ್ಲೆಂಬ ಚಿತ್ರವನ್ನು ಈ ಹೊತ್ತು ಅನೇಕ ಕಡೆಗೆ ನಾವು ನೋಡುವದಿಲ್ಲವೇ ? ಬಡವರಲ್ಲಿ, ಕೂಲಿಕಾರರಲ್ಲಿಯೇ ಹೆಚ್ಚಾಗಿ ಜನರು ಸುರಾಪಾನಿ ಗಳಾಗಿದ್ದಾರೆ. ಅದಕ್ಕೆ ಸರಕಾರವೇ ದುಡ್ಡಿನ ಆಶೆಗಾಗಿ ಉತ್ತೇಜನಕೊಟ್ಟು ಅವರ ಸ್ಥಿತಿ ಸುಧಾರಿಸಲು ಯೋಜನೆಗಳನ್ನು ಮಾಡುವ ಧೋರಣೆಯು ನಾಯಿಯು ಎಲುಬು ಚಗಳಿಸಿದಂತೆ ವ್ಯರ್ಥವಾಗಹತ್ತಿದೆ. ಎಲುಬಿನಲ್ಲಿ ರಕ್ತವಿರದಿದ್ದರೂ ಅದನ್ನು ಕಟಕರಿ ಸುವಾಗ ತನ್ನ ಹಲ್ಲಿನಿಂದ ಹೊರಡುವ ರಕ್ತವೇ ಆ ಎಲುಬಿಗೆ ಹತ್ತುತ್ತಿದೆ ಎಂಬುದನ್ನು ಅರಿಯದೆ ಅದರ ಚಗಳಿಕೆ ಸಾಗುವಂತೆ ಆಗಿದೆ ಅವರ ಸ್ಥಿತಿ. ಜಗತ್ತಿನ ಯಾವ ದೇಶ ದಲ್ಲಿಯೂ ಈ ಪಾನ–ಪ್ರತಿಬಂಧ ಯಶಸ್ವಿಯಾಗದಿದ್ದರೂ ಅದು ಭಾರತದಲ್ಲಿ ಖಂಡಿತ ವಾಗಿ ಸಾಧಿಸುವಂತೆ ನಮ್ಮ ಹಿನ್ನೆಲೆಯಿದೆ. ಕೆಟ್ಟದ್ದಾದ ಭಟ್ಟಿ ಸೆರೆ ನಿಲ್ಲಿಸುವದಕ್ಕಾಗಿ ಸರಕಾರಿ ಅಂಗಡಿಗಳನ್ನು ತೆರೆಯುವದು ಉಪಾಯವಾಗಲಾರದು. ಎರಡೂ ಕಡೆಗೆ ಕುಡಿತ ನಡೆಯುವದನ್ನು ಈಗ ಅನುಭವದಿಂದ ಗೊತ್ತಾಗಿಲ್ಲವೇ ?

ಸಾವಕಾರಿ ಸಾಲ

ಬಡವರನ್ನು ಹಿಂಡಿ ಹೀರುತ್ತಿರುವ ಇನ್ನೊಂದು ಮಹಾವ್ಯಾಧಿಯ ಕಡೆಗೂ ಯಾರ ಲಕ್ಷ್ಯವಿಲ್ಲದಾಗಿದೆ. ಶ್ರಾವಣ–ಭಾದ್ರಪದಗಳಲ್ಲಿ ಹೊಟ್ಟೆಗಾಗಿ ಒಂದು ನೂರು ರೂಪಾಯಿ ಸಾಲತಂದು ಸುಗ್ಗಿಯಲ್ಲಿ ಅದಕ್ಕಾಗಿ ಒಂದು ಚೀಲ ಜೋಳವನ್ನು ಬಡ್ಡಿಯ ರೂಪದಲ್ಲಿ ಕೊಡುತ್ತಿರುವ ವ್ಯವಹಾರ ಅನಿರ್ಬಂಧವಾಗಿ ಎಲ್ಲಕಡೆಗೆ ನಡೆದಿದೆ. ಇದು ಸರಕಾರಕ್ಕೆ ಗೊತ್ತಿದ್ದರೂ ದೊಡ್ಡದಾದ ಇನ್ನೊಂದು ತೂತು ಮುಚ್ಚದೆ ಬಡವರ ಕಲ್ಯಾಣದ ಮಾತುಸಾಗಿವೆ !

ಕುಟುಂಬ ಯೋಜನೆಯ ಪರಿಣಾಮವು ನಮ್ಮ ಶೀಲವನ್ನೂ ಚಾರಿತ್ರ್ಯವನ್ನೂ ಹರಣ ಮಾಡಿ ಬಿಡಹತ್ತಿದೆ. ಭಾರತದಲ್ಲಿ ಸ್ತ್ರೀ ಪಾವಿತ್ರ್ಯತೆಗೆ ಇದ್ದಷ್ಟು ಮಹತ್ವ ಜಗತ್ತಿನ ಯಾವ ರಾಷ್ಟ್ರದಲ್ಲಿಯೂ ಇಲ್ಲದಿರುವದು ನಮ್ಮ ಆರ್ಯ ಸಂಸ್ಕೃತಿಯ ಶ್ರೇಷ್ಠತೆ, ರಾಮಾಯಣ ಮಹಾಭಾರತಗಳು ಇದಕ್ಕೆ ಉದಾಹರಣೆಗಳಾಗಿವೆ. ಅದು ಇಂದು ನಮ್ಮದೇ ಆದ ಸ್ವರಾಜ್ಯದಲ್ಲಿ ಹಾಳಾಗಿ ಹೋಗಹತ್ತಿದೆ. ಸುಶಿಕ್ಷಿತ, ದೊಡ್ಡ ಮನೆತನಸ್ಥರೆಂದು ಹೇಳಿಕೊಳ್ಳುವ ಕಾಲೇಜ ಕುಮಾರಿಯರು ಲಾಜಿಂಗುಗಳಿಗೆ ಅಪರಾತ್ರಿ ಹೋಗಿ ಒಂದೆರಡು ತಾಸು ವೇಶ್ಯಾವ್ಯವಸಾಯ ಮಾಡಿ ಹಣಗಳಿಸುತ್ತಿರುವ ಭೀಕರ ಚಿತ್ರ ಪಟ್ಟಣಗಳಲ್ಲಿ ಇಂದು ನೋಡಹತ್ತಿದ್ದೇವೆ ಈ ನಮ್ಮ ಸ್ವರಾಜ್ಯದಲ್ಲಿ !

ದುಡಿಯದ ದೊಡ್ಡಪ್ಪ

ವಿಷಮತೆಯು ಇಂದು ವಿಪರೀತವಾಗಿ ಬೆಳೆಯುತ್ತಿದೆ. ಶ್ರೀ ಸಾಮಾನ್ಯನ ಆದಾಯದ ಬಹಳವಾದರೆ ೧೦, ೨೦, ಪಟ್ಟಿಗಿಂತ ಹೆಚ್ಚಿಗೆ ಆದಾಯ ಯಾರಿಗೂ ಇರಬಾರದೆಂದು ಬಾಯಿಯಿಂದ ಜಪ ಮಾಡುತ್ತ ಈ ಅಂತರವನ್ನು ೫೦೦ ಪಟ್ಟಿಗೆ ಹೆಚ್ಚಿಸಲಾಗಿದೆ. ಜೂಜಾಟಿಗೆ ಪ್ರತ್ಯಕ್ಷವಾಗಿ ಸರಕಾರ ಉತ್ತೇಜನ ಕೊಡಹತ್ತಿದೆ. ದುಡಿಯದೇ ದುಡ್ಡು ಗಳಿಸಿ ದೊಡ್ಡವನಾಗಲು ಸರಕಾರವೇ ಆಸ್ಪದ ಮಾಡಿಕೊಟ್ಟಿದೆ. ಬಡವರ ಉದ್ಧಾರದ ಮಾತು ಹೇಳುವ ಯಾವ ಮುಖಂಡರೂ ಅವರಿಗೆ ೮ ತಾಸು ಪ್ರಾಮಾಣಿಕತನದಿಂದ ದುಡಿಯಲು ಹೇಳುವದಿಲ್ಲ. ಮೈಗಳ್ಳ, ಅಪ್ರಾಮಾಣಿಕ, ವ್ಯಸನಿ, ಚಾರಿತ್ರ್ಯಹೀನ ಸಮಾಜವು ಮೇಲೆ ಬರುವದು ಸಾಧ್ಯವಿಲ್ಲ. ತನ್ನ ಉಚ್ಚ ಸಂಸ್ಕೃತಿಯನ್ನು ತನ್ನತನವನ್ನು ಕಾಯ್ದುಕೊಳ್ಳದ, ಅಜ್ಞಾನ ದಾರಿದ್ರ್ಯಗಳಲ್ಲಿ ತೊಳಲಾಡುವದನ್ನು ತಪ್ಪಿಸದ ರಾಜ್ಯ 'ರಾಜ್ಯ'ವಲ್ಲ-ಸರಕಾರ ಸರಕಾರವಲ್ಲ ಎಂಬ ಅರಿವು, ಸಿಟ್ಟು, ಕಿಚ್ಚು ತರುಣರಲ್ಲಿ ಬರಬೇಕು. ಅದೇ ಜಾಗ್ರತ ಸಮಾಜದ ಲಕ್ಷಣ. ನಿರ್ದೋಷ ಹೆಣಗಳ ಬದಲು ಸಜೀವ ಹೆಣಗಳಾಗುವದು ತಪ್ಪಿದಾಗಲೇ ಪ್ರಗತಿಸಾಧ್ಯ. ಈ ಪ್ರಗತಿಗಾಗಿಯೇ ಸ್ವರಾಜ್ಯ ಬೇಕಾಗಿತ್ತು. ಅದಕ್ಕಾಗಿಯೇ ಎಲ್ಲ ದೇಶಭಕ್ತರು ದುಡಿದರು ಎಂಬ ಅರಿವು ಉಂಟಾಗಬೇಕು.

ನಿರುದ್ಯೋಗದ ಭೂತ

ನಿರುದ್ಯೋಗತನದ ಭೂತವು ಮಂತ್ರದಿಂದ ಬಿಡಲಾರದು. ಡೋಲುಕೊಟ್ಟು ಅದನ್ನು ಕಡಿಮೆ ಮಾಡಲಾಗದು. ಶಿಕ್ಷಣದಲ್ಲಿಯ ಮೂಲಭೂತ ದೋಷದಿಂದ ಈ ಭೂತವು ದಿನಾಲು ಮತ್ತಿಷ್ಟು ಉಗ್ರವಾಗಹತ್ತಿದೆ. ಮನುಷ್ಯ ಶಕ್ತಿ ವಿಪರೀತವಿದ್ದಲ್ಲಿ ಯಾಂತ್ರೀಕರಣಕ್ಕೆ ಕೇಂದ್ರೀಕರಣಕ್ಕೆ ಮಿತಿಯಿರದಿದ್ದರ ಪರಿಣಾಮ ಇದಾಗಿದೆ. ನಮ್ಮ ಕಾರಖಾನೆಗಳ ಉದ್ಯೋಗಗಳ ವಿಕೇಂದ್ರೀಕರಣವಾದಾಗಲೇ ಈ ಸಮಸ್ಯೆಗೆ ಪರಿಹಾರ

ದೊರಕೀತು. ಅಲ್ಲಲ್ಲಿ ತಹಸೀಲದಾರರಿಗೆ ಬರಗಾಲ ಕಾಮಗಿರಿಗಳನ್ನು ನಡೆಸಲು ಹೇಳುವ ಮಲಮುಪಟ್ಟಿಯಿಂದ ಈ ಮಹಾರೋಗ ನಿಯಂತ್ರಣದಲ್ಲಿ ಬರಲಾರದು. ತಾಲೂಕಿಗೆ ನೂರರಂತೆ ನಿರುದ್ಯೋಗಿಗಳಿಗೆ ಏನಾದರೂ ಒಂದು ಉದ್ಯೋಗ ಹುಡುಕಿ ಕೊಡುವ ಹುಡುಗಾಟಿಕೆ ನಿಲ್ಲಬೇಕು. ಕೋಟ್ಯಾವಧಿ ಜನರ ಸಮಸ್ಯೆ ಬಿಡಿಸುವದಿದೆ ಎಂಬದನ್ನು ಮೊದಲು ನೆನಪಿಟ್ಟು ಯೋಜನೆ ಮಾಡಬೇಕು. ಜವಳಿ ಉದ್ಯೋಗದ ವಿಕೇಂದ್ರಿಕರಣ ಮತ್ತು ಗ್ರಾಮೋದ್ಯೋಗದಲ್ಲಿ ರೂಪಾಂತರಪಾದರೆ ಸುಮಾರು ೩ ಕೋಟಿ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕೀತು. ಈಗ ಭಾರತದ ಎಲ್ಲ ಜವಳಿ ಗಿರಣಿಗಳಲ್ಲಿ ಕೂಡಿ ಬಹಳವಾದರೆ ೧೨ ಲಕ್ಷ ಕಾರ್ಮಿಕರು ತೊಡಗಿದ್ದಾರೆ ಆದರೆ ಅದಕ್ಕಾಗಿ ತೊಡಗಿದ ಬಂಡವಲು ಕನಿಷ್ಟ ಆರು ಸಾವಿರ ಕೋಟಿ ರೂಪಾಯಿ ಇದೆ. ಅಂದರೆ ಒಬ್ಬ ಕೂಲಿಕಾರನಿಗೆ ೫೦ ಸಾವಿರ ರೂಪಾಯಿ ಬಂಡವಲ ತೊಡಗಿದೆ, ಇಷ್ಟೇ ಸಂಖ್ಯೆಯಲ್ಲಿ ಅಂದರೆ ೧೨ ಲಕ್ಷ ಕೂಲಿ ಕಾರರು ತಮ್ಮ ಹೊಟ್ಟೆ ಚನ್ನಾಗಿ ತುಂಬಿಕೊಳ್ಳುತ್ತಿರುವ ಖಾದಿ ಅಂಬರ ಚರಖಾ ಉದ್ಯೋಗದಲ್ಲಿ ಕೇವಲ ೫೦ (ಐವತ್ತು) ಕೋಟಿ ರೂಪಾಯಿ ಮಾತ್ರ ತೊಡಗಿದೆ. ಅಂದರೆ ಒಬ್ಬ ಕೂಲಿಕಾರನಿಗಾಗಿ ೪೫೦ ರೂಪಾಯಿ ಮಾತ್ರ ಬಂಡವಲು ತೊಡಗಿದೆ. ಇವು ಸರಕಾರಿ ಅಂಕಿಗಳು. ೫೦ ಸಾವಿರ ರೂಪಾಯಿ ಬಂಡವಲು ತೊಡಗಿಸಿ ಒಬ್ಬನಿಗೆ ಉದ್ಯೋಗ ಕೊಡುವದು ಸರಿಯೋ ೪೫೦ ರೂಪಾಯಿಯಲ್ಲಿ ಒಬ್ಬನಿಗೆ ಉದ್ಯೋಗ ಹಚ್ಚುವದು ಸರಿಯೋ ಎಂಬದನ್ನು ತೆರೆದ ಮನಸ್ಸಿನಿಂದ ಎಲ್ಲರೂ ವಿಚಾರಿಸಬೇಕು. ಕಾರಖಾನೆಗಳಿಂದ ಗಿರಣಿಗಳಿಂದ ನಿರುದ್ಯೋಗತನ ಬೆಳೆದೀತೇ ವಿನಃ ಕಡಿಮೆಯಾಗಲಾರದು. ಈಗಾಗಲೇ ನಮ್ಮ ದೇಶ ಬಟ್ಟೆಯನ್ನು ನಿರ್ಯಾತ ಮಾಡಹತ್ತಿದೆ. ಪ್ರತಿಯೊಂದು ರಾಷ್ಟ್ರವು ಸ್ವಾವಲಂಬಿಯಾಗಬೇಕೆನ್ನುವ ಸಂಕಲ್ಪ ಮಾಡಿದ ಈ ಕಾಲದಲ್ಲಿ ನಮ್ಮ ನಿರ್ಯಾತ ಇನ್ನು ಕಡಿಮೆಯೇ ಆದೀತು. ಹತ್ತಿಪ್ಪತ್ತು ವರುಷಗಳಲ್ಲಿ ? ಆಗ ಈ ಜವಳಿ ಗಿರಣಿಗಳನ್ನು ಬೆಳೆಯಿಸುವದು ಹುಚ್ಚುತನವಾದೀತು. ಇದನ್ನು ಮುಂಗಡ ತಿಳಿದು ೧೦ ವರುಷದ ಯೋಜನೆಹಾಕಿ ಎಲ್ಲಬಟ್ಟೆ ಗಿರಣಿಗಳನ್ನು ನಿಲ್ಲಿಸಿ ಅದನ್ನು ಗ್ರಾಮೋದ್ಯೋಗದಲ್ಲಿ ರೂಪಾಂತರಿಸಿದರೆ ತೀರ ಕಡಿಮೆ ಬಂಡವಲದಲ್ಲಿ ೩ ಕೋಟಿ ಜನರಿಗೆ ಉದ್ಯೋಗ ಕೊಡಲು ಬರಲಾರದೇ ? ಈಗ ಅಂಬರ ಚರಕದ ನೂಲು ಗಿರಣಿಯ ನೂಲಿನಂತೆಯೇ ನಯವಾಗಿರುವದನ್ನೂ ಇದು ವ್ಯವಹಾರ್ಯ ವಾಗಿದೆ ಯೆಂಬದನ್ನೂ ಅನುಭವದಿಂದ ನೋಡುತ್ತಿದ್ದಾಗ. ಎಳ್ಳಿನಿಂದ ಎಣ್ಣೆ ತೆಗೆಯುವದನ್ನು ವಿಚಾರಿಸದೆ ಉಸುಕಿನಿಂದ ಎಣ್ಣೆ ತೆಗೆಯುವ ಹಪ್ಯಾಸ ಮಾಡಬೇಕೋ ? ಎಂಬದನ್ನು ಶಾಂತ ರೀತಿಯಿಂದ ವಿಚಾರಿಸಬೇಕು. ಇದರಿಂದ ಒಂದೇ ಕಲ್ಲಿನಿಂದ ಎರಡು ಪಕ್ಷಿಗಳನ್ನು ಅಲ್ಲ—ರಾಕ್ಷಸರನ್ನು ಹೊಡೆದಂತಾದೀತು. (ಬಂಡವಲಶಾಹಿಯ ಒಂದು ರಾಕ್ಷಸ ನಿರುದ್ಯೋಗತನ ಇನ್ನೊಂದು ರಾಕ್ಷಸ.) ಇಂಥ ನಿಜವಾದ ಕ್ರಾಂತಿಕಾರಕ ಯೋಜನೆಗಳ ವಿಚಾರ ಮಾಡದೆ ಡೋಲುಕೊಟ್ಟು ಬಡತನ ನಿರುದ್ಯೋಗತನ ನಿವಾರಣೆ ಮಾಡುವ ಡೊಳ್ಳು ಬಾರಿಸುವ ಟೊಳ್ಳುತನ ನೋಡಿ ಖೊಳ್ಳನೆ ನಗೆ ಬರದಿರಲಾರದು. ಮತ್ತು ಸಂಕಟದಿಂದ ಕರಳೂ ಕತ್ತರಿಸುವವು. ನಮ್ಮ ಸರಕಾರಗಳು, ಕ್ರಾಂತಿವೀರರು, ತರುಣರು ಇದನ್ನು ವಿಚಾರಿಸುವರೇ ?

ಇತಿಹಾಸದ ತಿರುವುಮುರುವು !

ಪರಕೀಯ ಸರಕಾರದ ಪ್ರಲಾಪ !

ಇತಿಹಾಸವೆಂದರೆ ಹಿಂದೆ ನಡೆದ ಘಟನೆಗಳ ಪರಿಚಯ. ಹಿಂದೆ ಹೀಗೆ ಆಯಿತು, ನಮ್ಮ ಪೂರ್ವಜರು ಈ ರೀತಿ ನಡೆದರು, ಎಂಬದನ್ನು ಮುಂದಿನ ಪೀಳಿಗೆಯವರು ಅರಿತುಕೊಂಡು ಆದರಿಂದ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಇತಿಹಾಸವು ಸಹಾಯಕವಾಗುವದು. ತಮ್ಮ ಪೂರ್ವಜರ ಬಗ್ಗೆ ಎಲ್ಲರಿಗೂ ಆದರ ಅಭಿಮಾನ ಗಳಿರುವದು ಸ್ವಾಭಾವಿಕ. ಅವರು ತಪ್ಪುಗಳನ್ನು ಮಾಡಿದ್ದರೆ ಆ ತಪ್ಪು ತಮ್ಮಿಂದ ಆಗದಂತೆ ಎಚ್ಚರಿಕೆ ವಹಿಸುವದೂ ಅವರು ಪರಾಕ್ರಮ ತ್ಯಾಗ, ಧೈರ್ಯ, ಸಾಹಸ ಗಳನ್ನು ತೋರಿಸಿ ಮಾನವ ಕುಲದ, ತನ್ನ ದೇಶದ, ತನ್ನ ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸಿದ್ದರೆ ಕೃತಜ್ಞತಾ ಬುದ್ಧಿಯಿಂದ ಅವನ್ನು ಸ್ಮರಿಸಿ ದಾರಿದೀಪ ಮಾಡಿಕೊಂಡು ಮುನ್ನಡೆಯುವದೂ ಇತಿಹಾಸದಿಂದಾಗುವ ಲಾಭ. ಇತಿಹಾಸ ಬರೆಯುವವರು ತಪ್ಪಾಗಿ ಬರೆದರೆ ಅಥವಾ ಅತಿಶಯೋಕ್ತಿಮಾಡಿ ಬರೆದರೆ ಅದೊಂದು ರಾಷ್ಟ್ರೀಯ ಪಾಪವೇ ಆಗುವದು. ಪರಕೀಯ ಸರಕಾರವು ತಾವು ಆಳುವ ದೇಶದ ಇತಿಹಾಸ ಬರೆಯಿಸುವಾಗ ಅವರ ದೃಷ್ಟಿಯು ಹೆಚ್ಚಾಗಿ ತಮ್ಮನ್ನು ಹೊಗಳಿಕೊಳ್ಳುದೂ ಅಂಕಿತ ಜನಾಂಗವನ್ನು ಹೀಯಾಳಿಸುವದೂ ಆಗಿರುತ್ತದೆ.

ಪರಕೀಯ ಬ್ರಿಟಿಶ ಸರಕಾರವು ಭಾರತದ ಇತಿಹಾಸವನ್ನು ಇದೇ ರೀತಿ ಬರೆಯಿಸಿತು. "ಶಿವಾಜಿಗೆ ಓದುಬರಹ ಬರುತ್ತಿದ್ದಿಲ್ಲ. ಅವನು ಪುಂಡನೂ ಸುಲಿಗೆಗಾರನೂ ಆಗಿದ್ದನು" ಎಂದು ನಾವು ಕಲಿಯುವಾಗ ಇತಿಹಾಸದಲ್ಲಿ ಓದಿದ್ದೇವೆ. ಇಂದು ಶಿವಾಜಿ ಮಹಾರಾಜರು ಸ್ವತಃ ಬರೆದ ಹಸ್ತಾಕ್ಷರದ ಪತ್ರಗಳು ದೊರತಿವೆ. ಶಿವಾಜಿ ಮಹಾರಾಜನು ಸ್ವರಾಜ್ಯ ಸ್ಥಾಪನೆಗಾಗಿಯೂ ಪರಕೀಯರ ದುರಾಕ್ರಮಣವನ್ನು ಯುಕ್ತಿಯಿಂದ ಪ್ರತಿ ಭಟಿಸುವದಕ್ಕಾಗಿಯೂ ಪ್ರಾಣ ಸಮರ್ಪಣೆಯ ಭಾವದಿಂದ ಹೋರಾಡಿರುವಾಗ ಇಂಥ ಮಹಾಪುರುಷನನ್ನು ಅಜ್ಞಾನಿಯೆಂದೂ ಪುಂಡಪೋಕರಿಯೆಂದೂ ಬರೆದು ಇತಿಹಾಸ ಪ್ರಸಿದ್ಧಿಸಿದರು.

ಕಲಕತ್ತೆಯ ಕತ್ತಲು ಕೋಣೆಯ ಇತಿಹಾಸವೂ ಇದೇ ರೀತಿಯದಾಗಿದೆ. ಹತ್ತಾರು ಜನರನ್ನುಸಹ ಹಿಡಿಸಲು ಸ್ಥಳವಿರದ ಆ ಕೋಣೆಯಲ್ಲಿ ನೂರೈವತ್ತು ಜನ ಬ್ರಿಟಿಶರನ್ನು ಬಂಗಾಲದ ನವಾಬ ಸುರಾಜ ಉದ್ದೌಲನು ತುಂಬಿ ಅವರು ಉಸಿರುಗಟ್ಟಿ ಸಾಯುವಂತೆ

ಮಾಡಿದನೆಂದು ಆ ಇತಿಹಾಸದಲ್ಲಿ ಬರೆದಿದ್ದಾರೆ. ಒಂದರ ಮೇಲೊಂದರಂತೆ ನೆಲದಿಂದ ಚಪ್ಪರದವರೆಗೆ ಚೀಲಗಳಂತೆ ಹೆಣಗಳನ್ನೊಟ್ಟಿದರೂ ಅಂಥ ಮೂರು–ನಾಲ್ಕು ಕೋಣೆ ಸಾಲದಿರುವಾಗ ಒಂದೇ ಕೋಣೆಯಲ್ಲಿ ಇಷ್ಟು ಜನರನ್ನು ತುಂಬುವದು ತೀರ ಅಶಕ್ಯ ವೆಂದು ಕ್ಷೇತ್ರಫಲ ಘನಫಲದ ಲೆಕ್ಕ ಮಾಡಿ ಪ್ರಸಿದ್ಧ ಇತಿಹಾಸ ಸಂಶೋಧಕರಾಗಿದ್ದ ದಿ. ಜದುನಾಥ ಸರಕಾರರು ಸಿದ್ಧಮಾಡಲಿಲ್ಲವೇ ?

ಟೀಪು ಸುಲ್ತಾನನು ಅತ್ಯಂತ ಹಿಂದೂ ದ್ವೇಷಿಯಾಗಿದ್ದನೆಂದು ನಾವೆಲ್ಲ ಇತಿಹಾಸ ಓದಿದ್ದೇವೆ. ಆದರೆ ವಸ್ತುಸ್ಥಿತಿ ಹಾಗಿದ್ದಿಲ್ಲವೆಂದು ಇತ್ತೀಚೆಗೆ ದೊರತ ಕಾಗದ ಪತ್ರ ಗಳಿಂದ ಸಿದ್ಧವಾಗಿದೆ. ಬ್ರಾಹ್ಮಣ ಜಾತಿಯವರಾದ ಪುಣೆಯ ಪೇಶವೆಯರ ಸೈನ್ಯ ಶೃಂಗೇರಿಯ ಶ್ರೀ. ಶಂಕರಾಚಾರ್ಯರ ಮಠ ಲೂಟಿ ಮಾಡಿದಾಗ ಪೇಶವೆಯವರಿಂದ ಯಾವ ಪರಿಹಾರವೂ ದೊರೆಯದ್ದರಿಂದ ಟೀಪು ಸುಲ್ತಾನನು ಮಠದ ಹಾನಿಯನ್ನು ತುಂಬಿಕೊಟ್ಟನಷ್ಟೇ ಅಲ್ಲ ಮಠಕ್ಕೆ ಏಷ್ಟೋ ಭೂಮಿಗಳನ್ನು ದತ್ತಿಯಾಗಿ ಕೊಟ್ಟನು. ಶ್ರೀರಂಗ ಪಟ್ಟಣದಲ್ಲಿ ೧೭೯೯ ರಲ್ಲಿ ನಡೆದ ಕೊನೆಯ ಮೈಸೂರ ಯುದ್ಧದ ಕಾಲಕ್ಕೆ ಬ್ರಿಟಿಶ ಸೈನ್ಯಗಳು ಪಟ್ಟಣವನ್ನು ಮುತ್ತಿದಾಗ ಟೀಪು ಸುಲ್ತಾನನು ಪಟ್ಟಣದ ಅಧಿದೇವತೆ ಯಾದ ಶ್ರೀರಂಗನಾಥನಿಗೆ ಸಹಸ್ರಾಭಿಷೇಕ ಮಾಡಿಸಿ ತನಗೆ ಜಯ ದೊರೆಯಲೆಂದು ಪ್ರಾರ್ಥಿಸಿದನು. ನಂಜನಗೂಡಿನ ಪ್ರಸಿದ್ಧ ದೇವಾಲಯದಲ್ಲಿ ಅನೇಕ ಶಿವಲಿಂಗ ಗಳಿದ್ದು ಅದರಲ್ಲಿಯ ಒಂದನ್ನು ಟೀಪು ಸುಲ್ತಾನನು ಸ್ಥಾಪಿಸಿದನೆಂದು ಇಂದಿಗೂ ಅಲ್ಲಿಯ ಪೂಜಾರಿಗಳು ಹೇಳುತ್ತಾರೆ.

ಶಿವಾಜಿ ಮಹಾಜನು ಪಟ್ಟಾಭಿಷೇಕ ಮಾಡಿಸಿಕೊಂಡದ್ದು ರಾಯಗಡದಲ್ಲಿ. ಆ ಗಡದ ತಳ ಪ್ರದೇಶದಲ್ಲಿ ಇದ್ದ ಒಂದು ಮಸೀದೆಯನ್ನು ಯಾರೋ ಕೆಡವಿ ಹಾಳು ಮಾಡಿದಾಗ ಶಿವಾಜಿ ಮಹಾರಾಜನು ಅದನ್ನು ಹೊಸವಾಗಿ ಕಟ್ಟಿಸಿಕೊಟ್ಟು ಅದರ ವ್ಯವಸ್ಥಗಾಗಿ ಹೊಸ ದತ್ತಿಯನ್ನೂ ಹಾಕಿಕೊಟ್ಟನು.

ಬ್ರಿಟಿಶರು ಚಳಿ ಪ್ರದೇಶದಿಂದ ಬಂದವರಾದ್ದರಿಂದ ಅವರು ಶೂರರಾಗಿದ್ದಾರೆ. ಭಾರತವು ಉಷ್ಣ ಪ್ರದೇಶವಾಗಿರುವದರಿಂದ ಇಲ್ಲಿಯ ಜನರು ಪುಕ್ಕರೂ ಆಲಸಿಗರೂ ಆಗಿರುತ್ತಾರೆಂದು ಇತಿಹಾಸದಲ್ಲಿ ಬರದದ್ದನ್ನು ನಾವು ಓದಿದ್ದೇವೆ.

ತಮ್ಮ ರಾಜ್ಯ ಆದಷ್ಟು ದಿನ ಹೆಚ್ಚು ಉಳಿಯುವದಕ್ಕಾಗಿ ತಮ್ಮನ್ನು ಹೂಗಳಿ ಕೊಳ್ಳುವ ಮನೋವೃತ್ತಿಯಿಂದ ಪರಕೀಯ ಸರಕಾರಗಳು ಶಾಲೆಯ ಅಭ್ಯಾಸ ಕ್ರಮದಲ್ಲಿ ಚಿಕ್ಕ ಮಕ್ಕಳ ತಲೆಯಲ್ಲ ಸರಕಾರದ ಬಗ್ಗೆ ಆದರ ಹುಟ್ಟಿಸುವದು ಹಾಗು ಸ್ವದೇಶದ ಬಗ್ಗೆ ತಾತ್ಸಾರ ಉಂಟಾಗುವಂಥ ಪಾಠಗಳನ್ನು ಬರೆಯಿಸುವದು ಅವರ ಉದ್ದೇಶವಾಗಿತ್ತು.

೧೯೧೯ ರಲ್ಲಿ ನಾನು ಕನ್ನಡ ೭ನೇ ಇಯತ್ತೆಯಲ್ಲಿ ಕಲಿಯುತ್ತಿದ್ದಾಗ ನಮ್ಮ ಶಿಕ್ಷಕರು "ಹಿಂದುಸ್ತಾನ ದೇಶ ಯಾರದು" ಎಂದು ನಕಾಶದ ಕಡೆಗೆ ಬೊಟ್ಟು ಮಾಡಿ

ಳುತ್ತಿದ್ದಾಗ "ಹಿಂದುಸ್ತಾನ ಬ್ರಿಟಿಶರದು" ಎಂದೇ ತಪ್ಪದೆ ಎಲ್ಲ ವಿದ್ಯಾರ್ಥಿಗಳು ಉತ್ತರ ಕೊಡುತ್ತಿದ್ದೆವು. ಹಿಂದುಸ್ತಾನ ನಮ್ಮದು ಎಂದು ನಮ್ಮ ಶಿಕ್ಷಕರು ಎಂದೂ ಕಲಿಸಲಿಲ್ಲ, ನಾವು ಕಲಿಯಲಿಲ್ಲ. ಇದು ಬ್ರಿಟಿಶರದು ಎಂದೇ ಅವರು ಕಲಸಿದ್ದರಿಂದ ವಿದ್ಯಾರ್ಥಿಗಳೆಲ್ಲ ಅದನ್ನೇ ಉತ್ತರಿಸುತ್ತಿದ್ದರು. ಹಿಂದುಸ್ತಾನವು ನಮ್ಮದು ಎಂದು ಸ್ವಾಭಿಮಾನದಿಂದ ಭಾರತೀಯರಿಗೆ ಕಲಿಸಿದ ಗುರುವು ಲೋಕಮಾನ್ಯ ಟಿಳಕರು. ಈ ರೀತಿ ಪರಕೀಯರು ಬರೆದ ನಮ್ಮ ಇತಿಹಾಸದಿಂದ ನಾವು ನಮ್ಮ ಸ್ವಾಭಿಮಾನ ಮಾರಿ ಕೊಂಡೆವು. ರಾಷ್ಟ್ರಾಭಿಮಾನಕ್ಕೆ ಎರವಾದೆವು.

ಸ್ವಕೀಯ ಸರಕಾರದ ಸತ್ಯಾಪಲಾಪ !

ಇದಾಯಿತು ಪರಕೀಯರ ಕಥೆ. ಸ್ವಾತಂತ್ರ್ಯ ಬಂದಮೇಲೆಯೂ ನಮ್ಮ ಸ್ವತಂತ್ರ ಸರಕಾರಗಳೂ ತಪ್ಪು ಇತಿಹಾಸ, ಸುಳ್ಳು ಇತಿಹಾಸ ಬರೆಯುತ್ತಿರುವದನ್ನು ನೋಡಿದರೆ ನಮ್ಮ ದುರ್ದಿನಗಳು ಇನ್ನೂ ತೀರಿಲ್ಲವೆಂದೇ ಹೇಳಬೇಕು. ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ನಡೆದದ್ದು ೧೯೦೫ನೇ ಇಸವಿಯಿಂದ. ೧೯೨೦, ೧೯೨೩, ೧೯೩೦, ೧೯೩೨, ೧೯೩೪, ೧೯೪೧ ಮತ್ತು ಕೊನೆಗೆ ೧೯೪೨ ಹೀಗೆ ವಿಳುಸಲ ಕಾಂಗ್ರೆಸ್ಸು ಹೋರಾಟ ನಡೆಯಿಸಿತು. ಆಗಾಗ ಕ್ರಾಂತಿಕಾರಕರೂ ಗುಪ್ತ ಸಂಘಟನೆಯಿಂದ ತಮ್ಮ ಪ್ರಾಣಾರ್ಪಣೆ ಮಾಡಿ ಜನತೆಯಲ್ಲಿ ದೇಶಭಕ್ತಿಯನ್ನೂ ವೀರ ಶ್ರೀಯನ್ನೂ ತುಂಬಿದರು. ೧೯೦೮ರ ಚಳವಳಿಯಿಂದ ೧೯೪೨ರ ಕೊನೆಯ ಚಳವಳಿಯ ವರೆಗಿನ 'ಪ್ರತಿಯೊಂದು' ಆಂದೋಲನದಲ್ಲಿ ಭಾಗವಹಿಸಿ ಹೋರಾಡಿದ ಕೆಲವರಾದರೂ ದೇಶಭಕ್ತರೂ ಸ್ವಾತಂತ್ರ್ಯ ವೀರರೂ ನಮ್ಮ ಸುದೈವದಿಂದ ಇಂದಿಗೂ ಜೀವಂತವಿದ್ದಾರೆ. ೧೯೨೦ ರಿಂದೀಚೆಯ ಎಲ್ಲ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರಂತೂ ಹಲವರು ಜೀವಂತ ಇದ್ದಾರೆ. ಇಂಥವರ ಒಂದು ಸಂಪಾದಕ ಮಂಡಲ ಮಾಡಿ ಅವರಿಂದ ಈ ಸ್ವಾತಂತ್ರ್ಯದ ಇತಿಹಾಸವನ್ನು ಬರೆಯಿಸಬೇಕೆಂಬ ವಿಚಾರ ಸರಕಾರಕ್ಕೆ ಬರಲಿಲ್ಲ. ಚುನಾವಣೆಗಳಲ್ಲಿ, ನವಕರಿಗಳಲ್ಲಿ, ಕಮಿಟಿಗಳಲ್ಲಿ ತಮ್ಮ ಕೋಮಿನವರಿಗೇ, ತಮ್ಮ ಸಂಬಂಧಿಕರಿಗೇ ಸ್ಥಾನ ಕೊಡುತ್ತಿರುವ ನಮ್ಮ ಮುಖಂಡರೂ, ಸರಕಾರ ನಡೆಸುವವರೂ ಈ ಇತಿಹಾಸ ಬರೆಯಿಸುವಾಗಲೂ ಅದೇ ದೃಷ್ಟಿಯಿಟ್ಟದ್ದು ಅತ್ಯಂತ ಖಂಡನೀಯ ಸಂಗತಿ

ನಮ್ಮ ಕರ್ನಾಟಕ ಸರಕಾರವು ಲಕ್ಷಾವಧಿ ರೂಪಾಯಿ ವೆಚ್ಚ ಮಾಡಿ ಬರೆಯಿಸಿದ "ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಹೋರಾಟದ ಇತಿಹಾಸ" (ಹಿಸ್ಟರಿ ಆಫ್ ಫ್ರೀಡಮ್ ಮುವ್ಹಮೆಂಟ ಇನ್ ಕರ್ನಾಟಿಕ) ಎಂಬ ಪ್ರಚಂಡ ಇಂಗ್ಲೀಷ ಗ್ರಂಥದ ಗತಿಯೂ ಹೇಗೇ ಆಗಿದೆ. ಅದರಲ್ಲಿ ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಹೋರಾಟದ ಕರ್ಣಧಾರರಾಗಿ ಕಾದಾಡಿದ ಸೇನಾನಿಗಳ ಬಗ್ಗೆ ಅಂತ್ಯತ ಲಘುವಾಗಿ ಬರೆದಿದ್ದು ಚಿಕ್ಕಪುಟ್ಟ ಘಟನೆಗಳಿಗೆ ಹಾಗು ಸ್ವಾತಂತ್ರ್ಯ ಸಂಗ್ರಾಮಕ್ಕೆ ಯಾವ ಸಂಬಂಧವೂ ಇಲ್ಲದ ವ್ಯಕ್ತಿಗೆ ಮತ್ತು ಸಂಬಂಧವಿದ್ದಂಥ ತಮಗೆ ಬೇಕಾದ ಕೆಲವೇ ವ್ಯಕ್ತಿಗಳಿಗೆ ಸಲ್ಲದ ಮಹತ್ವ ಕೊಟ್ಟು, ಹೇರಳ ಸ್ಥಳಾ

ವಕಾಶ ಕೊಟ್ಟು, ಬಹಳ ಬಣ್ಣಿಸಿ ಬರೆಯಲಾಗಿದೆ. ಇದರ ಬಗ್ಗೆ ಒಂದಷ್ಟೇ ಸಂಪುಟದ ಮುನ್ನುಡಿಯಲ್ಲಿ ತಾನು ಬರೆದದ್ದಾಗಿದೆ. ಈ ಪುಸ್ತಕದ ಮಸಿ ಆರಿದ ಕೆಲವೇ ವರ್ಷಗಳಲ್ಲಿ ನಮ್ಮ ಕರ್ನಾಟಕ ಸರಕಾರವು ಅದೇ ರೀತಿಯ ಇನ್ನೊಂದು ಪುಸ್ತಕವನ್ನು (ಅದನ್ನೂ ಇಂಗ್ಲೀಷದಲ್ಲಿ) ಬರೆಯಲು ಉದ್ಯುಕ್ತವಾಯಿತು. ೧೯೬೮ ರ ಜುಲೈ ತಿಂಗಳಲ್ಲಿ ಅದರ ಬಗ್ಗೆ ಸರಕಾರದಿಂದ ನನಗೊಂದು ರಜಿಸ್ಟರ ಪತ್ರ, ಅದರೊಂದಿಗೆ ಒಂದು ಫಾರ್ಸಲು ಬಂದಿತು. ಮೈಸೂರು ಸರಕಾರದ ಸಂಸ್ಕೃತಿ ವಿಭಾಗದ ವಿಶೇಷಾಧಿಕಾರಿ, ನಂ. ೨೯ ವಿಶ್ವನಾಥರಾವರೋಡ, ಮಾಧವನಗರ, ಬೆಂಗಳೂರು, ಇವರಿಂದ ಆ ಪತ್ರ ಬಂದಿದ್ದು ಅದರ ನಂಬರು ೧೦೬೪ / ಎಸ್. ಎಂಡ ಸಿ. ಡಿ. / ಹೂ ಈಜ ಹೂ / ೧೯೬೮--೬೯ ದಿನಾಂಕ ೨೯--೯--೧೯೬೮ / ೧೬--೭--೬೮ ಹೀಗೆ ಇದೆ. ಅದರಲ್ಲಿ ಕೆಳಗಿನಂತೆ ಬರೆಯಲಾಗಿದೆ.

ಶ್ರೀ. ಅಂಣೂಗುರೂಜಿಯವರಿಗೆ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ,, ಯಾರು ಯಾರು " (ಹೂ ಈಜ ಹೂ) ಎಂಬ ಹೆಸರಿನ ಒಂದು ಚಿಕ್ಕ ಪುಸ್ತಕವನ್ನು ಬೇಗನೆ ಸರಕಾರವು ಪ್ರಕಟಿಸತಕ್ಕದ್ದಿದೆ. ನಮ್ಮ ಕಡೆಗೆ ಇದ್ದ ಬೆಳಗಾವಿ ಜಿಲ್ಲೆಯ ೨೦೫ ಸ್ವಾತಂತ್ರ್ಯಹೋರಾಟಗಾರರ ಹೆಸರುಗಳನ್ನೂ, ಅವರವರ ಹೆಸರು ಬರೆದ ಫಾರ್ಮುಗಳನ್ನೂ, ಇದರ ಜೊತೆಗೆ ಕಳಿಸಿದೆ, ಆ ಫಾರ್ಮಿನಲ್ಲಿ ಹೆಸರು, ಊರು, ಆದ ಶಿಕ್ಷೆ ದಂಡ, ಕಷ್ಟನಷ್ಟ, ಪೋಲೀಸರ ಗೋಳಿಬಾರದಲ್ಲಿ ಆದ ಗಾಯ, ಮುಂತಾದ ಬೇರೆ ಬೇರೆ ಕೋಷ್ಟಕಗಳಿವೆ. ಅವನ್ನು ವಿವರವಾಗಿ ತುಂಬಿ ಕೊಡಲು ಯಾರಿಗೆ ಎಲ್ಲಿ ಕಳಿಸಬೇಕು ತಿಳಿಯದಾಗಿದೆ. ತಾವು ಬೆಳಗಾವ ಜಿಲ್ಲೆಯ ಹಳೇ ಕಾರ್ಯಕರ್ತರಿದ್ದು ಪ್ರತಿಯೊಂದು ಹೋರಾಟದಲ್ಲಿ ಪ್ರತ್ಯಕ್ಷ ಭಾಗ ವಹಿಸಿರುವದರಿಂದ ತಮ್ಮ ಕಡೆಯಿಂದ ಎಲ್ಲ ಮಾಹಿತಿ ದೊರೆಯುವದೆಂದು ಕೆಲವು ಆದರಣೀಯ ಮುಖಂಡರು ಹೇಳಿದ್ದರಿಂದ ತಮಗೆ ಈ ಪತ್ರ ಬರೆಯಲಾಗಿದೆ. ಮತ್ತು ಜೊತೆಗೆ ೨೦೫ ಫಾರ್ಮುಗಳನ್ನೂ ಯಾದಿಯನ್ನೂ ಕಳಿಸಲಾಗಿದೆ. ದಯವಿಟ್ಟು ತೀವ್ರ ಎಲ್ಲರ ಬಗ್ಗೆ ಮಾಹಿತಿ ತುಂಬಿ ಕಳಿಸಬೇಕು.

ಈ ಪತ್ರ ಓದಿ ನನಗೆ ಆನಂದವಾಯಿತು. ಈ ಒಳ್ಳೇ ಕೆಲಸದಲ್ಲಿ ನನ್ನಿಂದಾದಷ್ಟು ಸಹಾಯ ಸಲ್ಲಿಸುವ ಇಚ್ಛೆಯಿಂದ ಆ ಹೋರಾಟಗಾರರ ಪಟ್ಟಿ ಓದಿದೆ. ಆ ೨೦೫ ಹೆಸರುಗಳಲ್ಲಿ ಕೇವಲ ೨೦ ಹೆಸರುಗಳು ಮಾತ್ರ ನನ್ನ ಪರಿಚಯದವಿದ್ದವು, ಅವುಗಳಲ್ಲಿ ಅನುಕ್ರಮ ನಂಬರು ೧೧೫, ೧೧೭, ೧೧೮, ೧೧೯, ೧೨೧, ೧೨೨ ಈ ಹೆಸರುಗಳನ್ನು ನೋಡಿ ಸ್ತಿಮಿತನಾದೆ ! ' ಇವರೆಂದು ಸ್ವಾತಂತ್ರ್ಯ ಹೋರಾಟಗಾರರಾದರು ? ' ಎಂದು ನನ್ನಷ್ಟಕ್ಕೆ ನಾನೇ ವಿಚಾರಿಸ ಹತ್ತಿದೆ,

ಅವರಲ್ಲಿ ಒಬ್ಬರಂತೂ ಸಾಯುವತನಕ ಬ್ರಿಟಿಶರ ಬಾಲ ಬಡೆದವರು. ಬಾಲ ಗಂಗಾಧರ ತಿಲಕರಿಗೆ ' ಬಾಳಪ್ಪ ಎಂಬ ಪುಣೆಯ ಹಾರುವ ' ಎಂದು ತಮ್ಮ ವಾರ ಪತ್ರಿಕೆಯಲ್ಲಿ ಬರೆದು ಹೀಯಾಳಿಸಿದ ಬೋಳಪ್ಪನವರು ಅವರು !

ಇನ್ನೊಬ್ಬರು ಕೊನೆಯವರೆಗೂ ಕ್ಯಾಂಗ್ರೆಸ ಸೇರದ ವಕೀಲರು. ಮೂರನೆಯವರು ಮಾಡಿ ಮಾಡಿ ಮುಗಿಸಿ ಕೊನೆಗೆ ಸೂಳಿ ಮುಪ್ಪಾಗಿ ಜೋಗುತಿ ಆದಂತೆ ಆಗತಿ ಕರಾದವರು.

೧೯೪೨ ರ ಅಂದೋಲನದಲ್ಲಿ ಪೋಲೀಸರಿಗೆ ಕೈಮುಗಿದು ಅವರ ಕೃಪೆಯಿಂದ ಕಡೆತನಕ ಹೂರಗೆ ಉಳಿದು ನಮ್ಮ ಸ್ವಯಂ ಸೇವಕರಿಗೆ ಕುಡಿಯಲು ನೀರು ಸಹ ಕೂಡ ದಂಥ ಪುಕ್ಕರು ನಾಲ್ಕನೆಯವರು. ೧೯೪೨ ರ ಕ್ರಾಂತಿಯ ಆರಂಭದಲ್ಲಿ ಜನಸಾಗರವು ಕಚೇರಿಯನ್ನು ಮುತ್ತಿದಾಗ ಮಾಮಲೇದಾರರ ಜೊತೆಗೆ ನಿಂತು ಕಾಂಗ್ರೆಸ್ಸಿಗರಿಗೆ ಬುದ್ಧಿ ಹೇಳಿವರು ಐದನೆಯವರು.

೧೯೪೨ ರಲ್ಲಿ ಬಹುಶ: ಇನ್ನೂ ಹುಟ್ಟಿರದಂಥ ಇನ್ನೊಂದು ವ್ಯಕ್ತಿ ಆರೆನೆಯವರು !

ಹೀಗೆ ಹೆಸರುಗಳನ್ನು ಓದಿದ ಮೇಲೆ ನನಗೆ ಆದ ಸಂತಾಪ ಅಷ್ಟಿಷ್ಟಲ್ಲ. ಕಿಡಿ ಕಿಡಿಯಾದೆ. ಇವರೇ ನಮ್ಮ ಸ್ವಾತಂತ್ರ್ಯ ಹೋರಾಟಗಾರರೋ ? ಇತಿಹಾಸದಲ್ಲಿ ಇವರ ಹೆಸರು ಬರುವದಾದರೆ ಇದೆಂಥ ಇತಿಹಾಸವಾದೀತು ! ಎಂದು ದುಃಖಿಸಿ ಈ ಸಂಗತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಬರೆದು ತಿಳಿಸಿ, ನಾನು ಈ ವಿಷಯದಲ್ಲಿ ಏನೂ ಮಾಡಲಾರೆ, ದಯವಿಟ್ಟು ಈ ಪಟ್ಟಿಯೊಳಗಿನ ನನ್ನ ಹೆಸರನ್ನಷ್ಟು ತೆಗೆದು ಬಿಡಿರಿ, ಎಂದು ಉತ್ತರ ಬರೆದೆ. ಜೊತೆಗೆ ಶ್ರೀ. ಶ್ರೀರಂಗ ಕಾಮತ, ಜಯದೇವ ಕುಲಕರ್ಣಿಯವರ ಹೆಸರೂ ಹಾಕಬೇಡಿರೆಂದು ಸೂಚಿಸಿದೆ. ಕೈಯಲ್ಲಿದ್ದ ಅಧಿಕಾರದ ದುರುಪಯೋಗ ಮಾಡಿಕೊಂಡು ಸ್ವಜನಪಕ್ಷಪಾತ ಸ್ವಜಾತಿಪಕ್ಷಪಾತ, ಸ್ವಾರ್ಥಸಾಧನೆ, ಮಾಡುವ ಭ್ರಷ್ಟಾಚಾರ ಈಗ ಎಲ್ಲ ಕಡೆಗೆ ಅತಿಯಾಗಿ ಬೆಳೆಯು ಹತ್ತಿದ್ದನ್ನು ಎಲ್ಲರೂ ನೋಡುತ್ತಿದ್ದೇವೆ. ಆದರೆ ಸುಳ್ಳು ಇತಿಹಾಸ ಬರೆಯುವದು ಬರೆಯಿಸುವದು ಮಹಾ ಭ್ರಷ್ಟಾಚಾರವಲ್ಲವೇ ? ಎಲ್ಲ ಅಂದೋಲನಗಳಲ್ಲಿ ಪ್ರತ್ಯಕ್ಷ ಭಾಗವಹಿಸಿದ ಹಲವಾರು ಜನರು ಜೀವಂತವಿರುವಾಗ ಈ ರೀತಿ ಸುಳ್ಳು ಇತಿಹಾಸ ಬರೆಯುವ ಧೈರ್ಯ ಸರಕಾರ ಮಾಡಬಾರದಾಗಿತ್ತು. ಇಂದಿನ ಪೀಳಿಗೆಯ ಜನರೇ ಈ ಅಸತ್ಯವನ್ನು ಪ್ರತಿಭಟಿಸದಿದ್ದರೆ ಮುಂದಿನವರು ಅದನ್ನು ವೇದವಾಕ್ಯವೆಂದು ನಂಬಬಹುದು. ಹೀಗಾಗಿ ಹಿಂದಿನ ಎಲ್ಲ ಇತಿಹಾಸವನ್ನೂ ನಂಬದಂಥ ಪರಿಸ್ಥಿತಿ ಬಂದೀತು. ಈಗ ನಾವು ಓದುವ ಹಿಂದಿನ ಇತಿಹಾಸವನ್ನು ಆಗಿನ ಕಾಲದ ರಾಜ ಮಹಾರಾಜರು ತಮಗೆ ಅನುಕೂಲವಾಗುವಂತೆ ಬರೆಯಿಸಿರಬಹುದೇ ? ಎಂಬ ಸಂಶಯ ಬಾರದಿರದು. ಪ್ರಜಾಪ್ರಭುತ್ವದ ಈ ದಿನಗಳಲ್ಲಿ ಅನ್ಯಾಯವನ್ನು, ರಾಷ್ಟ್ರೀಯತೆಗೆ ಕಲಂಕ ತರುವ ಅನ್ಯಾಯವನ್ನು, ಎಲ್ಲರೂ ಚನ್ನಾಗಿ ತಿಳಿದುಕೊಂಡು ಪ್ರತಿಭಟಿಸಲೇಬೇಕು. ತಪ್ಪಾಗಿ ಬರೆದ ಇತಿಹಾಸ ತಿದ್ದಲು ಹಚ್ಚಬೇಕು. ಸ್ವಾತಂತ್ರ್ಯ ಯೋಧರೆಂದು ಪೆನಶನ್ ಪಡೆಯುತ್ತಿರುವ ವೀರರಾದರೂ ಪ್ರತಿಭಟಿಸಬೇಕು.

ನಮ್ಮ ತೇಜ ನಷ್ಟವಾಗಹತ್ತಿದೆ !

ಇದೇ ಸಂದರ್ಭದಲ್ಲಿ ಪೆನಶನ್‌ದಾರರ ಬಗ್ಗೆಯೂ ಒಂದೆರಡು ಮಾತು ಬರೆಯದಿರಲಾರೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ಅವರ ಆರ್ಥಿಕ ಸ್ಥಿತಿ ಚೆನ್ನಾಗಿ ಇರದಿದ್ದರೆ ಮಾಸಿಕ ವಿಶ್ರಾಂತಿ ವೇತನ (ಪೆನಶನ್) ಕೊಡುವ ಯೋಜನೆಯನ್ನು ಸರಕಾರವು ಪ್ರಾರಂಭಿಸಿದೆ. ಇದು ಯೋಗ್ಯವೋ ಹೇಗೆ ಎಂಬುದರ ವಿಚಾರ ಮಾಡುವದೂ ಅವಶ್ಯವಿದೆ. ಮೊದಲಿಗೆ ಸ್ವಾತಂತ್ರ್ಯ ಯೋಧರು ಯಾರು ಎಂಬುದರ ವ್ಯಾಖ್ಯೆಯನ್ನು ಸರಕಾರವು ಸರಿಯಾಗಿ ಮಾಡಬೇಕಾಗಿತ್ತು. ಅದನ್ನು ಮಾಡಲಿಲ್ಲ, ೬ ತಿಂಗಳು ೩ ತಿಂಗಳು ಜೇಲಿಗೆ ಹೋಗಿ ಬಂದವರೆಲ್ಲ ಸ್ವಾತಂತ್ರ್ಯ ಯೋಧರೆಂದು ಭಾವಿಸಿದ್ದು ಅನೇಕ ಅನಾಹುತಗಳಿಗೆ ಕಾರಣವಾಗಿದೆ. ಅದರಲ್ಲಿಯೂ ಸ್ಥಾನಬದ್ಧರ ಪ್ರಶ್ನೆ ತೀರ ತೊಡಕಿನದಾಗಿದೆ. ಜೇಲಿಗೆ ಹೋದ ಬಗ್ಗೆ ಜೇಲ ಅಧಿಕಾರಿಗಳ ಹತ್ತರ ಕಾಗದ ಪತ್ರದ ದಾಖಲೆಯಿಲ್ಲದಾಗ (ಅಫಿಡೆವಿಟ್ ಮ್ಯಾಜಿಸ್ಟ್ರೇಟರ ಮುಂದೆ ಪ್ರತಿಜ್ಞಾ ಹೇಳಿಕೆ) ಕೊಟ್ಟರೆ ಸಾಕು ಎಂದು ಸರಕಾರ ತಿಳಿಸಿದ್ದರಿಂದ ಈ ಪ್ರಶ್ನೆ ಮತ್ತಿಷ್ಟು ಹದ ಗೆಟ್ಟು ಹೋಗಿದೆ. ಜೇಲಿಗೆ ಹೋಗದಿದ್ದರೂ ಹೋಗಿದ್ದೇವೆಂದು ಹೇಳಿ ಸುಳ್ಳು ಅಫಿಡೆವಿಟ್ ಮಾಡಿ ರಾಜಕೀಯ ಪೆನಶನ್ ಪಡೆಯುತ್ತಿರುವ ಅನೇಕ ಉದಾಹರಣೆಗಳಿವೆ. ಇವರೊಂದಿಗೆ ನಿಜವಾಗಿ ಜೇಲಿಗೆ ಹೋದವರು ಅದೇ ಸಾಲಿನಲ್ಲಿ ನಿಂತು ಪೆನಶನ್ ಪಡೆಯುವದನ್ನು ನೋಡಿ ಮನಸ್ಸಿಗೆ ಹೇಗೋ ಅನಿಸುತ್ತಿದೆ.

ವಿರಾಮ ವೇತನಕ್ಕೆ ಅರ್ಹರಾರು ?

೧೯೪೨ ರ ಕೊನೆಯ ಅಂದೋಲನವೊಂದನ್ನು ಬಿಟ್ಟರೆ ಉಳಿದ ಯಾವ ಅಂದೋಲನದಲ್ಲಿಯೂ ಪೋಲೀಸರು ಅನ್ಯಾಯವಾಗಿ ಯಾರನ್ನೂ ಬಂಧಿಸಿ ಜೇಲಿಗೆ ಕಳಿಸಲಿಲ್ಲ. ಹೇಳಿ ಕೇಳಿ ಥಾಣಾ ಡಂಗುರ ಹೊಡೆದು ದೇಶಭಕ್ತಿಯಿಂದ ಪ್ರೇರಿತರಾಗಿ ಕಾಯದೆಭಂಗ ಮಾಡಿದವರನ್ನೇ ಪೋಲೀಸರು ಜೇಲಿಗೆ ಕಳಿಸಿದರು. ಆದರೆ ೧೯೪೨ ರಲ್ಲಿ ಚಳವಳಿಗೆ ಸಂಬಂಧವಿರಲಿ ಬಿಡಲಿ ಅದರ ವಿಚಾರ ಮಾಡದೆ ತಮ್ಮ ಮನಸ್ಸಿಗೆ ಬಂದವರನ್ನು ಬಂಧಿಸುವ ಅಧಿಕಾರ ಪೋಲೀಸರಿಗೆ ಇದ್ದುದರಿಂದ ಖಾಸಗಿ ದ್ವೇಷದಿಂದ, ದುಡ್ಡು ಸೆಳೆಯುವ ಕುಬುದ್ಧಿಯಿಂದ ಮತ್ತೂ ಏನೇನೋ ಕಾರಣದಿಂದ ಚಳವಳಿಗೆ ಸಂಬಂಧವಿರದ ಸಾವಿರಾರು ಜನರನ್ನು ಪೋಲೀಸರು ಬಂಧಿಸಿದರು. ಇವರೆಲ್ಲರಿಗೂ ಪೆನಶನ್ ದೊರೆಯುವದು ಸರಿಯೇ ಎಂಬದು ವಿಚಾರ ಮಾಡತಕ್ಕ ಸಂಗತಿಯಾಗಿದೆ.

ಇನ್ನೊಂದು ಮಹತ್ವದ ವಿಷಯವೆಂದರೆ, ಪೆನಶನ್ ಈ ಶಬ್ದದ ಅರ್ಥವೇನು ? ಪೆನಶನ್ ಅಥವಾ ನಿವೃತ್ತಿ ವೇತನ ಕೊಡುವದು ಹಿಂದೆ ಇಂತಿಷ್ಟು ವರುಷ ಸತತ ಸೇವೆ ಮಾಡಿದ್ದಕ್ಕಾಗಿ ಅದು ೨೫, ೨೦, ೧೫ ವರುಷ ಹೀಗೆ ಇರಬಹುದು. ಸೇವೆಯ ಸಾತತ್ಯ ವಿರುವದು, ಕನಿಷ್ಟ ಇಂತಿಷ್ಟು ವರುಷ ಸೇವೆ ಮಾಡುವದು, ನಿವೃತ್ತಿ ವೇತನಕ್ಕೆ ಮೂಲ

ಆಧಾರವಾಗಿದೆ. ೬ ತಿಂಗಳು ಅಥವಾ ೩ ತಿಂಗಳು ಸೇವೆ ಮಾಡಿದ ಯಾವ ನೌಕರನಿಗೆ ಅಥವಾ ಸೈನಿಕನಿಗೆ ಯಾವ ದೇಶದಲ್ಲಿ ಪೆನ್‌ಶನ್ ಸಿಗುತ್ತಿದೆ ? ಕನಿಷ್ಟ ಸೇವೆಯ ಕಾಲ ೨೫ ವರುಷ ಇರಲೇಬೇಕೆಂಬ ನಿಯಮವು ಸರಕಾರಿ ನೌಕರರಿಗೆ ಅನ್ವಯಿಸುವಂತೆ ದೇಶಸೇವಕರಿಗೂ ಯಾಕೆ ಅನ್ವಯಿಸಬಾರದು ? ಇದೂ ಸೇವಾನಿವೃತ್ತಿ ಅದೂ ಸೇವಾ ನಿವೃತ್ತಿ. ಇದರಲ್ಲಿ ಭೇದ ಮಾಡುವ ಕಾರಣವಿದ್ದಿಲ್ಲ. ಹಾಗಾಗಿದ್ದರೆ ಖಂಡಿತವಾಗಿಯೂ ಅದಕ್ಕೊಂದು ಗೌರವ ಬರುತ್ತಿತ್ತು. ಕೆಲವು ಖಾತೆಗಳಲ್ಲಿ ನಿವೃತ್ತಿಗೆ ೧೨ ವರುಷ ಸೇವೆಯೂ (ವಿಮಾನ, ಇಂಜನ ಡ್ರಾಯವಿಂಗ ಮುಂತಾದದ್ದಲ್ಲಿ) ಸಾಕೆಂದು ತಿಳಿಯಲಾಗುತ್ತಿದೆ. ದೇಶಸೇವೆಯ ವಿಷಯದಲ್ಲಿ ೧೦ ವರುಷಗಳ ಕಾಲವನ್ನಾದರೂ ಸಾತತ್ಯವೆಂದು ತಿಳಿಯಬೇಕಾಗಿತ್ತು, ೧೦ ವರುಷ ಜೇಲವಾಸವೆಂದು ನನ್ನ ಅಭಿಪ್ರಾಯವಲ್ಲ. ೧೦ ವರುಷದ ದೇಶಸೇವೆ ಎಂದು ಸಾಮಾನ್ಯ ಅರ್ಥ. ಅವನು ಅಷ್ಟು ಅವಧಿಯಲ್ಲಿ ನಡೆದ ಹೋರಾಟದಲ್ಲಿ ಜೇಲಿಗೆ ಹೋಗಿದ್ದರೆ ಸಾಕು ಎಂಬರ್ಥ. ಸುದೈವದಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಹೋರಾಟವಿಲ್ಲದೆ ಐದು ವರುಷಗಳೂ ಹಾಗೆಯೇ ಎಂದೂ ಹೋಗಿಲ್ಲ. ೧೯೦೮ ರ ಕ್ರಾಂತಿಕಾರಕರಂತೂ ಈಗ ಯಾರೂ ಉಳಿದಿಲ್ಲ. ಅದನ್ನು ಬಿಟ್ಟರೆ ೧೯೨೦, ೧೯೨೩, ೧೯೩೦, ೧೯೩೨, ೧೯೩೪, ೧೯೪೧, ೧೯೪೨ ಹೀಗೆ ಏಳು ಹೋರಾಟಗಳು ಒಟ್ಟಿಗ ನಡೆದಿವೆ. ಇದರಲ್ಲಿಯು ಯಾವದೇ ಎರಡು ಹೋರಾಟಗಳಲ್ಲಿಯಾದರೂ ಭಾಗವಹಿಸಿದವರನ್ನು ಸ್ವಾತಂತ್ರ್ಯ ಯೋಧರೆಂದು ಕರೆದು ಅವರಿಗೆ ಇದಕ್ಕೂ ಹೆಚ್ಚು ಗೌರವಧನ ಅಥವಾ ಪೆನಶನ್ ಕೊಟ್ಟಿದ್ದರೆ ಅದು ಯಾವದೇ ಭ್ರಷ್ಟಾಚಾರಕ್ಕೆ ಆಸ್ಪದಕೊಡದೆ ಯೋಗರಿದ್ದವರಿಗಷ್ಟೇ ಮರ್ಯಾದೆ ಸಲ್ಲಿಸಿದಂತಾಗುತ್ತಿತ್ತು.

ಹಿಂದಿನ ಹೋರಾಟಗಾರರ ಕರುಣ ಕಥೆ !

೧೯೨೮ ರಲ್ಲಿ ಹುತಾತ್ಮ ಭಗತಸಿಂಗರ ಜೊತೆಗೆ ದಿಲ್ಲಿಯ ಪಾರ್ಲಿಮೆಂಟ ಭವನದಲ್ಲಿ ಬಾಂಬು ಚೆಲ್ಲಿದ ಬುಟಕೇಶ್ವರ ದತ್ತರಿಗೆ ೨೦ ವರುಷದ ಕಠಿಣ ಕಾರಾಗ್ರಹ ವಾಸದ ಶಿಕ್ಷೆಯಾಗಿತ್ತು. ಅವರ ಆರೋಗ್ಯ ತೀರ ಕೆಟ್ಟಿದ್ದರಿಂದ ಬ್ರಿಟಿಶ ಸರಕಾರವು ಸುಮಾರು ೧೨ ವರುಷಗಳ ನಂತರ ಜೇಲಿನಿಂದ ಅವರನ್ನು ಬಿಡುಗಡೆ ಮಾಡಿತು. ಸ್ವಾತಂತ್ರ್ಯ ಸಿಕ್ಕ ಮೇಲೆ ೨೦ ವರುಷಾದರೂ ಅವರು ಜೀವಿಸಿರಬಹುದು. ಈ ಅವಧಿಯಲ್ಲಿ ಅವರ ಜೀವನ ಹೇಗೆ ನಡದಿತ್ತೆಂಬಡಕ ಕಡೆಗೆ ನಮ್ಮ ಸ್ವತಂತ್ರ ಭಾರತದ ಸರಕಾರದ ಲಕ್ಷ ಹೋಗಲಿಲ್ಲ. ಬ್ರೆಡ್ ಮಾರಿ, ರಿಕ್ಷಾ ಹೊಡೆದು, ತನ್ನ ತುತ್ತಿನ ಚೀಲವನ್ನು ಆ ಮಹಾನ್ ದೇಶಭಕ್ತನು ತುಂಬುತ್ತಿದ್ದ. ಅವನು ಸಾಯುವವರೆಗೂ ನಮ್ಮ ಸರಕಾರ ಅತ್ತ ನೋಡಲಿಲ್ಲ. ಸ್ವಾತಂತ್ರ್ಯವೀರ ವಿನಾಯಕರಾವ ಸಾವರಕರರಿಗೆ ೫೦ ವರ್ಷ ಡಬಲ್ ಕಾಳಾಪಾಣಿ ಶಿಕ್ಷೆಯಾದಾಗ ಅದೇ ಮದುವೆಯಾಗಿದ್ದ ಅವರ ಪತ್ನಿಯನ್ನು ಅವರ ಮಾವಂದಿರು ಮಗಳಿಗೆ ಯಾವ ಆಧಾರವೂ ಇಲ್ಲದ್ದರಿಂದ ತಮ್ಮ ಮನೆಗೆ ಕರೆದು

ಕೊಂಡು ಹೋದರು. ಕ್ರಾಂತಿಕಾರಕನ ಹೆಂಡತಿಗೆ ಆಶ್ರಯ ಕೊಟ್ಟ ಆರೋಪದಿಂದ ಅವರ ಹೊಲ, ಮನೆ ಸರಕಾರಜಮಾ (ಫಾರಫೀಟು) ಆಗಿ ಹೋದವು! ಬ್ರಿಟಿಶ ಸರಕಾರವು ಫಾರಫೀಟ ಮಾಡಿದ ಆ ಹೊಲ, ಮನೆ ಸ್ವಾತಂತ್ರ್ಯ ಸಿಕ್ಕು ಇಷ್ಟವರುಷಗಳಾದರೂ ತಿರುಗಿ ದೊರೆಯಲಿಲ್ಲ. ವೀರ ಸಾವರಕರರು ಅಂದಮಾನ ಜೇಲಿನಲ್ಲಿದ್ದಾಗ ಅಷ್ಟರಿಗೆ ಹಾವಿನ ತುಣುಕುಗಳು ಇದ್ದ ಪಲ್ಲೆ ತಿನ್ನಬೇಕಾಯಿತು! ಅವರನ್ನು ದನದಂತೆ ಎಣ್ಣೆಯ ಗಾಣಕ್ಕೆ ಎಳೆಯಲು ಹಚ್ಚಿದಾಗ ವಾರ್ಡರನಿಂದ ಬೆನ್ನಮೇಲೆ ಬಾರಕೋಲಿನಿಂದ ಹೊಡೆಯಿಸಿಕೊಳ್ಳಬೇಕಾಯಿತು! ಅವರ ಅಣ್ಣನಿಗೆ ೨೦ ವರ್ಷ, ತಮ್ಮನಿಗೆ ೫ ವರ್ಷ ಶಿಕ್ಷೆಯಾಗಿತ್ತು. ಅಂಣನ ಹೆಂಡತಿ ಅನ್ನಾನ್ನಗತಿಕಳಾಗಿ ಆಶ್ರಯವಿಲ್ಲದೆ ಅಲೆದಾಡುವಾಗ ಅವಳಿಗೆ ಭಿಕ್ಷೆ ಸಹ ಹಾಕಕೂಡದೆಂದು ಬ್ರಿಟಿಶ ಸರಕಾರವು ಕಟ್ಟಪ್ಪಣೆ ಮಾಡಿದ್ದರಿಂದ ಹೊಟ್ಟಿಗಿಲ್ಲದೆ ಹಾಳು ಮನೆಯ ಹಿತ್ತಲದಲ್ಲಿ ಅವಳು ತಬ್ಬಲಿಯಾಗಿ ಪ್ರಾಣ ಬಿಟ್ಟಳು!

ಇದು ಗರೀಬಿ ಹಟಾವ ಯೋಜನೆಯೇ?

ಇಂಥ ಅನೇಕ ಉದಾಹರಣೆಗಳಿರುವಾಗ ಕೇವಲ ೩ ತಿಂಗಳ ಮಾತ್ರ ಜೇಲಿಗೆ ಹೋಗಿ ಹತ್ತೆಂಟು ಪೌಂಡ ತೂಕ ಹೆಚ್ಚಿಸಿಕೊಂಡು ಹೊರಗೆ ಬಂದು ಪುನಃ ಚಳುವಳಿಯ ಗೋಜಿಗೆ ಸಹ ಹೋಗದವರಿಗೆ, ಹಾಗು ಅಂಥವರ ಹೆಂಡಂದಿರಿಗೆ, ರಾಜ್ಯ ಸರಕಾರವು ತಿಂಗಳಿಗೆ ೭೫ ರೂ. ಯಂತೆಯೂ, ಕೇಂದ್ರ ಸರಕಾರವು ತಿಂಗಳಿಗೆ ಅನುಕ್ರಮವಾಗಿ ೨೦೦ ರೂ. ೧೦೦ ರೂ. ಯಂತೆಯೂ ಪೆನ್‌ಶನ್ ಕೊಡುತ್ತಿದೆ ಅಂದಿನ ಆ ಚಿತ್ರ ಇಂದಿನ ಈ ಚಿತ್ರ ನೋಡಿದರೆ ನಾನನ್ನುವದರ ಅರ್ಥವಾದೀತು. ಜೇಲಿಗೆ ಹೋದವರ ಮಾತಂತೂ ಇರಲಿ, ಹೋಗದಿದ್ದವರೂ ಸಹ ಪೆನ್‌ಶನ್ ಪಡೆಯುತ್ತಿದ್ದುದ್ದನ್ನು ಕಂಡು ಬೇರೆ ಅರ್ಥದಿಂದ "ಕಾಲಾಯ ತಸ್ಮೈ ನಮಃ" ಎನ್ನಬೇಕಾಗುತ್ತದೆ. ದುಡ್ಡು ಯಾರಿಗೆ ಬೇಡ? ಎಲ್ಲರಿಗೂ ಬೇಕು. ಸಂಸತ್ತಿನ ಹಾಗು ಶಾಸನ ಸಭೆಗಳ ಸದಸ್ಯರ ಸಂಬಳ ವರ್ಷಾನುವರ್ಷ ಹೆಚ್ಚುತ್ತ ಹೋಗಬೇಕು, ಅವರ ದಿನಭತ್ಯೆಯಂತೂ ಬೆಳಯಲೇ ಬೇಕು. ನಿವೃತ್ತ ನವಕರರ ಪೆನ್‌ಶನ್ ಹೆಚ್ಚಾಗಬೇಕು, ನವಕರಿಯಲ್ಲಿದ್ದವರ ಸಂಬಳ ಭತ್ಯೆ ಬೆಳೆಯಬೇಕು. ಏಕತ್ರ ಕುಟುಂಬ ಪದ್ಧತಿಯು ಹಾಳಾಗುವಂತೆ ಮಾಡಿ ಮುದಕರಿಗೆ ಕೊಡುತ್ತಿದ್ದ ಮೂವತ್ತು ರೂಪಾಯಿ ಪೆನ್‌ಶನ್ನೂ ಹೆಚ್ಚು ಮಾಡಬೇಕು. ಎಲ್ಲರಿಗೂ ಪೆನ್‌ಶನ್ ಸಿಗಬೇಕು. ಗರೀಬಿ ಹಟಾವ ಆಗಬೇಕು! ದುಡಿಯುವದೂ ಬೇಡ ದುಃಖ ಪಡುವದೂ ಬೇಡ! ಅಗ್ಗದ ಲೋಕಪ್ರಿಯತೆಯೂ ಪೊಳ್ಳು ಘೋಷಣೆಯೂ ಇಂದಿನ ಯುಗಧರ್ಮವಾಗಿರುವಾಗ ಅಪ್ರಿಯವಾದ ಕಟು ಸತ್ಯ ಹೇಳುವದು ಸಾಹಸದ ಮಾತಾಗಿದೆ! ತಾನಿರುವವರೆಗೆ ತನ್ನ ಕೈಯಲ್ಲಿ ಅಧಿಕಾರ ಹೇಗೆ ಉಳದೀತೆಂಬುದರ ಹಂಬಿಕೆಯೇ ಹರಂಬಿಕೆ. ದೇಶ ಉಳದೀತೋ ಅಳಿದೀತೋ ನೋಡುವವರಾರು! 'ಆಪ ಮುವೆ ಪೀಛೆ ಡುಬಗಯಿ ದುನಿಯಾ' ಎಂಬುದೇ ಇಂದಿನ ರಾಜಕಾರಣದ ಮಾರ್ಗದರ್ಶಕ ಸೂತ್ರವಾದಂತೆ ಕಾಣುತ್ತದೆ.

ಹೀಗೆ ಸಹಾಯ ಮಾಡಬಹುದಾಗಿತ್ತು.

ದೇಶ ಭಕ್ತರ ಗೌರವವಾಗಬೇಕು. ಹೋರಾಟಗಾರರಿಗೆ ಪುರಸ್ಕಾರ ದೊರೆಯ ಬೇಕು. ಆದರೆ ಹಿಟ್ಟು–ಬೂದಿ ಸಮ ಆಗಬಾರದೆಂಬ ವಿಚಾರದಿಂದ ನಾಲ್ಕು ಮಾತು ಬರೆಯಬೇಕಾಗಿದೆ. ದೇಶ ಸೇವೆಯ, ತ್ಯಾಗದ, ಮಾರಾಟವಾಗಬಾರದಾಗಿತ್ತು. ಪ್ರಪ್ರಥಮವಾಗಿ ಆಜನ್ಮ ಕಾರಾಗೃಹದ ಕಷ್ಟ ಸಹಿಸಿದವರಿಗೆ, ಅವರು ಜೀವಂತವಿರದಿದ್ದರೆ ಅವರ ಮೆನೆಯವರಿಗೆ, ಹುತಾತ್ಮರಾದವರ ಮನೆಯವರಿಗೆ, ನಂತರ ೫ ವರುಷದ ಶಿಕ್ಷೆ ಭೋಗಿಸಿದವರಿಗೆ, ಮೂರನೆಯದಾಗಿ ಯಾವದೇ ಎರಡು ಚಳವಳಿಗಳಲ್ಲಿ ಶಿಕ್ಷೆ ಭೋಗಿಸಿದವರಿಗೆ; ಅದೂ ಅವರ ಆರ್ಥಿಕ ಸ್ಥಿತಿಯನ್ನು ವಿಚಾರಿಸಿ, ಯೋಗ್ಯ ಸಹಾಯ ಸಲ್ಲಿಸಬಹುದಾಗಿತ್ತು. ಅವರಿಗೆ, ಅಥವಾ ಅವರು ಜೀವಂತವಿರದಿದ್ದರೆ ಅವರ ಮನೆಯ ವರಿಗೆ, ಅವರು ಭಿಕಾರಿಗಳಂತೆ ಅರ್ಜಿ ಮಾಡದೆ ಸರಕಾರವೇ ಅವರ ಮನೆಮುಟ್ಟಿ ಹೋಗಿ ಈ ಗೌರವ ತೋರಿಸಬಹುದಾಗಿತ್ತು ಉದ್ಯೋಗ ಮಾಡಲು ಬಡ್ಡಿ ಇಲ್ಲದೆ ಸಾಕಷ್ಟು ಹಣ ಸಾಲಕೊಟ್ಟು ಚಿಕ್ಕ ಚಿಕ್ಕ ೨೦ ಕಂತುಗಳಿಂದ ಅದನ್ನು ತಿರುಗಿ ಮುಟ್ಟಿಸಿ ಕೊಳ್ಳುವ ಯೋಜನೆ, ಜಡ್ತಿ–ಜಾಪತ್ರಯಗಳಿಂದ ಬಳಲುತ್ತಿದ್ದರೆ ಅವರ ಉಪ ಚಾರದ ಎಲ್ಲ ಹೊಣೆ ಸರಕಾರವೇ ಹೊತ್ತುಕೊಳ್ಳುವ ಯೋಜನೆ, ಅವರ ಮಕ್ಕಳ ಶಿಕ್ಷಣದ ಎಲ್ಲ ಭಾರವಹಿಸುವ ಯೋಜನೆ, ಮಾಡಬಹುದಾಗಿತ್ತು. ಸರಕಾರಿ ನವಕರಿ ಗಳಲ್ಲಿ, ಭೂಮಿ ವಿತರಣೆಯಲ್ಲಿ, ಟೆನನ್ಸಿಕಾಯದೆಯಲ್ಲಿ, ಸವಲತ್ತು ತೋರಿಸುವದು ಮುಂತಾದ್ದರಲ್ಲಿ ಇಂಥವರಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಅವರನ್ನು ಗೌರವಿಸಬಹುದಾ ಗಿತ್ತು. ಈ ರೀತಿಯ ವಿಚಾರ ಪೂರ್ವಕ ಯೋಜನೆ ಮಾಡಬಹುದಾಗಿತ್ತು. ಅದರಲ್ಲಿ ಗೌರವವಿತ್ತು, ಆದರವಿತ್ತು, ಮರ್ಯಾದೆಯಿತ್ತು. ಅದನ್ನು ಬಿಟ್ಟು ಅಗ್ಗದ ಲೋಕ ಪ್ರಿಯತೆಗಾಗಿ ಏನನ್ನೋ ಮಾಡಿ ದೇಶಭಕ್ತರ ದೇಶಭಕ್ತಿಯ ಅಪಹಾಸ್ಯ ಮಾಡಿದಂತಾ ಗಿದೆ. ನಾಮಮಾತ್ರ ಜೇಲಿಗೆ ಹೋದವರಿಗೂ ಹೋಗದೆ ಇದ್ದು ಸುಳ್ಳು ಅಫಿಡೆವಿಟ್ ಮಾಡಿದವರಿಗೂ ಸರಸಹಾ ಜನಜಾತ್ರೆಯಂತೆ ರಾಜಕೀಯ ಪೆನಶನ್ ಸಿಗಹತ್ತಿದರೆ ಇವರೆಲ್ಲರೂ ದೇಶಭಕ್ತರೆಂದೂ ಸ್ವಾತಂತ್ರ್ಯ ಹೋರಾಟಗಾರರೆಂದೂ ಸರಕಾರದ ಮುದ್ರೆ ಬಿದ್ದು ಇತಿಹಾಸಕ್ಕೆ ಅಪಚಾರ ಮಾಡಿದಂತೆ ಆಗದಿರದು.

ನಾವೆಲ್ಲರೂ ಸ್ವಾತಂತ್ರ್ಯ ವೀರರೇ ?

ಈಗ ಜಿಲ್ಲೆಯಲ್ಲಿ ಸುಮಾರು ಮೂರುವರೆ ಸಾವಿರ ಜನರ ರಾಜಕೀಯ ಪೆನಶನ್ ಪಡೆಯುತ್ತಿರಬಹುದು. ೧೫ನೇ ಆಗಸ್ಟದ ಸ್ವಾತಂತ್ರ್ಯದ ಹುಟ್ಟು ಹಬ್ಬವಾಗಲಿ, ೨೬ನೇ ಜಾನೇವರಿಯ ಪ್ರಜಾರಾಜ್ಯ ದಿನವಾಗಲಿ, ಗಾಂಧೀ ಜಯಂತಿಯಾಗಲಿ, ಟಿಳಕ ಪುಣ್ಯ ತಿಥಿಯಾಗಲಿ, ಇವರಲ್ಲಿಯ ಎಷ್ಟು ಜನರಿಗೆ ನೆನಪಿದೆ? ವರುಷದಲ್ಲಿ ಈ ನಾಲ್ಕು ದಿನಗಳನ್ನಾದರೂ ನೆನಪಿಡುವದು ನಮ್ಮೀ ಪೆನಶನ್‌ದಾರರ ಕರ್ತವ್ಯವಲ್ಲವೇ ? ನಾಲ್ಕು ದಿನ ಹೋಗಲಿ, ಕೊನೆಗೆ ೧೫ನೇ ಆಗಸ್ಟ, ೨೬ನೇ ಜಾನೇವಾರಿ ಈ ಎರಡು ದಿನಗಳಾದರೂ

ಪೆನಶನ್ ಪಡೆಯುತ್ತಿರುವವರು ತಮ್ಮ ತಮ್ಮ ಮನೆಗಳ ಮೇಲೆ ರಾಷ್ಟ್ರಧ್ವಜ ಏರಿಸು ತ್ತಾರೆಯೇ ? ನೂರಕ್ಕೆ ೫ ರಷ್ಟಾದರೂ ಪೆನಶನ್ ಪಡೆಯುವ ಹೋರಾಟಗಾರರು ತಮ್ಮ ತಮ್ಮ ಮನೆಗಳ ಮೇಲೆ ವರುಷದಲ್ಲಿ ಕೇವಲ ಎರಡು ಸಾರೆ ಆದರೂ ರಾಷ್ಟ್ರಧ್ವಜ ಏರಿಸದಿದ್ದರೆ ಅವರು ಸ್ವಾತಂತ್ರ್ಯವೀರರೇ ಹೋರಾಟಿಗಾರರೇ ಹೇಗೆ ಎಂಬುದನ್ನು ನಾವು ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು. ಪೆನಶನ್ ಪ್ರಕರಣ ತಯಾರಿಸುವಾಗ ಅದೆಷ್ಟು ಜನ ಗ್ರಾನೂಧಿಕಾರಿಗಳಿಗೆ ತಾಲೂಕ, ಜಿಲ್ಲಾ ಕಚೇರಿಯ ಕಾರಕೂನರಿಗೆ ಹಾಗೂ ಖೊಟ್ಟಿ ಅಫಿಡೆವಿಟ್ ಮಾಡುವ ಉದ್ಯೋಗವನ್ನೇ ಹಿಡಿದ ವಿಜಂಟರಿಗೆ ಲುಚ ಕೊಟ್ಟಿಲ್ಲವೆಂಬದನ್ನು ತಮ್ಮಷ್ಟಕ್ಕೆ ತಾವೇ ವಿಚಾರಿಸಬೇಕು. ಪೆನಶನ್‌ದಿಂದ ಪ್ರತಿ ತಿಂಗಳು ಬರುವ ಪವಿತ್ರ ಹಣವನ್ನು ಸೆರೆ ಕುಡಿಯಲಿಕ್ಕೆ ಜೂಜು ಆಡಲಿಕ್ಕೆ ವಾರದ ಬಡ್ಡಿಯಂತೆ ಸಾಲಕೊಡಲಿಕ್ಕೆ ವಿಲಾಸಿ ಜೀವನಕ್ಕೆ ಉಪಯೋಗ ಮಾಡುತ್ತಿರುವ ಉದಾಹರಣೆಗಳೂ ಇವೆಯೇ ಎಂಬದರ ವಿಚಾರವನ್ನು ನಾವೂ ಸರಕಾರವೂ ಕೂಡಿಯೇ ಮಾಡಬೇಡವೇ ? ಜೇಲಿನ ಸರ್ಟಿಫಿಕೇಟಿನ ಜೊತೆಗೆ ವರುಷನಲ್ಲಿ ೧೫ ನೇ ಆಗಸ್ಟ ಮತ್ತು ೨೬ ನೇ ಜಾನೇವಾರಿ ಈ ಎರಡು ದಿನಗಳಾದರೂ ಕಳೆದ ಹತ್ತು ವರುಷ ನಿಯ ಮಿತವಾಗಿ ತಮ್ಮ ಮನೆಯ ಮೇಲೆ ರಾಷ್ಟ್ರಧ್ವಜ ಹಾರಿಸುತ್ತ ಬಂದವರಿಗೆ ಪೆನ್‌ಶನ್ ಕೊಟ್ಟಿದ್ದರೂ ಅಡ್ಡಿಯಿದ್ದಿಲ್ಲ, ಅದರಲ್ಲಿಯೂ ಗೌರವವಿತ್ತು. ಒಂದು ಪಾಠ ಕಲಿಸಿ ದಂತಾಗುತ್ತಿತ್ತು. ಮುಂದಿನ ಪೀಳಿಗೆಗೆ ದೇಶಭಕ್ತಿಯ ಆಕರ್ಷಣೆಯಾಗುವಂತೆ ವಿಚಾರಪೂರ್ವಕ ಯೋಜನೆ ಈಗಲಾದರೂ ಆಗಬೇಕು. ಪೆನಶನ್ ಪಡೆಯುತ್ತಿರುವವರ ಜೀವನ ನೋಡಿ ಮುಂದಿನ ಪೀಳಿಗೆಯ ಜನರಿಗೆ ಸ್ವಾತ್ರೀಯತೆಯ ಅರಿವಾಗುವ ಬದಲು ಇವರೇ ದೇಶಭಕ್ತರೋ ? ಎಂದು ಹೀಯಾಳಿಸಿಕೊಳ್ಳುವ ಸ್ಥಿತಿ ಖಂಡಿತವಾಗಿ ಇತ ಬಾರದು, ಬರಬಾರದು.

ಇತಿಹಾಸವು ಸರಿಯಾಗಿ ಬರಯಲ್ಪಡಬೇಕು. ಸುಳ್ಳು ಸಂಗತಿ ಅದರಲ್ಲಿ ಬರ ಬಾರದು, ಅತಿಶಯೋಕ್ತಿ ಆಗಬಾರದು, ಅನ್ಯೋಕ್ತಿಯೂ ಆಗಬಾರದು, ತಪ್ಪು ಕಲ್ಪನೆ ಉಂಟಾಗುವಂತೆಯೂ ಆಗಬಾರದು ಎಂಬ ಉದ್ದೇಶದಿಂದ ಕೆಲವು ಕಟುಮಾತುಗಳನ್ನು ಬರೆಯಬೇಕಾಯಿತು. ನಿಜವಾದ ದೇಶಭಕ್ತರಿಗೆ, ಸ್ವಾತಂತ್ರ್ಯ ಹೋರಾಟಗಾರರಿಗೆ, ಯೋಗ್ಯ ಮರ್ಯಾದೆ ಸಿಗಬೇಕೆಂಬುದೇ ಈ ವಿವರಣೆಯ ಉದ್ದೇಶವಲ್ಲದೆ ಬೇರೆ ಏನೂ ಅಲ್ಲವಾದುದರಿಂದ ದಯವಿಟ್ಟು ಯಾರೂ ಅನ್ಯಥಾ ಭಾವಿಸುವಾರದು.

ಚಿರಂತನ ಮೂಲ್ಯಕ್ಕಾಗಿ ಹೆಣಗೋಣ !

ಕರ್ನಾಟಕದಲ್ಲಿ ನಡೆದ ಎಲ್ಲ ಚಳುವಳಿಗಳಲ್ಲಿ ಬೆಳಗಾವಿ ಜಿಲ್ಲೆಯು ಯಾವಾಗಲೂ ಪ್ರಥಮ ಸ್ಥಾನದಲ್ಲಿದೆ. ಇಡೀ ಕರ್ನಾಟಕದಲ್ಲಿ ಜೇಲಿಗೆ ಹೋದವರಲ್ಲಿ ಅರ್ಧದಷ್ಟು ಹೋರಾಟಗಾರರು ಈ ಜಿಲ್ಲೆಯವರೇ. ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಹೋರಾಟದ ಆದ್ಯಪ್ರವರ್ತಕರಾದ ಕರ್ನಾಟಕಸಿಂಹ ಗಂಗಾಧರರಾವ ದೇಶಪಾಂಡೆ ಹಾಗು ಕ್ರಾಂತಿ

ವೀರ ಗೋವಿಂದರಾವ ಯಾಳಗಿ ಇವರೀರ್ವರೂ ಬೆಳಗಾವಿಯವರೆ. ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಬರೆಯಬೇಕಾದರೆ ಆ ಇತಿಹಾಸ ಪುಸ್ತಕದಲ್ಲಿಯ ಅರ್ಧ ಭಾಗವು ಬೆಳಗಾಂವಿ ಜಿಲ್ಲೆಗೆ ಮೀಸಲಾಗಿಡಬೇಕು. ಅಷ್ಟು ಕಾರ್ಯ, ಅಷ್ಟು ಪ್ರಖರ ಹೋರಾಟ ಈ ಜಿಲ್ಲೆಯಲ್ಲಿ ನಡೆಯಿತು. ಇಂಥ ಗೌರವಯುತ ಸ್ಥಾನದಲ್ಲಿದ್ದ ಬೆಳಗಾವಿ ಜಿಲ್ಲೆಯ ಮಾನಮರ್ಯಾದೆ ಕಡಿಮೆ ಆಗುವ ರೀತಿಯಲ್ಲಿ ನಮ್ಮ ಜಿಲ್ಲೆಯ ಸ್ವಾತಂತ್ರ್ಯೋಧರು ನಡೆದುಕೊಳ್ಳಬಾರದೆಂಬ ಹೆಬ್ಬಯಕೆ ನನ್ನದಾಗಿದೆ. ಆ ಉದ್ದೇಶವಿಟ್ಟುಕೊಂಡೇ ನಾನು ಈ ಇತಿಹಾಸವನ್ನು ಬರೆಯಲುದ್ಯುಕ್ತನಾದೆ. ಈ ಇತಿಹಾಸವನ್ನು ಓದಿ ಆದರೂ ನಮ್ಮ ಸರಕಾರದವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿಯ ನಮ್ಮ ಜಿಲ್ಲೆಯ ಸ್ಥಾನಮಾನದ ಅರಿವು ಆದೀತೆಂದು ಆಶಿಸಿದ್ದೇನೆ.

ನಮ್ಮ ಜಿಲ್ಲೆಯ ಹೋರಾಟಗಾರರಾದರೂ ಕ್ಷಣಭಂಗುರ ಮಾತಿಗೆ ಮರುಳಾಗದೆ ಚಿರಂತನ ಮೂಲ್ಯಗಳಿಗಾಗಿ ಹೋರಾಡಲು ಹಿಂಜರಿಯದಿರಲಿ. ತಾಮ್ರಪತ್ರವು ಅದನ್ನು ಪಡೆದವರ ಮನೆಯಲ್ಲಿ ಉಳಿಯಬಹುದು. ಆದರೆ ಸರಕಾರವು ಬರೆದ ಸುಳ್ಳು ಇತಿಹಾಸವು ಮಾತ್ರ ಎಲ್ಲರ ಕೈಯಲ್ಲಿ ಹೋಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಧ ವಿಲ್ಲದವರೇ ದೇಶಕ್ಕೆ ಸ್ವಾತಂತ್ರ್ಯ ತಂದರೆಂಬ ಭಾವನೆ ದೃಢಮೂಲ ಆದೀತೆಂಬುದನ್ನು ನಾವು ಮರೆಯಬಾರದು. ತಾಮ್ರಪತ್ರ ಸಿಕ್ಕವರಲ್ಲಿ ಪ್ರತಿಯೊಬ್ಬನೂ ನಿಜವಾದ ಸ್ವಾತಂತ್ರ್ಯ ಹೋರಾಟಗಾರನಿದ್ದನೆಂದೂ ನಾವು ನಂಬಬಾರದು. ತಂತ ಕತ್ತರಿಸಿ ಮಾರಿಕೊಳ್ಳುತ್ತಿದ್ದ ಕಳ್ಳರು ಸಹ ದಿ॥ ೨ ಆಗಷ್ಟ ೧೯೭೩ ರಂದು ತಾಮ್ರಪತ್ರ ದಯಪಾಲಿಸಿದವರ ಪಟ್ಟಿಯಲ್ಲಿದ್ದುದು ನಾವು ಕಂಡಿದ್ದೇವೆ. ಇನ್ನೂ ಇಂಥ ಎಷ್ಟು ಜನರಿಗೆ ತಾಮ್ರಪತ್ರ ಕೊಡಲಾಗುವದೋ ದೇವರೆ ಬಲ್ಲ.

ಬೆಳಗಾಂವಿ ಜಿಲ್ಲೆಯ ಸ್ವಾತಂತ್ರ್ಯ ಸಮರದ ಇತಿಹಾಸ ಬರೆಯುವಾಗ ಸ್ವಾತಂತ್ರ್ಯ ದೊರೆತನಂತರ ನಮ್ಮ ದೇಶದ ಸ್ಥಿತಿಗತಿ ಏನಾಗಿದೆ, ಅದನ್ನು ಸುಧಾರಿಸುವ ಉಪಾಯ ಗಳಾವವು ಎಂಬುದನ್ನು ನಾನು ಅನುಷಂಗಿಕವಾಗಿ ಬರೆದಿದ್ದೇನೆ. ಓದುಗರು ಅದರ ಬಗ್ಗೆ ತೀವ್ರಾಲೋಚನೆ ಮಾಡಬೇಕು ಮತ್ತು ಕಾಲ ಮಿಂಚುವ ಪೂರ್ವದಲ್ಲಿಯೇ ಇಂದಿನ ತರುಣರು ಅದರ ಬಗ್ಗೆ ಕಾರ್ಯಪ್ರವೃತ್ತರಾಗಬೇಕು. ಸ್ವಾತಂತ್ರ್ಯಕ್ಕಾಗಿ ದುಡಿದವರು ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡಬೇಕು. ಅಂದರೇನೆ ನಮ್ಮ ದೇಶದ ಭವಿತವ್ಯ ಬದಲಾಗಬಹುದು, ಬೆಳಗಬಹುದು.

ಸ್ವಾತಂತ್ರ್ಯಯೋಧರು

ಸ್ವಾತಂತ್ರ್ಯಕ್ಕಾಗಿ ಸೆರೆಮನೆ ಸೇರಿದವರು

—ಃ ಸ್ವಾತಂತ್ರ್ಯ ಯೋಧರು ಃ—

ಭಾರತ ಸ್ವಾತಂತ್ರ್ಯದ ಕಡೆಯ ಹೋರಾಟ ೧೯೪೨ ರಿಂದ ೧೯೪೫ ರ ವರೆಗೆ ನಡೆಯಿತು. ಮೊದಲನೆಯ ಹೋರಾಟ ೧೯೦೫ ನೇ ಇಸ್ವಿಯಲ್ಲಿ ಸುರು ಆಯಿತು. ಲೋಕಮಾನ್ಯ ತಿಲಕರು ಸ್ವತ: ೧೯೦೮ ರಲ್ಲಿ ಜೇಲಿಗೆ ಹೋಗಿ ಭಾರತ ಮಾತೆಯ ದಾಸ್ಯವಿಮೋಚನೆಯ ಪ್ರತಿಜ್ಞಾ ಪೂಜಾವಿಧಿಯನ್ನು ಆರಂಭಿಸಿದರು. ಆಗಿನ ಹೋರಾಟ ಕೇವಲ ವಿಚಾರ ಕ್ರಾಂತಿಯದಿತ್ತು. ಪರಕೀಯ ಬ್ರಿಟಿಶರ ದಾಸ್ಯಶೃಂಖಲೆಗಳನ್ನು ಕತ್ತರಿಸಬೇಕೆಂಬ ವಿಚಾರವೇ ಜನರಲ್ಲಿ ಇಲ್ಲದಾಗ ಬುದ್ಧಿವಂತರಲ್ಲಿ, ಜನರ ಮನಸ್ಸಿನಲ್ಲಿ ಚೈತನ್ಯ ಹುಟ್ಟಿಸಲಿಕ್ಕೆ ಜಾಗೃತಿ ಮಾಡಲಿಕ್ಕೆ ಭಾಷಣಲೇಖನಗಳೆ ಮೊದಲು ಸಾಧನಗಳಾಗಿದ್ದವು. ಅದೇ ಕಾಲಕ್ಕೆ ಕೆಲವು ಬಂಗಾಲಿ, ಪಂಜಾಬಿ ತರುಣರು ಮಹಾರಾಷ್ಟ್ರದ ಯುವಕರು ಗುಪ್ತ ಸಂಘಟನೆ ಮಾಡಿ ಸಾಧ್ಯವಿದ್ದಲ್ಲಿ ಬ್ರಿಟಿಶ ಅಧಿಕಾರಿಗಳ ಮೇಲೆ ಗುಂಡು ಹಾರಿಸುವದು ಬಾಂಬು ಎಸೆಯುವದು ಮುಂತಾದ ಕ್ರಾಂತಿಯ ಕೃತಿಗಳನ್ನು ಪ್ರಾರಂಭಿಸಿದ್ದರು. ಖುದೀರಾಮ ಬೋಸ, ವೀರ ಸಾವರಕರ, ಪಾಂಡುರಂಗ ಮಹಾದೇವ ಬಾಪಟ, ಚಾಫೇಕರ ಬಂಧುಗಳು, ವಾಸುದೇವ ಬಳವಂತ ಫಡಕೆ ಮೊದಲಾದ ಉಜ್ವಲ ದೇಶಭಕ್ತರು ತಮ್ಮ ಪ್ರಾಣಗಳನ್ನೇ ಭಾರತಮಾತೆಯ ಸೇವೆಗಾಗಿ ಮೀಸಲಿಟ್ಟರು. ಬ್ರಿಟಿಶ ಸರಕಾರದ ಪ್ರಚಂಡ ಶಕ್ತಿಯಮುಂದೆ ಆಲ್ಲೊಂದು ಇಲ್ಲೊಂದು ಗುಂಡು ಹಾರಿಸಿ ಉಪಯೋಗವೇನು ? ಬಾಂಬುಗಳಲ್ಲಿ ಲಾಭವೇನು? ಎಂಬ ಲಾಭ ಹಾನಿಯ ಲೆಕ್ಕವನ್ನು ಅವರು ಹಾಕಲಿಲ್ಲ. ಮಹಾಸಾಗರವನ್ನು ನಿರ್ಮಿ

ಸಿದ ನದಿಗಳ ಉಗಮ ಜುಳು ಜುಳು ಹರಿಯುವ ಚಿಕ್ಕ ಸೆಲೆಗಳಿಂದ ಪುಟ್ಟ ಝರಿಗ ಳಿಂದಲೇ ಪ್ರಾರಂಭವಾಗುವದೆಂಬದನ್ನು ಅವರು ಅರಿತಿದ್ದರು.

ಶೆಗಣಿ ಹುಳಗಳು ಶೆಗಣಿಯಲ್ಲಿಯೇ ಮನೆ ಕಟ್ಟಿಕೊಂಡು ಸುಖವಾಗಿ ಜೀವಿಸುವ ದನ್ನೂ, ಹಂದಿಗಳು ಹೊಲಸು ತಿಂದು ಬದುಕಿರುವದನ್ನೂ ನಾವು ನಿತ್ಯವೂ ನೋಡುವ ದಿಲ್ಲವೇ ? ಮನುಷ್ಯ ಪ್ರಾಣಿ ಹಾಗಲ್ಲ, ಅವನಿಗೆ ಬುದ್ಧಿಯಿದೆ, ವಿಚಾರವಿದೆ, ಸ್ವಾಭಿ ಮಾನವಿದೆ, ಅನ್ಯಾಯದ ವಿರುದ್ಧ ಪ್ರತಿಕಾರ ಮಾಡುವ ಸಾಮರ್ಥ್ಯವಿದೆ. ಆದರೆ ಮನುಷ್ಯತ್ವವೇ ನಿದ್ರೆಗೈಯುವವರೆಗೆ ಅವನ ಜೀವನವೂ ಶೆಗಣಿ ಹುಳಕ್ಕಿಂತ, ಹಂದಿ ನಾಯಿಗಳಿಗಿಂತ ಬೇರೆಯಲ್ಲ ಎಂಬ ಗರ್ಜನೆ ಮಾಡಿ ಲೋಕಮಾನ್ಯರು ಸ್ವರಾಜ್ಯದ ಬೀಜ ಬಿತ್ತಿದರು. ಅದನ್ನೇ ಗಾಂಧೀಜಿಯವರು ತಮ್ಮ ಅಸಹಕಾರ, ಸತ್ಯಾಗ್ರಹದ ನೀರು ಗೊಬ್ಬರ ಹಾಕಿ ಬೆಳೆಸಿದರು ಲೋಕಮಾನ್ಯ ತಿಲಕ ಮತ್ತು ಮ. ಗಾಂಧಿ ಈ ವಿಭೂತಿದ್ವಯರಲ್ಲಿ ಯಾರು ಹೆಚ್ಚಿನವರು ಯಾರು ಕಡಿಮೆಯವರು, ಎಂಬ ವಾದವು ಮೂರ್ಖರ ಬಡಬಡಿಕೆಯೆಂದು ಖಂಡಿತವಾಗಿ ಹೇಳಬಹುದು. ಗಾಂಧೀಜಿಯವರು ಅಹಿಂಸೆಯ ಪೂಜಾರಿಯಾದರೆ ತಿಲಕರು ಸ್ವರಾಜ್ಯದ ಪೂಜಾರಿಯಾಗಿದ್ದರು. ಬ್ರಿಟಿ ಶರನ್ನು ಹೊರಗೆ ಹಾಕಿ ಸ್ವರಾಜ್ಯ ಸ್ಥಾಪಿಸುವದಕ್ಕೆ ಸಾಧ್ಯವಿದ್ದ ಶಕ್ತವಿದ್ದ ಎಲ್ಲ ಪ್ರಯತ್ನ ಎಲ್ಲ ಮಾರ್ಗಗಳೂ ಸರಿಯಾದವೂ ನ್ಯಾಯ್ಯವೂ ಎಂದು ತಿಲಕರು ಆಜನ್ಮ ಪ್ರತಿಪಾದಿಸಿ ದರು. ಗಾಂಧೀಜಿಯವರು ಅಹಿಂಸೆಯೇ ತಮ್ಮ ದಾರಿಯೆಂದು ಸಾರಿದರು. ಲೋಕ ಮಾನ್ಯರ ಕಾಲ ೧೯೨೦ ರ ವರೆಗಿತ್ತು. ಮುಂದೆ ಗಾಂಧೀಜಿಯವರೇ ಅವರ ಉತ್ತರಾಧಿ ಕಾರಿಯಾಗಿ ಸ್ವಾತಂತ್ರ್ಯ ಸಂಗ್ರಾಮ ಮುಂದುವರಿಸಿದರು ಲೋಕಮಾನ್ಯರು ಕ್ರಾಂತಿ ಕಾರರ ಚಟುವಟಿಕೆಗಳನ್ನು ಸಮರ್ಥಿಸುತ್ತಿದ್ದರೂ ಅದು ಬಹುಜನ ಸಮಾಜಕ್ಕೆ ಒಗ್ಗು ವಂಥದಲ್ಲವೆಂದು ದೊದಲು ಜನಜಾಗ್ರತಿಯ ಕಾರ್ಯ ಕೈಕೊಂಡರು. ಆದುದರಿಂದ ಅವರ ಕಾಲದಲ್ಲಿ ಸ್ವಾತಂತ್ರ್ಯಕ್ಕಾಗಿ ಕಾರಾಗ್ರಹ ಕಂಡವರ ಸಂಖ್ಯೆ ತೀರ ಕಡಿಮೆ. ಗಾಂಧಿ– ಯುಗದಲ್ಲಿಯೇ ಅನ್ಯಾಯ ಕಾಯದೆ ಮುರಿದು ಕಾರಾಗ್ರಹ ಸೇರುವ ಕಾರ್ಯಕ್ರಮ ಮೊದಲಾದದ್ದು.

ಬೆಳಗಾವಿ ಜಿಲ್ಲೆಯ ಮಟ್ಟಿಗೆ ಹೇಳುವದಾದರೆ ೧೯೦೭ ರಲ್ಲಿ ಸಿಂದಿಶೆರೆ ಅಂಗಡಿ ಗಳ ಮೇಲೆ ಪಿಕೆಟಿಂಗ (ನಿರೋಧನ) ಮಾಡಿ ಶ್ರೀ. ಗೋವಿಂದರಾವ ಯಾಳಗಿ ಮತ್ತು ಕೆಲವು ಸ್ವಯಂ ಸೇವಕರು ೭ ರಿಂದ ೧೫ ದಿನಗಳ ಶಿಕ್ಷೆ ಆಗಿ ಜೇಲಿಗೆ ಹೋಗಿದ್ದರು. ೧೯೦೯ ರಲ್ಲಿ ಶ್ರೀ. ಹಣಮಂತರಾವ ದೇಶಪಾಂಡೆ ಅವರ ಮೇಲೆ ಬಾಂಬ ಖಟ್ಲೆ ಆಗಿ ಅವರು ಕೆಲವು ದಿವಸ ಕಾರಾವಾಸ ಭೋಗಿಸಿದರಲ್ಲದೆ ಚಿತ್ರಹಿಂಸೆಗೂ ಗುರಿಯಾದರು. ೧೯೨೧ ರ ಅಸಹಕಾರ ಆಂದೋಲನವೇ ನಿಜವಾಗಿ ಜೇಲಿಗೆ ಹೋಗುವದಕ್ಕೆ ನಾಂದಿ ಆಯಿತು. ಆ ಹೋರಾಟದಲ್ಲಿಯೂ ನಮ್ಮ ಜಿಲ್ಲೆಯಲ್ಲಿ ೨೫ ರ ಕಿಂತ ಹೆಚ್ಚು ಜನ

ಜೇಲಿಗೆ ಹೋಗಲಿಲ್ಲ. ೧೯೩೩ ರಲ್ಲಿಯ ನಾಗಪೂರ ಧ್ವಜ ಸತ್ಯಾಗ್ರಹಕ್ಕೆ ನಮ್ಮ ಜಿಲ್ಲೆಯಿಂದ ಹೋಗಿ ಜೇಲು ಸೇರಿದವರ ಸಂಖ್ಯೆ ೧೦೧೫ ಇರಬಹುದು. ೧೯೩೦ ರಲ್ಲಿ ಮಾತ್ರ ನಮ್ಮ ಜಿಲ್ಲೆಯಲ್ಲಿ ಏಳೂವರೆ ನೂರು ಜನರು ಜೇಲಿನಲ್ಲಿ ಶಿಕ್ಷೆ ಭೋಗಿಸಿದರು. ಸಮಾರು ೫೦ ಜನರು ಕಚ್ಚಾ ಕೈದಿನಲ್ಲಿ (ಅಂಡರ ಟ್ರಾಯಲ್) ಇದ್ದರು. ೧೯೩೨ ರಲ್ಲಿ ಈ ಸಂಖ್ಯೆ ಒಂದು ಸಾವಿರಕ್ಕೆ ಏರಿತು. ೧೯೩೪ ರಲ್ಲಿ ಜೇಲಿಗೆ ಹೋದವರ ಸಂಖ್ಯೆ ೫೦೦ ಇದ್ದಿತು. ಆಗ ೧೯೩೨ ರಲ್ಲಿ ಜೇಲಿಗೆ ಹೋದವರಲ್ಲಿ ಕೆಲವರು ಇನ್ನೂ ಜೇಲಿನಲ್ಲಿಯೇ ಇದ್ದರು. ೧೯೪೧ ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಸುಮಾರು ೪೦೦ ಸತ್ಯಾಗ್ರಹಿಗಳು ಸೆರೆಮನೆ ಸೇರಿದರು. ೧೯೪೨ ರಲ್ಲಿ ನಿಜವಾಗಿ ಹೋರಾಡಿ ಜೇಲಿಗೆ ಹೋದವರ ಸಂಖ್ಯೆ ಸುಮಾರು ೧೨೦೦ ಮಾತ್ರ, ಆದರೆ ಪೋಲೀಸರು ಎಳೆದುಕೊಂಡು ಹೋಗಿ ಜೇಲಿಗೆ ಸೇರಿಸಿದವರ ಸಂಖ್ಯೆಯು ಅಷ್ಟೇ ಆಗಿ ಸುಮಾರು ಎರಡುವರೆ ಸಾವಿರ ಜನರು ನಮ್ಮ ಜಿಲ್ಲೆಯಲ್ಲಿ ಕಾರಾವಾಸ ಭೋಗಿಸಿದರು.

ಜೇಲಿಗೆ ಹೋದವರೆಲ್ಲರ ಹೆಸರುಗಳನ್ನು ದೊರಕಿಸುವದು ಬಹಳ ಕಠಿಣ ಕೆಲಸ, ಕೊನೆಯ ಹೋರಾಟ ಆಗಿ ೩೦ ವರ್ಷ ಗತಿಸಿದ್ದರಿಂದ ಇಷ್ಟು ಕಾಲಾವಧಿಯ ನಂತರ ಸಾಧಾರ ಮಾಹಿತಿ ಕಲೆ ಹಾಕುವದು ಬಹು ಕಷ್ಟಕರ. ಆದರೂ ಸಾಧ್ಯವಿದ್ದಷ್ಟು ಪ್ರಯತ್ನ ಮಾಡಿ ಶಕ್ಯವಿದ್ದಷ್ಟು ಹೆಸರು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ. ಪ್ರಥಮ ತರ ಗತಿಯ ಸ್ವಾತಂತ್ರ್ಯ ವೀರರೆಂದರೆ "ಮಾಡುವಾ ಇಲ್ಲವೆ ಮಡಿಯುವಾ" ಎಂಬ ವೀರಾವೇಶದಿಂದ ಬಹಿರಂಗ ಬಂಡಾಯ ಮೊಡಿ ಪೋಲೀಸರ ಗುಂಡಿಗೆ ಆಹುತಿ ಆದವರು. ಗುಂಡಿಗೆ ತುತ್ತಾಗಬಹುದೆಂಬುದು ಖಂಡಿತ ಗೊತ್ತಿದ್ದರೂ ಭೂಗತರಾಗಿ "ಕರೇಂಗೆ ಯಾ ಮರೇಂಗೆ" ಎಂದು ಜೀವದ ಹಂಗುದೊರೆದು ಕಾದಾಡಿದವರು ಎರಡನೇ ಕ್ರಮಾಂಕದವರು. ಕಾಯದೆಭಂಗ ಮಾಡಿ ಶಿಕ್ಷೆ ಹೊಂದಿ ಜೇಲಿಗೆ ಹೋದವರು ಮೂರನೆ ವರ್ಗದವರು. ಕಡೆತನಕ ಪೋಲೀಸರ ಕೈಗೆ ಸಿಗದೆ ಹೊರಗೆ ಉಳಿದು ಕೆಲಸ ಮಾಡಿದವರನ್ನು ನಾಲ್ಕನೇ ತರಗತಿಯಲ್ಲಿ ಸೇರಿಸಬಹುದು. ಸ್ಥಾನಬದ್ಧರಾದವರಲ್ಲಿ ಅನೇಕರು ನಮ್ಮ ಹಿತಚಿಂತಕರೂ, ಹೋರಾಟಕ್ಕೆ ಸಹಾನುಭೂತಿವುಳ್ಳವರೂ ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಕೆಲಮಟ್ಟಿಗೆ ಸಹಾಯ ಸಹ ಮಾಡಿದವರೂ ಇದ್ದರು. ಅವರು ಐದನೇ ಕ್ರಮಾಂಕದವರೆನ್ನಬಹುದು, ಚಳವಳಿಗೆ ಏನೂ ಸಂಬುಧವಿಲ್ಲದಿದ್ದರೂ ಪೋಲೀಸರು ದುಡ್ಡಿನಾಶೆಗಾಗಿ ಅಥವಾ ಅನ್ಯದುರುದ್ದೇಶದಿಂದ ಅನೇಕರನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿ ಇಟ್ಟಿದ್ದರು. ಅವರು ಅತೋ ಭ್ರಷ್ಟ ತತೋ ಬ್ರಷ್ಟ ವರ್ಗದವರು. ಚಳವಳಿಯು ರಭಸದಿಂದ ಆಡಳಿತ ಶಿಥಿಲವಾದಾಗ ಪರಿಸ್ಥಿತಿಯ ದುರ್ಲಾಭ ಪಡೆದು ಸಮಾಜಘಾತಕ ಚಟುವಟಿಕೆಗಳನ್ನು ನಡೆಸಬಹುದಂಥ ನೂರಾರು ಗುಂಡರನ್ನೂ ಪುಂಡರನ್ನೂ ದರೋಡೆಕೋರರನ್ನೂ ಪೋಲೀಸರು ಮುನ್ನೆಚ್ಚರಿಕೆಯ ಕ್ರಮವೆಂದು ಭಾರತ ರಕ್ಷಣಾ ಕಾನೂನಿನನ್ವಯ ಬಂಧಿಸಿ ಜೇಲಿನಲ್ಲಿ ತಂದಿಟ್ಟಿದ್ದರು. ಅವರು "ತೇ ಕೇ ನ ಜಾನೀಮಹೆ" ವರ್ಗದ ಸ್ಥಾನಬದ್ಧರು. ಹೀಗೆ ಸ್ಥಾನಬದ್ಧರ ವಿಷಯದಲ್ಲಿ ಪರಿಸ್ಥಿತಿ ಬಹಳ ವಿಚಿತ್ರವೂ ಕಲಸು

ಮೇಲ್ಕೋಗರದ್ದೂ ಆಗಿದ್ದರಿಂದ ಇಷ್ಟು ಕಾಲಾವಧಿಯ ನಂತರ ನಿಜವಾದ ಹೋರಾಟಗಾರರ ಹೆಸರುಗಳನ್ನು ಸಂಗ್ರಹಿಸುವದು ಬಹಳ ಜಟಿಲವಾಗಿದೆ. ಆದರೂ ಹೋರಾಟದ ಪ್ರಮುಖ ಕೇಂದ್ರಗಳಿಗೆ ಹೋಗಿ ಹೆಸರುಗಳನ್ನು ದೊರಕಿಸಲಾಗಿದೆ. ಅಲ್ಲದೆ ಕೋರ್ಟುಗಳಲ್ಲಿಯ ಖಟ್ಲೆಯ ಕಾಗದ ಪತ್ರಗಳನ್ನೂ ಹೋರಾಟದ ಕೇಂದ್ರ ಕಚೇರಿಯಲ್ಲಿ ಬರೆದಿಟ್ಟ ಮಾಹಿತಿಯನ್ನೂ ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಸಂಗತಿಗಳನ್ನೂ ನೋಡಿ ಆದಷ್ಟು ಅಧಿಕೃತ ಪಟ್ಟಿಯನ್ನು ತಯಾರಿಸುವ ಪ್ರಯತ್ನ ಮಾಡಲಾಗಿದೆ. ಈ ಪಟ್ಟಿಯು ಪರಿಪೂರ್ಣವಿದೆ ಎಂದು ಹೇಳುವ ಸಾಹಸ ಮಾಡಲಾರೆ. ಆದರಲ್ಲಿ ನ್ಯೂನತೆಗಳಿರಬಹುದು. ಎರಡನೇ ಮುದ್ರಣದ ಯೋಗ ಬಂದರೆ ಅವುಗಳನ್ನು ಸರಿಪಡಿಸಬಹುದು.

ಪಟ್ಟಣಗಳಲ್ಲಿ ಬೆಳಗಾವಿ ನಿಪ್ಪಾಣಿಗಳೂ ಹಳ್ಳಿಗಳಲ್ಲಿ ಅಕ್ಕತಂಗೇರಹಾಳ, ಪಾಚ್ಛಾಪೂರ, ಹುದಲಿ, ಬಾಗೇವಾಡಿ, ಸಂಪಗಾಂವ, ಕಿತ್ತೂರ, ಮು. ಪೂ ಹುಬ್ಬಳ್ಳಿ, ದೇಗಾವ, ತಿಗಡೊಳ್ಳಿ, ಬುಡ್ರಕಟ್ಟಿ, ಗಂದಿಗವಾಡ, ಹೊಸೂರ, ಮುನವಳ್ಳಿ, ಕರೀಕಟ್ಟಿ, ಹೂಲಿ, ಹೆಬ್ಬಾಳ, ಎಲಿಮುನವಳ್ಳಿ, ಬೆಡಕಿಹಾಳ, ಅಕ್ಕೋಳ, ಸತ್ತಿ, ಮೊದಲಾದ ಊರುಗಳು ಸ್ವಾತಂತ್ರ್ಯ ಯೋಧರ ಬೀಡುಗಳಾಗಿದ್ದವು. ಕಡಬಿಶಿಪಾಪೂರ, ನಿಪ್ಪಾಣಿ, ಬೈಲಹೊಂಗಲಗಳಲ್ಲಿ ಕೆಲವು ವೀರ ಹೋರಾಟಗಾರರು ಪೋಲೀಸರ ಗುಂಡಿಗೆ ಆಹುತಿಯಾದರು. ಅಕ್ಕತಂಗೇರಹಾಳ, ಪಾಚ್ಛಾಪೂರ, ಹುದಲಿ, ಸುಲಧಾಳ, ಬಾಗೇವಾಡಿ, ಹೊಸೂರ, ಮೊದಲಾದ ಊರುಗಳ ಮೇಲೆ ಪುಂಡಗಂದಾಯ (ಪ್ಯೂನಿಟಿವ್ ಫಾಯಿನ್) ಹೇರಲಾಗಿತ್ತು. ನಮ್ಮ ಜಿಲ್ಲೆಯ ಹೋರಾಟಗಾರರನ್ನು ಬೆಳಗಾವಿ ಮಧ್ಯವರ್ತಿ ಕಾರಾಗೃಹ ಹಿಂಡಲಗಿ, ಬೆಳಗಾವಿ ಕಿಲ್ಲೆಯ ತಾತ್ಪೂರ್ತಿಕ ಸೆರೆಮನೆ, ಹೆಡಕ್ವಾರ್ಟರದ ಹಳೆ ಜೇಲು, ಯರವಡಾ ಮಧ್ಯವರ್ತಿ ಕಾರಾಗೃಹ, ಯರವಡಾ ಕ್ಯಾಂಪ ಜೇಲ, ವಿಜಾಪೂರ, ಠಾಣೆ, ಕಾರವಾರ ಜೇಲುಗಳಲ್ಲಿಯೂ ಧಾರವಾಡ ಬೋರ್ಸ್ಟಲ ಸ್ಕೂಲ, ಬೆಳಗಾವಿ ರಿಮಾಂಡ ಹೋಮಗಳಲ್ಲಿಯೂ ಇಡಲಾಗಿತ್ತು. ಅನೇಕರ ಮನೆಹೊಲ ಸರಕಾರ-ಜಮಾ (ಫಾರಫೀಟು) ಆದವು. ಪೋಲೀಸರು ಹಗೇ ಲೂಟಿ ಮಾಡಿದರು, ಪೋಲೀಸರು ಕೊಟ್ಟ ಚಿತ್ರಹಿಂಸೆಯಂತೂ ಬಣ್ಣಿಸಲಸದಳ. ದಂಡ ವಸೂಲಿಯೂ ಕಠೋರ ದಬ್ಬಾಳಿಕೆಯಿಂದ ನಡೆಯಿತು. ಮಹಿಳೆಯರೂ ಬಾಲಕರೂ ತಮ್ಮ ಪಾಲಿನ ಕರ್ತವ್ಯ ಮಾಡಿ ಜೇಲಿಗೆ ಹೋದರು.

ಈ ರೀತಿ ೧೯೦೮ ರಿಂದ ೧೯೪೫ ರ ವರೆಗೆ ರಾಜಕೀಯ ಆಂದೋಲನಗಳಲ್ಲಿ ಭಾಗವಹಿಸಿ ಶಿಕ್ಷೆ ಹೊಂದಿದವರ ಹೆಸರುಗಳನ್ನೂ ಅವರಿಗೆ ಆದ ಶಿಕ್ಷೆಯನ್ನೂ ಈ ಭಾಗದಲ್ಲಿ ಕೊಡಲಾಗಿದೆ. ೧೯೪೨ ರ ಆಂದೋಲನದಲ್ಲಿ ಪ್ರತ್ಯಕ್ಷ ಭಾಗವಹಿಸಿದವರ ಮತ್ತು ಶಿಕ್ಷೆಹೊಂದಿದವರ ಹೆಸರುಗಳನ್ನು ಬರೆಯುವಾಗ ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟವರ ಸಂಖ್ಯೆಯೂ ಆದರಲ್ಲಿ ಅನಿವಾರ್ಯವಾಗಿ ಕೂಡಿದೆ.

ಎಲ್ಲ ವಿವರಗಳು ಪೂರ್ತಿಯಾಗಿ ಸಿಕ್ಕಿಲ್ಲ. ಸಿಕ್ಕಷ್ಟರ ಮೇಲಿಂದ ಬರೆಯಲಾಗಿದೆ. ೧೯೩೦ ರ ಆಂದೋಲನದಲ್ಲಿ ಶಿಕ್ಷೆ ಯಾದವರ ಹೆಸರುಗಳನ್ನು ಕರ್ನಾಟಕ ಪ್ರಾಂತಿಕ

ಕಾಂಗ್ರೆಸ ಕಮೀಟಿಯವರು ೧೯೩೧ ರಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದ . ಪುಸ್ತಕದ ಮೇಲಿಂದ ತಕ್ಕೊಳ್ಳಲಾಗಿದೆ, ೧೯೩೨ ರ ಆಂದೋಲನದಲ್ಲಿ ಸುಮಾರು ೧೦೦೦ ಜನರು ನಮ್ಮ ಜಿಲ್ಹೆಯಲ್ಲಿ ಜೇಲಿಗೆ ಹೋಗಿದ್ದರೂ ಸುಮಾರು ೫೦೦ ಹೆಸರು ಮಾತ್ರ ನಮಗೆ ಸಿಕ್ಕಿವೆ, ೧೯೩೪ ರಲ್ಲಿ ತೀರ ಸ್ವಲ್ಪೇ ಜನರು, ೧೯೩೨ ರ ಪುರವಣಿಯೆಂದು, ಜೇಲಿಗೆ ಹೋದರು. ೧೯೪೧ ರ ಯುದ್ಧ ವಿರೋಧಿ ಘೋಷಣೆಯ ಶುದ್ಧ ಸತ್ಯಾಗ್ರಹದಲ್ಲಿ ೪೦೦ ಜನರು ಜೇಲಿಗೆ ಹೋಗಿದ್ದರೂ ಸುಮಾರು ೩೨೦ ಹೆಸರುಗಳು ಮಾತ್ರ ನಮಗೆ ದೊರಕಿವೆ. ೧೯೪೨ ರ ಕೊನೆಯ ಆಂದೋಲನದಲ್ಲಿ ಜೇಲಿಗೆ ಹೋದವರ ಬಹುತರ ಎಲ್ಲರ ಹೆಸರು ಸಿಕ್ಕಿವೆಯಾದರೂ ಅಲ್ಲಲ್ಲಿ ಇನ್ನೂ ಕೆಲವು ಹೆಸರುಗಳು ಉಳಿದಿರುವ ಸಂಭವವಿದೆ. ಸಾಧ್ಯವಿದ್ದಷ್ಟು ಪ್ರಯತ್ನ ಮಾಡಿ ಈ ಹೆಸರು ದೊರಕಿಸಲಾಗಿವೆಯಾದ ರೂ ಈ ಪಟ್ಟಿಗಳು ಪರಿಪೂರ್ಣವಾಗಿವೆಯೆಂದು ಹೇಳಲು ಬರಲಾರದು. ಅದ ರಂತೆಯೇ ಈ ಎಲ್ಲ ಆಂದೋಲನಗಳು ೩೦ ರಿಂದ ೪೦ ವರುಷಗಳ ಹಿಂದೆ ನಡೆದಿರು ವದರಿಂದ ಆಯಾ ಸ್ವಾತಂತ್ರ್ಯ ವೀರರ ಹೆಸರುಗಳ ಮುಂದೆ ತೋರಿಸಿದ ಶಿಕ್ಷೆಯ, ಸ್ಥಾನ ಬದ್ಧತೆಯ ಅವಧಿಯ ಅಂಕಿಗಳು ಸರಿಯಾಗಿವೆಯೆಂದು ಹೇಳುವದೂ ಕಠಿಣ. ಕೆಲವರ ಬಗ್ಗೆಯಂತೂ ಅವರು ಎಷ್ಟು ಶಿಂಗಳ ಜೇಲಿನಲ್ಲಿದ್ದರೆಂಬುದು ತಿಳಿದು ಬಂದಿಲ್ಲ. ಬೆಳ ಗಾವಿ ಪಟ್ಟಣದಲ್ಲಿಯ ಹೆಸರುಗಳಲ್ಲಿ ವಿಶೇಷವಾಗಿ ಇಂಥವರು ಬಹಳ ಜನರಿದ್ದಾರೆ.

ಮಾಡಿ ಮಡಿದವರ ಪುಣ್ಯಸ್ಮರಣೆ

ಪೋಲೀಸರ ಗುಂಡಿಗೆ ಆಹುತಿಯಾದವರು.

೧೯೪೨ ರ ಕ್ರಾಂತಿಯ ಹೋರಾಟ ಪ್ರಾರಂಭವಾದ ಕೂಡಲೆ ನಮ್ಮ ಜಿಲ್ಹೆಯಲ್ಲಿ ಪೋಲೀಸರ ಗುಂಡಿಗೆ ಮೊಟ್ಟ ಮೊದಲು ಆಹುತಿಯಾದವರೆಂದರೆ ಸವದತ್ತಿ ತಾಲೂ ಕಿನ ಕಡಬಿ ಶಿವಾಪುರ ಗ್ರಾಮದ ಶ್ರೀ. ಸಾತಪ್ಪ ಟೋಪಣ್ಣವರ ಆವರು. ತಮ್ಮ ಗ್ರಾಮವು ಸ್ವತಂತ್ರವಾಯಿತೆಂದು ೮ ನೇ ಆಗಸ್ಟದ ದಿವಸವೇ ಅವರು ಸಾರಿ ದಿನಾಲು ಪ್ರಭಾತಫೇರಿ ಧ್ವಜವಂದನೆ ಮೆರವಣಿಗೆ ನಡಸುತ್ತಿದ್ದರು. ೧೫ ನೇ ಆಗಸ್ಟದ ದಿನ ನೂರಾರು ಸಶಸ್ತ್ರ ಪೋಲೀಸರು ಈ ಗ್ರಾಮದ ಮೇಲೆ ದಾಳಿ ಮಾಡಿ ಊರವರು

ನಿಲ್ಲಿಸಿದ ರಾಷ್ಟ್ರಧ್ವಜ ಕಿತ್ತಿ ಒಗೆಯುವಾಗ ಸಾತಪ್ಪನು ವಿರೋಧ ಮಾಡಿದ್ದರಿಂದ ಪೋಲೀಸರು ತತ್‌ಕ್ಷಣ ಅವನನ್ನು ಗುಂಡಿಕ್ಕಿಕೊಂದರು. ವೀರ ಸಾತಪ್ಪ ಅಮರನಾದನು.

೧೭ ನೇ ಆಗಸ್ಟ ೧೯೪೨ ರಂದು ಬೈಲಹೊಂಗಲದಲ್ಲಿ ಪೋಲೀಸರು ಶ್ರೀ. ಬಸವಣ್ಣೆಪ್ಪ ಚನ್ನಪ್ಪ ಬೆಟಗೇರಿ, ಅಡಿವೆಪ್ಪ ಶಿವಪ್ಪಾ ಪಣ್ಣೂರ, ಗಿರಿಮಲ್ಲಪ್ಪ ಚನ್ನಪ್ಪ ಹಲಗಲಿ, ದತ್ತೋಬಾ ಶಂಕರೆಪ್ಪಾ ಹುರಕಡ್ಲಿ ಇವರನ್ನು ಬುಧಿಸಿಕೊಂಡು ಒಯ್ಯುತ್ತಿದ್ದಾಗ ಜನಜಂಗುಳಿ ವಿರೋಧ ಮಾಡಿದ್ದರಿಂದ ಪೋಲೀಸರು ಗುಂಡುಹಾರಿಸಿದರು. ಆ ಗುಂಡಿನಿಂದ ಕೆಳಗಿನ ಏಳು ಜನರು ವೀರಸ್ವರ್ಗ ಪಡೆದು. ಹುತಾತ್ಮರಾದರು:–

(೧) ಶ್ರೀ. ರಾಜಪ್ಪ ವೀರಪ್ಪ ಹೆಬ್ಬಾಳ
(೨) ಶ್ರೀ. ರಾಮಪ್ಪ ಶಿವಲಿಂಗಪ್ಪ ದೊಡಮನಿ
(೩) ಶ್ರೀ. ಗುರುಶಿದ್ದಪ್ಪ ದುಂಡಪ್ಪ ಬೆಳಗಾವಿ
(೪) ಶ್ರೀ. ಸಿದ್ದಪ್ಪ ಗುರಪ್ಪ ಸತ್ತಿಗೇರಿ
(೫) ಶ್ರೀ. ದತ್ತು ಲಕ್ಷ್ಮಣ ಮಾತಾಡೆ
(೬) ಶ್ರೀ. ಶಿವಪ್ಪ ಜಕ್ಕಪ್ಪ ಹಿರೇಹೊಳಿ
(೭) ಶ್ರೀ. ಶಿವಲಿಂಗಪ್ಪ ಯಲ್ಲಪ್ಪ ಕೋತಂಬರಿ

ಇದೇ ದಿನ ಅಂದರೆ ೧೭ ನೇ ಆಗಸ್ಟ ೧೯೪೨ ಕ್ಕೆ ನಿಪ್ಪಾಣಿಯಲ್ಲಿ ಜನರು ಮೆರವಣಿಗೆಯಿಂದ ಹೋಗಿ ಊರ ಮಧ್ಯದಲ್ಲಿದ್ದ ಪೋಸ್ಟ ಆಫೀಸ ಸುಟ್ಟು ಬೂದಿ ಮಾಡಿ ಕೊಲ್ಹಾಪೂರ ಅಗಸಿಯ ಹತ್ತರದ ಪೋಲೀಸ ಚೌಕಿ ಸೆರೆದ ಅಂಗಡಿ ಧ್ವಂಸ ಮಾಡಿ ಕೊಲ್ಹಾಪುರಕ್ಕೆ ಹೊರಟಿದ್ದ ಟಪಾಲ ಬಸ್ಸಿನಿಂದ ಟಪಾಲ ಚೀಲ ಕಸಿದು ಚಿಕ್ಕೋಡಿ ರಸ್ತೆಯ ಮೇಲಿನ ತಾರ ಕಂಬಗಳನ್ನು ಕಿತ್ತಿ ಒಗೆದರು. ಈ ಘಟನೆ ನಡೆದಿರುವಾಗ ಪೋಲೀಸರು ಗೋಳಿಬಾರ ಮಾಡಿದರು. ಅದರಲ್ಲಿ ಶ್ರೀ. ಶಂಕರ ಸಾತಲಿಂಗಪ್ಪ ಪಾಂಗಿರೆ ಎಂಬವನು ಸತ್ತನು. ಅನೇಕರಿಗೆ ಗಾಯಗಳಾದವು.

ಕೊಲ್ಹಾಪುರ ಸಂಸ್ಥಾನದ ಕಾಪಸಿ ಭಾಗದ ಗಾರಗೋಟಿ ಎಂಬಲ್ಲಿ ಸರಕಾರಿ ಕಚೇರಿ ಲೂಟ ಮಾಡಲು ಸಂಕೇಶ್ವರ, ಎಲಿಮುನ್ನೊಳ್ಳಿಯ ಕಾರ್ಯಕರ್ತರೂ ಹೋಗಿದ್ದರು. ಅಲ್ಲಿ ನಡೆದ ಗೋಳಿಬಾರಿಲ್ಲಿ ಹರಗಾಪುರದ (ಸಂಕೇಶ್ವರ) ಶ್ರೀ. ಕರವೀರಯ್ಯ ಸ್ವಾಮಿ ಅವರು ಗುಂಡಿಗೆ ಬಲಿಯಾದರು.

ಸಾಂಗಲಿ ಜೇಲಿನಿಂದ ಪಾರಾಗಿ ಹೋಗುವಾಗ ಶಹಾಪೂರದ ಶ್ರೀ. ಬಾಬು ಕಾಕೇರು ಅವರನ್ನು ಪೋಲೀಸರು ಗುಂಡಿಕ್ಕಿಕೊಂದರು.

ಜೇಲಿನಲ್ಲಿ ಅಸುನೀಗಿದವರು.

೧೯೪೨ ರ ಡಿಸೆಂಬರದಲ್ಲಿ ಹಿಂಡಲಗಿ ಜೇಲಿನಲ್ಲಿ ಪ್ರಾರಂಭವಾದ ಕಾಲರಾದಂಥ ಭಯಾನಕ ಬೇನೆಗೆ ಕೆಳಗಿನವರು ತುತ್ತಾದರು:—

(೧) ತಾಯಪ್ಪಾ ಹಿರೇಹಟ್ಟಿಹೊಳಿ (ತಾಲೂಕ ಖಾನಾಪೂರ).
(೨) ಶ್ರೀಮತಿ ಗಂಗೂಬಾಯಿ ಕಿನರೆ, ನಿಪ್ಪಾಣಿ.
(೩) ಪಾಮನರಾವ ಪೋತದಾರ, ಅಕ್ಕೋಳ.
(೪) ಜಿನಗೌಡಾ ಆಪಗೌಡಾ ಪಾಟೀಲ, ಬೆಡಕಿಹಾಳ.
(೫) ಸಿವ್ಯಾಮಯ್ಯಾ ಸ್ವಾಮಿ ಹಾಲದೇವರಮಠ, ಸಂಕೇಶ್ವರ.

ಇದೇ ಬೇನೆಯಿಂದ ಬಳಲಿ ಸುದೈವದಿಂದ ಬದುಕಿದವರು:—

(೧) ಕುಮಾರಿ ಅನುಸೂಯಾ ಸಾಮಂತ, ಬೆಳಗಾವಿ.
(೨) ,, ಗೋದಾವರಿ ಸೊಲ್ಲಾಪೂರಕರ, ಬೆಳಗಾವಿ.
(೩) ಸೌ. ಲಕ್ಷ್ಮೀಬಾಯಿ ಕುಲಕರ್ಣಿ, ಶಹಾಪೂರ–ಬೆಳಗಾವಿ.
(೪) ,, ಸೀತಾಬಾಯಿ ಪ್ರಭು (ಚಂದಗಡ)' ಹುಣಶಾನಟ್ಟಿ.

ಅನ್ಯ ಕಾರಣದಿಂದ ಜೇಲಿನಲ್ಲಿ ನಿಧನರಾದವರು;—

(೧) ಗೋಪಾಳ ಮಹಾದೇವ ಮಂಜಿರೆ (ಫ್ರೀ ಇಂಡಿಯಾ ಎಂಬ ಹೆಸರಿನಿಂದ ಪ್ರಸಿದ್ಧರಾದವರು) ಯರವಡಾ ಜೇಲಿನಲ್ಲಿ ೫ ವರ್ಷದ ಸಶ್ರಮ ಶಿಕ್ಷೆ ಭೋಗಿಸುತ್ತಿದ್ದಾಗ ವಿಷಮ ಜ್ವರದಿಂದ ತೀರಿಕೊಂಡರು.
(೨) ಅಲ್ಲಿಸಾಹೇಬ ಪಿಂಜಾರ, ಬುಡರಕಟ್ಟಿ, ಇವರು ಧನುರ್ವಾತದಿಂದ ಹಿಂಡಲಗಿ ಜೇಲಿನಲ್ಲಿ ಮೃತರಾದರು.
(೩) ಯಲ್ಲಪ್ಪಾ ಸನದಿ ಹೆದ್ದೂರ, ಇವರನ್ನು ಪೋಲೀಸರು ಹೆಣಬೀಳ ಹೊಡೆದು ಜೇಲಿಗೆ ಹಾಕಿದಾಗ ಜೇಲ ಆಸ್ಪತ್ರೆಯಲ್ಲಿ ನಿಧನರಾದರು.
(೪) ಬಸಲಿಂಗಪ್ಪಾ ನಿಂಗಪ್ಪಾ ಗುಡದವರ, ಸುಲಧಾಳ, ಇವರನ್ನು ಪೋಲೀಸರು ಬಡೆದು ಕೊಂದು ಅವರ ಶವವನ್ನು ಗಿಡಕ್ಕೆ ನೇತು ಹಾಕಿದರು.

———

ತಮ್ಮ ಜೀವಮಾನದಲ್ಲಿಯು ಎಲ್ಲ ಅಂದೋಲನಗಳಲ್ಲಿ ಭಾಗವಹಿಸಿದ ಕರ್ಮಯೋಗಿಗಳು.

ಬೆಳಗಾವಿ ನಗರ.

ಗಂಗಾಧರರಾವ ದೇಶಪಾಂಡೆ.
ಗೋವಿಂದರಾವ ಯಾಳಗಿ.
ಜೀವನರಾವ ಯಾಳಗಿ.
ಮುಂಡಲೀಕಜಿ ಕಾತಗಡೆ.
ಧೋಂಡೋ ರಾಜಾರಾಮ ಠಾಕೂರ.
ಶಿವರಾವ ಕೊಪ್ಪಳ.
ಕೇಶವರಾವ ಗೋಖಲೆ.
ಬಾಬಾಸಾಹೇಬ ಸೋಮಣ.
ಜಯದೇವರಾವ ಕುಲಕರ್ಣಿ.
ದಾಮೂ ಅಂಣಾ ಲೆಂಗಡೆ.
ಶ್ರೀಪಾದರಾವ ಕಿತ್ತೂರ.
ರಾಮಕೃಷ್ಣ ಪ್ರಭು.
ದತ್ತೊಪಂತ ಆಧ್ಯಾಪಕ.
ನಾರಾಣರಾವ ಜೋಶಿ.
ಬಾಪೂ ಗೋಖಲೆ.
ರಾಘು ಅಂಣಾ ಮುಂಡಗಿ.
ದಯಾನಂದ ಅರಳಿಕಟ್ಟಿ.
ಜಾರ್ಜ ಅರಳಿಕಟ್ಟಿ.
ಕೆ. ಎಸ್. ಪಾಟೀಲ ವಕೀಲ.
ಎಂ, ಪಿ. ಪಾಟೀಲ ಸಂಕೇಶ್ವರ.
ರಾಘವೇಂದ್ರ ಮುನೋಳಿ,
ಆನಂತರಾವ ದಾಬಡೆ.
ಶಂಕರರಾವ ಗ್ರಾಮೋವಾಧ್ಯೆ,
ಲಕ್ಷ್ಮೀಬಾಯಿ ಸೋಹನಿ,
ಶಾಂತಾಬಾಯಿ ಕೊಪ್ಪಳ.
ಸತ್ಯಭಾಮಾಬಾಯಿ ಪ್ರಭು,
ಬಿಂದೋ ಶ್ರೀನಿವಾಸ ನಾಯಿಕ.
ಸದಾಶಿವರಾವ ಪರಾಂಜಪೆ
ವಾಸುದೇವ ವಿನಾಯಕ ಪೇಂಡಸೆ
ವಿಷ್ಣು ನೀಲಕಂಠ ಪುರಾಣಿಕ
ಅನಂತ ಗಣೇಶ ಕುಲಕರ್ಣಿ.
ಗೋವಿಂದರಾವ ಬಾಂದೇಕರ ಚಂದಗಡ.

ಬೆಳಗಾವ ತಾಲೂಕ ಹುಡ್ಲಿ

ರಾಮಚಂದ್ರ ವೆಂಕಟೇಶ ವಡವಿ.
ಭಾಸ್ಕರರಾವ (ದಾದಾ) ಕಾಳೆ.
ಗಂಗಪ್ಪ ಬ. ಯಮಕನಮರ್ಡಿ.
ಅಲ್ಲಿಸಾಹೇಬ ವಾರಿಮನಿ.
ಧರೆಪ್ಪ ಬಸರಕೋಡ. ಬಾಗೇಪಾಡಿ

ಖಾನಾಪೂರ ತಾಲೂಕ.

ಹಣಮಂತ ನಾಯಿಕ ನಂದಗಡ.
ಬಸಪ್ಪ ಶಿದಲಿಂಗಪ್ಪ ಅರಗಾವಿ.
ಗಂಗಾಧರ ಗಿರಿಗೌಂಡ
ದತ್ತಾರಾಮ ಜಾಧವ
ಆಪ್ಪಾ ಪಿತ್ರೆ, ಖಾನಾಪೂರ
ವೆಂಕಣ್ಣಾ ನಗರ ಪಾರಿಶವಾಡ

ಬೈಲಹೊಂಗಲ ತಾಲೂಕ,

ಶ್ರೀರಂಗ ವಾಮನ ಕಾಮತ.
ಚನ್ನಪ್ಪ ಶಂಕರಪ್ಪ ವಾಲಿ.
ಶಿವಪುತ್ರಪ್ಪ ಟೊಣ್ಣೆ.
ಗುರುಭಟ್ಟ ಜೋಶಿ ಕಿತ್ತೂರ
ಶಾಂತಿನಾಥ ಇಂಗಳೆ ,,

ಚಿನ್ಮಯ ಸ್ವಾಮಿ ಓಂಕಾರಮಠ.
ಅಬ್ಬಯ್ಯ ಚರಂತಿಮಠ ನಾಗನೂರ
ಭುಜಂಗಪ್ಪ ಬೋಂಗಾಳೆ
ರಾಮರಾವ ಢವಳೆ ಕಿತ್ತೂರ
ಚಿದಂಬರ ಸರಾಫ.
ಸಂಕನಗೌಡಾ ಪಾಟೀಲ ದೇವಲಾಪೂರ,
ಗೋಪಾಳರಾವ ಕುಲಕರ್ಣಿ ಬೆಳವಡಿ.
ವೀರಯ್ಯಾ ವಸ್ತ್ರದ
ಶಿವಲಿಂಗಪ್ಪಾ ಮಾಳಗಿ
ಅಜ್ಜಪ್ಪ ಮಾರಿಹಾಳ ಕಿತ್ತೂರ,

ಹುಕ್ಕೇರಿ ತಾಲೂಕ.

ಹುಕ್ಕೇರಿ

ಮಧ್ವಾಚಾರ್ಯ ಹುಕ್ಕೇರಿ.
ವಿನಾಯಕ ರಾಮಚಂದ್ರ ಮುತಾಲೀಕ.
ತ್ರ್ಯಂಬಕ ದೇವಜಿ ಸಬನೀಸ.

ಸಂಕೇಶ್ವರ.

ಮಹಾದೇವಪ್ಪ ಮೆಂಡಗುದ್ದಿ.
ಸತ್ಯಗೌಡಾ (ಅಪ್ಪಣಗೌಡಾ) ಪಾಟೀಲ.
ಶ್ರೀನಿವಾಸರಾವ ದೇಶಪಾಂಡೆ ವಕೀಲ.
ಶಂಕರ ನೂರಂದಪ್ಪ ಸಾರವಾಡೆ.

ಪಾಚ್ಛಾಪೂರ,

ಡಾ. ರಾಮಚಂದ್ರ ನಾರಾಯಣ ಜೋಶಿ.
ಬಾಳಕೃಷ್ಣ (ಆಂಣುಗುರೂಜಿ) ದೇಶಪಾಂಡೆ.
ವೆಂಕಟೇಶ ರಾಮಚಂದ್ರ ಮಠದ.
ಶಾಮಜಿ ವಿನಾಯಕ ಜೋಶಿ,
ಶ್ರೀಪಾದ ನೀಲಕಂಠ ದೇಶಪಾಂಡೆ.

ಸವದತ್ತಿ ತಾಲೂಕ.

ವೆಂಕರಡ್ಡಿ ತಿಮ್ಮರಡ್ಡಿ ಹೂಲಿ.
ಗೋವಿಂದರಡ್ಡಿ ತಿಮ್ಮರಡ್ಡಿ ಹೂಲಿ.
ಚಂದ್ರಪ್ಪ ಪತ್ತಾರ ಕರಿಕಟ್ಟಿ.
ವೀರಪ್ಪ ನಿಂಗಪ್ಪ ಸುತಗಟ್ಟಿ ಹೊಸೂರ.
ಪದ್ಮರಾಜ ಬೋಗಾರ "
ಬಸಪ್ಪ ತಂಗಾಯಿ ಬೆಟಸೂರ
ಬಾಳಪ್ಪ ಹೂಗಾರ ಮುರಗೋಡ.
ರುದ್ರಪ್ಪ ವಿಜಾಪುರ ಕರಿಕಟ್ಟಿ.
ರಾಮಚಂದ್ರ ಕುಲಕರ್ಣಿ ಕರಿಕಟ್ಟಿ
ಮಲ್ಲೇಶಪ್ಪ ನವಲಗುಂದ ಮುನ್ನೊಳ್ಳಿ
ಸೋಮಪ್ಪ ವಂಣೂರ ಹೊಸೂರ.
ರಾಮು ಮಾಸ್ತರ ಕುಲಕರ್ಣಿ ಹೊಸೂರ.
ನೀಲಕಂಠಯ್ಯ ಗಣಾಚಾರಿ "
ಚನ್ನಪ್ಪ ವಾಲಿಕಾರ ಇನಾಮ ಹೊಂಗಲ.
ರಂಗಪ್ಪ ಗಂಗಲ ಹಂಚಿನಾಳ.
ಗುರುಸಿದ್ದಯ್ಯ ವಿಭೂತಿ ಕರಿಕಟ್ಟಿ
ಹುಸೇನಸಾಹೇಬ ನದಾಫ "

ಗೋಕಾಕ ತಾಲೂಕ.

ವಾಮನರಾವ ದೇಸಾಯಿ ಬಿದರಿ.
ಬಾಳಪ್ಪ ಹೊಳೆಯಾಚಿ ಅಕ್ಕತಂಗೇರಹಾಳ.
ಹುಚ್ಚಪ್ಪ ಹೊಳೆಯಾಚಿ "
ನಿಂಗಪ್ಪ ಕರಲಿಂಗಣ್ಣವರ "
ಅಂಣಾ ಬಸಪ್ಪ ಮರಲಿಂಗಣ್ಣವರ "
ಲಕ್ಷ್ಮಣ ಮಲ್ಹಾರ ದೀಕ್ಷಿತ "
ಪದ್ಮಾವತಿಬಾಯಿ ದೇಸಾಯಿ ಬಿದರಿ. "
ರಾವಜೆಪ್ಪ ಸೋನವಾಲಕರ ಮೂಡಲಗಿ
ಬಾಳಪ್ಪ ಹಾವನಾಳಿ ಗೋಕಾಕ,
ಡಾ. ಅನಂತರಾವ ಬೆಳವಡಿ ಯಾದವಾಡ.
ಅಜ್ಜಪ್ಪ ಬಟಕುರ್ಕಿ ತೊಂಡಿಕಟ್ಟಿ.
ಹಣಮಂತಪ್ಪ ಮಿರ್ಜಿ ಹುಲಕುಂದ
ಬಸಪ್ಪ ಕಳ್ಳಿಗುದ್ದಿ ಕೊಳವಿ.

ಅಥಣಿ ತಾಲೂಕ.

ಅಥಣಿ

ಡಾ. ಬಳವಂತರಾವ ಕುಲಹಳ್ಳಿ.
ಶಿವಪ್ಪ ಜಮಖಂಡಿ.
ಶಾಮರಾವ ಕೌಲಗುಡ್ಡ.
ಗುರು ಮಾಸ್ತರ ಜೇರೆ.

ಅಡಹಳ್ಳಿ

ದಿನಕರರಾವ ಡಂಬಳ.

ನಾರಾಯಣ ಮ. ದೇಶಪಾಂಡೆ ಏನಾಪುರ.
ಗೋಪಾಳರಾವ ಕುಲಕರ್ಣಿ ಕಕಮರಿ.
ರಾಮಭಟ್ಟ ಜೋಶಿ ಕೊಕಟನೂರ.

ಚಿಕ್ಕೋಡಿ ತಾಲೂಕ.

ದತ್ತೋಪಂತ ಗೋಖಲೆ. ಚಿಕ್ಕೋಡಿ
ಬಾ. ಕೇ. ಪಟವರ್ಧನ ಮಾಸ್ತರ ನಿಪ್ಪಾಣಿ.
ಅನಂತರಾವ ಕಟಕೋಳ "

ಮಧ್ವಾಚಾರ್ಯ ಟೊಣಪಿ ನಿಪ್ಪಾಣಿ
ವೀರಪ್ಪ ದೇಶಮಾನೆ. "
ರಾಮಚಂದ್ರ ಗೋವಿಂದ ಕಾಗವಾಡೆ "
ಶ್ರೀಧರ ಪಂತ ಜೋಶಿ. "
ಗೋವಿಂದರಾವ ಪಂಚನದಿಕರ ವೈದ್ಯ. "
ದೇವೇಂದ್ರ (ಪಂಡಿತ) ಶಮನೆವಾಡಿ.
ಸತ್ಯಗೌಡಾ ಪಾಟೀಲ ಭೋಜ.
ಆಪ್ಪಾಸಾಹೇಬ ಪಾಟೀಲ ಮಾಂಜರಿ.

ಸ್ವಾತಂತ್ರ್ಯಾಂದೋಲನದಲ್ಲಿ ಪ್ರತ್ಯಕ್ಷ ಭಾಗವಹಿಸಿದವರು

೧೯೦೬ ಶೆರೆಶಿಂದಿ ಅಂಗಡಿ ಪಿಕೆಟಿಂಗ.

ರಾಮಚಂದ್ರ ಜೋಶಿ ೧೫ ದಿನ
ಗೋವಿಂದರಾವ ಯಾಳಗಿ ೭ ದಿನ
ಮಹಾದೇವ ಶಾಸ್ತ್ರಿ ದಿವೇಕರ ದಂಡ ಮಾತ್ರ
ಆಪ್ಪಾಶಿಂಪಿ ಕಲ್ಲಪ್ಪಾ ಆದಿ ೧೦-೧೫ ಜನರಿಗೆ
೭ ದಿನದಂತೆ ಶಿಕ್ಷೆ ಆದವು.

೧೯೦೯ ಬಾಂಬ ಖಟ್ಲೆ.

ಪಣಮಂತರಾವ ದೇಶಪಾಂಡೆ ದಂಡ+೧೫

೧೯೨೧ ಅಸಹಕಾರ ಆಂದೋಲನ

ಬೆಳಗಾವಿ. ಶಿಕ್ಷಾ ತಿಂಗಳು

ಗಂಗಾಧರರಾವ ದೇಶಪಾಂಡೆ ೬
ದತ್ತಾತ್ರಯ ರಾಮಚಂದ್ರ ಮಜಲಿ ೧೨
ಕೇಶವರಾವ ಗೋಖಲೆ ೧೨
ಧೋಂಡೋ ರಾಜಾರಾಮ ಠಾಕೂರ ೩
ಶಿವರಾವ ಕೊಪ್ಪಳ ೩

ಪಾಚ್ಛಾಪೂರ.

ಡಾ. ರಾಮಚಂದ್ರ ಜೋಶಿ ೧೨
ವಿಶ್ವಂಭರರಾವ ದೇಶಪಾಂಡೆ ೧೨
ಫಕರುದ್ದೀನ ಆರಳಿಕಟ್ಟಿ ದಂಡ

ನಂದಗಡ.

ಹಣಮಂತರಾವ ನಾಯಿಕ ೧೨

ಗೋಕಾಕ.

ತಮ್ಮಣ್ಣಾ ಮಹಾಜನ ೪
ಕೇಶವರಾವ ಜೋಶಿ ೪
ಬಾಳಾಜಿ ರಾಘವೇಂದ್ರ ಕುರಬೇಟ ೪
ಉಮರ ಕಚ್ಚಿ ೩
ಸಮಶೇರ ಸಾಹೇಬ ೪
ಉಸ್ಮಾನ ಸಾಹೇಬ ೨
ಉಳಿದ ೮ ಜನರು ೨

ಅಥಣಿ.

ದಿನಕರ ಸ. ಡಂಬಳ. ೧

೧೯೩೩ ನಾಗಪೂರ ಧ್ವಜ ಸತ್ಯಾಗ್ರಹ

ಬೆಳಗಾವಿ.

ದಯಾನಂದ ಆರಳಿಕಟ್ಟಿ ೭
ದಾಮೋದರ ಮಲ್ಲಪ್ಪಾ ಲೇಂಗಡೆ ೧೨

ಪಾಚ್ಛಾಪೂರ.

ಕಲ್ಲೋ ಬಾಳಾಜಿ ದೀಕ್ಷಿತ ೧೫
ಫಕರುದ್ದೀನ ಆರಳಿಕಟ್ಟಿ ೧೫

ಅಥಣಿ.

ಗುರುನಾಥ ಗೋಪಾಳ ಜೇರೆ ೧೫
ಅನಂತ ರಾಮಚಂದ್ರ ಮರಗಾಲಿ ೧೬

ಚಿಕ್ಕೋಡಿ.

ಮಧ್ವ ಶೇಷಾಚಾರ್ಯ ಗೋಕಾಕ ೧೨
ಆಂಣ್ಣಾಜಿ ಬಾಳಕೃಷ್ಣ ಕುಲಕರ್ಣಿ ೧೨

ರಾಷ್ಟ್ರೀಯ ಪದಗಳು

ಹೋರಾಟಕ್ಕೆ ಸ್ಫೂರ್ತಿಕೊಟ್ಟ ಗೀತಗಳು

ರಾಷ್ಟ್ರೀಯ ಪದಗಳು

೧೯೨೦ ರಿಂದ ೧೯೪೦ ರವರೆಗೆ ನಡೆದ ಆಂದೋಲನಗಳಲ್ಲಿ ಪ್ರಭಾತಫೇರಿ, ನಗರ ಸಂಕೀರ್ತನೆ, ಸಭೆ ಸಮ್ಮೇಲನಗಳಲ್ಲಿ ಹಾಡುತ್ತಿದ್ದ ಕೆಲ ರಾಷ್ಟ್ರೀಯ ಪದಗಳೂ ಜನಜಾಗೃತಿಯ ಕಾರ್ಯ ಮಾಡಿದವು. ಅವುಗಳಲ್ಲಿಯ ಕೆಲವನ್ನು ಇಲ್ಲಿ ಕೊಡಲಾಗಿದೆ.

ಮಾತೃಭೂಮಿ ಜನನಿ

ಮಾತೃಭೂಮಿ ಜನನಿ ನಿನ್ನ ಚರಣ ಸೇವೆ ಮಾಡುವಾ ।
ಪರಮ ಹರುಷದಿಂದ ನಿನ್ನ ಸುಖಕೆ ಪ್ರಾಣವೀಯುವಾ ॥ ಪಲ್ಲ ॥

ತನುಮನಧನದಿಂದ ನಿನ್ನ ಘನತೆಯನ್ನು ಬೆಳೆಸುವಾ ।
ದಣಿಯದೆ ಅನುದಿನವು ದುಡಿದು ಗುಣಿಗಳೆನಿಸಿಕೊಳ್ಳುವಾ ॥ ೧ ॥

ಬಂದುನಿಂದ ತೊಂದರೆಗಳ ಸಂದಣಿಯನು ಸರಿಸುವಾ ।
ಮುಂದೆ ಅಡಿಯನಿಡುತ ಒಂದುಗೂಡಿ ಜಯವ ಪೊಂದುವಾ ॥ ೨ ॥

ಹಿಂದಮಾತೆ ಬಂಧುಭಾವದಿಂದ ನಿನ್ನ ಕಂದುರು ।
ಒಂದುಗೂಡಿ ಪಾರತಂತ್ರ್ಯ ಬಂಧವ ಹರಿದೊಗೆವೆವು ॥ ೩ ॥

ಕೆಟ್ಟ ಕಣ್ಣಿನಿಂದ ನೊಳ್ಪ ದುಷ್ಟಜನರಿಗಂಜದೆ ।
ದಿಟ್ಟತನದೊಳೆಲ್ಲರೊಟ್ಟುಗೂಡುತಿಹೆವು ಕಷ್ಟಕೆ ॥ ೪ ॥

— ಕವಿಭೂಷಣ ಬೆಟಗೇರಿ (೧೯೨೦)

ಸುಮ್ಮನೆ ದೊರಕುವದೇ ಸ್ವರಾಜ್ಯ !

ಸುಮ್ಮನೆ ದೊರಕುವದೇ । ಸ್ವರಾಜ್ಯ !
ಸುಮ್ಮನೆ ದೊರಕುವದೇ ॥ ಪಲ್ಲ ॥

ಖಮ್ಮಗೆ ಕುಳಿತುಂಡು ಬಣ ಮಾತಾಡಿದರೆ ।
ಸುಮ್ಮನೆ ದೊರಕುವದೇ ॥ ಅನುಪಲ್ಲ ॥

ಮನದಲ್ಲಿ ಧೃಡವಿರಬೇಕು । ಹೆಣು ।
ಹಣಮಣ್ಣು ಸುಖದಾಶೆಯನು ಬಿಡಬೇಕು ।
ಜನುಮವ ತೃಣಮಾಡಬೇಕು । ತನ್ನ ।
ತನುವ ದೇಶಕಾರ್ಯಕೀಡಾಡ ಬೇಕು ॥ ೧ ॥ ಸುಮ್ಮನೆ

ಭೇದಬುದ್ಧಿಯನಳಿಯಬೇಕು । ನಿಜ ।
ಸೋದರಭಾವವೆಲ್ಲರೊಳಿರಬೇಕು ।
ಕ್ರೋಧಾದಿನಳ ಗೆಲ್ಲಬೇಕು । ಕಾರ್ಯ ।
ಸಾಧಿಸಿಕೊಳ್ಳ ಧೀರತೆ ಮುಂಚಿ ಬೇಕು ॥ ೨ ॥ ಸುಮ್ಮನೆ

ಕಾಯ ಕಷ್ಟವ ಪಡಬೇಕು । ಎಲ್ಲಾ ।
ಮಾಯಾಪಾಶವ ಕತ್ತರಿಸಿ ಚಲ್ಲಬೇಕು ।
ಸಾಯಲಂಜಿಕೆ ಬಿಡಬೇಕು । ಯದು ।
ರಾಯ ಮುದ್ದು ಮೋಹನನು ನಂಬಬೇಕು ॥ ೩ ॥
ಸುಮ್ಮನೆ ದೊರಕುವದೇ ಸ್ವರಾಜ್ಯ ।

—ಶ್ರೀ. ಮುದವೀಡು ಕೃಷ್ಣರಾಯ (೧೯೨೦)

ಮರೆತ ಏತಕಯ್ಯಾ

ಮರೆತೆ ಏತಕಯ್ಯಾ ನಿನ್ನ ಮಾತೃಭೂಮಿಯ ॥ ಪಲ್ಲ ॥
ನಿರುತ ನಿನ್ನ ಹೊರೆಯ ಹೊತ್ತು ಪೊರೆವ ತಾಯಿಯ ॥

ಮರೆತೆ ಏತಕಯ್ಯಾ ॥ ಅನುಪಲ್ಲ ॥

ಒಂಭೆಕ್ತು ತಿಂಗಳು ತನ್ನೋಳಿಂಬು ಗೊಟ್ಟವಳು ತಾಯಿ ।
ತೊಂಬತ್ತು ವರುಷಾದರೂ ಪೊರೆವ ಕುಂಭಿನಿ ತಾಯಲ್ಲೋ ।
ಮಾತೃಭೂಮಿಯ ॥ ೧ ॥

ನಡೆನುಡಿ ಬರುವತನಕ ಒಡಲಿಗನ್ನ ಕೊಡುವಳು ತಾಯಿ
ಕಡೆತನಕ ನಿನ್ನೊಡಲಿಗೆ ಅನ್ನ ಕೊಡುವಳು ತಾಯಲ್ಲೊ
ಮಾತೃಭೂಮಿಯ ॥ ೨ ॥

ಗೇಣು ಭೂಮಿಗಾಗಿ ಎನ್ನ ಪ್ರಾಣ ಹೋಗಲಿ ಎಂದೆನ್ನುವಿ ।
ಕಾಣದೇನೂ ನಾಡೇ ಪರರಾಧೀನವಾಗಿರುವದು ಮನುಜಾ ।
ಮಾತೃಭೂಮಿಯ ॥ ೩ ॥

—ಶ್ರೀ. ಮುದವೀಡು (೧೯೩೦)

ಎಚ್ಚರಿಕೆ ಎಚ್ಚರಿಕೆ !!

ಎಚ್ಚರಿಕೆಚ್ಚರಿಕಂತರಂಗದ ಗುಟ್ಟು ಬಿಚ್ಚುವೆನೆಚ್ಚರಿಕೆ ।
ಹುಚ್ಚು ಮಾತುಗಳೆಂದು ತುಚ್ಛಮಾಡಲು ಬ್ಯಾಡ ನಿಶ್ಚಯವೆಚ್ಚರಿಕೆ ।

ಪರದಾಸ್ಯ ಪರತಂತ್ರ ಪರರಾಜ್ಯವೆಂದಿಗೂ ಸ್ಥಿರವೆಲ್ಲ ಎಚ್ಚರಕೆ ।
ಹರಸಿ ಪೌರುಷನ ಕುಕ್ಕರಿಸಿ ನೆಲಕೆ ಬಾಯ್ತರಿಸುವದೆಚ್ಚರಿಕೆ ॥ ೧ ॥

ಮಾನಕಳೆದು ಅಭಿಮಾನಕಳೆದು ಸತ್ವಹಾನಿಗೈದೆಚ್ಚರಿಕೆ ।
ಮಾನವನನು ಶುದ್ಧಶ್ವಾನಂಗೈವುದು ಪರಾಧ್ಹಿನತೆ ಎಚ್ಚರಿಕೆ ॥ ೨ ॥

ಮಳೆಯಾಗಿ ಬೆಳೆಬಂದು ಗಳಿಗೆ ತುಂಬಿದ ಕಾಳು ಉಳಿಯದಾಯ್ತುಚ್ಚರಿಕೆ ।
ಬಳಲಿಕೆ ತಪ್ಪದು ಅಳವು ಬಂದು ನಿಂದಿತಳಗಾಲವೆಚ್ಚರಿಕೆ ॥ ೩

ರಾಟವುರಿದು ಮಕ್ಕಳಾಟಕ್ಕೆ ಹೋಯಿತು ಗೂಟವಾಯ್ತೆಚ್ಚರಿಕೆ ।
ರಾಟಕಾಣದೆ ಬಿದ್ದರ್ ಕೋಟಿ ಹೆಂಗಸರು ಗೋಳಾಟದೊಳೆಚ್ಚರಿಕೆ ॥ ೪ ॥

ಮಗ್ಗದ ವ್ಯವಸಾಯ ಮುಗ್ಗಲು ನೇಕಾರರ್ ಕುಗ್ಗಿದರೆಚ್ಚರಿಕೆ ।
ಆಗ್ಗಾಗಿ ಹೊಟ್ಟೆಯ ತಗ್ಗು ತುಂಬಲು ಕಾಡು ಕಗ್ಗುಂಬರೆಚ್ಚರಿಕೆ ॥ ೫ ॥

ಬಂಣ್ಣದ ಬಟ್ಟೆಗಳು ತಣ್ಣಗಾದವು ಬಲು ತಿಣ್ಣಬಂತೆಚ್ಚರಿಕೆ ।
ಬಣ್ಣಗಾರರು ಸತ್ತು ಮಣ್ಣು ಕೂಡಿದರಯ್ಯಾ ಕಣ್ಣಿಲ್ಲೇನೆಚ್ಚರಿಕೆ ॥ ೬ ॥

ಜಾಲಗಾರರ ಕುಲನೂಲವಡಗಿ ಹೋಯಿತೇಳದಾಯ್ತೆಚ್ಚರಿಕೆ ।
ಕೂಲಿಕುಂಬಳಿ ಮಾಡಿಕಾಲವಾದರು ತಿನಲು ಕೂಳಿಲ್ಲವೆಚ್ಚರಿಕೆ ॥ ೬ ॥

ಕಸಬೆಲ್ಲ ಮುಳುಗಿರೆ ಕಸಬುದಾರರು ಬಿದ್ದರ್ ವೆಸನದೋಳೆಚ್ಚರಿಕೆ ।
ಕಸಿವಿಸಿಪಟ್ಟು ಕಾಲ್ ಹೊಸೆದರೂ ಹೊಟ್ಟಿಗೆ ಅಶನವಿಲ್ಲೆಚ್ಚರಿಕೆ ॥ ೮ ॥

ಯಾರ ನೋಡಿದರೂ ವ್ಯಾಪಾರವೆಂಬುದು ಮೊಟ್ಟೆಗಾರಿಕೆ ಎಚ್ಚರಿಕೆ ।
ಹೇರಿಂದಿಲ್ಲಿ ಕೈಗಾರಿಕೆ ಪರರದು ಮಾರುವರೆಚ್ಚರಿಕೆ ॥ ೯ ॥

ಹತ್ತಿಬೀಳ ಬೀಜ ಬಿತ್ತಿ ಬೆಳೆವಕಾಳು ಹೊತ್ತೊಯ್ದರೆಚ್ಚರಿಕೆ ।
ಅತ್ತಣವರು ಇತ್ತಸತ್ತರು ಸರಕಾರ ಚಿತ್ತೈಸದೆಚ್ಚರಿಕೆ ॥ ೧೦ ॥

ಈರೀತಿ ಮಾಯಾ ಬಜಾರದೊಳಗೆ ಮೋಸಗಾರಿಕೆ ಎಚ್ಚರಿಕೆ ।
ಯಾರು ಯಾರಿಗೆ ಹೇಳಿಕೇಳಿದರೂ ದಾರಿ ತಿಳಿಯದಾಯಿತೆಚ್ಚರಿಕೆ ॥ ೧೧ ॥

ಮದ್ದುಗುಂಡುಬ್ಯಾಡ ಯುದ್ಧಮುತ್ತಿಗೆಬ್ಯಾಡ ಬುದ್ಧಿಸಾಕೆಚ್ಚರಿಕೆ ।
ಗದ್ದಲಕೊಲೆಗಳ ಸದ್ದು ಇಲ್ಲದೆ ರಾಜ್ಯಗೆದ್ದೇವು ಎಚ್ಚರಿಕೆ ॥ ೧೨ ॥

ಕೈರಾಟತೋಫಿನ ಗುಂಡಿಗೆ ಮದ್ದುಸಹಕಾರವೆಚ್ಚರಿಕೆ ।
ಕಾರಾಗೃಹವೆ ರಣಧೀರತೆ ವಿಜಯಕೆ ದಾರಿಕಂಡೆಚ್ಚರಿಕೆ ॥ ೧೩ ॥

ಇದ್ದಸ್ಥಿತಿಯನ್ನೆಲ್ಲ ಇದ್ದಕ್ಕಿದ್ದಹಾಗೆ ಹೇಳಿದ್ದು ಎಚ್ಚರಿಕೆ ।
ಮುದ್ದು ಮೋಹನನ ತತ್ವ ಶುದ್ಧ ಮನದಿ ತಿದ್ದೋ ತಿದ್ದಚ್ಚರಿಕೆ ॥ ೧೪ ॥

— ಶ್ರೀ. ಮುದಿವೀಡು (೧೯೨೦)

ಸ್ವಾತಂತ್ರ್ಯ ಎಂದು ದೊರಕುವದು ?

ಸ್ವಾತಂತ್ರ್ಯವು ದೊರಕುವದು ನಮ್ಮದೇಶಕಾದಿನ ॥ ಪಲ್ಲ ॥

ಇಬ್ಬರ ಜಗಳಾಟದಿಂದ ಮೂರನೆಯವನು ।
ಕೊಬ್ಬುವನೆಂಬುದು ತಿಳಿದು ಕಾರ್ಯಗೈದೊಡೆ ॥ ೧ ॥

ಹೊಲಮನೆ ಬಂಧುಗಳ ಸೌಖ್ಯ ತೊರೆವುದಲ್ಲದೆ ।
ನಲುಮೆಯ ಪ್ರಾಣವನು ಚಲ್ಲಲಂಜದಿರ್ದೊಡೆ ॥ ೨ ॥

ನನ್ನ ದೇಶ ನನ್ನ ಜನರು ನನ್ನೊಡವೆಗಳು ।
ಎನ್ನುವುದಭಿಮಾನ ನಮ್ಮೊಳಿರುವುದಾದೊಡೆ ॥ ೩ ॥

ಸತಿಸುತಹಿತ ಮಿತ್ರ ಪರಸ್ಪರರು ನಾಡಿನ ।
ಹಿತಕಾಗಿಯೇ ಮೋದದಿಂದ ಕಾರ್ಯಗೈದೊಡೆ ॥ ೪ ॥

ಎದ್ದರೆ ಸ್ವಾತಂತ್ರ್ಯ ಸ್ವಾತಂತ್ರ್ಯ ಕುಳಿತರೆ ।
ಬಿದ್ದರೆ ಕನಸಿನೊಳು ಸ್ವಾತಂತ್ರ್ಯ ನೆನೆಮೊಡೆ ॥ ೫ ॥

— ಶ್ರೀ. ರಾ. ವೆ. ಕರಿಗುದರಿ (೧೯೩೨)

ಕರ್ನಾಟಕ ವೀರರೇಳಿ!

ಕರ್ನಾಟ ವೀರರೇಳಿ । ರಣಭೇರಿ ಕೊಂಬ ಕೇಳಿ ।
ಸಾತ್ಯಂತ್ರ್ಯ ಮಂತ್ರವನು ಹೇಳಿ । ಪರದಾಸ್ಯ ದೇಹ ಸೀಳಿ ॥ ಪಲ್ಲ ॥

ಪರತಂತ್ರ ಕತ್ತಲೆಯು ಹಾರಿ । ಸ್ವಾತಂತ್ರ್ಯ ಸೂರ್ಯ ತೋರಿ ॥
ಭಾರತೀಯ ಜೀವ ಕಳೆಯೇರಿ । ಪರವೈರಿಗಾಯ್ತು ಮಹಾಮಾರಿ ॥ ೧ ॥

ಧುರದೀರ ಬುಕ್ಕ ಮಾಧವರು । ಪುಲಕೇಶಿ ವೀರ ವಿಕ್ರಮರು ॥
ಸ್ವಾತಂತ್ರ್ಯ ಮಂತ್ರ ಸಾರಿದರು । ಪರರಾಜರನ್ನು ಮೆಟ್ಟಿದರು ॥ ೨ ॥

ಲಾಲಾಜಿ ಲಾಠಿ ಹೊಡೆತದಲಿ । ಕಲಿ ಜತಿನದಾಸ ಬಹುಬಳಲಿ ॥
ನಿಮಗಾಗಿ ಕೊಟ್ಟರಾತ್ಮಬಲಿ । ಕುಳಿತಿಹರು ನಗುತ ಸ್ವರ್ಗದಲಿ ॥ ೩ ॥

ಭಾರತದ ರಕ್ತವನು ಹೀರಿ । ವೀರತೆಯ ಕುಕ್ಕಿ ನೆಲಕೂರಿ ।
ಭಾರತೀಯ ಮಾನವನು ಮಾರಿ । ಮಾಡಿದರು ನಾಡ ಸೆರೆಸೂರಿ ॥ ೪ ॥

ಹಿಂದೀಯ ಸಾರ್ವಭೌಮಾ । ಆ ಗಾಂಧಿಯೇ ಮಹಾತ್ಮಾ ॥
ಸ್ವಾತಂತ್ರ್ಯಕಾಗಿ ಕಲಿಛೀಮ । ಸೇನಾನಿ ನಿಂತ ನಿಸ್ಸೀಮ ॥ ೫ ॥

ಸ್ವಾತಂತ್ರ್ಯ ಸ್ವಾಭಿಮಾನ । ಹೊಮ್ಮಿಕ್ಕಿ ಕಾದಿರಣ್ಣ ॥
ಧುಮ್ಮಿಕ್ಕಿ ರಣದೊಳಿನ್ನಾ । ಹಗೆಯನ್ನು ಮೆಟ್ಟಿರಣ್ಣಾ ॥ ೬ ॥

— ರಾಮರಾವ ಜಿ. ಹೆಜೀಬ

ಧನ್ಯ ಭಾರತ ವೀರ !

ಧನ್ಯ ಭಾರತವೀರಕೇಸರಿಗಳೇ ಭಾವು ! ॥ ಪಲ್ಲ ॥
ನಿಮ್ಮ ಪಡೆದಿಹ ತಾಯಿತಂದೆಗಳು ಧನ್ಯರೋ ।
ನಿಮ್ಮಪೆತ್ತಿಹ ಭೂಮಾತೆ ಅತಿಮಾನ್ಯಳೋ ॥ ಅನುಪಲ್ಲ ॥
ಧನ್ಯ ಭಾರತವೀರಕೇಸರಿಗಳೇ ಭಾವು !

ದೇಶದೇಳಿಗೆಗಾಗಿ ಸೋಸುತಿರಿ ಕಷ್ಟವನು ।
ಮಾಸದಿರುವದು ನಿಮ್ಮ ಕೀರ್ತಿ ಎಂದೆಂದಿಗೂ ॥ ಧನ್ಯ.... ।೧॥

ಮಿಗಿಲಾದ ಬೆಂಬಲವು ಇಹುದು ನಿಮಗಲ್ಲದೆ ।
ಜಗದೀಶ ಪೂರೆಯುವನು ಬೇಡಸಂಶಯವಿದಕೆ ॥ ಧನ್ಯ.... ॥೨॥

ಜಯಹೊಂದಿ ನೀವು ಕ್ಷೇಮದಿ ತಿರುಗಿ ಬರಲೆಂದು ।
ನಯದಿಂದ ಬೇಡುವೆವು ಪರಮಾತ್ಮನನು ಸತತ ॥ ಧನ್ಯ.... ।೩॥

—ರಾ. ವೆ. ಕರಗುದರಿ (೧೯೩೦)

ಸ್ವಾತಂತ್ರ್ಯದ ರವಿಯೇ !

ಸ್ವಾತಂತ್ರ್ಯದ ರವಿಯೇ ! ಮೂಡ್ವ ! ಸ್ವಾತಂತ್ರ್ಯದ ರವಿಯೇ ! ॥ ಪಲ್ಲ ॥
ಕಾತರಿಸಿದ ಭಾರತವ ಬೆಳಗಲು ॥ ಅನುಪಲ್ಲ ॥

ಪರದಾಸ್ಯದ ತಿಮಿರವು ಮುಸುಕುತಲೀ ।
ಕುರಿಗಳ ಗೈದಿಹ ನಮ್ಮೆಲ್ಲರನು ।
ಮರೆತು ಧೈರ್ಯ ಸಾಹಸಕಾರ್ಯಾದಿಗಳ್ ।
ಇರದು ದೇಶಪ್ರೇಮವು ನಮ್ಮೊಳಗೆ ॥ ಸ್ವಾತಂತ್ರ್ಯದ ॥ ೧ ॥

ಇಳಿಯತಿಹುದಧೋಗತಿಗೆ ದೇಶವು ।
ಉಳಿಯುವ ಚಿನ್ಹವು ಕಾಣದಾಯಿತು ॥
ನಳನರೂಪಿ ಭಾರತವು ನಿನ್ನುದಯ ।
ದೆಳೆಕಿರಣಗಳನು ಬಯಸುತಲಿಹುದು ॥ ಸ್ವಾತಂತ್ರ್ಯದ ॥ ೨ ॥

ಚಿಂತಿಸದಿರು ಮನಸೇ !

ಚಿಂತಿಸದಿರು ಮನಸೇ । ನೆನಸೆ । ಚಿಂತಿಸದಿರುಮನಸೆ ॥ ಪಲ್ಲ ॥
ಚಿಂತೆಯೇ ಮುಪ್ಪು ಸಂತೋಷವೇ ಯವ್ವನ । **ಚಿಂತಿಸದಿರು** ॥ **ಅ. ಪಲ್ಲ** ॥

ದೇಶಕಾಗಿ ಜನರೀಸು ಮಡಿದಿಹರು ।
ಕ್ಲೇಶವೇ ಬಂಧಿಸೆ ಮಾಸವು ನಾಲ್ಕು ॥ ೧ ॥ **ಚಿಂತಿಸದಿರು–**

ಬಂಧನದೊಳಿರಿಸುತ ಕಂಡ ಕೆಲಸಮಾ– ।
ಡೆಂದು ಪೇಳಿದೊಡೆ ನೊಂದುಕೊಳ್ಳದಿರು ॥ ೨ ॥ **ಚಿಂತಿಸದಿರು–**

ಹೀನವಸ್ತ್ರ ರುಚಿಗಾಣದನ್ನ ದಿಂ ।
ಪ್ರಾಣವಕಾಯ್ವ ಭಯಾನಕ ಸ್ಥಿತಿಯೊಳು ॥ ೩ ॥ **ಚಿಂತಿಸದಿರು–**

— ಕರಿಗುದರಿ (೧೯೩೦)

ಹೇಯನ್ನ ಭರತಮಾತೆ !

ಹೇಯನ್ನು ಭರತಮಾತೆ । ಏನಿದಾಯ್ತೆ । ಏನಿದಾಯ್ತೆ ॥ ಪಲ್ಲ ॥

ಮೊಲ ಹಸಿಯಲು ಹುಲಿಯ ಮೊಲೆ ಕಡಿದು ।
ಒಲೆವಂತೆ ವೈರವನು ಗೆಲಿದು ।
ಬಲವಾದ ಐಕ್ಯವನು ಗೈದು ।
ನಲಿದ ಆ ಋಷಿಗೆಳಾಶ್ರಮವು । ಧೀರರಾಗರವು ।
ತೋರದಂತಾಯ್ತೆ । ತೋರದಂತಾಯ್ತೆ । ಹೇ ನನ್ನ ॥ ೧ ॥

ವೈರಾಗ್ಯದ ಧ್ವಜಮೇಲ್ ಹಿಡಿದಾ ।
ಕ್ರೂರರನು ಪಾದದಲಿ ತುಳಿದಾ ।
ಗೌರವದಿ ಲೋಕವನು ಪೊರೆದಾ
ಭಾರತೀಯರ ನೃಪಾಸನವು । ಕಲಿಗಳಾಗರವು ।
ಇಲ್ಲದಂತಾಯ್ತೇ । ಇಲ್ಲದಂತಾಯ್ತೇ । ಹೇ ನನ್ನ ॥ ೨ ॥

ಮನಸೆಳೆಯುವ ಒಡವೆಯ ರಚಿಸಿ ।
ಜನಕೊಳ್ಳ ದೇಶ ಸಂಚರಿಸಿ ।
ಘನ ವಿಭವನಿಲ್ಲಿ ನೆಲೆಗೊಳಿಸಿ ।
ನೆಲೆಸಿದಾ ಕನಕ ಪರ್ವತವು । ಧನದ ಮಂದಿರವು ।
ಕನಸಿನಂತಾಯ್ತೆ । ಕನಸಿನಂತಾಯ್ತೆ । ಹೇ ನನ್ನ ॥ ೩॥

—ಮು. ಬಾ. ಕುಲಕರ್ಣಿ, ಬೈಲಹೊಂಗಲ (೧೯೩೦)

ಭಾರತಾಂಬೆಯ ಹೀನ ಸ್ಥಿತಿ!

ಭಾರತಾಂಬೆಯ ಹೀನ ಸ್ಥಿತಿಯನು ಕಣ್ಣು ತೆರೆಯುತ ನೋಡಿರಿ ।
ಪಾರತಂತ್ರ್ಯದಿ ಸಿಲುಕಿ ಬಳಲುವ ತಾಯಿಯನು ನೀವ್ ಬಿಡಿಸಿರಿ ॥ ಪಲ್ಲ ॥

ಒಮ್ಮೆಯಾದರೂ ದೇಶಸೇವೆಯ ಮಾಡಿ ಪುಣ್ಯವ ಪಡೆಯಿರಿ ।
ಉಮ್ಮಳಿಸುತಿಹ ಭರತಭೂಮಿಯ ಸುಖದ ಯುದ್ಧಕೆ ನಡೆಯಿರಿ ॥ ೧ ॥

ನಮ್ಮ ನಾಡಿನ ಹೆಣ್ಣು ಮಕ್ಕಳು ವೀರಶ್ರೀಯನು ಬೀರುತ ।
ಒಮ್ಮನಸಿನೊಳ್ ರಾಷ್ಟ್ರಕಾರ್ಯಕೆ ಪ್ರಾಣಕೊಡುತಿಹರಲ್ಲವೇ ॥ ೨ ॥

ನಮ್ಮ ದೇಶದ ಸಿರಿಯು ಎಲ್ಲವು ಅನ್ಯ ದೇಶವ ಸೇರಿತು ।
ಒಮ್ಮೆಯಾದರೂ ಹೊಟ್ಟೆತುಂಬಾ ಅನ್ನ ಸಿಗದಂತಾಯಿತು ॥ ೩ ॥

ಸಕಲ ಸಂಪತ್ತುಗಳ ಶಿಖರವ ಪಡೆದ ನಮ್ಮೀ ದೇಶವು ।
ವಿಕಲವಾಗ.ತ ಪಾರತಂತ್ರ್ಯದಿ ಸಿಲುಕಿ ಆಯಿತು ನಾಶವು ॥ ೪ ॥

ದೇಶಸೇವೆಯ ಸಮರಕಾಲದಿ ಪ್ರಾಣಹೋದರು ನೋಡದೇ ।
ದೇವಕೃಪೆಯನು ಪಡೆದು ದೇಶವನುಳಿಸಿಕೊಳ್ಳಲು ನಡೆಯಿರಿ ॥ ೫ ॥

ಕಂದ ಪದ್ಯ

ಭಾರತಾಂಬೆಗೆ ಮೊದಲೊಳು ಮೆಣ್ ।
ಗುರುವರ ಶ್ರೀ ಲೋಕಮಾನ್ಯ ಮಹಾತ್ಮರಿಗೆ ।
ಹಿರಿದಾದ ದೇಶ ಭಕ್ತರಿ
ಗೆರಗುವೆನತಿ ಭಕ್ತಿಯಿಂದ ಶಿರಬಾಗಿ ॥ ೧ ॥

—ಕವಿಭೂಷಣ ಬೆಟಗೇರಿ (೧೯೩೦)

ತಪ್ಪದ ಕಾವಲಿ ಹರಿಯಿತು
ಕೊಪ್ಪರಿಗೆಯ ತುಂಬ ಹಾಲು ಮಜ್ಜಿಗೆ ಮೊಸರು ।
ದಪ್ಪಾದ ಕೆನೆಯನುಂಡರು !
ಒಪ್ಪತ್ತಿಗೆ ಹಬ್ಬದಲಿ ಸಿಗವಲ್ಲೀಗ ॥ ೧ ॥

— ರಾಘವದಾಸ ರಾಮನಾಮೆ (೧೯೩೦)

॥ ಏಳು ಏಳೈ ಜವದಿ ॥

ಏಳು ಏಳೈ ಜವದಿ ಭಾರತೀಯ ಸುಕುಮಾರಾ ।
ಕಾಲವಲ್ಲವಿದು ನಿದ್ರೆಯ ಮಾಡುವದಕೆ ॥ ಪಲ್ಲ ॥

ಪರಮ ಸುಜ್ಞಾನಾರುಣನ ಉದಯದಿಂದೀಗ ।
ಹರಿದುದು ಜ್ಞಾನಾಂಧಃಕಾರವೆಲ್ಲವು ತಾ ।
ನೆರೆಯೊಳಿಹ ಜನರೆಲ್ಲೆಚ್ಚತ್ತು ಕರ್ತವ್ಯ ।
ನಿರತರಾಗಿರಲು ನಿದ್ರಿಪುದು ಸರಿ ಏನು? ॥ ೧ ॥

ನೆರೆವಿಬುಧಗಣವು ನಿಜದೇಹ ಶೋಣಿತ ಜಲವ ।
ಕರದೊಳಾಂತು ಅರ್ಘ್ಯವ ನೀಡುವದಕೆ ।
ತ್ವರದಿಂ ಸ್ವರಾಜ್ಯ ಭಾಸ್ಕರನ ಬರುವಿಕೆಯನ್ನು ।
ನಿರುಕಿಸುತಲಿರುತಿಹರು ಬೇಗನೇಳಯ್ಯಾ ॥ ೨ ॥

ನಿನ್ನ ಬಾಂಧವರೆಲ್ಲರೊಂದಾಗಿ ಸುಮತಿಯಂ ।
ಚನ್ನಾಗಿ ಗಳಿಸಲ್ಕೆ ಮಠಕೆ ಪೋಗಿಹರು ।
ಇನ್ನು ನೀನೆದ್ದು ಮುಖ ತೊಳೆದು ಶಾಲೆಗೆ ಪೋಗಿ ।
ಸನ್ನುತ ಸ್ವಾತಂತ್ರ್ಯ ಪಾಠವನೋದೈ ॥ ೩ ॥

ಹರಿಯ ದಯದಿಂ ಪರಮ ಗುರು ದೊರಕಿಹನೀಗ ।
ಕರುಣಾಳುವಾದ ಗಿರಿಪುರವಾಸ ಕೃಷ್ಣನಂ ।
ಸ್ಮರಿಸುತ ನಿರುತ ಸಂತಸದಿಂದ್ಹಿಬಾಳ್ಕೈ
ಏಳು ಏಳೈ ಜವದಿ ಭಾರತೀಯ ಸುಕುಮಾರಾ ॥ ೪ ॥

—ಬೆಟಗೇರಿ ಕೃಷ್ಣಶರ್ಮ (೧೯೩೦)

ಧರಣಿಯೊಳು ಭರತಖಂಡದ ಸಿರಿಗೆ ಸರಿಗಾಣೆವೆಂದು ।
ಮರ ಮರ ಮರಗುತ ಪರನಾಡುಗಳು ।
ವನಚರರಂತೆ ತಿರುಗುತ್ತ ಗುಡ್ಡಗಾಡಿನೊಳು ।
ಪರಿ ಪರಿ ಕಷ್ಟ ಹೊಂದಿದವು ಪೂರ್ವ ಕಾಲದೊಳು ।
ಏರು— ಸಿರಿಯು ಹರಿದುಹೋಗಿ ಈಗ ತಿರಿದು ತಿಂದರಿನ್ನು ಕಣ್
ತೆರೆದು ನೋಡವಲ್ಲರೀ ಹಿಂದುಗಳು ।
ಎಂಥ ಮರುಳ ಮಂದಿ ಹುಟ್ಯಾರ ನಮ್ಮ ನಾಡಿನೊಳು ॥ ೧ ॥

ಬೆಳ್ಳಿ ಭಂಗಾರ ಹೊಗೆಯು ಬಹಳ ನೆಳ್ಳಗವಿಸಿ ದೇಶವೆಲ್ಲ ।
ಮೊಳ್ಳ ಬಿಡದೇ ತುಂಬಿತ್ತು ಗಗನದೊಳು ।
ವಿದ್ಯೆಯ ಕೊಳ್ಳಿ ಮಿಂಚುತಿತ್ತು ಹೀಮಾದ್ರಿಯೊಳು ।
ಕಂಡು ಸಳ್ ಹೊಡೆದು ಹೋಗತಿದ್ರು ವೈರಿಗಳು ।
ಏರು — ಸುಳ್ಳು ಮಾತ ಅಲ್ಲ ಕೀರ್ತಿಬಳ್ಳಿ ಹಬ್ಬಿಕೊಂಡು ವೀರ
ಡೊಳ್ಳು ಹೊಡೆಯುತ್ತಿತ್ತು ದಿಗ್ ದೇಶದೊಳು ॥ ೨ ॥

ದೂರಿನ ಮಾತ ಅಲ್ಲ ಆರ್ಧನೂರ ವರುಷದೊಳಗ ಮಿತಿ
ಮೀರಿ ಸಾಹಸ ಮಾಡ್ಯಾರ ಜಪಾನಿಗಳು ।
ಸೆರೆ ಸೂರಿ ಮಾಡಿ ಬಿಟ್ಟಾರ ವಿದ್ಯಾ ಬುದ್ಧಿಯಲಿ ।
ತಮ್ಮ ವೀರಕಾಳಿ ಹಿಡಿಸ್ಯಾರ ಪಂಚ ಖಂಡದಲಿ ।
ಏರು— ಆರತಿಂಗಳವಾರಿ ಹಡಗಾ ಏರಿ ಬಂದು ಇಂಗ್ರೇಜರು ।
ಬೀರಗಳಿಕೆ ಮಾಡ್ಯಾರ ಭೂಲೋಕದೊಳು ।
ಸೂರ್ಯ ಮೂಡಿ ಮುಳುಗವಲ್ಲರಿ ರಾಜ್ಯದೊಳು । ॥ ೩ ॥

ಇಳವು— ಬೆಳೆದ ರಾಜ್ಯವೆಲ್ಲ ಅಳದು ಹೋದರಿನ್ನು ತಿಳಿಯವಲ್ತು ಜನರಿಗೆ ।
ಹೇಳಿದರ ಕಾಣಸ್ತತಿ ನಗಿ ।
ಹೊಳೆಯ ನೀರ ಪರಿ ಹರಿದು ಹೋಗತತಿ ।
ಉಳಿಯವಲ್ತು ಒಂದ ಮಗಿ ।
ನೋಡಿ ಆಗತೈತಿ ತಗಬಗಿ ।
ಹೋತು ಹರವಿ ಒಡೆದು ಹಂಚಾಗಿ ।
ಅಶನಕ್ಕ ಬಂತು ಬಲು ಬಿಗಿ ।
ಅಭಿಮಾನವಿಲ್ಲ ಜನರಿಗಿ ।
ಸುಡಲಿವರ ಜನ್ಮ ತಗಿ ತಗಿ ।
ಏರು— ಸಾರಿಹೇಳತೇನ ಕೇಳ್ರೋ ಕೋರಿಹರಕ ಮುಂಡ್ಯಾ ಗಂಡ್ಯಾ

೬

ಪೋಲೀಸರ ಅತ್ಯಾಚಾರ

ಸೆರೆಮನೆಯ ಸುಖದುಃಖಗಳು

ವಸುಂಧರಿ ಮುಚ್ಚಿಕೊಂಡ್ರು ನಿಮನ್ಯಾರ ಕೇಳವರು ।
ನೋಮಾರಿತನ ಬಿಟ್ಟು ಬಿಡ್ರೋ ನೀವೆಲ್ಲರು ॥ ೪ ॥
ಸಿರಿಯು ಹರಿದು ಹೋಗಿ ಈಗ ತಿರಿದು ತಿಂದರಿನ್ನು ।
ಕಂಣ್ ತೆರೆದು ನೋಡವಲ್ಲರೀ ಹಿಂದುಗಳು ।
ಎಂಥ ಮರುಳ ಮುಂದಿ ಹುಟ್ಯಾರ ನಮ್ಮ ನಾಚಿನೊಳು ।

ಅಪೂರ್ಣ

—ಕವಿ : **ಅಜ್ಞಾತ** (೧೯೦೮)

ಮಾತೃ ಭೂಮಿ ತೇರೆ !

ಐ ಮಾತೃ ಭೂಮಿ ತೇರಿ । ಚರಣೋಮೆ ಶೀರ ನಮಾವೂ ।
ಮೈ ಭಕ್ತಭೇಟ ಅಪನೀ । ತೇರೀ ಚರಣ್‌ಮೆ ಲಾವೂ ॥ ೧ ॥

ಮಾಥೇ ಪೆ ತೂ ಹೋ ಚಂದನ । ಛಾತೀಪೆ ತೂ ಹೋ ಮಾಲಾ ।
ಜಿವ್ಹಾಪೆ ಗೀತ ತೂ ಹೋ । ಮೈ ತೇರಾ ನಾಮ ಗಾವೂ ॥ ೨ ॥

ಜಿಸಪೆ ಸಪೂತ ಉಪಜೆ । ತ್ರೀರಾಮ ಕೃಷ್ಣ ಜೈಸೆ ।
ಗಾಂಧೀ ತಿಲಕ ಜೈಸೆ ।
ಉಸ ತೇರಿ ಧೂಲೀಕೋ ಮೈ । ನಿಜ ಶಿರ್ಷ ಪೆ ಚಢಾವೂ ॥ ೩ ॥

ಮಾನಿ ಸಮುದ್ರ ಜಿಸಕೆ । ಧೂಲೀಕಾ ಪಾನ ಕರಕೆ ।
ಕರತಾ ಹೈಮಾನ ತೇರಾ । ಉಸ್ ಪೈರಕೊ ನಮಾವೊ ॥ ೪ ॥

ಸೇವಾಮೇ ತೇರಿ ಸಾರೆ । ಭೇದೋಂಕೊ ಭೂಲಜಾವೂ ।
ವಹ ಪೂಣ್ಯನಾಮ ತೇರಾ । ಪ್ರತಿ ದಿನ ಸುನೂ ಸುನಾವೂ ॥ ೫ ॥

ತೇರೇಹಿ ಕಾಮ ಆವೂ । ತೇರಾಹೀ ಮಂತ್ರಗಾವೂ ।
ಮನ ಔರ ದೇಹ ತುಝುಪರ್ । ಬಲಿಜಾನ ಮೈ ಚಢಾವು ॥ ೬ ॥

—**ರವಿಂದ್ರನಾಥ ಟಾಗೋರ** (೧೯೨೦)

ವಿಜಯೀ ವಿಶ್ವ ತಿರಂಗಾ ಪ್ಯಾರಾ !

ವಿಜಯೀ ವಿಶ್ವ ತಿರಂಗಾ ಪ್ಯಾರಾ !
ಝಂಡಾ ಊಂಚಾ ರಹೆ ಹಮಾರಾ ॥ ಪಲ್ಲ ॥

ಸದಾ ಶಕ್ತಿ ಸರಸಾನೇವಾಲಾ !
ಪ್ರೇಮ ಸುಧಾ ಬರಸಾನೇವಾಲಾ !
ವೀರೋಂಕೊ ಹರ್ಷಾನೇವಾಲಾ !
ಮಾತೃಭೂಮಿಕಾ ತನುಮನ ಸಾರಾ ॥ ೧ ॥

ಇಸ ಝೋಂಡೇಕೆ ನೀಚೆ ನಿರ್ಭಯ !
ಲೇ ಸ್ವರಾಜ್ಯ ಯಹ ಅವಿಚಲ ನಿಶ್ಚಯ !
ಬೋಲೋ " ಭಾರತ ಮಾತಾಕೀ ಜಯ್ " !
ಸ್ವಾತಂತ್ರತಾಹೀ ಧ್ಯೇಯ ಹಮಾರಾ ॥ ೨ ॥

ಆವೋ ಪ್ಯಾರೇ ವೀರೋಂ ಆವೋ !
ದೇಶಧರ್ಮಪರ ಬಲಿ ಬಲಿ ಜಾವೋ !
ಏಕ ಸಾಥ ಸಬ ಮಿಲಕರ ಗಾವೋ !
ಪ್ಯಾರಾ ಭಾರತ ದೇಶ ಹಮಾರಾ ॥ ೩ ॥

ಸ್ವತಂತ್ರತಾಕೆ ಭೀಷಣ ರಣಮೆ !
ರುಕಕರ ಬಢೆ ಜೋಶ ಕ್ಷಣ ಕ್ಷಣಮೆ !
ಕಾಪೆ ಶತ್ರು ದೇಖಕರ ಮನಮೆ !
ಮಿಟಜಾವೆ ಭಯಸಕಂಟ ಸಾರಾ ! ಝಂಡಾ ॥ ೪ ॥

ಶಾನನ ಇಸಕೀ ಜಾನೇ ಪಾಯೆ !
ಚಾಹೇ ಜಾನ ಭಲೀಹೀ ಜಾಯೇ !
ವಿಶ್ವವಿಜಯ ಕರಕೇ ದಿಖಲಾಯೇ !
ತಬ ಹೋವೆ ಪ್ರಣ ಪೂರ್ಣ ಹಮಾರಾ ॥ ೫ ॥

(೧೯೨೪)

ದಿನ ಖೂನಕಾ ನ ಭೂಲೊ !

ದಿನ ಖೂನಕಾ ಹಮಾರಾ । ಪ್ಯಾರೋ ನ ಭೂಲ್ಜಾನಾ ॥ ಪಲ್ಲ ॥

ಸೈಯ್ಯಾದನೇ ಹಮಾರೆ ಚುನ ಚುನಕೆ ಫೂಲ ತೋಡೆ ।
ವೀರಾನ್ ಇಸ್ ಚಮನಮೆ । ಅಬ ಗುಲ್ ಖಿಲಾತೆ ಜಾನಾ ॥ ೧ ॥

ಕುಛ ಕ್ಹಿದಮೇ ಪಡೆ ಹೈ । ಹಮ್ ಕಬರಮೆ ಗಢೇ ಹೈ ।
ಸೂನಿಪಡೀ ಕಬರಪರ್ । ದೀಯಾಜಲಾತೆ ಜಾನಾ ॥ ೨ ॥

ಗೋಲೀಯಾ ಖಾಕೆ ಸೋಯೇ । ಜಾಲಿಯಾನ್ ಬಾಗಮೆ ಹಮ್ ।
ದೋ ಬೂಂದ ಆಸು ಹಮಪರ । ಪ್ಯಾರೋ ಬಹಾತೆಜಾನಾ ॥ ೩ ॥

ಹಿಂದು ಔರ ಮುಸ್ಲೀಮೊಂಕಿ । ಹೋತಿ ಹೈ ಆಜ ಹೋಲಿ ।
ಬಹತೆ ಹಮಾರೆ ರಂಗಮೆ । ದಾಮನ್ ಭಿಗೋತೆ ಜಾನಾ ॥ ೪ ॥

(೧೯೧೯)

ಲೇಂಗೇ ಸ್ವರಾಜ್ಯ ಲೇಂಗೆ!

ಚರಖಾ ಚಲಾ ಚಲಾಕೆ । ಲೇಂಗೇ ಸ್ವರಾಜ್ಯ ಲೇಂಗೇ ॥ ಪಲ್ಲ ॥

ಮಲಮಲ ಜೊ ಹೈ ವಿದೇಶಿ । ಅನೇಕೊ ಗಜ ಮಿಲೇಗಿ ।
ಖಾದಿ ನಹಿಂತ್ಯಜೇಂಗೆ । ಲೇಂಗೆ ಸ್ವರಾಜ್ಯ ಲೇಂಗೇ ॥ ೧ ॥

ಬಹತ್ತರ ಕರೋಡ ರುಪಯೆ । ಪರದೇಶ ಜಾ ರಹೆ ಹೈಂ ।
ಉಸಕೋ ಬಚಾ ಬಚಾಕೆ । ಲೇಂಗೇ ಸ್ವರಾಜ್ಯ ಲೇಂಗೆ ॥ ೨ ॥

ಚರಖೇಕಿ ಘಣ್‌ಘಣಾಟ । ರಣಭೇರಿಯ್ಹಾ ಬಜೇಂಗಿ ।
ಗಾಂಧಿ ಹುಕುಮ್ ಕರೇಂಗೆ । ಲೇಂಗೇ ಸ್ವರಾಜ್ಯ ಲೇಂಗೆ ।
ಚರಖಾ ಚಲಾ ಚಲಾಕೆ । ಲೇಂಗೆ ಸ್ವರಾಜ್ಯ ಲೇಂಗೆ ॥ ೩ ॥

(೧೯೩೦)

ಕರ್ನಾಟಕ (ಮೈಸೂರು) ಸರಕಾರದವರು ಪ್ರೊ. ಹಾಲಪ್ಪನವರಿಂದ ಬರೆಯಿಸಿ ಪ್ರಕಟಿಸಿದ " ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಹೋರಾಟದ ಇತಿಹಾಸ " (ಹಿಸ್ಟರಿ ಆಫ್ ಫ್ರೀಡಮ್ ಮುವ್ಮೆಂಟ ಇನ್ ಕರ್ನಾಟಕ) ಎಂಬ ಇಂಗ್ಲೀಷ ಭಾಷೆಯ ಗ್ರಂಥದಲ್ಲಿ ಸತ್ಯಕ್ಕೆ ವ್ಯತಿರಿಕ್ತವಾದ ಸಂಗತಿಗಳೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಎಳ್ಳಷ್ಟೂ ಸಂಬಂಧವಿಲ್ಲದಂಥ ವರ ಹೊಗಳಿಕೆಗಳೂ ಇವೆ. ಬೆಳಗಾವಿ ಜಿಲ್ಲೆಯ ಬಗ್ಗೆಯಂತೂ ಅವ ಮಾನಕರ ಸಂಗತಿಗಳನ್ನು ಈ ಮಹಾಗ್ರಂಥದಲ್ಲಿ ಸೇರಿಸಲಾಗಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪೂರ್ವ ಕಲಸ ಮಾಡಿದ ಹೋರಾಟಗಾರರ ಹೆಸರುಗಳಾಗಲಿ, ಉಲ್ಲೇಖನೀಯ ಸಂಗತಿಗಳಾಗಲಿ ಅದರಲ್ಲಿಲ್ಲ.

ನಮ್ಮ ಸರಕಾರವೇ ಪ್ರಕಟಿಸಿದ ಇಂಥ ಗ್ರಂಥದಿಂದ ಇಂದಿನ ಹಾಗೂ ಮುಂದಿನ ಪೀಳಿಗೆಗೆ ಸತ್ಯಕ್ಕೆ ದೂರವಾದ ವಿಪರ್ಯಸ್ತ ಇತಿಹಾಸ ಕಲಿಸಿದಂತಾಗುವದು. ಆದುದರಿಂದ ಬೆಳಗಾವಿ ಜಿಲ್ಲೆಯಲ್ಲಿ ೧೯೦೫ ರಿಂದ ೧೯೪೫ ರವರೆಗೆ ನಡೆದ ಸ್ವಾತಂತ್ರ್ಯ ಹೋರಾಟದ ಸತ್ಯಸಂಗತಿಗಳನ್ನು ಶ್ರೀ. ಅ[illegible] ಗುರೂಜಿ ಅವರು ಈ ಜಿಲ್ಲೆಯ ಮಟ್ಟಿಗೆ ಈ ಇತಿಹಾಸವನ್ನು ಬರೆದಿದ್ದಾರೆ. ಲೇಖಕರು ಖ್ಯಾತ ಸ್ವಾತಂತ್ರ್ಯಯೋಧರೂ ಹಿರಿಯ ಕಾರ್ಯಕರ್ತರೂ ಇದ್ದು ತಮ್ಮ ಜೀವಮಾನದಲ್ಲಿಯ ಎಲ್ಲ ಸ್ವಾತಂತ್ರ್ಯ ಹೋರಾಟಗಳಲ್ಲಿ ಪ್ರತ್ಯಕ್ಷ ಭಾಗವಹಿಸಿ ಅನೇಕಸಲ ಕಾರಾವಾಸದ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದ್ದಾರೆ, ನಷ್ಟ ಸಹಿಸಿದ್ದಾರೆ ಜಿಲ್ಲೆಯ ಸ್ವಾತಂತ್ರ್ಯಾಂದೋಲನದ ಇತಿಹಾಸದಲ್ಲಿ ಅವರಿಗೊಂದು ಉಲ್ಲೇಖನೀಯ ಸ್ಥಾನವಿದ.

ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಬೆಳಗಾವಿ ಜಿಲ್ಲೆಯು ವಹಿಸಿದ ಪಾತ್ರವನ್ನು ಈ ಇತಿಹಾಸದಲ್ಲಿ ಯಥಾವತ್ತಾಗಿ ಚಿತ್ರಿಸಲಾಗಿದೆ.